
ಗ್ರಂಥಾಲಯ ಒಂದು ಅಧ್ಯಯನ

ಕೆ. ಎಸ್. ದೇಶಪಾಂಡೆ



ಕೃಷ್ಣ ಶ್ರೀಪಾದ ದೇಶಪಾಂಡೆ
(ಜನನ. 5–5–1924)

1924ರಲ್ಲಿ ಜನಿಸಿದ ಕೆ ಎಸ್ ದೇಶಪಾಂಡೆ ಮುಂಬಯಿ ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಎಂ ಎ ಪದವಿಯನ್ನೂ ಗ್ರಂಥಪಾಲನದಲ್ಲಿ ಡಿಪ್ಲೋಮಾ ಪದವಿಯನ್ನೂ ಪಡೆದರು. ಅಮೆರಿಕನ್ ಲೈಬ್ರರಿ ಅಸೋಸಿಯೇಷನ್ ನಿಂದಲೂ ಗೌರವ ಡಿಪ್ಲೋಮಾ ಪಡೆದರು. 1956–57ರಲ್ಲಿ ಅಮೆರಿಕಾ ಪ್ರವಾಸ ಮಾಡಿದರು ; ಬ್ರಿಟನ್, ಫ್ರಾನ್ಸ್, ಸ್ವಿಟ್ಜರ್ಲೆಂಡ್ ಹಾಗೂ ಇಟಲಿ ದೇಶಗಳ ಪ್ರಮುಖ ಗ್ರಂಥಾಲಯಗಳನ್ನು ಸಂದರ್ಶಿಸಿದರು. 1951 ರಿಂದ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಪಾಲರಾದರು. ನಡುವೆ 1965 ರಿಂದ 70ರ ವರೆಗೆ ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳ ಗ್ರಂಥಪಾಲರೂ, ಗ್ರಂಥಾಲಯ ವಿಜ್ಞಾನ ವಿಭಾಗದ ಗೌರವ ಪ್ರಾಧ್ಯಾಪಕರೂ ಆಗಿದ್ದರು.

ಈಚೆಗೆ ಗೋವಾ, ದಾಮನ್, ದಿಯೂ ಪ್ರದೇಶಗಳಲ್ಲಿ ಒಂದು ಗ್ರಂಥಾಲಯ ಜಾಲವನ್ನು ರೂಪಿಸುವ ಬಗ್ಗೆ ನೇಮಿತವಾದ ಸಮಿತಿಯ ಅಧ್ಯಕ್ಷರಾಗಿ ವರದಿ ಸಲ್ಲಿಸಿದ್ದಾರೆ ; ಕ್ಯಾಲಿಕಟ್, ಶಿವಾಜಿ ಹಾಗೂ ಮರಾಠವಾಡ ವಿಶ್ವವಿದ್ಯಾನಿಲಯಗಳ ಗೌರವ ಪ್ರಾಧ್ಯಾಪಕರಾಗಿದ್ದಾರೆ ; ಪಿ ಎಚ್ ಡಿ ಅಭ್ಯರ್ಥಿಗಳಿಗೆ ನಿರ್ದೇಶಕರಾಗಿದ್ದಾರೆ.

ಗ್ರಂಥಾಲಯ ವಿಜ್ಞಾನದ ಎಲ್ಲ ಮುಖಗಳಲ್ಲೂ ಆಳವಾದ ಚಿಂತನೆ ನಡೆಸಿರುವ ದೇಶಪಾಂಡೆಯವರು ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ನೂರಕ್ಕೂ ಹೆಚ್ಚಿನ ಲೇಖನಗಳನ್ನು ಬರೆದಿದ್ದಾರೆ, ಐದು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ತೌಲನಿಕ ಗ್ರಂಥಾಲಯ ವಿಜ್ಞಾನದ ವಾರ್ಷಿಕ ಪತ್ರಿಕೆಯಾದ 'ಟೈಮ್‌ಲೆಸ್ ಫೆಲೋಶಿಪ್' ಪತ್ರಿಕೆಯ ಸಂಪಾದಕರಾಗಿದ್ದಾರೆ. ಇಂಡಿಯನ್ ಲೈಬ್ರೆರಿ ಅಸೋಸಿಯೇಷನ್, ಕರ್ನಾಟಕ ವಿದ್ಯಾವರ್ಧಕ ಸಂಘ, ಇಂಡಿಯನ್ ಸ್ಟ್ಯಾಂಡರ್ಡ್ಸ್ ಅಸೋಸಿಯೇಷನ್, ಭಾರತ್ ಸ್ಕೌಟ್ಸ್ ಎಂಡ್ ಗೈಡ್ಸ್, ಮೈ. ವಿ. ಕನ್ನಡ ಗ್ರಂಥ ಸೂಚಿಯ ಸಂಪಾದಕ ಮಂಡಳಿ ಮೊದಲಾದ ಹಲವು ಸಂಘ ಸಂಸ್ಥೆಗಳ ಹಾಗೂ ವಿದ್ವನ್ ಮಂಡಳಿಗಳ ಸದಸ್ಯರಾಗಿದ್ದಾರೆ.

ಗ್ರಂಥಾಲಯ : ಒಂದು ಅಧ್ಯಯನ

ಗ್ರಂಥಾಲಯ : ಒಂದು ಅಧ್ಯಯನ

ಕೆ ಎಸ್ ದೇಶಪಾಂಡೆ

ಮೈಸೂರು
1979

GRANTHALAYA ONDU ADHYAYANA—Studies in Library Science, by K S Deshpande, Librarian, Karnatak University Library, Dharwad, Published by Aparna Prakashana, 49, Akshaya, TK Extention, Saraswatipuram, Mysore-9, 1979, Demy otcavo Pp. viii + 144, Price: Rs. 10-00, Special Rs. 15-00

ಮೊದಲನೆಯ ಮುದ್ರಣ : 1979

ಬೆಲೆ : ಸಾಧಾರಣ ಪ್ರತಿ : 10-00 · ಲೈಬ್ರೆರಿ ಪ್ರತಿ : 15-00

ಪ್ರಕಾಶಕರು : ಎ ಅನೂರಾಧಾ, ಅಪರ್ಣಾ ಪ್ರಕಾಶನ, 49, ಅಕ್ಷಯ, ತೊಣಚಿಕೊಪ್ಪಲು ಬಡಾವಣೆ, ಸರಸ್ವತೀಪುರಂ ಮೈಸೂರು 570 009

ಮುದ್ರಣ : ಹರ್ಷ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು 570 008

ಮುನ್ನುಡಿ

ಪ್ರಸ್ತುತ ಗ್ರಂಥ ಪ್ರಕಟಗೊಳ್ಳುತ್ತಿರುವದು ನನ್ನ ಮಿತ್ರರಾದ ಶ್ರೀ ಆರ್. ಎಲ್. ಅನಂತರಾಮಯ್ಯನವರ ಸಾಹಸ, ಪರಿಶ್ರಮಗಳಿಂದ. ಗ್ರಂಥಾಲಯಗಳ ಸಮಸ್ಯೆಗಳನ್ನು ಕುರಿತು ನಾನು ಇಂಗ್ಲಿಷಿನಲ್ಲಿ ಕಾಲಕಾಲಕ್ಕೆ ಬರೆದು ವಿದ್ವತ್ಪತ್ರಿಕೆಗಳಲ್ಲಿ ಪ್ರಕಟಿಸಿದ ಕೆಲವೊಂದು ಲೇಖನಗಳನ್ನು ಓದಿ ಶ್ರೀ ಅನಂತರಾಮಯ್ಯ ಮೆಚ್ಚಿಕೊಂಡರು. ಅವುಗಳು ಕನ್ನಡ ಓದುಗರಿಗೂ ಲಭ್ಯವಾಗಬೇಕೆಂಬ ಅಭಿಲಾಷೆ ಹೊಂದಿ ಈ ಕಾರ್ಯದ ಹೊಳೆಹು ಹಾಕಿಕೊಂಡರು. ತಾವು ಹಾಗೂ ನನ್ನ ಇನ್ನೊಬ್ಬ ತರುಣ ಉತ್ಸಾಹೀ ಮಿತ್ರರಾದ ಶ್ರೀ ಬಾ. ವೇ. ಶ್ರೀಧರ ಇಬ್ಬರೂ ಸೇರಿ, ಲೇಖನಗಳ ಕನ್ನಡ ಅನುವಾದ ಕಾರ್ಯವನ್ನು ಕಕ್ಕುಲತೆಯಿಂದ, ಆಸ್ಥೆಯಿಂದ ಕೈಗೊಂಡರು. ಅದಾದಮೇಲೆ ಆ ಅನುವಾದಿತ ಲೇಖನಗಳನ್ನು ಮೈಸೂರು ವಿಶ್ವವಿದ್ಯಾನಿಲಯದ '**ಮಾನವಿಕ ಕರ್ಣಾಟಕ**'ದ ಸಂಚಿಕೆಗಳಲ್ಲಿ ಪ್ರಕಟಿಸುವ ವ್ಯವಸ್ಥೆಯನ್ನು ಮಾಡಿದರು ಹೀಗೆ '**ಮಾನವಿಕ ಕರ್ಣಾಟಕ**'ದಲ್ಲಿ ಪ್ರಕಟಗೊಂಡ ಈ ಲೇಖನಗಳಿಗೆ ಉತ್ತೇಜನಕರ ಪ್ರತಿಕ್ರಿಯೆ ದೊರಕಿತು. ಇದರಿಂದ ಉತ್ಸಾಹಗೊಂಡ ನನ್ನ ಮಿತ್ರರು ಈ ಲೇಖನಗಳ ಜೊತೆಗೆ ಕನ್ನಡದಲ್ಲಿಯೇ ನಾನು ಬರೆದು ಅಲ್ಲಲ್ಲಿ ಪ್ರಕಟಿಸಿದ, ಆಕಾಶವಾಣಿಯ ಮೂಲಕ ಪ್ರಸಾರ ಮಾಡಿದ ಬರಹಗಳನ್ನೂ ಸೇರಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂಬ ತಮ್ಮ ಯೋಜನೆಯನ್ನು ಇದೀಗ ಸಮರ್ಥವಾಗಿ ನಿರ್ವಹಿಸಿದ್ದಾರೆ.

ಇವುಗಳಲ್ಲಿ 'ಸಾಹಿತ್ಯ ಸಂಸ್ಕೃತಿಗಳ ಸಂಗಮ' ಎನ್ನುವುದು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಗ್ರಂಥಾಲಯ ಗೋಷ್ಠಿಯ ಅಧ್ಯಕ್ಷೀಯ ಭಾಷಣ; 'ಕನ್ನಡದಲ್ಲಿ ವೈವಿಧ್ಯಮಯ ವಾಚನಾಭಿರುಚಿ' ಎಂಬುದು ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ಸಂಸ್ಥೆಯು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಲೇಖನ. ಈ ಬರಹಗಳಲ್ಲಿ ಹಲವು ಆಕಾಶವಾಣಿಯಿಂದ ಪ್ರಸಾರವಾಗಿವೆ.

ಇಂಗ್ಲಿಷ್ ಲೇಖನಗಳ ಅನುವಾದ ಕಾರ್ಯವನ್ನು ಸಮರ್ಥವಾಗಿ ನೆರವೇರಿಸಿದ ಶ್ರೀ ಶ್ರೀಧರ ಅವರ ಶ್ರಮ ಹಾಗೂ ಔದಾರ್ಯವನ್ನು ನಾನಿಲ್ಲಿ ಸ್ಮರಿಸುತ್ತೇನೆ.

ನಾನು ಕನ್ನಡದಲ್ಲಿಯೇ ಬರೆದು ಪ್ರಕಟಿಸಿದ ಲೇಖನಗಳನ್ನು ಮೂಲದಲ್ಲಿ ಓದಿ ಆನಂದಪಟ್ಟವರು ನನ್ನ ಸಹೋದ್ಯೋಗಿ ಶ್ರೀ ಶಿ. ಚ. ಅನಾಡ ಅವರು. ನನ್ನ ಗ್ರಂಥಾಲಯದಲ್ಲಿ ಡೆಪ್ಯೂಟಿ ಅಕೌಂಟೆಂಟ್ ಆಗಿ ಕಾರ್ಯಗೈಯುತ್ತಿದ್ದರೂ ಸಾಹಿತ್ಯ, ಗ್ರಂಥಾಲಯ ಶಾಸ್ತ್ರ, ಅಧ್ಯಾತ್ಮ ಇವುಗಳಲ್ಲೂ ಅವರಿಗೆ ಅಪಾರ ಆಸಕ್ತಿ. ಈ ಪುಸ್ತಕ ಪ್ರಕಟಗೊಳ್ಳುವ ಈ ಸಂದರ್ಭದಲ್ಲಿ ಅವರನ್ನು ನೆನೆಯದಿದ್ದರೆ ತಪ್ಪಾದೀತು.

* * *

ಇದು ಗ್ರಂಥಾಲಯಗಳ ಯುಗ. ಮಾನವನ ಅಜೇಯ ಮನಸ್ಸಿನ ಊರ್ಧ್ವಗಮನದ ಕುತೂಹಲ, ತವಕ, ಅವಿರತ ಪರಿಶ್ರಮದ ಫಲವಾಗಿ ಇಂದು ಜ್ಞಾನ ಸ್ಫೋಟ

ವಾಗಿದೆ. ಅದರ ಪರಿಣಾಮವಾಗಿ ಗ್ರಂಥಗಳು ಪುಂಖಾನುಪುಂಖವಾಗಿ ಚಿಮ್ಮಿ ಬರುತ್ತಿವೆ. ಪ್ರಪಂಚದ ಅಸಂಖ್ಯಾತ ಪ್ರಕಾಶಕರು ನಿತ್ಯವೂ ರಾಶಿ ರಾಶಿಯಾಗಿ ಪ್ರಕಟಿಸುತ್ತಿರುವ ಗ್ರಂಥಗಳಲ್ಲಿ ಅಡಗಿದ ಜ್ಞಾನಾಮೃತವನ್ನು ಜ್ಞಾನ ಪಿಪಾಸುಗಳಿಗೆ, ಅವರ ವೇಳೆಯ ಅಪವ್ಯಯವಿಲ್ಲದೆ, ಅವರ ಕೈಗೆಟಕುವಂತೆ, ಅವರಿಗೆ ಬೇಕಾಗುವ ರೂಪದಲ್ಲಿಯೇ ಮುಟ್ಟಿಸುವ ಗುರುತರ ಜವಾಬ್ದಾರಿಯನ್ನು ಗ್ರಂಥಾಲಯಗಳು ಹಾಗೂ ಗ್ರಂಥಪಾಲರು ಹೊರಬೇಕಾಗಿದೆ. ಈ ಜವಾಬ್ದಾರಿಯ ಸಮರ್ಥ ನಿರ್ವಹಣೆಯಲ್ಲಿ ಅವರು ಅನೇಕಾನೇಕ ಸಮಸ್ಯೆಗಳನ್ನು ಪ್ರತಿದಿನ ಎದುರಿಸಬೇಕಾಗುತ್ತದೆ. ಈ ಪುಸ್ತಕದಲ್ಲಿ ಪ್ರಕಟಗೊಂಡ ಲೇಖನಗಳಲ್ಲಿ ಕೆಲವು ಇಂಥ ಸಮಸ್ಯೆಗಳನ್ನು ಕುರಿತಾಗಿವೆ. ಇವುಗಳ ವಾಚನದಿಂದ ಗ್ರಂಥಪಾಲಕರಿಗೆ, ಗ್ರಂಥಾಲಯಶಾಸ್ತ್ರ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಬಹುದು. ಜನಸಾಮಾನ್ಯ ಓದುಗರಿಗೂ ಗ್ರಂಥಾಲಯಗಳ ಆವಶ್ಯಕತೆ, ಮಹತಿ, ಅವುಗಳ ಹಲವೊಂದು ಪ್ರಚಲಿತ ಸಮಸ್ಯೆಗಳ ಪರಿಚಯ ಈ ಗ್ರಂಥದ ಅವಲೋಕನದಿಂದ ಆಗಬಹುದೆಂಬ ಅಪೇಕ್ಷೆಯನ್ನು ಲೇಖಕ ಹಾಗೂ ಪ್ರಕಾಶಕರು ತಳೆದಿದ್ದಾರೆ.

ಔದಾರ್ಯಕ್ಕೆ ಹೆಸರಾದ ಕನ್ನಡ ಓದುಗರು ಈ ಗ್ರಂಥವನ್ನು ಸೌಹಾರ್ದದಿಂದ ಬರಮಾಡಿಕೊಳ್ಳುವರೆಂಬ ಭರವಸೆಯು ನಮ್ಮದಾಗಿದೆ.

ರಾಮಕೃಪ
ಮಾಳಮಡ್ಡಿ, ಧಾರವಾಡ ೭, ೨೮-೬-೭೯

ಕೆ ಎಸ್ ದೇಶಪಾಂಡೆ

ಪರಿವಿಡಿ

೧ / ಸಾಹಿತ್ಯ ಸಂಸ್ಕೃತಿಗಳ ಸಂಗಮ

ಗ್ರಂಥಾಲಯಗಳು ಸಾಹಿತ್ಯ, ಸಂಸ್ಕೃತಿಗಳ ಆಗರಗಳಾಗಿವೆ, ಕೇಂದ್ರಗಳಾಗಿವೆ. ಇಂಥ ಶ್ರೀಮಂತ ಗರ್ಭದ ಚಿಲುಮೆಗಳಿಂದಲೇ ಸಾಹಿತ್ಯ, ಸಂಸ್ಕೃತಿ, ದೇಶಪ್ರೇಮದ ಸೆಲೆಯೊಡೆದು ತೊರೆಯಾಗಿ, ಹಳ್ಳವಾಗಿ, ಹಿರಿಯ ಹೊಳೆಯಾಗಿ, ಹರಿದು, ಅಮೃತ ವಾಹಿನಿಯಾಗಿ ನಾಡಿನ ಜನತೆಯನ್ನು ಸಚೇತನಗೊಳಿಸಿ, ಜಾಗೃತವಾಗಿರಿಸಿ, ಅವರ ಸಂಸ್ಕೃತಿಯನ್ನು ಶ್ರೀಮಂತವಾಗಿ ರೂಪುಗೊಳಿಸುತ್ತದೆ. ಗ್ರಂಥಾಲಯಗಳ ಬಗ್ಗೆ ಇಟ್ಟ ಆಸಕ್ತಿ ಮತ್ತು ಶ್ರದ್ಧೆಗಳ ಮೇಲೆ ರಾಷ್ಟ್ರದ ಪ್ರಗತಿಯು ಅವಲಂಬಿಸಿದೆ. ರಾಷ್ಟ್ರದ ಪ್ರಗತಿಗೆ ಗ್ರಂಥಾಲಯಗಳು ಅನಿವಾರ್ಯ ಸುವರ್ಣ ಸೋಪಾನಗಳಾಗಿವೆ. ರಾಷ್ಟ್ರಗಳು ಗ್ರಂಥಾಲಯಗಳನ್ನು, ನಿತ್ಯ ನೂತನ ಜ್ಞಾನದ ಬೆಳಕನ್ನು ಚೆಲ್ಲುವ ನಂದಾದೀವಿಗೆಗಳೆಂದು ಪರಿಗಣಿಸಿ ಅವು ನಂದದಂತೆ ನೋಡಿಕೊಳ್ಳುವಲ್ಲಿ ಪಟ್ಟ ಅಪಾರ ಶ್ರಮದ ಗಾತ್ರದ ಪ್ರಮಾಣಕ್ಕನುಗುಣವಾಗಿ ರಾಷ್ಟ್ರದ ಪ್ರಗತಿ ಅವಲಂಬಿಸಿರುತ್ತದೆ. ಗ್ರಂಥಾಲಯಗಳಿಗೆ ಸರಿಯಾದ ಸ್ಥಾನಮಾನ-ಮನ್ನಣೆ ದೊರಕಿಸಿಕೊಟ್ಟ ದೇಶಗಳೆಲ್ಲವೂ ಇಂದು ಕ್ಷೀರಸಾಗರದ ಆಗರಗಳಾಗಿವೆ; ಜೇನಿನ ಹೊಳೆಯ ತವರಾಗಿವೆ. ಗ್ರಂಥಾಲಯಗಳನ್ನು ಕಡೆಗಣಿಸಿದ ದೇಶಗಳು ಹಿಂದುಳಿದ ದೇಶಗಳೆಂದು ಪರಿಗಣಿಸಲ್ಪಟ್ಟಿವೆ.

ಬ್ರಿಟಿಷ್ ಮ್ಯೂಜಿಯಮ್–ಲೈಬ್ರರಿ ಆಫ್ ಕಾಂಗ್ರೆಸ್ : ಗ್ರಂಥಾಲಯಗಳು ಸಂಸ್ಕೃತಿಯ ಕೇಂದ್ರಗಳೆಂದು ಮೇಲೆ ಬಣ್ಣಿಸಿಯಾಯಿತಷ್ಟೇ? ಉದಾಹರಣೆಗೆಂದು ಇಂಗ್ಲೆಂಡ್ ದೇಶದ ಬ್ರಿಟಿಷ್ ಮ್ಯೂಜಿಯಮ್ ತೆಗೆದುಕೊಳ್ಳಿ; ಅಮೇರಿಕೆಯ ಲೈಬ್ರರಿ ಆಫ್ ಕಾಂಗ್ರೆಸ್ ತೆಗೆದುಕೊಳ್ಳಿ. ಆ ದೇಶದ ಚರಿತ್ರೆಗೆ, ಸಾಹಿತ್ಯಕ್ಕೆ, ಸಂಸ್ಕೃತಿಗೆ, ಸಾಮಾಜಿಕ, ಭೌಗೋಳಿಕ, ಆರ್ಥಿಕ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಏನೆಲ್ಲವೂ ಅಲ್ಲಿದೆ. ಹಾಗೆಯೇ ಬ್ರಿಟಿಷ್* ಮ್ಯೂಜಿಯಮ್‌ನಲ್ಲಿ ಆ ದೇಶದಲ್ಲಿನ ಲೇಖಕರ ಅಪ್ರಕಟಿತ ಹಸ್ತಪ್ರತಿಗಳಿವೆ. ಅಲ್ಲಿ ಪ್ರಕಟವಾದ ಹಾಗೂ ಜಗತ್ತಿನ ಮೂಲೆ ಮೂಲೆಗಳಲ್ಲಿ ಪ್ರಕಟವಾದ ಆ ದೇಶಕ್ಕೆ ಸಂಬಂಧವಾದ ಪ್ರಕಟನೆಗಳಿವೆ. ಆಳಿಹೋದ ಅರಸರ, ಅಧ್ಯಕ್ಷರ ವೈಯಕ್ತಿಕ ಹಾಗೂ ಅವರ ಹುದ್ದೆಗೆ ಸಂಬಂಧಿಸಿದ ಕಾಗದ ಪತ್ರಗಳಿವೆ; ಅವರು ಇತ್ತೀಚಿನವರಾದಲ್ಲಿ ಅವರ ಎಲ್ಲ ಮಹತ್ವದ ಭಾಷಣಗಳ ಟೇಪುಗಳಿವೆ, ಫಿಲ್ಮುಗಳಿವೆ. ಅನಂತಕಾಲದಿಂದ ಜನಮನವನ್ನು ರಂಜಿಸಿ, ಅವರನ್ನು ಉದ್ದೀಪಿಸಿ ಊರ್ಧ್ವಮುಖರನ್ನಾಗಿ ಮಾಡಿದ ಮಹಾ ಸಾಹಿತಿಗಳ ಕೃತಿಗಳ ಮಾದರಿ ಹಸ್ತಪ್ರತಿಗಳಿವೆ; ಮಹಾಕವಿಗಳು ಹಾಡಿದ ಕವನಗಳ ಧ್ವನಿಮುದ್ರಿಕೆಗಳಿವೆ. ಆ ದೇಶದಲ್ಲಿ ನಿರ್ಮಿತವಾದ ಚಿತ್ರಪಟಗಳ ಸಮಗ್ರ ಸಂಗ್ರಹವಿದೆ. ಮಹಾನ್ ಕಲಾಕಾರರ ಕಲಾಕೃತಿಗಳಿವೆ. ಜನಪದ ಸಾಹಿತ್ಯವಿದೆ. ಗ್ರಂಥಾಲಯ

*ಬ್ರಿಟಿಷ್ ಮ್ಯೂಜಿಯಮ್ ಗ್ರಂಥಾಲಯವನ್ನೀಗ ಬ್ರಿಟಿಷ್ ಲೈಬ್ರರಿ ಎಂದು ಕರೆಯುತ್ತಾರೆ.

ಗಳ ಕಾರ್ಯಕ್ಷೇತ್ರ ಬರೀ ಗ್ರಂಥಗಳ ಶೇಖರಣೆ, ವಿತರಣೆಗೆ ಮಾತ್ರ ಸೀಮಿತವಾಗಿರದೆ ಮಾನವನ ಸಾಂಸ್ಕೃತಿಕ ಜೀವನದ ಇನ್ನಿತರ ಕ್ಷೇತ್ರಗಳ ಹಲವು ಹಂತಗಳಿಗೂ ಹಬ್ಬಿರುತ್ತದೆ.

ಇಷ್ಟೇ ಏಕೆ, ಜಗತ್ತಿನ ಇನ್ನಿತರ ರಾಷ್ಟ್ರಗಳ ಸಂಸ್ಕೃತಿಯ ಪ್ರತೀಕದ ಅಮೂಲ್ಯ ವಸ್ತುಗಳಿವೆ. ಭಾರತಕ್ಕೆ ಸಂಬಂಧಪಟ್ಟ, ಭಾರತದಲ್ಲಿ ಯಾವದೇ ಗ್ರಂಥಾಲಯದಲ್ಲಿ, ವಸ್ತುಸಂಗ್ರಹಾಲಯದಲ್ಲಿ ಇಲ್ಲದ, ಬೆಲೆಗಟ್ಟಲಸಾಧ್ಯವಾದ ಅಮೂಲ್ಯ ವಸ್ತುಗಳಿವೆ. ಅಪೂರ್ವವಾದ ಕನ್ನಡ ಗ್ರಂಥಗಳು, ತಾಡೋಲೆ ಹಸ್ತಪ್ರತಿಗಳು ಇತ್ಯಾದಿಯಾಗಿ ವಸ್ತುಗಳು ಹೇರಳವಾಗಿವೆ.[1]

ಹದಿನೆಂಟು ಹಾಗೂ ಹತ್ತೊಂಬತ್ತನೆಯ ಶತಮಾನಗಳಲ್ಲಿ ಭಾರತದಲ್ಲಿ ಮುಸುಕ ತೊಡಗಿದ ರಾಜಕೀಯ ಕಾರ್ಗತ್ತಲೆಯಲ್ಲಿ ಪರದೇಶದ ಪ್ರಮುಖ ಗ್ರಂಥಾಲಯಗಳಲ್ಲಿ ಇಂದು ರಾರಾಜಿಸುತ್ತಿರುವ, ನಮ್ಮ ದೇಶಕ್ಕೆ ಸಂಬಂಧಪಟ್ಟ ಈ ವಸ್ತುಗಳನ್ನು ಸ್ವಬಾಂಧವರ ಸಹಾಯದಿಂದ ದೂರದರ್ಶಿಗಳಾದ ಪರಕೀಯ ಅಧಿಕಾರಿಗಳು ಸಪ್ತಸಾಗರಗಳಾಚೆ ದಾಟಿಸಿ ತಮ್ಮ ಗ್ರಂಥಾಲಯಗಳನ್ನು, ವಸ್ತುಸಂಗ್ರಹಾಲಯಗಳನ್ನು ಸಿರಿವಂತವಾಗಿರಿಸಿಕೊಂಡರು. ಅಚ್ಚರಿಯ ವಿಮಂಚನೆಯ ಮಾತೆಂದರೆ ಇಂಥ ಚಟುವಟಿಕೆಗಳು ಇನ್ನೂ ಅವ್ಯಾಹತವಾಗಿ ನಡೆದಿವೆ. ಪರದೇಶದ ಗ್ರಂಥಾಲಯಗಳೂ, ವಸ್ತುಸಂಗ್ರಹಾಲಯಗಳೂ ತಮ್ಮ ಪರಂಪರೆಗೆ ಸಂಬಂಧಿಸಿದ ವಸ್ತುಸಂಗ್ರಹಣೆಯನ್ನಲ್ಲದೆ ಪ್ರಪಂಚದ ಇನ್ನುಳಿದ ರಾಷ್ಟ್ರಗಳ ಸಂಸ್ಕೃತಿಯ ಕಕ್ಷೆಗೆ ಒಳಪಟ್ಟ ವಸ್ತುಗಳನ್ನು ಸಂಗ್ರಹಿಸುವಲ್ಲಿಯೂ ತಮ್ಮ ಕೈಚಾಚಿ ವಿಶೇಷ ಆಸಕ್ತಿಯನ್ನೂ, ಹಣವನ್ನೂ ನಿಗದಿ ಮಾಡುವದುಂಟು.[2]

ಪರದೇಶದವರೇ ನಮ್ಮ ಸಂಸ್ಕೃತಿಯ ಬಗ್ಗೆ ಇಷ್ಟೊಂದು ಆಸ್ಥೆ ತಳೆದಿದ್ದಾರೆಂದ ಮೇಲೆ ನಾವು ಈ ದಿಶೆಯಲ್ಲಿ ಎಷ್ಟೊಂದು ಶ್ರದ್ಧೆಯಿಂದ ಮುತುವರ್ಜಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆಂಬುದನ್ನು ಸೂಕ್ಷ್ಮ ರೀತಿಯಲ್ಲಿ ಪರಿಶೀಲಿಸುವುದು ಅತ್ಯವಶ್ಯ. ಅಷ್ಟೇ ಅಲ್ಲ, ಇದು ನಮ್ಮ ಆದ್ಯ ಕರ್ತವ್ಯಗಳಲ್ಲೊಂದು.

ಭಾರತದ ರಾಷ್ಟ್ರೀಯ ಗ್ರಂಥಾಲಯ : ಸ್ವಾತಂತ್ರ್ಯ ದೊರೆತ ಕಳೆದ 30 ವರುಷಗಳಲ್ಲಿ ಭಾರತ ಎಲ್ಲ ದಿಶೆಯಲ್ಲೂ ತೃಪ್ತಿಕರವಲ್ಲದಿದ್ದರೂ ಬಹು ದೊಡ್ಡ ಹೆಜ್ಜೆಯನ್ನಿಟ್ಟು ಮುಂದುವರಿಯುತ್ತಿದೆಯೆಂದು ಎಲ್ಲರೂ ಒಪ್ಪಲೇಬೇಕು. ೧೯೪೮ರಲ್ಲಿ ಸ್ಥಾಪಿತವಾದ

---

1. ಲಂಡನ್ನಿನಲ್ಲಿರುವ ಇಂಡಿಯಾ ಆಫೀಸ ಲೈಬ್ರರಿಯಲ್ಲಿದ್ದುದೆಲ್ಲವೂ ನಮ್ಮ ವಿಶಾಲದೇಶಕ್ಕೆ ಸಂಬಂಧಪಟ್ಟುದು. ಇತ್ತೀಚೆಗೆ ನವದೆಹಲಿಯಲ್ಲಿ ಈ ಗ್ರಂಥಾಲಯದಲ್ಲಿನ ವಸ್ತುಗಳ ಪ್ರಯೋಜನ ಭಾರತ–ಪಾಕಿಸ್ತಾನ ವಾಸಿಗಳಿಗೆಲ್ಲ ಹೇಗೆ ಸಲ್ಲಬೇಕೆಂಬುದರ ಬಗ್ಗೆ ಒಂದು ಒಪ್ಪಂದದ ರೂಪರೇಖೆಗಳು ಸಿದ್ಧಗೊಂಡಿವೆಯೆಂಬ ಸುದ್ದಿ ಕೇಳಿ ಸಂತಸವಾಗದಿರದು.

2. ಅಮೇರಿಕೆಯ ಲೈಬ್ರೆರಿ ಆಫ್ ಕಾಂಗ್ರೆಸ್ ಇಂದು ಭಾರತೀಯ ಪ್ರಕಟನೆಗಳಲ್ಲಿನ ಶೇಕಡಾ 50ಕ್ಕೂ ಮಿಕ್ಕಿ ಮಹತ್ವದ ಪ್ರಕಟನೆಗಳನ್ನು, ಪ್ರತಿಯೊಂದನ್ನು 18ರಿಂದ 20 ಪ್ರತಿಗಳಲ್ಲಿ ಕೊಂಡುಕೊಳ್ಳುತ್ತಲಿದೆ. ಈ ಕೆಲಸಕ್ಕೆಂದೇ ನವದೆಹಲಿಯಲ್ಲಿ ಒಂದು ವಿಶೇಷ ಕಛೇರಿಯನ್ನೇ ತೆರೆದಿದೆ.

ನಮ್ಮ ರಾಷ್ಟ್ರೀಯ ಗ್ರಂಥಾಲಯ ಕೇವಲ 30ವರುಷಗಳಲ್ಲಿ ನಾವು ಹೆಮ್ಮೆಪಡಬೇಕಾದಂಥ ಸಂಸ್ಥೆಯಾಗಿ ಬೆಳೆದುಬಂದಿದೆ! ಸಾಧಿಸಬೇಕಾದ "ಹಿಮಾಚಲದ" ಕಡೆಗೆ ನಮ್ಮ ದೃಷ್ಟಿ ಹರಿಸಿದಾಗ, ಮಾಡಿದ್ದು ತೀರ ಅಲ್ಪವೆಂಬ ಮಾತು ಮನವರಿಕೆಯಾಗಿ ನಮ್ಮ ಹೆಮ್ಮೆ ಮಂಜಿನಂತೆ ಕರಗಿ ಮಾಯವಾಗಿ ಹೋಗುತ್ತದೆ.

ಪ್ರಪಂಚದ ಎಲ್ಲ ರಾಷ್ಟ್ರಗಳ ಪ್ರಾತಿನಿಧಿಕ ಗಣ್ಯ ಸಾಹಿತ್ಯ ಸಂಕಲನದ ಜೊತೆಗೆ ನಮ್ಮ ರಾಷ್ಟ್ರೀಯ ಗ್ರಂಥಾಲಯ ಭಾರತದ ಎಲ್ಲ ಭಾಷೆಗಳಲ್ಲಿ ಪ್ರಕಟವಾದ, ಪ್ರಕಟವಾಗುವ ಗ್ರಂಥಗಳನ್ನು ಸಂಗ್ರಹಿಸಿಡುವುದು ಆದರ ಆದ್ಯ ಕರ್ತವ್ಯವಾಗಿದೆ. ಭಾರತದಲ್ಲಿ ಮುದ್ರಣ ಕಲೆ ಕಾಲಿಟ್ಟುದು 1556ರಲ್ಲಿ. ಆದರೆ ದೇಶೀ ಭಾಷೆಗಳಲ್ಲಿ ಮುದ್ರಣ ಪ್ರಾರಂಭವಾದುದು 17ನೆಯ ಶತಮಾನದ ಕೊನೆಯ ಸುಮಾರಿಗೆ. ಅಂದಿನಿಂದ ಇಂದಿನವರೆಗೆ ಪ್ರಕಟವಾದ ದೇಶೀಯ ಭಾಷೆಗಳಲ್ಲಿಯ ಗ್ರಂಥಗಳೆಲ್ಲವೂ ನಮ್ಮ ರಾಷ್ಟ್ರೀಯ ಗ್ರಂಥಾಲಯದಲ್ಲಿ ಇರಬೇಕಾಗಿದ್ದಿತು. ಆದರೆ ಐತಿಹಾಸಿಕ ಕಾರಣಗಳಿಗಾಗಿ, ಸ್ವಾತಂತ್ರ್ಯನಂತರ ಗ್ರಂಥಾಲಯ ಸ್ಥಾಪಿತವಾಗಿ, 1954ರಲ್ಲಿ ಡೆಲಿವರಿ ಆಫ್ ಬುಕ್ಸ್ ಆ್ಯಕ್ಟ್ (Delivery of Books act As amended in 1956) ಪಾಸಾಗುವವರೆಗೂ ಈ ಸಂಗ್ರಹಕಾರ್ಯ ಅಸಾಧ್ಯವಾಗಿತ್ತು.

ಕನ್ನಡ ಗ್ರಂಥಗಳು : ಕನ್ನಡ ಗ್ರಂಥಗಳಿಗೆ ಈ ವಾದವನ್ನು ಸೀಮಿತಗೊಳಿಸಿ ಹೇಳುವುದಾದರೆ ೧೯ನೆಯ ಶತಮಾನದ ಆದಿಯಲ್ಲಿ ಕನ್ನಡದಲ್ಲಿ ಮುದ್ರಣ ಪ್ರಾರಂಭವಾದಂದಿನಿಂದ ಇಲ್ಲಿಯವರೆಗೆ ಪ್ರಕಟವಾದ ಕನ್ನಡ ಗ್ರಂಥಗಳ ಸಂಖ್ಯೆ ಕೇವಲ ೬೦,೦೦೦ ದಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ ?[1]

ಇವುಗಳ ಪೈಕಿ ರಾಷ್ಟ್ರೀಯ ಗ್ರಂಥಾಲಯದಲ್ಲಿಯಾಗಲೀ ಮೈಸೂರು ರಾಜ್ಯದ ಯಾವುದೇ ಗ್ರಂಥಾಲಯದಲ್ಲಿಯಾಗಲೀ ೧೫ರಿಂದ ೨೦ ಸಾವಿರಕ್ಕಿಂತ ಹೆಚ್ಚು ಗ್ರಂಥಗಳಿಲ್ಲ. ಇನ್ನುಳಿದ ಭಾರತದ ಭಾಷೆಗಳಲ್ಲಿನ ಪ್ರಕಟನೆಗಳ ಸ್ಥಿತಿಗತಿಯೂ ಇದರ ಹಾಗೆಯೇ ಇರಲು ಸಾಧ್ಯ. ರಾಷ್ಟ್ರೀಯ ಗ್ರಂಥಾಲಯ ಭಾರತದ ಎಲ್ಲ ಭಾಷೆಗಳಲ್ಲಿ ಇದುವರೆಗೆ ಪ್ರಕಟವಾದ ಗ್ರಂಥಗಳ ಹಾಗೂ ತನ್ನ ಸಂಗ್ರಹದಲ್ಲಿದ್ದ ಗ್ರಂಥಗಳ ಮಧ್ಯೆ ಇದ್ದ ಈ ಮಹಾ ಕೊರತೆಯನ್ನು ನಿವಾರಿಸಲು ತನ್ನ ಲಕ್ಷ್ಯವನ್ನು ಕೇಂದ್ರೀಕರಿಸಿ ತಕ್ಷಣ ಒಂದು ಬೃಹತ್ ಯೋಜನೆಯನ್ನು ಹಮ್ಮಿಕೊಳ್ಳಬೇಕು. ಇಲ್ಲವಾದರೆ ಗ್ರಂಥದ ಅಂಗಡಿಗಳಲ್ಲಿ ಅಥವಾ ವೈಯಕ್ತಿಕ ಸಂಗ್ರಹಗಳಲ್ಲಿ ದೊರೆಯಬಹುದಾದ ಕೆಲವೇ ಗ್ರಂಥಗಳು ಕೂಡ ನಶಿಸಿ ಹೋದಾವು ಎಂಬ ಭಯವೂ ಇಲ್ಲದಿಲ್ಲ. ನಮ್ಮ ರಾಜ್ಯದ ಹಲವು ಹಳೆಯ ಹೈಸ್ಕೂಲು ಮಿಡಲ್‌ಸ್ಕೂಲುಗಳಲ್ಲಿ ಹಾಗೂ ಗ್ರಂಥಾಲಯಗಳಲ್ಲಿ 19ನೆಯ ಶತಮಾನದ ಉತ್ತರಾರ್ಧ

1. ಗ್ರಂಥ ಎಂದರೆ ೪೯ ಪುಟಕ್ಕಿಂತ ಹೆಚ್ಚಿನ ಗಾತ್ರವುಳ್ಳ ಪ್ರಕಟನೆ ಎಂದು ಯುನೆಸ್ಕೊ 1964ರಲ್ಲಿ ಗಣಿಸಿದೆ. ಇಲ್ಲಿ ಈ ಸೂಚನೆಯನ್ನು ಕಡೆಗಣಿಸಿ ಲೆಕ್ಕಹಾಕಿದ್ದೇವೆ.

ಕನ್ನಡ ಕುಲದ ಸಂಖ್ಯೆ ಸುಮಾರು ೩ ಕೋಟಿ ಎಂದು ಹಿಡಿಯುವಾ. ಅಂದರೆ ಪ್ರತಿ ೧೫೦೦ ಕನ್ನಡಿಗರಿಗೆ ಕೇವಲ ೧ ಕನ್ನಡ ಗ್ರಂಥ ಎಂದಂತಾಯಿತು.

ದಲ್ಲಿ ಹಾಗೂ ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಪ್ರಕಟವಾದ ಮತ್ತು ಈಗ ಮಾರಾಟಕ್ಕೆ ಅಲಭ್ಯವಾದ, ಬೆಲೆಯುಳ್ಳ ಗ್ರಂಥಗಳನೇಕವಿವೆ. ಇವುಗಳ ಬೆಲೆಯ ಅರಿವು ಇಲ್ಲದವರ ಕೈಯಲ್ಲಿ ಸಿಕ್ಕು ಅವು ಹಾಳಾಗಿ ಹೋಗುವ ಮುನ್ನ ರಚನಾತ್ಮಕ ಕಾರ್ಯ ಕ್ರಮ ಅತ್ಯವಶ್ಯ. ಹೀಗಾದ ಒಂದೆರಡು ಉದಾಹರಣೆಗಳೂ ಉಂಟು. ಇನ್ನುಳಿದ ಗ್ರಂಥಗಳು ಯಾರಲ್ಲಿವೆ, ಯಾವ ಯಾವ ಗ್ರಂಥಾಲಯಗಳಲ್ಲಿ ಇವೆ ಎಂದು ಸಂಶೋಧಿಸಿ ಅವುಗಳ ಮೈಕ್ರೋಫಿಲ್ಮ ಪ್ರತಿಗಳನ್ನು ಮಾಡಿಸಿಟ್ಟುಕೊಳ್ಳುವ ಯೋಜನೆಯನ್ನು ಶೀಘ್ರವೇ ರೂಪಿಸಿಕೊಳ್ಳಬೇಕು.

ಈ ಯೋಜನೆಗೆ ಪೂರ್ವಪೀಠಿಕೆಯಾಗಿ ಪ್ರಕಟಿತ ಗ್ರಂಥಗಳ ಸೂಚಿಯೊಂದನ್ನು ತಯಾರಿಸಿಕೊಳ್ಳಬೇಕು. ಕನ್ನಡಿಗರು ಸಂತಸಪಡಬೇಕಾದ ವಿಷಯವೆಂದರೆ ಮೈಸೂರು ವಿಶ್ವವಿದ್ಯಾನಿಲಯ ಈ ದಿಸೆಯಲ್ಲಿ ಈಗಾಗಲೇ ಕಾರ್ಯೋನ್ಮುಖವಾಗಿದೆ. ಕನ್ನಡದಲ್ಲಿ ಮುದ್ರಿತವಾದ ಗ್ರಂಥಗಳ ವಿವರಣಾತ್ಮಕ ಬೃಹತ್ ಸೂಚಿಯ ನಿರ್ಮಾಣ ಆ ವಿಶ್ವವಿದ್ಯಾ ನಿಲಯದ ಆಶ್ರಯದಲ್ಲಿ ಕಾರ್ಯಗತವಾಗಲಿದೆ.* ಈ ಪ್ರಕಟನೆಯ ಸಹಾಯದಿಂದ ರಾಜ್ಯದಲ್ಲಿನ ಮೂರೂ ವಿಶ್ವವಿದ್ಯಾಲಯಗಳು, ರಾಜ್ಯ ಕೇಂದ್ರಗ್ರಂಥಾಲಯ, ಪರಿಷತ್ತು ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘ ಇವೆಲ್ಲ ಕಲೆತುಕೊಂಡು ಇಲ್ಲಿ ಹಾಗೂ ಹೊರಗೆ ಕನ್ನಡದಲ್ಲಿ ಪ್ರಕಟವಾದ ಗ್ರಂಥಗಳನ್ನು ಒಂದೆಡೆ ಕಲೆಹಾಕುವ ಬೃಹತ್ ಯೋಜನೆಯನ್ನು ರೂಪಿಸಿಕೊಳ್ಳುವದು ಅತ್ಯವಶ್ಯ. ರಾಷ್ಟ್ರೀಯ ಗ್ರಂಥಾಲಯ ಈ ಕಾರ್ಯದಲ್ಲಿ ಸಫಲವಾ ದರೂ ಅದು ಸಾಮಾನ್ಯ ಕನ್ನಡಿಗನಿಂದ ಬಹು ದೂರವಿದೆ. ಆದ್ದರಿಂದ ಹಿಂದೆ ಪ್ರಕಟ ವಾದ ಎಲ್ಲ ಕನ್ನಡ ಗ್ರಂಥಗಳು ರಾಜ್ಯದ ಯಾವುದೇ ಒಂದು ಗ್ರಂಥಾಲಯದಲ್ಲಿ ಅಥವಾ ಕೇಂದ್ರ ಗ್ರಂಥಾಲಯದಲ್ಲಿ ಇರುವದು ಅತ್ಯವಶ್ಯ.[1]

ಕನ್ನಡದ ಸದ್ಯದ ಪ್ರಕಟನೆಗಳು : ಪ್ರಪಂಚದಾದ್ಯಂತ ಇಂದು ಜೋಗಜಲಪಾತ ದೋಪಾದಿಯಲ್ಲಿ ಗ್ರಂಥಪ್ರಕಟನೆ ನಡೆದಿದೆ. ಪ್ರತಿವರ್ಷ ಪ್ರಪಂಚದ ನಾನಾಭಾಷೆಗಳಲ್ಲಿ ಲಕ್ಷಕ್ಕೂ ಮಿಕ್ಕಿ ಗ್ರಂಥಗಳೂ, ಒಂದು ಲಕ್ಷಕ್ಕೂ ಮಿಕ್ಕಿ ನಿಯತಕಾಲಿಕೆಗಳಲ್ಲಿ ೧೦ಲಕ್ಷಕ್ಕೂ ಮಿಕ್ಕಿ ಲೇಖನಗಳೂ ಪ್ರಕಟವಾಗುತ್ತಿವೆ. ಭಾರತದಲ್ಲಿಯೇ 15–20 ಸಾವಿರದವರೆಗೆ ವರುಷವೊಂದಕ್ಕೆ ಗ್ರಂಥ ಪ್ರಕಟನೆಯ ಕಾರ್ಯ ನಡೆದಿದೆ. ಕನ್ನಡದಲ್ಲಿ ಗ್ರಂಥಪ್ರಕಟಣೆ ವೃದ್ಧಿಗೊಂಡಿದೆಯಾದರೂ ಇನ್ನೂ ಸಾಕಷ್ಟಿಲ್ಲ. 1964ರಲ್ಲಿಯ ಅಂಕಿ ಸಂಖ್ಯೆಗಳ ಪ್ರಕಾರ ಪ್ರಪಂಚದಲ್ಲಿ ಪ್ರತಿ 10ಲಕ್ಷ ಜನರಿಗೆ 172 ಗ್ರಂಥಗಳು ಪ್ರಕಟವಾದವು. ಇದರಲ್ಲಿ ಏಷಿಯಾ ಖಂಡದ ಸರಾಸರಿ 48 ಆಗಿತ್ತು ; ಭಾರತದಲ್ಲಿ 27 ಇತ್ತು. ಈ ಎಣಿಕೆಯ

---

*ಪ್ರಸ್ತುತ ಪುಸ್ತಕ ಅಚ್ಚಾಗುತ್ತಿರುವ ಸಮಯಕ್ಕೆ ಈ ಗ್ರಂಥಸೂಚಿಯ ನಾಲ್ಕು ಸಂಪುಟಗಳು, ಎರಡು ಪುರವಣಿ ಸಂಪುಟಗಳು ಪ್ರಕಟವಾಗಿವೆ. ಯೋಜನೆ ಮುಂದುವರಿದಿದೆ.

1. ಮಹಾರಾಷ್ಟ್ರದಲ್ಲಿಯ ಕೊಲ್ಹಾಪುರದ ರಾಜಾರಾಮ ಕಾಲೇಜು, ಸಾಂಗಲಿಯ ವಿಲಿಂಗ ಡನ್ ಕಾಲೇಜು ಇವುಗಳ ಗ್ರಂಥಾಲಯಗಳಲ್ಲಿ ಒಳ್ಳೆಯ ಕನ್ನಡ ಗ್ರಂಥ ಸಂಗ್ರಹಗಳಿವೆ. ಅವುಗಳನ್ನು ಸರಿಯಾದ ಬೆಲೆಕಟ್ಟಿ ಕೊಂಡುಕೊಳ್ಳುವ ಯೋಜನೆಯನ್ನು ರೂಪಿಸುವದು ಯೋಗ್ಯ.

ಪ್ರಕಾರ ಕನ್ನಡದಲ್ಲಿ ಪ್ರತಿ 10 ಲಕ್ಷ ಜನರಿಗೆ ಕೇವಲ 8.8 ಗ್ರಂಥಗಳು ಮಾತ್ರ ಇತ್ತು. ಗ್ರಂಥ ಪ್ರಕಟನೆಯೂ ಒಂದು ಮಹೋದ್ಯಮ. ಸುಶಿಕ್ಷಿತ ಉದ್ದಿಮೆದಾರರು ಕೇವಲ ಲಾಭಬಡಕರಾಗದೆ ಮಿತಲಾಭದೊಂದಿಗೆ ಮಾನವ ಪ್ರಗತಿಯನ್ನೂ ಸಾಧಿಸುವ ಗ್ರಂಥಗಳ ಪ್ರಕಟಣೆಯ ಉದ್ಯಮ, ಉಕ್ಕಿನ ಕಾರಖಾನೆ, ಗೊಬ್ಬರ ಕಾರಖಾನೆಗಳಷ್ಟೇ ಮಹತ್ವದ್ದು ಎಂದು ಇನ್ನಾದರೂ ಪರಿಗಣಿಸಬೇಕು. ಸರಕಾರದ ಕುಬೇರ ಭಂಡಾರ ಇನ್ನುಳಿದ ಉದ್ಯಮಗಳಿಗೆ ಹೇಗೆ ಧನ ಸಹಾಯ ನೀಡುವದೋ ಅಷ್ಟೇ ಧಾರಾಳವಾಗಿ ಗ್ರಂಥಪ್ರಕಟಣೆಯ ಉದ್ಯಮಕ್ಕೆ ಸಹಾಯ ಸಲ್ಲಿಸಲೇಬೇಕು. ಗ್ರಂಥಗಳ ಹಿರಿಯ ಗುರಿ ವಿಚಾರ ವಿನಿಮಯ ; ಆದರೆ ಗ್ರಂಥಗಳ ಅಭಾವವೇ ಕಂಡುಬಂದಲ್ಲಿ ಎಲ್ಲಿಯ ವಿಚಾರ ? ಎಲ್ಲಿಯ ವಿನಿಮಯ ?

ಇನ್ನು ಕನ್ನಡದಲ್ಲಿ ಪ್ರಕಟವಾದ ಗ್ರಂಥಗಳ ಉಪಲಬ್ಧತೆ ಹಾಗೂ ಭವಿಷ್ಯದ ಕಡೆಗೆ ಸ್ವಲ್ಪ ಲಕ್ಷ್ಯ ಹಾಕುವದು ಅವಶ್ಯ. ಗ್ರಂಥಗಳನ್ನು ನೋಡಬೇಕು, ಕೊಂಡುಕೊಳ್ಳಬೇಕು ಎಂದು ಬಯಸುವ, ಕೇವಲ ಬೆರಳಿನ ಮೇಲೆ ಎಣಿಸಬಹುದಾದಷ್ಟು ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ ಅವು ಎಲ್ಲಿ ಪ್ರಕಟವಾಗಿವೆ, ಎಂದು ಪ್ರಕಟವಾಗಿವೆ, ಬೆಲೆ ಎಷ್ಟು ಮುಂತಾಗಿ ಮಾಹಿತಿ ಕೊಡುವಂಥ ಯೋಜನೆಯೂ ಇಲ್ಲ ; ಎಲ್ಲ ಕನ್ನಡ ಗ್ರಂಥಗಳು ಒಂದೆಡೆ ಮಾರಾಟಕ್ಕೆ ದೊರೆಯುವಂತಹ ಗ್ರಂಥಗಳ ಅಂಗಡಿಯೊಂದಿಲ್ಲ. ಒಂದೆರಡು ಇದ್ದರೂ ಅವು ಅರೆ ಜೀವಾವಸ್ಥೆಯಲ್ಲಿವೆ.

ಇಂಥದರಲ್ಲೂ ಹೊಸದಾಗಿ ಸ್ಥಾಪಿತವಾದ ಯಾವೊಬ್ಬ ಉತ್ಸಾಹೀ ಸಂಸ್ಥೆ, ಗ್ರಂಥಾಲಯ ಕನ್ನಡದಲ್ಲಿದ್ದ ಒಳ್ಳೇ ಗ್ರಂಥಗಳನ್ನು ಕೊಂಡುಕೊಳ್ಳಬೇಕೆಂದು ಬಯಸಿದರೆ ಅಂದಂದಿನವರೆಗಿನ ಗ್ರಂಥಸೂಚಿ ಅದ್ಯಾವತ್ತಾದ (up-to-date)ಯಾದಿ ಇಲ್ಲ. ಅಮೇರಿಕೆಯಲ್ಲಿ ಸಾರ್ವಜನಿಕ ಗ್ರಂಥಾಲಯಗಳಿಗೆ,(standard catalog for Public libraries) ಹೈಸ್ಕೂಲು ಗ್ರಂಥಾಲಯಗಳಿಗೆ, ಮಕ್ಕಳ ಗ್ರಂಥಾಲಯಗಳಿಗೆ, ಕಾಲೇಜು ಗ್ರಂಥಾಲಯಗಳಿಗೆ ಅನುರೂಪ ಗ್ರಂಥಗಳನ್ನು ಕೊಳ್ಳಲು ಅಮೇರಿಕೆಯ ಗ್ರಂಥಾಲಯ ಸಂಸ್ಥೆ ಸಿದ್ಧಪಡಿಸಿದ ಸೂಚಿಗಳಿವೆ. ಇಂಥವನ್ನು ನಾವೂ ಮಾಡಬೇಡವೆ ? ಧಾರವಾಡದಲ್ಲಿ ೪೩ನೆಯ ಕನ್ನಡಸಾಹಿತ್ಯ ಸಮ್ಮೇಳನದ ಸಮಯದಲ್ಲಿ ಸ್ವಾಗತ ಸಮಿತಿಯವರು ಪ್ರಕಟಿಸಿದ "ಜ್ಞಾನ ವಿಜ್ಞಾನ ಗ್ರಂಥಗಳ ಸೂಚಿ" ; ಸಾಹಿತ್ಯ ಅಕಾಡೆಮಿಯ ಸಲುವಾಗಿ ೧೯೫೭ರಲ್ಲಿ ಶ್ರೀಮಾನ್ ಕೆ. ಎಸ್. ದೇಶಪಾಂಡೆ ಅವರು ರಚಿಸಿದ ೧೨೦೦ ಒಳ್ಳೆಯಗ್ರಂಥಗಳ ಸೂಚಿ, ಶ್ರೀಮಾನ್ ಹಾವನೂರ ಅವರು ಕಲೆಹಾಕಿ ಪ್ರಕಟಿಸಿದ "ಕನ್ನಡ ಸಾವಿರ ಪುಸ್ತಕಗಳು" ಇವುಗಳನ್ನು ಬಿಟ್ಟರೆ ಇಂಥ ಸಹಾಯಕ ಸೂಚಿಗಳು ಕನ್ನಡದಲ್ಲಿಲ್ಲ. ಇನ್ನು ಸದ್ಯ ಪ್ರಕಟಗೊಳ್ಳುತ್ತಿರುವ ಪ್ರಕಟನೆಗಳ ಪಟ್ಟಿಯ ವಿಷಯ. ಈ ಕೊರತೆಯನ್ನು ತುಂಬಲು ಮೈಸೂರಿನ ತರುಣ, ಉತ್ಸಾಹೀ ಕನ್ನಡಪ್ರೇಮಿ ಯುವಕರ ತಂಡಗಳೆರಡರ ಪ್ರಯತ್ನ ನಡೆದಿದೆ. ಈಗೆರಡು ವರುಷಗಳಿಂದ ಹೊಸದಾಗಿ ಪ್ರಕಟಗೊಳ್ಳುತ್ತಿರುವ

ಕನ್ನಡ ಗ್ರಂಥಗಳ ವಿವರ ಕೊಡುವ ಎರಡು ಮಾಸಪತ್ರಿಕೆಗಳು ಬೆಳಕು ಕಂಡಿವೆ. 'ಗ್ರಂಥ ಲೋಕ' ಮತ್ತು 'ಪುಸ್ತಕ ಪುರವಣಿ'–ಇವೇ ಆ ಎರಡು ಪತ್ರಿಕೆಗಳು.

ಪ್ರಪಂಚದ ಪ್ರಗತಿಪರ ರಾಷ್ಟ್ರಗಳಲ್ಲಿ ಗ್ರಂಥದ ಮೊದಲನೆಯ ಆವೃತ್ತಿಯಲ್ಲಿಯೇ 10,000 ಪ್ರತಿಗಳನ್ನು ಹೊರತರುತ್ತಾರೆ. ಕನ್ನಡದಲ್ಲಿ ಇಂದಿಗೂ 2,000 ಪ್ರತಿಗಳನ್ನು ಪ್ರಕಟಮಾಡಲು ತುಟಿಕಚ್ಚಿ ದೀರ್ಘಕಾಲ ಯೋಚನೆ ಮಾಡಬೇಕಾಗಿ ಬರುತ್ತದೆ. ಪ್ರಕಟ ವಾದ ಈ 2000 ಪ್ರತಿಗಳ ಮಾರಾಟಮಾಡಲಿಕ್ಕೆ ಅನೇಕ ವರುಷಗಳು ಕಾಯಬೇಕಾಗು ತ್ತದೆ. ನಮ್ಮ ಪುಣ್ಯಕ್ಕೆ ರಾಜ್ಯಸರಕಾರ 1965ರಲ್ಲಿ ಗ್ರಂಥಾಲಯ ಕಾಯದೆ ಪಾಸು ಮಾಡಿದೆ. ರಾಜ್ಯದಾದ್ಯಂತ ಗ್ರಂಥಾಲಯಗಳ ತೋರಣ ತೂಗಲಿದೆ. ಈ ಎಲ್ಲ ಗ್ರಂಥಾಲಯಗಳಿಗೆ ಕೊಡುವ ಧನ ಸಹಾಯದ ಕೆಲವಂಶವನ್ನು ಹೊಸದಾಗಿ ಪ್ರಕಟ ವಾದ ಕನ್ನಡ ಪುಸ್ತಕಗಳಿಗೆ ಕೊಡುವ ಏರ್ಪಾಟು ಕೂಡಲೇ ಮಾಡಬೇಕು. ಕರ್ನಾಟಕದ ಮೂರು ವಿಶ್ವವಿದ್ಯಾಲಯಗಳಲ್ಲೂ ಇತ್ತೀಚಿನಿಂದ ಹೊಸದಾಗಿ ಪ್ರಕಟವಾದ ಕನ್ನಡದ ಎಲ್ಲ ಗ್ರಂಥಗಳ ಕನಿಷ್ಠ ಎರಡೆರಡು[1] ಪ್ರತಿಗಳನ್ನು ಕೊಂಡುಕೊಳ್ಳುವ ಸತ್ಸಂಪ್ರದಾಯ ರೂಢಿಯಲ್ಲಿ ಬಂದಿದೆ.

ಇಂತು ಇನ್ನುಳಿದ ಗ್ರಂಥಾಲಯಗಳು ಅದರಲ್ಲೂ ಸಾರ್ವಜನಿಕ ಗ್ರಂಥಾಲಯಗಳು ಪ್ರಕಟವಾದ ಎಲ್ಲ ಒಳ್ಳೆಯ ಕನ್ನಡ ಗ್ರಂಥಗಳನ್ನು ಪ್ರಕಟಿಸಿದ್ದನ್ನು ಸಂಗ್ರಹಿಸಿ, ಓದುಗರಿಗೆ ಒದಗಿಸಿದಲ್ಲಿ ಸಾರ್ವಜನಿಕರು ಅವುಗಳನ್ನು ಓದಿ ತಮ್ಮ ಜ್ಞಾನ ಭಂಡಾರವನ್ನು ತುಂಬಿಕೊಂಡಾರು. ಅದೇ ಗ್ರಂಥಗಳ ಖರೀದಿಗಾಗಿ ಕಾಯ್ದಿರಿಸಿದ ಅಲ್ಪಸ್ವಲ್ಪ ಹಣದಲ್ಲಿನ ಹಿರಿಪಾಲನ್ನು ಜನಸಾಮಾನ್ಯರಿಗೆ ಎಟುಕಲಾರದ ಇಂಗ್ಲಿಷ್ ಹಾಗೂ ಇನ್ನಿತರ ಭಾಷೆಯಲ್ಲಿಯ ಗ್ರಂಥಗಳನ್ನು ಕೊಳ್ಳಲಿಕ್ಕೆ ವಿನಿಯೋಗಿಸಿದಲ್ಲಿ ನಮ್ಮ ಜನರ ಸಂಸ್ಕೃತಿಯ ಬಡತನ ಹೆಚ್ಚಾಗದೆ ? "ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿ ದಂತಾಗಲಿಕ್ಕಿಲ್ಲವೆ ?". ಸ್ವಂತ ಹಣದಿಂದ ಗ್ರಂಥಗಳನ್ನು ಕೊಂಡು ಓದುವ ಸಾಮರ್ಥ್ಯ ನಮ್ಮಲ್ಲಿ ಎಷ್ಟು ಜನರಿಗಿದೆ ? ಇಂಥವರಿಗೆ ತಮ್ಮ ದಾಹವನ್ನು ಆರಿಸಿಕೊಳ್ಳಲು, ನೂತನ ಸಾಕ್ಷರಿಗಳು ಮರಳಿ ಮರವೆಯಿಂದ, ಓದುಬರೆಹಗಳ ಸಂಪರ್ಕದ ಅಭಾವದಿಂದ ನಿರಕ್ಷರ ತೆಯ ಕತ್ತಲೆಯಲ್ಲಿ ಬೀಳದಂತೆ ಮಾಡಲು ಗ್ರಂಥಾಲಯಗಳು ಒಳ್ಳೆಯ ಕನ್ನಡ ಗ್ರಂಥ ಗಳನ್ನು ಕೊಂಡುಕೊಂಡು ಓದುಗರಿಗೆ ಪೂರೈಸಲೇ ಬೇಕು. ಮನೆಮನೆಗೆ ಗ್ರಂಥಗಳನ್ನು ಓದಲು ಮುಟ್ಟಿಸುವಂತಾಗಬೇಕು. ಹೊಳೆಗೆ ನಾವು ಹೋಗದಿದ್ದರೂ ಸರಿ, ಹೊಳೆಯ ನೀರು ಮನೆಯವರೆಗೆ ಹರಿದು ಬರಬೇಕು.

---

1. ಇವುಗಳಲ್ಲಿ ಒಂದು ಪ್ರತಿಯನ್ನು ಪರಾಮರ್ಶನ ವಿಭಾಗದಲ್ಲಿ ಮುಂದಿನ ಪೀಳಿಗೆಗಾಗಿ ಕಾಯ್ದಿರಿಸಲಾಗುತ್ತಿದೆ. ಕನ್ನಡ ಗ್ರಂಥಗಳನೇಕವು ಬಹಳ ಕಾಲ ಬಾಳುವಂತಹ ಪರಿಸ್ಥಿತಿಯಲ್ಲಿ ಇನ್ನೂ ಪ್ರಕಟವಾಗುವುದಿಲ್ಲ. ಇನ್ನೂ ಕೆಲವು ಗ್ರಂಥಗಳು title page ಆಗಲೀ index ಆಗಲೀ, **section binding** ಆಗಲಿ ಕಂಡೇ‌ಇಲ್ಲ.

ಲೇಖಕರ ಹಸ್ತಾಕ್ಷರದಲ್ಲಿದ್ದ ಗ್ರಂಥಗಳ ಹಸ್ತಪ್ರತಿಗಳು : ನಾಲ್ಕು ವರುಷಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ 7–8 ಬೇರೆ ಬೇರೆ ಪ್ರದರ್ಶನಗಳನ್ನೇರ್ಪಡಿಸಲಾಗಿತ್ತು. ಇವುಗಳಲ್ಲಿ ಒಂದು ಕನ್ನಡದ ಪ್ರಖ್ಯಾತ ಲೇಖಕರ ಹಸ್ತಾಕ್ಷರದಲ್ಲಿದ್ದ ಗ್ರಂಥಗಳ ಹಾಗೂ ಅದರ ಇನ್ನಿತರ ಬರಹಗಳ ಹಸ್ತಪ್ರತಿಗಳಿಗಾಗಿ ಮೀಸಲಿರಿಸಲಾಗಿತ್ತು. ಆದರೆ ಇಂಥ ಹಸ್ತಪ್ರತಿಗಳನ್ನು ದೊರಕಿಸಬೇಕಾದರೆ ತುಂಬ ಪರಿಶ್ರಮ ಪಡಬೇಕಾಯಿತು. ಪೂಜ್ಯ ದಿವಂಗತ ಶ್ರೀ ಬಿ. ಎಂ. ಶ್ರೀ. ಯವರ ಹಸ್ತಾಕ್ಷರದ ಗ್ರಂಥಗಳು ಸಿಕ್ಕಲೇ ಇಲ್ಲ. ಇದರಂತೆಯೇ ಇನ್ನಿತರ ಖ್ಯಾತನಾಮ ಲೇಖಕರ ಪಾಡೂ ಆಗಿತ್ತು. ಇಂಗ್ಲೆಂಡ್, ವೇಲ್ಸ ದೇಶಗಳಲ್ಲಿ ಅಷ್ಟೊಂದು ಪ್ರತಿಭಾವಂತರಲ್ಲದ ಸಾಮಾನ್ಯ ದರ್ಜೆಯ ಲೇಖಕರ ಸ್ವಂತ ಅಕ್ಷರದಲ್ಲಿದ್ದ ಹಸ್ತಪ್ರತಿಗಳನ್ನೂ ಹೇರಳವಾದ ಹಣಕೊಟ್ಟು ಅಮೆರಿಕೆಯವರು ಖರೀದಿ ಮಾಡಿಕೊಂಡು ತಮ್ಮ ಗ್ರಂಥಾಲಯಗಳನ್ನೋ ವಸ್ತುಸಂಗ್ರಹಾಲಯಗಳನ್ನೋ ತುಂಬಿಕೊಳ್ಳುತ್ತಿದ್ದಾರೆ, ರಾಷ್ಟ್ರದ ಹೆಮ್ಮೆ ಗೌರವಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ನಮ್ಮಲ್ಲಾದರೋ ಹಿರಿಯನಾಮಾಂಕಿತ ಸಾಹಿತಿಗಳ ಹಸ್ತಾಕ್ಷರಗಳು ನಮಗೂ ನಮ್ಮ ಮುಂದಿನ ಪೀಳಿಗೆಯವರಿಗೂ ನೋಡಲು ಸಹ ಸಿಗುವಂತಿಲ್ಲ. ಕೆಲವು ಸಲ ರದ್ದಿ ಕಾಗದಗಳೆಂದು ಮಾರಾಟವಾಗಿ ಕಿರಾಣಿ ದಿನಸಗಳನ್ನು ಕಟ್ಟಲು ಉಪಯೋಗವಾದರೂ ಆಶ್ಚರ್ಯಪಡುವಂತಿಲ್ಲ.

ಅದರಂತೆಯೇ ಪ್ರಸಿದ್ಧಲೇಖಕರ, ವ್ಯಕ್ತಿಗಳ ವೈಯಕ್ತಿಕ ಕಾಗದಪತ್ರಗಳನ್ನೂ ದಿನಚರಿಗಳನ್ನೂ ಜೋಪಾನವಾಗಿ ಸಂಗ್ರಹಿಸಿ ಜತನವಾಗಿ ಗ್ರಂಥಾಲಯಗಳಲ್ಲಿ ಹಳ್ಳಿಯ ಗ್ರಂಥಾಲಯಗಳಿಂದ ಹಿಡಿದು ದಿಲ್ಲಿಯ ಗ್ರಂಥಾಲಯಗಳವರೆಗೂ ಇಂದಿನವರ ಜಾಗೃತಿಗಾಗಿ ಹಾಗೂ ಮುಂಬರುವ ಪೀಳಿಗೆಯ ಕ್ಷೇಮಾಭ್ಯುದಯಕ್ಕಾಗಿ ಕಾಯ್ದಿರಿಸಲೇಬೇಕು.

ಧ್ವನಿಮುದ್ರಿಕೆಗಳು ಮತ್ತು ಟೇಪುಗಳು : ಅದರಂತೆಯೇ ಮಾನವನ ಮುನ್ನಡೆಯಲ್ಲಿ ಸೇವೆಸಲ್ಲಿಸಿದ ವಿದ್ವನ್ಮಣಿಗಳ, ಶ್ರೇಷ್ಠವ್ಯಕ್ತಿಗಳ ಧ್ವನಿಯನ್ನು, ವಿಚಾರ ಸರಣಿಯನ್ನು ಟೇಪುಗಳಲ್ಲಿ ಸೆರೆಹಿಡಿದಿಡಬೇಕು. ಜಾನಪದ ಸಾಹಿತ್ಯದ ಮಹತ್ವದ ಭಾಗಗಳಾದ ಲಾವಣಿ ಪದಗಳನ್ನು, ಅವುಗಳನ್ನು ಹಾಡುವವರ ಧ್ವನಿಯಲ್ಲಿಯೇ, ಧಾಟಿಯಲ್ಲಿಯೇ ಟೇಪು ಮಾಡಿಸಿಕೊಂಡಿಡುವದು ಅತ್ಯವಶ್ಯ. ಈ ದಿಶೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯವರು ಹೆಜ್ಜೆ ಇಟ್ಟುದು ತುಂಬಾ ಸಂತೋಷಕರವಾದ ಸಂಗತಿ.

ಫಿಲ್ಮುಗಳು : ಮೈಸೂರು ಸರಕಾರ ಇತ್ತೀಚೆಗೆ ರಾಷ್ಟ್ರಕವಿ ಕುವೆಂಪು, ಜನಪ್ರಿಯ ಕವಿವರ್ಯ ದ. ರಾ. ಬೇಂದ್ರೆ ಇವರುಗಳನ್ನು ಕುರಿತು ಫಿಲ್ಮುಗಳನ್ನು ತಯಾರಿಸಲು ಏರ್ಪಾಡು ಮಾಡಿದ್ದಾರೆಂದು ತಿಳಿದು ಅಮಿತಾನಂದವಾಯಿತು. ಈ ಕಾರ್ಯಕ್ರಮ ವ್ಯಾಪ್ತಿ ಇನ್ನಷ್ಟು ವಿಕಾಸಗೊಂಡು ಕನ್ನಡನಾಡಿನ ಎಲ್ಲ ಗಣ್ಯ ವ್ಯಕ್ತಿಗಳನ್ನೂ ಸಂಸ್ಥೆಗ

ಳನ್ನು ಒಳಗೊಳ್ಳುವಂತಾಗಲಿ, ಮತ್ತು ಈ ಸಾಕ್ಷಿಚಿತ್ರಪಟಗಳು ಹಳ್ಳಿಹಳ್ಳಿಗಳಲ್ಲಿ, ಗ್ರಂಥಾಲಯಗಳಲ್ಲಿ ಪ್ರದರ್ಶನಕ್ಕೆ ದೊರೆಯುವಂತಾಗಲಿ.

ವರ್ತಮಾನ ಪತ್ರಗಳು : ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ ಇವೇ ಮೊದಲಾದ ವಿಷಯಗಳಲ್ಲಿ ಸಂಶೋಧಕರಿಗೆ ವಿಷಯ ಮೂಲಗಳನ್ನು, ವಸ್ತುಮೂಲಗಳನ್ನು (source material) ಒದಗಿಸಿಕೊಡುವ ಶ್ರೇಷ್ಠಸಾಧನಗಳೆಂದರೆ ವರ್ತಮಾನ ಪತ್ರಗಳು. ಕನ್ನಡನಾಡಿನ ಯಾವುದೇ ಗ್ರಂಥಾಲಯದಲ್ಲಿ ಪ್ರಚಲಿತವಿರುವ ಹಾಗೂ ನಿಂತು ಹೋದ ವರ್ತಮಾನ ಪತ್ರಗಳ ಹಳೆಯ ಸಂಪುಟಗಳು ಅವಗಾಹನೆಗಾಗಿ ಪೂರ್ಣವಾಗಿ ಲಭ್ಯವಿಲ್ಲ. ಪ್ರಚಲಿತವಿರುವ ವರ್ತಮಾನ ಪತ್ರಗಳಿಗೆ ಸರಿಯಾದ ದರ್ಶಕ (index) ಇಲ್ಲ. ಇವೆರಡು ನ್ಯೂನತೆಗಳನ್ನೂ ಹೋಗಲಾಡಿಸಲು ರಾಜ್ಯದಲ್ಲಿನ ವಿದ್ಯಾಸಂಸ್ಥೆಗಳು ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯ.

ನೆರೆ ರಾಜ್ಯದಲ್ಲಿದ್ದ ಕನ್ನಡ ನಾಡಿಗೆ ಸಂಬಂಧಿಸಿದ ದಾಖಲೆಗಳು ಮತ್ತು ಮಹತ್ವದ ಕಾಗದ ಪತ್ರಗಳು : ನವ ಮೈಸೂರಿನ ಉತ್ತರ ಕರ್ನಾಟಕ, ಹೈದ್ರಾಬಾದ ಕರ್ನಾಟಕ ಮಂಗಳೂರು, ಬಳ್ಳಾರಿ ಮತ್ತಿತರ ಪ್ರದೇಶಗಳು ಬೇರೆ ಬೇರೆ ಆಡಳಿತಕ್ಕೆ ಸೇರಿದ್ದವಷ್ಟೇ. ಇವುಗಳ ಹಿಂದಿನ ಇತಿಹಾಸಕ್ಕೆ, ಆಡಳಿತಕ್ಕೆ ಸಂಬಂಧಿಸಿದ ದಾಖಲೆಗಳು ಮಹಾರಾಷ್ಟ್ರ, ತಮಿಳುನಾಡು, ಆಂಧ್ರ ಪ್ರದೇಶಗಳ ಸಚಿವಾಲಯಗಳಲ್ಲಿ ಹಂಚಿಹೋಗಿ ಚಲ್ಲಾಪಿಲ್ಲಿಯಾಗಿವೆಯೆಂದರೂ ಅತಿಶಯೋಕ್ತಿಯಾಗಲಾರದೇನೋ ! ಗೋವಾ ಸಚಿವಾಲಯದಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಅತಿ ಮಹತ್ವದ ಕಾಗದ ಪತ್ರಗಳಿವೆ. ಇವುಗಳ ಫೋಟೋ ಪ್ರತಿಗಳನ್ನಾಗಲೀ ಅಥವಾ ಮೈಕ್ರೋಫಿಲ್ಮುಗಳನ್ನಾಗಲೀ ನಮ್ಮ ರಾಜ್ಯ ಸರಕಾರ, ಅವು ನಾಶವಾಗುವ ಮುನ್ನ ದೊರಕಿಸಿಕೊಂಡು ಶಾಸನಸಭೆಯ ಗ್ರಂಥಾಲಯದಲ್ಲಿಯಾಗಲೀ, ಅಥವಾ ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿಯಾಗಲೀ, ಇಡುವದು ಅತ್ಯವಶ್ಯವಲ್ಲವೆ ?

ಶಿಲಾಲೇಖಗಳು : ಕನ್ನಡನಾಡಿನ ಭವ್ಯ ಇತಿಹಾಸದ ಜೀರ್ಣೋದ್ಧಾರಕ್ಕೆ ಮೂಲ ಸಾಮಗ್ರಿಗಳಾದ ಶಿಲಾಶಾಸನಗಳು ನಮ್ಮ ರಾಜ್ಯದಲ್ಲೂ, ನಮ್ಮ ನೆರೆಹೊರೆಯ ರಾಜ್ಯಗಳಲ್ಲೂ ಇನ್ನೂ ಉಪಲಬ್ಧವಿವೆ. ಮಹಾರಾಷ್ಟ್ರದ ಮರಾಠವಾಡಾ ವಿಭಾಗದಲ್ಲಿಯ ನಾಂದೇಡ ಜಿಲ್ಲೆಯಲ್ಲಿ ಅಂದರೆ ಗೋದಾವರಿನದಿಯ ಪರಿಸರದಲ್ಲಿ ಕೂಡ ಕನ್ನಡ ಶಿಲಾಶಾಸನಗಳಿದ್ದುದು ಇತ್ತೀಚೆಗೆ ಡಾ. ಶ್ರೀನಿವಾಸರಿತ್ತಿಯವರ ಪರಿಶ್ರಮದಿಂದ ಸಾರಸ್ವತ ಪ್ರಪಂಚಕ್ಕೆ ಗ್ರಂಥರೂಪದಲ್ಲಿ ಲಭ್ಯವಾಗಿದೆ. ಈ ಶಿಲಾಶಾಸನಗಳು ಕನ್ನಡ ನಾಡಿನ ಹಾಗೂ ನುಡಿಯ ವ್ಯಾಪ್ತಿಯನ್ನು ಖಚಿತವಾಗಿ ತೋರಿಸಿಕೊಡುತ್ತವೆ. ಇಂಥ ಸಹಸ್ರಾರು ಶಿಲಾಶಾಸನಗಳು ನಮ್ಮ ದೇಶದ ತುಂಬೆಲ್ಲ ಹರಡಿವೆ. ಅವುಗಳ ರಕ್ಷಣೆ, ತುಂಬ ಕಷ್ಟ ಕಾರ್ಯವಾಗಿದೆ. ಈ ಶಿಲಾಶಾಸನಗಳು ಕೆಲವೊಂದು ಅಜ್ಞಾನಿಗಳ ಕತ್ತಲು ಮನೆಯ ಬಚ್ಚಲುಕಲ್ಲಾಗಿ·ದುರ್ದೆಶೆ ಹೊಂದುವ ಮೊದಲು-ಆಯಾ ಹಳ್ಳಿಗಳಲ್ಲಿನ ಗ್ರಂಥಾಲಯಗಳ ಮುಖಾಂತರ ಅವುಗಳ ಪ್ರತಿಗಳನ್ನು (estampages) ಮಾಡಿಸಿಡುವದು ಅತ್ಯಗತ್ಯ.

ಹಳೆಯ ಚಿತ್ರಪಟಗಳು : ಇಷ್ಟೆಲ್ಲ ಆಯಿತು. ಆದರೆ ಮನರಂಜನೆಯಲ್ಲಿ ಹಿರಿಯ ಪಾತ್ರ ವಹಿಸುವ ಕನ್ನಡ ಚಿತ್ರಪಟಗಳೆಲ್ಲಿ? ಯಾವನಾದರೊಬ್ಬ ಪ್ರತಿಭಾವಂತ ಕನ್ನಡ ವಿದ್ಯಾರ್ಥಿ ಈ ವಿಷಯದ ಮೇಲೆ ಪಿಎಚ್.ಡಿ. ಪ್ರಬಂಧವನ್ನೋ ಹೆಬ್ಬೊತ್ತಿಗೆಯನ್ನೋ ಬರೆಯಬೇಕೆಂದು ಇಚ್ಛೆಪಟ್ಟರೆ, ತವಕ ಪಟ್ಟರೆ, ಅವನ ನಿರೀಕ್ಷೆಗೆ ಹಳೇ–ಹೊಸ ಚಿತ್ರ ಪಟಗಳು ಲಭ್ಯವಾಗಬೇಡವೇ ? ಹಲವೇ ವರುಷಗಳ ಹಿಂದೆ ಕನ್ನಡ ಜನಮನವನ್ನು ತಣಿಸಿದ "ಸದಾರಮೆ" "ವಸಂತಸೇನೆ", "ಭಕ್ತಮಾರ್ಕಂಡೇಯ" "ಸತ್ಯಹರಿಶ್ಚಂದ್ರ" ಇತ್ಯಾದಿ ಚಿತ್ರಪಟಗಳು ಇಂದು ಇನ್ನೊಮ್ಮೆ ನೋಡಲು ಲಭ್ಯವಾಗಬಹುದೇ ?ರಾಜ್ಯದ ಕೇಂದ್ರ ಗ್ರಂಥಾಲಯ ಅವುಗಳ ವಿಭಾಗವೊಂದನ್ನು ಪ್ರಾರಂಭಿಸುವಂತಾಗಬೇಕು.

ಪ್ರಪಂಚದ ಇತರೇ ರಾಷ್ಟ್ರಗಳು ತಮ್ಮ ಪರಂಪರೆಯನ್ನು, ಸಂಸ್ಕೃತಿಯನ್ನು ಸಾರಸ್ವತ ಸಿರಿವಂತಿಕೆಯನ್ನು ತಮ್ಮ ಶ್ರೇಷ್ಠ ಬೃಹತ್ ರೂಪದ ದಕ್ಷ ಗ್ರಂಥಾಲಯಗಳಲ್ಲಿ ಹೆಮ್ಮೆಯಿಂದ ಕಾಯ್ದುಕೊಂಡು ಬಂದಿವೆ. ಇದಲ್ಲದೆ ದಿನದಿನಕ್ಕೂ ಅಗಾಧವಾಗಿ ಬೆಳೆ ಯುತ್ತಿರುವ ಜ್ಞಾನಭಂಡಾರವಾದ ಗ್ರಂಥರಾಶಿಯನ್ನು ಸಂಗ್ರಹಿಸುತ್ತಿವೆ. ಇವುಗಳ ಪ್ರಯೋಜನ ಜನಸಾಮಾನ್ಯರಿಗೆ, ಸಂಶೋಧಕರಿಗೆ, ಸರ್ವರಿಗೂ ಮುಟ್ಟಲೆಂದು ತಮ್ಮ ಗ್ರಂಥಾಲಯ ಇವುಗಳ ಗಣಕಯಂತ್ರಗಳನ್ನು (computers, communication satellites)ಗಳನ್ನೂ, ಲೇಸರ ಕಿರಣಗಳನ್ನೂ ಉಪಯೋಗಿಸುವ ಹವಣಿಕೆಯಲ್ಲಿದ್ದಾರೆ.

ಗ್ರಂಥಾಲಯಗಳ ಪ್ರಗತಿಯಾದಷ್ಟೂ ನಾಡು ಮುನ್ನಡೆಯುತ್ತದೆ ಎಂಬ ಮಾತು ನಿರ್ವಿವಾದ. ನಮ್ಮ ಕನ್ನಡ ನಾಡಿನಲ್ಲಿ ಗ್ರಂಥಾಲಯಗಳ ಸಂಖ್ಯೆ, ಪ್ರಗತಿ ಆಶಾದಾಯಕ ವಾಗಿದೆ. ಜನತೆ ಮನಸ್ಸು ಮಾಡಿದರೆ, ಸದ್ಯದ ಸ್ಥಿತಿ ಅತಿ ಶೀಘ್ರದಲ್ಲಿ ಇನ್ನೂ ಉತ್ತಮ ವಾಗಬಹುದು. ಈ ಕಾರ್ಯ ನಿಜವಾಗಿಯೂ ಮಹತ್ಕಾರ್ಯ ! ಮಹತ್ಕಾರ್ಯ ಸಾಧ ನೆಗೆ ಮಹಾ ಪ್ರಯತ್ನವೇ ಆವಶ್ಯಕ. ಇಂಥ ಮಹೋದ್ಯಮಕ್ಕೆ, ವಜ್ರ ಸಂಕಲ್ಪಸಿದ್ಧಿಗೆ ಬೇಕಾದ ಭೀಮ ಬಲವನ್ನು ಕನ್ನಡತಾಯಿ ಭುವನೇಶ್ವರಿ ನಮ್ಮೆಲ್ಲರಿಗೂ ದಯಪಾಲಿಸಲಿ! ಆಶೀರ್ವದಿಸಲಿ ! ತಾಯಿಗೆ ನಮ್ಮ ಪಾಲಿನ ಗ್ರಂಥಾಲಯ ಸೇವೆಯ ರತ್ನದಾರತಿಯನ್ನು ಮಾಡಿ ನಮಸ್ಕರಿಸೋಣ.

೨ | ಜನಸಾಮಾನ್ಯರಿಗೆ ಗ್ರಂಥಾಲಯಗಳು

ಇಡೀ ಜಗತ್ತಿನ ಜನಸಾಮಾನ್ಯರ ದೃಷ್ಟಿಯಿಂದ 1972ನೆಯ ಇಸವಿ ಚರಿತ್ರಾರ್ಹವಾಗಿ ಉಳಿಯುತ್ತದೆ. ಅದನ್ನು ಯುನೆಸ್ಕೋ "ಅಂತರರಾಷ್ಟ್ರೀಯ ಪುಸ್ತಕ ವರ್ಷ"ವೆಂದು ಘೋಷಿಸಿತು. ಆ ವರ್ಷವನ್ನು ಆಚರಿಸಲು ಅದು ಬಳಸಿದ ಘೋಷಣೆ "ಎಲ್ಲರಿಗೂ ಪುಸ್ತಕಗಳು". ಈ ತೀರ್ಮಾನದ ಹಿಂದೆ ಇರುವ ಅನೇಕ ಸ್ತುತ್ಯರ್ಹ ಉದ್ದೇಶಗಳಲ್ಲಿ ಒಂದನ್ನು ಇಲ್ಲಿ ಹೇಳಲೇಬೇಕು. ಇದು ಜನಸಾಮಾನ್ಯನ ದೃಷ್ಟಿಯಿಂದ ಅತಿ ಮುಖ್ಯವೂ ಶ್ರೇಷ್ಠವೂ ಅಹುದು. ಅದೆಂದರೆ ಜಗತ್ತಿನಾದ್ಯಂತ ಇರುವ ಜನಸಾಮಾನ್ಯರು ತಮ್ಮ ದಿನನಿತ್ಯದ ಜೀವನದಲ್ಲಿ ಪುಸ್ತಕ ಅತಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆಂಬುದನ್ನು ಅರಿಯಬೇಕು ; ಅವರು ತಮ್ಮ ಜೀವನದಲ್ಲಿ ಪುಸ್ತಕಗಳನ್ನು ಓದುವ ಹವ್ಯಾಸವನ್ನೂ ಒಳ್ಳೆಯ ಪುಸ್ತಕಗಳ ಬಗ್ಗೆ ಪ್ರೀತಿಯನ್ನೂ ಬೆಳೆಸಿಕೊಳ್ಳಬೇಕು.

ಪುಸ್ತಕಗಳನ್ನು ಸ್ತುತಿಸುತ್ತ ಥಾಮಸ್ ಬಾರ್ಥೊಲಿನ್ ಅಲ್ಲವೆ ಹೀಗೆ ಹೇಳಿದ್ದು : "ಪುಸ್ತಕಗಳಿಲ್ಲದಿದ್ದರೆ ದೇವರು ಮೌನ, ನ್ಯಾಯ ಸುಪ್ತ, ವಿಜ್ಞಾನ ತಟಸ್ಥ, ತತ್ತ್ವಶಾಸ್ತ್ರ ಕುಂಟು, ಸಾಹಿತ್ಯ ಕುರುಡು, ಮತ್ತು ಉಳಿದವೆಲ್ಲ ಗಾಢಾಂಧಕಾರದಲ್ಲಿ ಮುಳುಗಿರುತ್ತವೆ.

ಅದ್ಭುತ ಪುಸ್ತಕಲೋಕದ ನಿಕಟ ಸಂಪರ್ಕವಿಲ್ಲದೆ ಹೋಗಿದ್ದರೆ ಎಷ್ಟೋ ಜನ ಮಹಾಪುರುಷರು ಪಾಮರರಾಗಿಯೇ ಉಳಿಯುತ್ತಿದ್ದರು ; ಮತ್ತು ಅವರು ಮಾನವಕುಲ ಸಂಪಾದಿಸಿರುವ ಜ್ಞಾನರಾಶಿಗೆ ಯಾವುದೇ ಗಣನೀಯವಾದ ಸಹಾಯ ಮಾಡದೆ ಹಾಗೆಯೇ ಜೀವನ ತಳ್ಳಿ ಕಣ್ಮರೆಯಾಗಿಬಿಡುತ್ತಿದ್ದರು. ಇಂಥ ಮಹಾಪುರುಷರ ನಿದರ್ಶನಗಳ ಪಟ್ಟಿಯನ್ನು ಬೆಳೆಸುತ್ತ ಹೋಗಬಹುದು. ಎರಡು ನಿದರ್ಶನಗಳನ್ನು ನೋಡಲು ಒಂದು ಕ್ಷಣ ನಿಲ್ಲೋಣ. ಬ್ರಿಟನ್ನಿನ ಗಣ್ಯ ಭೌತರಸಾಯನ ವಿಜ್ಞಾನಿ ಮೈಕೇಲ್ ಫ್ಯಾರಡೆ ಆರಂಭದಲ್ಲಿ ಪರಮ ಪಾಮರನಾಗಿದ್ದ. ಲಂಡನ್ನಿನ 18ನೆಯ ಶತಮಾನದ ಪುಸ್ತಕ ವ್ಯಾಪಾರಿಯೂ ಲೇಖನಸಾಮಗ್ರಿ ವ್ಯಾಪಾರಿಯೂ ಆದ ರೈಬೋ ಎಂಬಾತ ಈ ಎಳೆಯ ಫ್ಯಾರಡೆಗೆ ತನ್ನ ಅಂಗಡಿಯಲ್ಲಿ ಪುಸ್ತಕಕ್ಕೆ ರಟ್ಟು ಕಟ್ಟುವುದನ್ನು ಪುಕ್ಕಟೆಯಾಗಿ ಕಲಿಯಲು ಅವಕಾಶ ದಯಪಾಲಿಸಿದ. ಈ ಕೂಸು ತನ್ನ ದಿನದ ಕಾಯಕ ಮುಗಿಸಿದ ಅನಂತರ ಬಿಡುವು ವೇಳೆಯಲ್ಲಿ ರೈಬೋ ಅಂಗಡಿಗೆ ಬೈಂಡುಮಾಡಲು ಬಂದ ಎಲ್ಲ ಬಗೆಯ ಪುಸ್ತಕಗಳನ್ನೂ ಕಣ್ಣಲ್ಲಿ ಕಣ್ಣಿಟ್ಟು ಓದಿದ. ಈ ಪುಸ್ತಕಗಳ ಪುಟಗಳಲ್ಲಿ ಆತ ಕಂಡುಹಿಡಿದದ್ದು ನಿಜವಾಗಿಯೂ ಒಂದು ಸೋಜಿಗವೂ ಅದ್ಭುತವೂ ಆದ ಲೋಕವನ್ನು. "ನನ್ನ ಕೈಬಳಿಯಿದ್ದ ವೈಜ್ಞಾನಿಕ ಪುಸ್ತಕಗಳನ್ನು ನಾನು ವಿಶೇಷವಾಗಿ ಓದಬಯಸುತ್ತಿದ್ದೆ". ಎಂದು ಅವನು ಹೇಳುತ್ತಿದ್ದ. ಹೀಗೆ ಫ್ಯಾರಡೆಯ ಮನಸ್ಸಿನಲ್ಲಿ ಪ್ರತಿಭೆಯಕಿಡಿ

ಪ್ರದೀಪ್ತವಾಯಿತು. ಆತ ಅಂತರರಾಷ್ಟ್ರೀಯ ಖ್ಯಾತಿವೆತ್ತ ಭೌತರಸಾಯನ ವಿಜ್ಞಾನಿಯಾಗಿ ಅರಳಿದ.

ರಷ್ಯನ್ ಭಾಷೆಯ ಹಿರಿಯ ಲೇಖಕನಾದ ಮ್ಯಾಕ್ಸಿಮ್ ಗಾರ್ಕಿಯು ಪುಸ್ತಕಗಳು ತನ್ನ ಮೇಲೆ ಹೇಗೆ ಪ್ರಭಾವ ಬೀರಿ ಪರಿವರ್ತಿಸಿದುವು ಎನ್ನುವುದನ್ನು ಹೇಳುತ್ತ, "ನನ್ನಲ್ಲಿರುವ ಸತ್ತ್ವಕ್ಕೆಲ್ಲ ಗ್ರಂಥಗಳೇ ಕಾರಣ" ಎನ್ನುತ್ತಾನೆ.

ಲಂಡನ್ನಿನ ಬಡವರ ಕೇರಿಯಲ್ಲಿ ಇದ್ದ ಇನ್ನೊಬ್ಬ ಜನಸಾಮಾನ್ಯನಾದ ಮಾರ್ಕ್ಸನಿಗೆ 18 ವರ್ಷಗಳ ಕಾಲ ಸತತವಾಗಿ ಬ್ರಿಟಿಷ್ ಮ್ಯೂಜಿಯಮ್ ಗ್ರಂಥಾಲಯಕ್ಕೆ ಹೋಗುವ ಸದವಕಾಶ ದೊರೆತಿತ್ತು. ಇದರ ಫಲವಾಗಿ ಅವನ "ದಾಸ್ ಕ್ಯಾಪಿಟಲ್" ಎಂಬ ಮೇರುಕೃತಿ ಹೊರಬಂತು.

ಆದರೆ ಈಚಿನ ದಿನಗಳಲ್ಲಿ ಪುಸ್ತಕಗಳು ಸಾಮಾನ್ಯನ ಕೈಗೆ ಎಟುಕದಂಥವು ; ಅವುಗಳ ಬೆಲೆ ದುಬಾರಿ, ಸಂಖ್ಯೆಯೂ ಅಪಾರ. ಆದರಲ್ಲೂ ಅಗತ್ಯ ವಸ್ತುಗಳ ಬೆಲೆ ಒಂದೇ ಸಮನೆ ಏರುತ್ತಿರುವಾಗ ಪುಸ್ತಕಗಳು ಜನಸಾಮಾನ್ಯನಿಗೆ ಹಾಬ್‌ಸನನ ಆಯ್ಕೆಯೇ ಸರಿ. ಅಂದರೆ ಒಳ್ಳೆಯ ಪುಸ್ತಕ ಕೊಂಡುಕೊಳ್ಳಬೇಕೇ ಒಳ್ಳೆಯ ಅಂಗಿ ಕೊಂಡುಕೊಳ್ಳಬೇಕೇ ಎಂಬ ಸಮಸ್ಯೆ ಹುಟ್ಟಿದಾಗ ಹಣವಿಲ್ಲದವನ ಮುಂದೆ ಇರುವ ಆಯ್ಕೆ ಎರಡಲ್ಲ, ಒಂದೇ (ಅಂದರೆ ಅಂಗಿ). ಆದ್ದರಿಂದ ಸಾರ್ವಜನಿಕ ಗ್ರಂಥಾಲಯಗಳ ವಲಯದ ಮೂಲಕ ಪುಸ್ತಕಗಳನ್ನು ಜನಸಾಮಾನ್ಯನಿಗೆ ರಾಷ್ಟ್ರ ಒದಗಿಸಬಹುದು ; ಒದಗಿಸಬೇಕು.

ಜನಸಾಮಾನ್ಯರಿಗೆ ಗ್ರಂಥಾಲಯಗಳ ಪ್ರಾಮುಖ್ಯ ಎಷ್ಟಿದೆಯೆಂಬುದನ್ನು ಆಧುನಿಕ ಲೋಕದ ರಾಷ್ಟ್ರಗಳಲ್ಲಿ ಮೊದಲು ಅರಿತ ದೇಶವೆಂದರೆ ಬ್ರಿಟನ್. 1850ರಲ್ಲಿ ಬ್ರಿಟಿಷ್ ಪಾರ್ಲಿಮೆಂಟು ಮೊಟ್ಟಮೊದಲಿಗೆ ಸಾರ್ವಜನಿಕ ಗ್ರಂಥಾಲಯಗಳ ಕಾಯಿದೆಯನ್ನು ಅಂಗೀಕರಿಸಿತು. ಹೆಚ್ಚು ಕಡಮೆ ಅದೇ ಕಾಲದಲ್ಲೇ ಅಮೆರಿಕ ಸಂಯುಕ್ತ ಸಂಸ್ಥಾನವೂ ಆಧುನಿಕ ಗ್ರಂಥಾಲಯ ಕಾಯಿದೆಯನ್ನು ಅಂಗೀಕರಿಸಿತು. ಭಾರತದಲ್ಲಿ ಅಂಥ ಪ್ರಯತ್ನಗಳಲ್ಲೆಲ್ಲ ಮೊಟ್ಟಮೊದಲನೆಯದನ್ನು ಬರೋಡದ ಆಗಿನ ಮಹಾರಾಜ ಸಯಾಜಿರಾವ್ ಗಾಯಕ್‌ವಾಡ್ ಮಾಡಿದರು. ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಒಂದು ಜಿಲ್ಲೆಯಲ್ಲಿ 1893ರಲ್ಲಿ ಜಾರಿಗೆ ತರಲಾಯಿತು. ಆಮೇಲೆ 1907ರಲ್ಲಿ ಇಡೀ ಬರೋಡಾ ರಾಜ್ಯಕ್ಕೆ ಅದನ್ನು ವಿಸ್ತರಿಸಲಾಯಿತು. ಈ ಸ್ತುತ್ಯರ್ಹ ಯೋಜನೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಜನಸಾಮಾನ್ಯರಿಗೆ ಉಚಿತ ಸಾರ್ವಜನಿಕ ಗ್ರಂಥಾಲಯ ಶ್ರೇಣಿಯನ್ನು 1910ರಲ್ಲಿ ಉಪಕ್ರಮಿಸಿದರು. ಆದರೆ ಗ್ರಂಥಾಲಯ ಕಾಯಿದೆಯನ್ನು ಜಾರಿಗೆ ತಂದ ಮೊದಲ ರಾಜ್ಯವೆಂದರೆ ಮದರಾಸು. ಹೀಗಾಗಲು ಸಯಾಜಿರಾವ್‌ರವರ ಪ್ರಯತ್ನದ ಅನಂತರ 38 ವರ್ಷಗಳು ಕಳೆಯಬೇಕಾಯಿತು.

ಸೋವಿಯತ್ ರಷ್ಯದ ನಿರ್ಮಾಣದ ಆರಂಭದಲ್ಲಿಯೇ ಲೆನಿನ್ನರು ತಮ್ಮ ದೇಶದಲ್ಲಿ ಗ್ರಂಥಾಲಯಗಳ ಆವಶ್ಯಕತೆಯ ಬಗ್ಗೆ ತೀವ್ರವಾಗಿ ಆಲೋಚಿಸಿದರು. 1920ರಲ್ಲಿ ಅವರು ಕನಿಷ್ಠಪಕ್ಷ 50,000 ಗ್ರಂಥಾಲಯಗಳನ್ನು ಸ್ಥಾಪಿಸಲು ತೀರ್ಮಾನಿಸಿದರು.

ಇಂದು ಸೋವಿಯತ್ ದೇಶದಲ್ಲಿ 3,60,000 ಗ್ರಂಥಾಲಯುಗಳಿವೆ ; ಅವೆಲ್ಲವುಗಳಲ್ಲಿ ಸುಮಾರು 3,300 ದಶಲಕ್ಷ ಗ್ರಂಥಗಳಿವೆ.

ಕ್ಯೂಬದ ಆಡಳಿತ ಯಂತ್ರವನ್ನು ವಹಿಸಿಕೊಂಡ ಒಡನೆಯೇ ಫಿಡಲ್‌ಕ್ಯಾಸ್ಟ್ರೋ ಕ್ಯೂಬ ದೇಶ ಮುಂದೆ ಬರಬೇಕಾದರೆ ಮತ್ತು ಸ್ವಯಂಪರಿಪೂರ್ಣವಾಗಬೇಕಾದರೆ ಅದು ತನ್ನ ದೇಶದಿಂದ ಅನಕ್ಷರತೆಯನ್ನು ತೊಲಗಿಸಲೇಬೇಕು ಎಂದು ಮನಗಂಡರು. ಆದ್ದರಿಂದಲೇ ಕ್ಯಾಸ್ಟ್ರೋ ಅನಕ್ಷರತೆಯನ್ನು ತೊಲಗಿಸುವ ಉಗ್ರ ಕಾರ್ಯಕ್ರಮವೊಂದನ್ನು ಆರಂಭಿಸಿದರು;ಅಲ್ಲದೆ ತಮ್ಮ ದೇಶದ ಅಕ್ಷರಸ್ಥರು ಪುನ ಅನಕ್ಷರಸ್ಥರಾಗದಿರಲು ಅಂಥದೇ ಇನ್ನೊಂದು ಉಗ್ರಕಾರ್ಯಕ್ರಮವನ್ನು ಆರಂಭಿಸಿದರು. ಈ ಯೋಜನೆಯ ಮೂಲಕ ಅವರು ತಮ್ಮ ದೇಶದವರಿಗೆ ಪುಸ್ತಕಗಳನ್ನು ಗಾಳಿ ಹಾಗೂ ನೀರಿನಷ್ಟು ಧಾರಾಳವಾಗಿಯೂ ಅಗ್ಗವಾಗಿಯೂ ದೊರಕಿಸಿಕೊಟ್ಟರು.

ಅತ್ಯಲ್ಪ ಕಾಲದಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿರುವ ಜಪಾನ್ ಹಾಗೂ ಇತರ ದೇಶಗಳ ಇತ್ತೀಚಿನ ಇತಿಹಾಸವನ್ನು ನಾವು ಓದಿದರೆ, ಜನಸಾಮಾನ್ಯರಿಗೆ ಪುಸ್ತಕಗಳನ್ನೂ ಗ್ರಂಥಾಲಯ ಸೌಲಭ್ಯಗಳನ್ನೂ ಒದಗಿಸಿಕೊಟ್ಟದ್ದೇ ಆ ದೇಶಗಳ ಸಾಧನೆಯ ಗುಟ್ಟು ಎಂಬುದೂ ಇಂತಹ ಸೌಲಭ್ಯಗಳಿಂದಾಗಿ ಅವರು ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದು ಮಾತ್ರವಲ್ಲದೆ ಇಡೀ ದೇಶದ ಪ್ರಗತಿಗೆ ಗಣನೀಯವಾದ ಸೇವೆ ಮಾಡಬಹುದು ಎಂಬುದೂ ನಮಗೆ ತಿಳಿಯುತ್ತದೆ. ಸರಿಯಾದ ಕಾಲದಲ್ಲಿ ಮತ್ತು ಸರಿಯಾದ ಸ್ಥಳದಲ್ಲಿ ಸರಿಯಾದ ಪುಸ್ತಕಗಳು ದೊರಕದೆ ಹೋಗಿ ಸಾಕ್ಷರ ಜನಸಾಮಾನ್ಯನ ಉತ್ಸಾಹ ಉಡುಗಿ ನಂದಿಹೋಗುತ್ತದೆ.

ಪ್ರಜಾಸತ್ತೆ ಎಂಬುದು ಒಂದು ಮಹಾ ಸಾಹಸ. ಇಪ್ಪತ್ತೆಂಟು ವರ್ಷಗಳ ಹಿಂದೆ ನಮ್ಮ ದೇಶ ಈ ಮಾರ್ಗದಲ್ಲಿ ಹೆಜ್ಜೆಯಿಟ್ಟಿತು. ಪ್ರಜಾಸತ್ತೆಯೆಂಬ ಪ್ರಯೋಗಕ್ಕೆ ತಿಳಿವಳಿಕೆಯುಳ್ಳ ಮತದಾರರು ಇರುವುದು ಅನಿವಾರ್ಯ. ಪ್ರಜಾಸತ್ತೆ, ಎಂದರೆ ದೇಶದ ಹೊಣೆಯನ್ನು ಎಲ್ಲರೂ ಸಮನಾಗಿ ಹೊತ್ತುಕೊಳ್ಳುವುದು. ವಿಚಾರವಂತ ಸಹಕಾರ ಮತ್ತು ಪರಸ್ಪರ ಸಾಮರಸ್ಯಗಳಿಲ್ಲದಿದ್ದರೆ ಹೊತ್ತುಕೊಳ್ಳುವುದು ಸಾಧ್ಯವೇ ಇಲ್ಲ. ಅನಿರ್ಬಂಧಿತವೂ ಅಬಾಧಿತವೂ ಮುಕ್ತವೂ ಆದ ಜ್ಞಾನಪ್ರಸಾರ ವ್ಯವಸ್ಥೆಯಿದ್ದರೆ ಮಾತ್ರ ಸಹಕಾರ, ಸಾಮರಸ್ಯಗಳು ಸಫಲವಾಗಬಲ್ಲವು. ಜನಸಾಮಾನ್ಯನ ಗ್ರಂಥಾಲಯವಾದ ಸಾರ್ವಜನಿಕ ಗ್ರಂಥಾಲಯವೇ ಈ ಜ್ಞಾನಪ್ರಸಾರಕ್ಕೆ ಮುಖ್ಯವಾದ ಮಾಧ್ಯಮ.

ಆದರ್ಶ ಪ್ರಜಾಪ್ರಭುತ್ವವಾಗುವ ಪ್ರಯತ್ನದಲ್ಲಿ ಭಾರತ 6ರಿಂದ 14 ವರ್ಷಗಳೊಳಗಿನ ತನ್ನ ಎಲ್ಲ ಮಕ್ಕಳಿಗೂ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿತು. ನಮ್ಮ ಸರ್ಕಾರಗಳ ಹಾಗೂ ನಮ್ಮ ಜನತೆಯ ಸ್ತುತ್ಯರ್ಹ ಪ್ರಯತ್ನಗಳಿಂದಾಗಿ ಹಿಂದಿನ 30ವರ್ಷಗಳಲ್ಲಿ ಸಾಕ್ಷರತೆಯು ಶೇಕಡಾವಾರು ಹೆಚ್ಚು ಕಡಮೆ ದ್ವಿಗುಣವಾಗಿದೆ. ಸ್ವಾತಂತ್ರ್ಯ ಕಾಲದಲ್ಲಿ ಶೇಕಡ 15ರಷ್ಟು ಇದ್ದ ಸಾಕ್ಷರತೆ 1971ರ ಹೊತ್ತಿಗೆ ಶೇಕಡ 30ರಷ್ಟಾಗಿದೆ. ಇದು ನಿಜವಾಗಿಯೂ ಗಣನೀಯವಾದ ಸಾಧನೆ. ನಾವು ಇನ್ನೂ ಬಹು ದೂರ ಸಾಗ

ಬೇಕಾಗಿದೆ. ಇಂದು 15-35 ವಯಸ್ಸಿನ ಸುಮಾರು 10 ಕೋಟಿ ಜನ ಭಾರತೀಯರು ಅನಕ್ಷರಸ್ಥರಿದ್ದಾರೆ. ಕಟ್ಟಡಗಳ ಕೊರತೆ, ಸೂಕ್ತವಾದ ಜನಬಲದಕೊರತೆ ಇವು ನಾವು ಇನ್ನೂ ವೇಗವಾಗಿ ಸಾಗುವುದನ್ನು ತಡೆದಿರಬಹುದು. ಆಗಿರುವ ಸಾಧನೆ ಗಣನೀಯವಾದುದು; ಆದರೂ ಈ ಸಾಧನೆಗಳನ್ನೆಲ್ಲ ಕ್ರೋಡೀಕರಿಸಿ ಸುಭದ್ರಗೊಳಿಸಬೇಕು. ಏಕೆಂದರೆ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳನ್ನು ಕೆಲಕಾಲ ಸೇರಿ ಬಿಟ್ಟುಬಿಟ್ಟಿರುವ ಅಲ್ಪ ಸ್ವಲ್ಪ ಅಕ್ಷರಸ್ಥರೂ ಅನಕ್ಷರತೆಗೆ ಮರುಕಳಿಸುವ ಭಯವಿದೆ.

ಪುಸ್ತಕಗಳು ಜನರಿಗೆ ವಿವಿಧ ವಿಷಯಗಳ ಬಗೆಗೆ ತಿಳಿವಳಿಕೆ ನೀಡುತ್ತವೆ. ಇವುಗಳನ್ನು ನಮ್ಮ ದೇಶದ ಅಲ್ಪಸಂಖ್ಯಾತರಾದ ಅಕ್ಷರಸ್ಥರಿಗೆ ಒದಗಿಸಿಕೊಡಬೇಕು. ಇದರಿಂದ ಬಹುಸಂಖ್ಯಾತ ಅನಕ್ಷರಸ್ಥರು ಅಕ್ಷರಸ್ಥರ ಮೇಲ್ಪಂಕ್ತಿಯನ್ನು ಅನುಸರಿಸಬಹುದು. ಸಾರ್ವಜನಿಕ ಗ್ರಂಥಾಲಯವನ್ನು ವಿಂಗಡಿಸಿ ವ್ಯವಸ್ಥೆಗೊಳಿಸಿದರೆ ಮಾತ್ರ ಇದನ್ನುಸಾಧಿಸಬಹುದು. ಸಾರ್ವಜನಿಕ ಗ್ರಂಥಾಲಯಗಳನ್ನು ಅಂದರೆ ಜನಸಾಮಾನ್ಯರ ಗ್ರಂಥಾಲಯಗಳನ್ನು, ರಾಜ್ಯಗಳು ಸ್ಥಾಪಿಸಬೇಕು. ದೇಶದ 22 ರಾಜ್ಯಗಳಲ್ಲಿ ಈಗ ನಾಲ್ಕು ರಾಜ್ಯಗಳಲ್ಲಿ ಮಾತ್ರ—ಅಂದರೆ ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಮಾತ್ರ—ಸಾರ್ವಜನಿಕ ಗ್ರಂಥಾಲಯಗಳ ಕಾಯಿದೆ ಇದೆ, ಕಾನೂನುಗಳಿವೆ. ಈ ಕಾನೂನುಗಳ ನಿಬಂಧನೆಗಳ ಪ್ರಕಾರ ಜನಸಾಮಾನ್ಯನ ಮನೆಬಾಗಿಲಿಗೇ ಜ್ಞಾನದೀವಿಗೆಯನ್ನು ಒಯ್ಯುವ ಪ್ರಯತ್ನ ಮಾಡಲಾಗುತ್ತಿದೆ.

ಇದಲ್ಲದೆ, ಸ್ವಲ್ಪ ಕಾಲದ ಹಿಂದೆ ಕೇಂದ್ರಸರ್ಕಾರವೇ ಸ್ವತಃ ಸಾರ್ವಜನಿಕ ಗ್ರಂಥಾಲಯಗಳ ಮಸೂದೆಯ ಮಾದರಿಯೊಂದನ್ನು ರಚಿಸಿ ಎಲ್ಲ ರಾಜ್ಯಗಳಿಗೂ ಕಳುಹಿಸಿಕೊಟ್ಟು ರಾಜ್ಯಸರ್ಕಾರಗಳು ಈ ವಿಷಯದ ಬಗ್ಗೆ ಕಾನೂನು ಜಾರಿಗೆ ತರಬೇಕೆಂದು ಸೂಚಿಸಿತು. ಇದಕ್ಕೆ ಮುಂಚಿತವಾಗಿ ಕೇಂದ್ರಸರ್ಕಾರ ಯುನೆಸ್ಕೋವಿನ ಸಹಕಾರದೊಂದಿಗೆ ನಿಜವಾಗಿಯೂ ಉಚಿತ ಸಾರ್ವಜನಿಕ ಗ್ರಂಥಾಲಯವೊಂದನ್ನು ಅಂದರೆ ಡೆಲ್ಲಿ ಪಬ್ಲಿಕ್ ಲೈಬ್ರರಿಯನ್ನು, ರಾಜಧಾನಿಯಲ್ಲಿ ಸ್ಥಾಪಿಸಿ ದಾರಿ ತೋರಿಸಿಕೊಟ್ಟಿತು. ಡೆಲ್ಲಿ ಪಬ್ಲಿಕ್ ಲೈಬ್ರರಿ ನಮ್ಮ ದೇಶಕ್ಕೆ ಮಾತ್ರವಲ್ಲ, ಇಡೀ ಆಗ್ನೇಯ ಏಷ್ಯಕ್ಕೇ ಆದರ್ಶಪ್ರಾಯವಾದ ಸಾರ್ವಜನಿಕ ಗ್ರಂಥಾಲಯ. 1951ರಲ್ಲಿ ಪ್ರಧಾನಮಂತ್ರಿ ನೆಹರೂ ಅವರು ಇದನ್ನು ಉದ್ಘಾಟಿಸಿದರು. ಕೂಡಲೆ ಅದಕ್ಕೆ ಅಗಾಧವಾದ ಜಯ ದೊರೆಯಿತು. ಅದರ ಪುಸ್ತಕಗಳು ಬಹುಮಟ್ಟಿಗೆ ಅನುಕ್ರಮವಾಗಿ ಹಿಂದಿ, ಪಂಜಾಬಿ, ಉರ್ದು ಮತ್ತು ಇಂಗ್ಲಿಷ್ ಭಾಷೆಯವು. ಜ್ಞಾನಕ್ಕಾಗಿ ಹಸಿದಿದ್ದ ದೆಹಲಿಯ ಅಕ್ಷರಸ್ಥರು ಆ ಪುಸ್ತಕಗಳನ್ನು ಅಕ್ಷರಶಃ ಭಕ್ಷಿಸಿಬಿಟ್ಟರೆಂದೇ ಹೇಳಬಹುದು. ಗ್ರಂಥಾಲಯದ ಅಧಿಕಾರಿಗಳಿಗೆ ದೆಹಲಿಯ ಸಾರ್ವಜನಿಕರ ಈ ಬೇಡಿಕೆಯನ್ನು ಪೂರೈಸುವುದು ಹೇಗೆಂಬ ಬಗ್ಗೆ ಬುದ್ಧಿಯೇ ತೋಚದಂತಾಗುವ ಕಾಲ ಒದಗಿತ್ತು. ತುಂಬ ಬೇಡಿಕೆ ಇದ್ದದ್ದು ಹಿಂದಿ ಮತ್ತು ಇತರ ರಾಜ್ಯಭಾಷೆಗಳಲ್ಲಿ ಬರೆದ ಪುಸ್ತಕಗಳ ಕಡಮೆ ಬೆಲೆಯ ಆವೃತ್ತಿಗಳಿಗೆ. ಇವುಗಳ ಸಂಖ್ಯೆಯನ್ನು ಹೆಚ್ಚಿಸುವುದರ ಮೂಲಕ ಗ್ರಂಥಾಲಯಕ್ಕೆ ಒದಗಿದ್ದ ಇಕ್ಕಟ್ಟಿನ ಪರಿಸ್ಥಿತಿಯನ್ನು

ಭಾಗಶಃ ನಿವಾರಿಸಲಾಯಿತು. ಆದರೂ ಹೊಸ ಹೊಸ ಪುಸ್ತಕಗಳಿಗಾಗಿದ್ದ ಬೇಡಿಕೆಗಳನ್ನು ನಿವಾರಿಸುವದು ದುಸ್ತರವಾಗಿತ್ತು.

ಜನಸಾಮಾನ್ಯರಿಗೆ ಬೇಕಾದ ಪುಸ್ತಕಗಳ ವಿಷಯಕ್ಕೆ ಬರೋಣ. ಅವರಿಗೆ, ಅದರಲ್ಲೂ ನಗರೇತರ ಹಾಗೂ ಹಳ್ಳಿಗಾಡಿನ ಜನರಿಗೆ, ಆಯಾ ಪ್ರಾದೇಶಿಕ ಭಾಷೆಗಳ ಪುಸ್ತಕಗಳ ಅಗತ್ಯವಿದೆ. ಆದ್ದರಿಂದ ಜನಸಾಮಾನ್ಯರ ಆವಶ್ಯಕತೆಗಳಿಗೆ ಸರಿಹೊಂದುವಂಥ ಪ್ರಾದೇಶಿಕ ಭಾಷೆಗಳ ಪುಸ್ತಕಗಳನ್ನು ಸಂಗ್ರಹಿಸುವ ಕಾರ್ಯಕ್ಕೆ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ಹೆಚ್ಚು ಪ್ರಾಮುಖ್ಯ ನೀಡುವುದು ಆವಶ್ಯವಾಗುತ್ತದೆ. ಈ ಕೆಲಸವನ್ನು ಬಹಳ ತುರ್ತಾಗಿಯೂ ಮಾಡಬೇಕಾಗಿದೆ. ಪ್ರಾದೇಶಿಕ ಭಾಷೆಗಳ ಪುಸ್ತಕಗಳಿಗೆ ಒಂದೇ ಸಮನಾಗಿ ಬೇಡಿಕೆ ಇದೆ. ಇವುಗಳ ಸಂಗ್ರಹಕ್ಕೆ ಕುಂದುಬರುವಂತೆ ಈಗ ಇಂಗ್ಲಿಷ್ ಹಾಗೂ ಇತರ ವಿದೇಶೀ ಭಾಷೆಗಳಲ್ಲಿನ ದುಬಾರಿ ಬೆಲೆಯ ಪರಾಮರ್ಶನ ಗ್ರಂಥಗಳನ್ನೂ ಅದೇ ಭಾಷೆಗಳಲ್ಲಿನ ವಿಶೇಷ ಅಧ್ಯಯನಕ್ಕೆ ಸಂಬಂಧಿಸಿದ ಪುಸ್ತಕಗಳನ್ನೂ ಗ್ರಂಥಾಲಯಗಳಲ್ಲಿ ಕೊಳ್ಳಲಾಗುತ್ತಿದೆ. ಇಂಥ ನಿದರ್ಶನಗಳು ಹೇರಳ ದೊರಕುತ್ತವೆ. ಈ ವ್ಯಾಮೋಹವನ್ನು ತಡೆಗಟ್ಟಿ ಸಾರ್ವಜನಿಕ ಗ್ರಂಥಾಲಯಗಳು ತಮ್ಮ ಅತ್ಯಲ್ಪ ಹಣವನ್ನು ಸಮಾಜದ ಜನಸಾಮಾನ್ಯರ ಅನುಕೂಲಕ್ಕೆ ಬರುವಂತಹ ಪುಸ್ತಕಗಳನ್ನು ಕೊಳ್ಳಲು ವಿನಿಯೋಗಿಸಬೇಕು. ಸಮಾಜದ ಅಕ್ಷರಸ್ಥರೆಲ್ಲರ–ಕ್ಷೌರಿಕ, ದರ್ಜಿ, ಬಡಗಿ, ಗೃಹಿಣಿ, ವ್ಯಾಪಾರಿ, ಗಿರಾಕಿ, ಗುರುಶಿಷ್ಯರು, ಸ್ತ್ರೀಪುರುಷರು, ಮುದುಕ ಮಗು, ಗಂಡಹೆಂಡತಿಯರು, ಸೋದರ ಸೋದರಿಯರು, ತಂದೆ, ಮಗ, ಮೊಮ್ಮಗ, ಮೊದಲಾದವರೆಲ್ಲರ–ಪ್ರಯೋಜನಕ್ಕಾಗಿ ಪುಸ್ತಕಗಳನ್ನು ಕೊಂಡು ಶೇಖರಿಸುವುದು ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯ ಕರ್ತವ್ಯವಾಗುತ್ತದೆ.

ನಮ್ಮ ದೇಶದಲ್ಲಿ ಕೇವಲ ಶೇ. 30 ಅಕ್ಷರಸ್ಥರಿದ್ದಾರೆ, 70 ಅನಕ್ಷರಸ್ಥರಿದ್ದಾರೆ. ಈ 30 ಅಕ್ಷರಸ್ಥರಿಗೆ ಸಾರ್ವಜನಿಕ ಗ್ರಂಥಾಲಯ ಮಾಡುವ ವ್ಯವಸ್ಥೆ ಇಷ್ಟಾದರೆ, ಇನ್ನು ಬಹುಪಾಲು ಅನಕ್ಷರಸ್ಥ ಸಮುದಾಯಕ್ಕೆ ಅದು ಇನ್ನೂ ಹೆಚ್ಚು ಮಾಡಬೇಕು. ಸಾರ್ವಜನಿಕ ಗ್ರಂಥಾಲಯವ್ಯವಸ್ಥೆ ತನ್ನ ಇತರ ಮಾಧ್ಯಮಗಳ–ಅಂದರೆ ಅದರ ಚಲನಚಿತ್ರ ಸಂಗ್ರಹ, ವಾಕ್ಚಿತ್ರಗಳ ಧ್ವನಿಮುದ್ರಿತ ಸಂಗ್ರಹ, ಹಸ್ತಲಿಖಿತ ಮತ್ತು ಮುದ್ರಿತ ಚಿತ್ರಗಳು ಮತ್ತಿತರ ಶ್ರವಣ ವೀಕ್ಷಣ ಸಾಧನಗಳು (audio visual aids) ಮತ್ತು ಉಪನ್ಯಾಸಗಳು, ಕೀರ್ತನೆ ಹರಿಕಥೆ ಸಂಭಾಷಣೆಗಳನ್ನು ಏರ್ಪಡಿಸುವುದು, ಕ್ಲಿಪ್ತ ವೇಳೆಯಲ್ಲಿ ಕಥೆಗಳನ್ನು ಹೇಳುವುದು, ಇವುಗಳ–ಮೂಲಕ ಜನಗಳಿಗೆ ತಿಳಿವಳಿಕೆ ಕೊಟ್ಟು ಸುಶಿಕ್ಷಿತರನ್ನಾಗಿ ಮಾಡಬಹುದು. ಒಂಬತ್ತನೆ ಶತಮಾನದ ಕನ್ನಡಿಗನಾದ ನೃಪತುಂಗ ತನ್ನ ಪ್ರಜೆಗಳನ್ನು ಕುರಿತು ಕವಿರಾಜಮಾರ್ಗದಲ್ಲಿ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂದಿದ್ದಾನೆ. ಜನಸಾಮಾನ್ಯರಿಗಾಗಿ ಪುಸ್ತಕಗಳ ಹಾಗೂ ಕಾವ್ಯಗಳ ವಾಚನ ಮಾಡುವುದು ಸಾರ್ವಜನಿಕ ಗ್ರಂಥಾಲಯದ ಒಂದು ಅತಿಮುಖ್ಯವಾದ ಹಾಗೂ ಪ್ರಧಾನವಾದ ಕೆಲಸ. ರೇಡಿಯೋ, ದೂರದರ್ಶನ ಇವು ಗ್ರಾಮಾಂತರ ಪ್ರದೇಶಗಳನ್ನು ಪ್ರವೇಶಿಸಿ

ದಂತೆಲ್ಲ ಅವುಗಳನ್ನೂ ಸಾರ್ವಜನಿಕ ಗ್ರಂಥಾಲಯದ ಒಂದು ಜ್ಞಾನ ಪ್ರಸಾರ ಮಾಧ್ಯಮ ವನ್ನಾಗಿ ಉಪಯೋಗಿಸಿಕೊಳ್ಳಬಹುದು. ಕುರುಡರೋ ಕಿವುಡರೋ ಮೂಗರೋ ಆಗಿರುವಂತಹ, ಇಲ್ಲವೆ ಆಸ್ಪತ್ರೆಗಳಲ್ಲೋ ಸೆರೆಮನೆಗಳಲ್ಲೋ ವಾಸಿಸಬೇಕಾದಂತಹ ನತ ದೃಷ್ಟರ ಯೋಗಕ್ಷೇಮವನ್ನೂ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ನೋಡಿಕೊಳ್ಳಬೇಕು. ಯಥೋಚಿತವಾದ ಬ್ರೇಲ್ (Braille) ಪುಸ್ತಕಗಳು ಹಾಗೂ ಧ್ವನಿಮುದ್ರಿತ ವಾಕ್ ಪುಸ್ತಕಗಳು ಮೊದಲಾದ ಸಂಗ್ರಹಗಳಿಂದ ಅಂಗವಿಕಲರ ಆವಶ್ಯಕತೆಗಳನ್ನು ಪೂರೈಸಬೇಕು. ಆಸ್ಪತ್ರೆಗಳಿಗೂ ಸೆರೆಮನೆಗಳಿಗೂ ವಿಶೇಷ ಗ್ರಂಥಾಲಯಗಳನ್ನು ಒದಗಿಸಬೇಕು.

ಸಂಚಾರೀ ರೈಲುಗಳಲ್ಲಿ ಹಾಗೂ ವಾಯುಯಾನ ಜಲಯಾನಗಳಲ್ಲಿ ದುಡಿಯು ವವರ ಪುಸ್ತಕಾವಶ್ಯಕತೆಗಳ ಕಡೆಯೂ ಗ್ರಂಥಾಲಯ ವ್ಯವಸ್ಥೆ ಸಾಕಷ್ಟು ಗಮನ ಕೊಡ ಬೇಕು.

ಇನ್ನು ಪುಟಾಣಿ ಮಕ್ಕಳ ಬಗ್ಗೆ ಏನುಮಾಡಬೇಕು ? ಅವರ ಬಗ್ಗೆ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ವಿಶೇಷ ಜವಾಬ್ದಾರಿ ವಹಿಸಬೇಕು. "ಮನುಷ್ಯನಿಗೆ ಮಗು ತಂದೆ" ಎಂದು ವರ್ಡ್ಸ್‌ವರ್ತ್ ಕವಿ ಹೇಳಿದ. ಇಂದಿನ ಮಕ್ಕಳೇ ನಾಳಿನ ನಾಯಕರು, ಅವರೇ ದೇಶವನ್ನು ಕಟ್ಟುವವರು. ಓದುವ ಅಭ್ಯಾಸವನ್ನು, ಅದರಲ್ಲೂ ಸಂತೋಷ ಕ್ಕಾಗಿ, ಓದುವ ಅಭ್ಯಾಸವನ್ನು, ಶೈಕ್ಷಣಿಕ ವಯಸ್ಸಿನಲ್ಲಿಯೇ ಮಕ್ಕಳಿಗೆ ಕಲಿಸಬೇಕು. ಡೆಲ್ಲಿ ಪಬ್ಲಿಕ್ ಲೈಬ್ರರಿಯ ಮಕ್ಕಳ ವಿಭಾಗ, ಕಲ್ಕತ್ತದ ನ್ಯಾಷನಲ್ ಲೈಬ್ರರಿ, ಕಲ್ಕತ್ತ ದಲ್ಲಿ ರಾಮಕೃಷ್ಣಾಶ್ರಮ ನಡೆಸುತ್ತಿರುವ ಮಕ್ಕಳ ಗ್ರಂಥಾಲಯ ಮತ್ತು ಬ್ರಿಟಿಷ್‌ಕೌನ್ಸಿಲ್ ಗ್ರಂಥಾಲಯಗಳ ಮಕ್ಕಳ ವಿಭಾಗಗಳು ಈ ಸಂದರ್ಭದಲ್ಲಿ ನೆನೆಯಬಹುದಾದಂಥವು.

ದೇಶದ ಮೂಲೆ ಮೂಲೆಗಳಲ್ಲಿ ವಾಸಿಸುವ ಜನಸಾಮಾನ್ಯರನ್ನು ತಲುಪುವ ಸಲು ವಾಗಿ ಗ್ರಂಥಾಲಯ ವ್ಯವಸ್ಥೆ ಸಂಚಾರೀ ಪುಸ್ತಕಾಲಯಗಳ ವ್ಯೂಹದ ನೆರವನ್ನು ತೆಗೆದು ಕೊಳ್ಳಬೇಕು.

ಕೊನೆಯದಾಗಿ, ಹಣಸೌಕರ್ಯವಿದ್ದರೆ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ಸಾಮಾನ್ಯ ಜನತೆಯಲ್ಲಿ ಅನುಕೂಲ ವರ್ಗಕ್ಕೆ ಸೇರಿದ ವಕೀಲರು, ಎಂಜಿನಿಯರುಗಳು, ವೈದ್ಯರು, ಉಪಾಧ್ಯಾಯರು ಮೊದಲಾದವರ ಆವಶ್ಯಕತೆಗಳನ್ನೂ ಪೂರೈಸಬೇಕು.

ಭಾರತದಲ್ಲಿ ಶೇಕಡ 80ರಷ್ಟು ಜನ ಹಳ್ಳಿಗಾಡುಗಳಲ್ಲಿ ವಾಸಿಸುತ್ತಾರೆ. ಹಳ್ಳಿ ಗಳಲ್ಲಿ ಗ್ರಂಥಾಲಯ ಸೌಕರ್ಯಗಳು ಇಲ್ಲದಿರುವುದು ಎದ್ದುಕಾಣುತ್ತದೆ. ಈಗ ನಮ್ಮಲ್ಲಿ ನ್ಯಾಷನಲ್ ಲೈಬ್ರರಿ, ಸ್ಟೇಟ್ ಸೆಂಟ್ರಲ್ ಲೈಬ್ರರಿಗಳು, ಹಲವಾರು ಡಿಸ್ಟ್ರಿಕ್ಟ್ ಸೆಂಟ್ರಲ್ ಲೈಬ್ರರಿಗಳು ಮತ್ತು ಸಿಟಿ ಸೆಂಟ್ರಲ್ ಲೈಬ್ರರಿಗಳೇನೋ ಇವೆ. ಆದರೆ ಗ್ರಂಥಾಲಯ ವ್ಯವಸ್ಥೆ ಈಗಲೂ ಗ್ರಾಮಾಂತರ ಪ್ರದೇಶಗಳ ಮೇಲೆ ಮಲತಾಯಿ ಧೋರಣೆ ತೋರಿ ಸಿದೆ. ಈ ಕರ್ತವ್ಯ ಲೋಪವನ್ನು ಮನಗಂಡು ಕೇಂದ್ರ ಸರ್ಕಾರ ಗ್ರಾಮಾಂತರ ಪ್ರದೇಶ ಗಳಲ್ಲಿ ಗ್ರಂಥಾಲಯಗಳ ಆವಶ್ಯಕತೆಯ ಬಗ್ಗೆ ತನ್ನ ಗಮನ ಹರಿಸಿರುವುದು ಸರಿಯಾಗಿಯೇ ಇದೆ. ಮಹಾ ಸಮಾಜಸೇವಕ ವಿದ್ವಾಂಸರಾದ ರಾಜಾ ರಾಮಮೋಹನರಾಯ್ ಅವರ

ದ್ವಿಶತಮಾನೋತ್ಸವದ ಸಂದರ್ಭವಾದ 1972ರಲ್ಲಿ 'ರಾಜಾ ರಾಮಮೋಹನರಾಯ್ ಗ್ರಂಥಾಲಯ ದತ್ತಿ'ಯನ್ನು ಸ್ಥಾಪಿಸಲಾಯಿತು. ಇದರ ಪ್ರಧಾನ ಉದ್ದೇಶ, ಗ್ರಾಮಾಂತರ ಪ್ರದೇಶಗಳಲ್ಲಿನ ಆವಶ್ಯಕತೆಗಳನ್ನು ಪೂರೈಸಲು ಆ ಪ್ರದೇಶಗಳಲ್ಲಿ ಗ್ರಂಥಾಲಯಗಳನ್ನು ಆರಂಭಿಸುವುದು. ಈ ಸ್ಥಾಪನೆಯ ಉದಾತ್ತ ಧ್ಯೇಯವನ್ನು ನೆರವೇರಿಸಲು ಕೇಂದ್ರ ಸರ್ಕಾರ ಒಂದೇ ಸಲಕ್ಕೆ 50 ಲಕ್ಷ ರೂಪಾಯಿಗಳನ್ನು ಅದಕ್ಕೆ ದತ್ತಿಯಾಗಿ ನೀಡಿದೆ. ಇದರ ಸದುಪಯೋಗವನ್ನು ಮಾಡುವುದು ಗ್ರಂಥಾಲಯ ಆಡಳಿತದ ಕರ್ತವ್ಯ.

ಪ್ರತಿಕ್ಷಣದಲ್ಲೂ ಒಂದೊಂದು ಪುಸ್ತಕ ಹುಟ್ಟಿಕೊಳ್ಳುತ್ತಿರುತ್ತದೆ. ಇವುಗಳಲ್ಲಿ ಬಹುಪಾಲು ಪುಸ್ತಕಗಳು ಜನಸಾಮಾನ್ಯರ ಉಪಯೋಗಕ್ಕೆ ಬರುವಂಥವು. ಈ ಪುಸ್ತಕಗಳನ್ನು ಜನಸಾಮಾನ್ಯರಿಗೆ ಗ್ರಂಥಾಲಯಗಳ ವ್ಯೂಹದ ಮೂಲಕ–ಅಂದರೆ ಸಾರ್ವಜನಿಕ ಗ್ರಂಥಾಲಯಗಳ ಮೂಲಕ–ದೊರಕಿಸಿಕೊಡಬೇಕು.

ಜನಸಾಮಾನ್ಯರ ಗ್ರಂಥಾಲಯವಾದ ಸಾರ್ವಜನಿಕ ಗ್ರಂಥಾಲಯವನ್ನು 'ಸಾಮಾನ್ಯ ಜನರ ವಿಶ್ವವಿದ್ಯಾನಿಲಯ' ಎಂದು ಕರೆಯಲಾಗಿದೆ. ಅಮೆರಿಕದ ಮಹಾಕವಿಯಾದ ಕಾರ್ಲ್ ಷಾಪಿರೋ ಇದೇ ಅಭಿಪ್ರಾಯವನ್ನೇ ಬೇರೆ ಮಾತುಗಳಲ್ಲಿ ಹೇಳುತ್ತ ಸಾರ್ವಜನಿಕ ಗ್ರಂಥಾಲಯ ಜನಸಾಮಾನ್ಯನ ಶಾಲೆ ಅಥವಾ ಕಾಲೇಜು; ಅದರ ಉಪಾಧ್ಯಾಯ ವರ್ಗದವರಾದರೋ ಸದಾಕಾಲವೂ ರಜೆಯಲ್ಲಿರುತ್ತಾರೆ ಎಂದು ಹೇಳುತ್ತಾರೆ. ಓದುವ ಅಭ್ಯಾಸ ಒಳ್ಳೆಯದು ; ಪ್ರತಿಯೊಬ್ಬರೂ ಓದಬೇಕು.ನಾವು ಒಂದು ಲೋಟ ಟೀಯಿಂದಲೋ ಕಾಫಿಯಿಂದಲೋ ದಿನವನ್ನು ಆರಂಭಿಸುತ್ತೇವೆ ; ಹಾಗೆಯೇ ಒಂದು ಒಳ್ಳೆಯ ಪುಸ್ತಕದ 10 ಪುಟಗಳನ್ನಾದರೂ ಓದಿ ದಿನವನ್ನು ಮುಗಿಸೋಣ.

[ಅನುವಾದ : **ಬಾ ವೇ ಶ್ರೀಧರ**

೩ ಭಾರತೀಯ ಗ್ರಂಥಾಲಯ ಸಂಪತ್ತು ಮತ್ತು ಅದರ ಗರಿಷ್ಠ ಉಪಯೋಗ

I ಪೀಠಿಕೆ

ಸ್ವಾತಂತ್ರ್ಯೋತ್ತರದ 30 ವರ್ಷಗಳಲ್ಲಿ ಹಾಗೂ ಐದು ಪಂಚವಾರ್ಷಿಕ ಯೋಜನೆಗಳಲ್ಲಿ ಆಗಿರುವ ಸಾಧನೆಗಳು ದೇಶದ ಎಲ್ಲ ವಿಶ್ವವಿದ್ಯಾನಿಲಯಗಳು, ಸಂಶೋಧನ ಕ್ಷೇತ್ರಗಳು ಮತ್ತು ಸರ್ಕಾರೀ ಗ್ರಂಥಾಲಯಗಳ ಅದ್ಭುತ ಬೆಳವಣಿಗೆಗೆ ಸಾಕ್ಷ್ಯ ನೀಡುತ್ತವೆ. ಕೆಲವು ರಾಜ್ಯಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಕ್ಷೇತ್ರದಲ್ಲೂ ಗಣನೀಯವಾದ ಬೆಳವಣಿಗೆಗಳಾಗಿವೆ. ಕಲ್ಕತ್ತದಲ್ಲಿರುವ ನ್ಯಾಷನಲ್ ಲೈಬ್ರರಿ (1948), ದೆಹಲಿಯಲ್ಲಿರುವ ಡೆಲ್ಲಿ ಪಬ್ಲಿಕ್ ಲೈಬ್ರರಿ (1951), ಇನ್ಸ್‌ಡಾಕ್ (INSDOC)[1] (1952), ಐ ಸಿ ಎಸ್ ಎಸ್ ಆರ್ (ICSSR)[2], ನ್ಯಾಷನಲ್ ಮೆಡಿಕಲ್ ಲೈಬ್ರರಿ ಮೊದಲಾದುವು ಈ ದೇಶದ ಗ್ರಂಥಾಲಯ ಚಳವಳಿಯ ಚರಿತ್ರೆಯಲ್ಲಿ ಬಹು ಮುಖ್ಯವಾದ ಮೈಲಿಗಲ್ಲುಗಳು.

ಈ ಎಲ್ಲ ಸಂಸ್ಥೆಗಳ ಬೆಳವಣಿಗೆಯ ಮೊದಲ ಘಟ್ಟ ಮುಗಿದು, ಆರನೆಯ ಪಂಚವಾರ್ಷಿಕ ಯೋಜನೆ ಕಾಲಿಡುತ್ತಿರುವಾಗ ಅವುಗಳ ಎರಡನೆಯ ಘಟ್ಟವನ್ನು ವೈಜ್ಞಾನಿಕವಾದ ರೀತಿಯಲ್ಲಿ ಯೋಜಿಸಬೇಕು. ಗ್ರಂಥಾಲಯಗಳ, ಅದರಲ್ಲೂ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಯ ಮೊದಲ ಹಂತ ರಾಜಾರಾಮಮೋಹನರಾಯ್ ಗ್ರಂಥಾಲಯದ ಸ್ಥಾಪನೆಯಿಂದ ಕೊನೆಗೊಂಡಿರುವುದು ಒಂದು ಶುಭಸೂಚನೆ. ಅದು ಸಾರ್ವಜನಿಕ ಗ್ರಂಥಾಲಯ ಚಳವಳಿಗೆ ಉತ್ತೇಜನ ನೀಡುವುದರಲ್ಲಿ ಯಾವ ಸಂಶಯವೂ ಇಲ್ಲ. ಕಳೆದ ನಾಲ್ಕು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಆಗಿರುವ ಗ್ರಂಥಾಲಯಗಳ ಬೆಳವಣಿಗೆ ಸ್ವಲ್ಪಮಟ್ಟಿಗೆ ಅವ್ಯವಸ್ಥಿತವಾದ ರೀತಿಯಲ್ಲಿ ಎಲ್ಲೋ ಒಮ್ಮೊಮ್ಮೆ ಆಗಿದೆ. ಈ ಗ್ರಂಥಾಲಯಗಳೆಲ್ಲದರ ಹೊಂದಾಣಿಕೆಯಲ್ಲಿ ಏನೇನೂ ಬೆಳವಣಿಗೆ ಆಗಿಲ್ಲ. ಮತ್ತೆ ಈ ಸಂಸ್ಥೆಗಳ ನಡುವೆ ಯಾವುದೇ ಬಗೆಯ ಉನ್ನತ ಮಟ್ಟದ ಸಹಕಾರವೂ ಇಲ್ಲ. ವಿದೇಶೀ ಪುಸ್ತಕಗಳನ್ನೂ ಇತರ ವಾಚನ ಸಾಮಗ್ರಿಗಳನ್ನೂ ಕೊಳ್ಳಲು ಬೆಲೆಬಾಳುವ ವಿದೇಶೀ ವಿನಿಮಯವನ್ನು ಹೇರಳವಾಗಿ ವಿನಿಯೋಗಿಸಲಾಗುತ್ತಿದೆ ಎನ್ನುವುದು ವಾಸ್ತವ ಸಂಗತಿ. ಏಕಕಾಲದಲ್ಲಿ ಭಾರತೀಯ ಪ್ರಕಟಣವಲಯದಲ್ಲಿ, ಸರ್ಕಾರಿ ಹಾಗೂ ಖಾಸಗಿ ಈ ಎರಡು ವಲಯಗಳಲ್ಲೂ, ಪ್ರಚಂಡವಾದ ಬೆಳವಣಿಗೆ ಆಗಿದೆ. ಈ

---

1. Indian National Scientific Documentation Centre
2. Indian Council of Social Science Research

ಪ್ರಕಟಣೆಯನ್ನು ಕೊಳ್ಳುವುದರಲ್ಲೂ ಗ್ರಂಥಾಲಯಗಳಲ್ಲಿ ಯಾವುದೇ ವ್ಯವಸ್ಥಿತವಾದ ಯೋಜನೆ ಇಲ್ಲ.

ಭಾರತೀಯ ಗ್ರಂಥಪಾಲರು ಸ್ವಾತಂತ್ರ್ಯೋತ್ತರದ ಈ 30 ವರ್ಷಗಳಲ್ಲಿ ತಾವು ಏನೇನು ಸಂಗ್ರಹಿಸಿದ್ದಾರೆಂಬುದನ್ನು ಮಾತ್ರವಲ್ಲದೆ, ಅದಕ್ಕೂ ಹಿಂದೆ ಏನೇನು ಸೇರ್ಪಡೆಯಾಗಿದೆ ಎಂಬುವನ್ನೂ ಚೆನ್ನಾಗಿ ಅರಿತುಕೊಳ್ಳಬೇಕು.ಅಲ್ಲದೆ ಅವರು ಈಗಾಗಲೇ ಸಂಗ್ರಹಿಸಿರುವ ಸಾಮಗ್ರಿಗಳ ಪ್ರಯೋಜನವನ್ನು ಎಷ್ಟರಮಟ್ಟಿಗೆ ಪಡೆಯಬಹುದೆಂಬುದನ್ನು ಗಮನಿಸಬೇಕು. ಜೀವನ ವೆಚ್ಚ ಒಂದೇ ಸಮನೆ ಏರುತ್ತಾ ಹೋಗುತ್ತದೆ. ಇದರ ಪರಿಣಾಮ ಗ್ರಂಥಾಲಯಗಳ ಆರ್ಥಿಕ ಸ್ಥಿತಿಯ ಮೇಲೆ ಆಗಿಯೇ ತೀರುತ್ತದೆ. ಆದ್ದರಿಂದ ಸದ್ಯಕ್ಕಿರುವ ಅಲ್ಪಸ್ವಲ್ಪ ಆರ್ಥಿಕ ಶಕ್ತಿಯಲ್ಲೇ ಪರಮಪ್ರಯೋಜನ ಪಡೆಯುವುದು ಅತ್ಯಗತ್ಯ ಮಾತ್ರವಲ್ಲದೆ ಜರೂರಾಗಿ ಮಾಡಬೇಕಾದ ಕೆಲಸವೂ ಹೌದು. ಇಲ್ಲದಿದ್ದರೆ ಈ ಆರ್ಥಿಕಶಕ್ತಿಯು ಬೆಲೆಗಳ ಏರುವಿಕೆಯಿಂದ ಇನ್ನೂ ಕುಗ್ಗುತ್ತದೆ. ಹೀಗಾಗಿ ಪುಸ್ತಕಗಳನ್ನು ಕೊಳ್ಳಲು ನಿಗದಿ ಮಾಡಿದ ಹಣವನ್ನು ವಿವೇಕದಿಂದಲೂ ವಿವೇಚನೆಯಿಂದಲೂ ವಿನಿಯೋಗಿಸಬೇಕಾಗುತ್ತದೆ.

II ಪ್ರಕೃತ ಗ್ರಂಥಸಂಪತ್ತು

ಗ್ರಂಥಾಲಯಗಳಲ್ಲಿಯ ಪುಸ್ತಕ ಸಂಪತ್ತನ್ನು ಈ ರೀತಿ ಐದು ಭಾಗಗಳಾಗಿ ವರ್ಗೀಕರಿಸಬಹುದು :

1. ಭಾರತೀಯ ಪ್ರಕಟಣೆಗಳು–ಸರ್ಕಾರಿ ಹಾಗೂ ವಾಣಿಜ್ಯಕ,
2. ವಿದೇಶೀ ಪುಸ್ತಕಗಳು,
3. ನಿಯತಕಾಲಿಕಗಳ ಪೂರ್ವಸಂಚಿಕೆಗಳು ಮತ್ತು ಈಗಿನ ಸಂಚಿಕೆಗಳು,
4. ಹಸ್ತಪ್ರತಿಗಳು,
5. ಅರ್ವಾಚೀನ ಹಸ್ತಪ್ರತಿಗಳು.

ಮೇಲಿನ ಸಾಮಗ್ರಿಗಳೆಲ್ಲ ಮುಂದೆ ಹೇಳಿರುವ ಗ್ರಂಥಾಲಯಗಳಲ್ಲಿ ಕಾಣಸಿಗುತ್ತವೆ: 1. ನ್ಯಾಷನಲ್ ಲೈಬ್ರರಿ, 2. ವಿಶ್ವವಿದ್ಯಾನಿಲಯ ಗ್ರಂಥಾಲಯಗಳು, 3. ಸಂಶೋಧನ ಸಂಸ್ಥೆಗಳಿಗೆ ಸೇರಿದ ಗ್ರಂಥಾಲಯಗಳು, 4. ರಾಷ್ಟ್ರೀಯ ಪ್ರಯೋಗಾಲಯಗಳಿಗೆ ಸೇರಿದ ಗ್ರಂಥಾಲಯಗಳು, 5. ಸರ್ಕಾರೀ ಇಲಾಖೆಗಳಿಗೆ ಸಂಬಂಧಿಸಿದ ಗ್ರಂಥಾಲಯಗಳು, 6. ಚಂದಾದಾರಿ ಗ್ರಂಥಾಲಯಗಳೂ ಸೇರಿಕೊಂಡಂತೆ ಸಾರ್ವಜನಿಕ ಗ್ರಂಥಾಲಯಗಳು, 7. ಶಾಲಾಕಾಲೇಜುಗಳಿಗೆ ಸೇರಿದ ಗ್ರಂಥಾಲಯಗಳು, 8. ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಗ್ರಂಥಾಲಯಗಳು, 9. ಖಾಸಗಿ ವ್ಯಕ್ತಿಗಳ ಗ್ರಂಥಭಂಡಾರಗಳು, 10. ಹಳೆ ಪುಸ್ತಕದಂಗಡಿಗಳು : ಸ್ಥಳೀಯವಾದ ಹಳೆಯ ಪ್ರಕಟಣೆಗಳು ಇನ್ನೊಂದು ಕಡೆ ಸಿಕ್ಕುವ ಸಂಭವವುಂಟು. ಅದೆಂದರೆ ಕೆಲವು ಮುಚ್ಚಿಹೋದ ಪುಸ್ತಕದಂಗಡಿಗಳು ಮತ್ತು ಪ್ರೆಸ್ಸುಗಳು. ಇವುಗಳ ಗೋದಾಮುಗಳಲ್ಲಿ ಭಾರತೀಯ ಪ್ರಕಟಣೆಗಳ ದೃಷ್ಟಿಯಲ್ಲಿ ಅತ್ಯ

ಮೂಲ್ಯವಾದ ಹಲವೊಂದು ಕೃತಿರತ್ನಗಳು ದೊರಕಬಹುದು. ಯಾರಿಗೂ, ಇವುಗಳ ಮಾಲೀಕರಿಗೂ ಸಹ, ಈ ಸಾಮಗ್ರಿಗಳನ್ನು ಉಪಯೋಗಿಸಿಕೊಳ್ಳಬಹುದೆಂಬ ಮಾತಿರಲಿ, ಈ ಗೋದಾಮುಗಳಲ್ಲಿ ಏನಿದೆ ಎಂಬ ಕಲ್ಪನೆಯೂ ಇದ್ದಂತೆ ತೋರುವುದಿಲ್ಲ. ಪುಸ್ತಕಗಳೆಲ್ಲ ಗೋದಾಮಿನ ಯಾವುದೋ ಒಂದು ಕೊಳಕು ಮೂಲೆಯಲ್ಲಿ ರಾಶಿಯಾಗಿ ಬಿದ್ದಿರುತ್ತವೆ. ಅಂಥ ಒಂದು ನಿದರ್ಶನವೆಂದರೆ ಬೆಳಗಾಂವಿಯ ರಾಮತತ್ವ ಪ್ರೆಸ್ ಹಾಗೂ ಬುಕ್ ಡಿಪೊ. ಇತ್ತೀಚೆಗೆ ನಾವು ಈ ಹಳೆಯ ಮುದ್ರಣಾಲಯ ಹಾಗೂ ಪುಸ್ತಕದಂಗಡಿಗೆ ಹೋದಾಗ ಅಲ್ಲಿ ನಮಗೆ ಸುಮಾರು 126 ಪ್ರಾಚೀನ ಕನ್ನಡ ಪ್ರಕಟಣೆಗಳು ದೊರೆತವು. ಅವುಗಳೆಲ್ಲ ತುಂಬ ಜೀರ್ಣಾವಸ್ಥೆಯಲ್ಲಿದ್ದುವು. ಮೈಸೂರು ವಿಶ್ವವಿದ್ಯಾನಿಲಯ ರಚಿಸುತ್ತಿರುವ ಕನ್ನಡ ಪುಸ್ತಕಗಳ ಗ್ರಂಥಸೂಚಿಗಾಗಿ ತಯಾರಿಸಿದ ಪಟ್ಟಿಕೆಗಳಲ್ಲಿ ಇವುಗಳೆಲ್ಲ ಸೇರಿವೆಯೆ ಎಂದು ನೋಡಿದಾಗ 50 ಪುಸ್ತಕಗಳನ್ನು ಬಿಟ್ಟು ಉಳಿದ 76 ಶೀರ್ಷಿಕೆಗಳು ಗ್ರಂಥಸೂಚಿಯಲ್ಲಿ ಸೇರ್ಪಡೆಯಾಗಿರಲಿಲ್ಲ; ಇವುಗಳಲ್ಲಿ ಅನೇಕ ಪುಸ್ತಕಗಳಿಗೆ ಅವುಗಳ ತೂಕದಷ್ಟೇ ಚಿನ್ನದ ಬೆಲೆ ಆಗುತ್ತದೆ. ಅವುಗಳನ್ನೇನಾದರೂ ಹಾಳು ಮಾಡಿದರೆ ನಾವು ನಮ್ಮ ಭಾಷೆ ಮತ್ತು ಸಾಹಿತ್ಯದ ಇತಿಹಾಸ, ಬೆಳವಣಿಗೆಗಳ ಸರಪಣಿಯಲ್ಲಿ ಅನೇಕ ಅತಿಮುಖ್ಯವಾದ ಕೊಂಡಿಗಳನ್ನು ಕಳೆದುಕೊಳ್ಳುತ್ತೇವೆ. 11. ಪ್ರಾಚ್ಯ ಹಸ್ತ ಪ್ರತಿಗಳ ಗ್ರಂಥಾಲಯಗಳು 12. ಭಾರತಕ್ಕೆ ಸಂಬಂಧಿಸಿದ ಪುಸ್ತಕಗಳು, ಹಸ್ತ ಪ್ರತಿಗಳು ಮತ್ತಿತರ ಪುರಾಲೇಖನಗಳ ಸಂಗ್ರಹಗಳು ದೊರಕುವ ಇನ್ನೂ ಒಂದು ಮೂಲವಿದೆ. ಅದೆಂದರೆ ವಿದೇಶೀ ಗ್ರಂಥಾಲಯಗಳು. ಉದಾಹರಣೆಗೆ ಬ್ರಿಟಿಷ್ ಮ್ಯೂಸಿಯಮ್ ಲೈಬ್ರರಿ, ಇಂಡಿಯ ಆಫೀಸ್ ಲೈಬ್ರರಿ (ಎರಡೂ ಲಂಡನ್ನಿನಲ್ಲಿವೆ), ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಗ್ರಂಥಾಲಯಗಳು, ವಾಷಿಂಗ್ಟನ್ನಿನಲ್ಲಿರುವ ಲೈಬ್ರರಿ ಆಫ್ ಕಾಂಗ್ರೆಸ್, ನ್ಯೂಯಾರ್ಕ್‌ನಲ್ಲಿರುವ ನ್ಯೂಯಾರ್ಕ್ ಪಬ್ಲಿಕ್ ಲೈಬ್ರರಿ, ಪ್ಯಾರಿಸಿನಲ್ಲಿರುವ ನ್ಯಾಷನಲ್ ಲೈಬ್ರರಿ ಆಫ್ ಫ್ರಾನ್ಸ್, ಮತ್ತು ಜರ್ಮನಿಯ ಅಂಥದೇ ಗ್ರಂಥಾಲಯಗಳನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಕನಿಷ್ಠ ಪಕ್ಷ ಈ ಗ್ರಂಥಾಲಯಗಳಲ್ಲಿಯ ಭಾರತೀಯ ಪುಸ್ತಕಗಳ ಸಂಪೂರ್ಣ ವಿವರಣಾತ್ಮಕ ಕ್ಯಾಟಲಾಗುಗಳನ್ನಾದರೂ ಭಾರತೀಯ ವಿದ್ವಾಂಸರಿಗೆ ಕೂಡಲೇ ದೊರಕಿಸಿಕೊಡಬೇಕು. 13. ಮತ್ತೆ, ನಮ್ಮ ದೇಶದಲ್ಲೇ ಸ್ಥಾಪಿತವಾಗಿರುವ ವಿದೇಶೀ ಗ್ರಂಥಾಲಯಗಳೂ ಇವೆ. ಉದಾಹರಣೆಗೆ ಹೈದರಾಬಾದಿನಲ್ಲಿರುವ 'ದಿ ಅಮೆರಿಕನ್ ಸ್ಟಡೀಸ್ ರಿಸರ್ಚ್ ಸೆಂಟರ್; ಬ್ರಿಟಿಷ್ (ಕೌನ್ಸಿಲ್) ಲೈಬ್ರರಿಗಳು, ಯು.ಎಸ್.ಐ.ಎಸ್. ಲೈಬ್ರರಿಗಳು ಹಾಗೂ ವಿದೇಶೀ ಅಂತರರಾಷ್ಟ್ರೀಯ ಕೇಂದ್ರಗಳು ಮತ್ತು ಗ್ರಂಥಾಲಯಗಳು. ಈ ಗ್ರಂಥಾಲಯಗಳಿಂದ ನಮ್ಮ ಜನತೆಗೆ–ಅದರಲ್ಲೂ ಆಯಾ ನಗರಗಳ ಮತ್ತು ಪಟ್ಟಣಗಳ ವಿದ್ಯಾರ್ಥಿ ಸಮುದಾಯಗಳಿಗೆ–ಹೆಚ್ಚು ಸಹಾಯವಾಗುತ್ತಿದೆ.

ಭಾರತೀಯ ಪ್ರಕಟಣೆಗಳಿಗೆ ಸಂಬಂಧಿಸಿದಂತೆ ನಮ್ಮ ಸಂಗ್ರಹಗಳು ಎಷ್ಟರ ಮಟ್ಟಿಗೆ ಸಮಗ್ರ ಹಾಗೂ ಪರಿಪೂರ್ಣವಾಗಿವೆ ಎನ್ನುವುದನ್ನು ನೋಡೋಣ.

ನ್ಯಾಷನಲ್ ಲೈಬ್ರರಿಯಿಂದಲೇ ಆರಂಭಿಸೋಣ. ನಮಗೆಲ್ಲ ತಿಳಿದಿರುವಂತೆ 'ನ್ಯಾಷನಲ್ ಲೈಬ್ರರಿ'ಯ ಮೂಲ 1836ರಲ್ಲಿ ಸ್ಥಾಪಿತವಾದ ಕಲ್ಕತ್ತ ಪಬ್ಲಿಕ್ ಲೈಬ್ರರಿ. 1903ರಲ್ಲಿ ಭಾರತದ ಆಗಿನ ವೈಸ್‌ರಾಯ್ ಆಗಿದ್ದ ಲಾರ್ಡ್ ಕರ್ಜನ್ ಅದನ್ನು ಕೇಂದ್ರ ಸರಕಾರದ ವಶಕ್ಕೆ ತೆಗೆದುಕೊಂಡು ಅದಕ್ಕೆ 'ಇಂಪೀರಿಯಲ್ ಲೈಬ್ರರಿ ಆಫ್ ಇಂಡಿಯ' ಎಂದು ನಾಮಕರಣ ಗೈದು ನವೀಕರಣ ಮಾಡಿದ. 1948ರಲ್ಲಿ ನಮ್ಮ ದೂರದೃಷ್ಟಿಯುತ ನಾಯಕರು ಅದನ್ನು ಸ್ವತಂತ್ರ ದೇಶದ ಒಂದು ರಾಷ್ಟ್ರೀಯ ಸಂಸ್ಥೆಯಾಗಿ ಪರಿವರ್ತಿಸಿದರು. ನ್ಯಾಷನಲ್ ಲೈಬ್ರರಿ ಅದರ ಸರ್ವೋತ್ಕೃಷ್ಟ ಸ್ಥಾನದ ಬಲದಿಂದಲೂ ಕಲ್ಕತ್ತದಲ್ಲಿ ಸ್ಥಾಪಿತವಾಗಿರುವುದರಿಂದಲೂ ಹೆಚ್ಚು ಕಡಿಮೆ ಬಂಗಾಳಿ ಭಾಷೆಯ ಪ್ರಕಟಣೆಗಳನ್ನೆಲ್ಲ ಸಂಗ್ರಹಿಸಿದೆ. ಅಲ್ಲಿ ಭಾರತೀಯ ಇತಿಹಾಸವನ್ನು ಕುರಿತ ಅತ್ಯುತ್ಕೃಷ್ಟ ಪುಸ್ತಕಗಳನ್ನೂ ಶೇಖರಿಸಲಾಗಿದೆ. ಮತ್ತೆ ಅದರಲ್ಲಿ ಕೇಂದ್ರ ಹಾಗೂ ರಾಜ್ಯಸರ್ಕಾರಗಳ ದಸ್ತೈವಜುಗಳಿವೆ; ಅಲ್ಲದೆ ವಿದೇಶೀ ಪ್ರಕಟಣೆಗಳೂ ಇವೆ. ವಿವಿಧ ರಾಜ್ಯ ಸರ್ಕಾರಗಳಿಂದ ಕೊಡುಗೆಯಾಗಿ ಬಂದ ಪ್ರಕಟಣೆಗಳೂ ಸ್ವತಃ ಖರೀದಿಮಾಡಿದವೂ ಅಲ್ಲಿವೆ; ಇವೆಲ್ಲ ಬಹುಮಟ್ಟಿಗೆ ಸ್ವಾತಂತ್ರ್ಯೋತ್ತರ ಕಾಲದಲ್ಲೇ ಸಂಗ್ರಹವಾದವು. 1956ರಲ್ಲಿ ತಿದ್ದುಪಡಿಯಾದ 1954ರ ಪುಸ್ತಕಗಳ ಸಲ್ಲಿಕೆ ಅಧಿನಿಯಮದ (Delivery of Books Act) ನಿಬಂಧನೆಗಳ ಪ್ರಕಾರ ದೇಶದಲ್ಲಿ ಪ್ರಕಟವಾದ ಪ್ರತಿಯೊಂದು ಪುಸ್ತಕದ ಒಂದು ಪ್ರತಿಯನ್ನು ನ್ಯಾಷನಲ್ ಲೈಬ್ರರಿ ಸ್ವೀಕರಿಸಬೇಕೆಂಬ ನಿಯಮವಿದೆ. ಇಲ್ಲೂ ದೇಶದಲ್ಲಿ ಪ್ರಕಟವಾದ ಪುಸ್ತಕಗಳೆಲ್ಲವೂ ಪ್ರಕಾಶಕರಿಂದ ನ್ಯಾಷನಲ್ ಲೈಬ್ರರಿಗೆ ಬರುತ್ತಿಲ್ಲವೆನ್ನುವುದು ಎಲ್ಲರಿಗೂ ತಿಳಿದ ವಿಷಯ. ನನ್ನ ಅಂದಾಜಿನಲ್ಲಿ ಸೇಕಡ 25ರಷ್ಟು ಪುಸ್ತಕಗಳು ನ್ಯಾಷನಲ್ ಲೈಬ್ರರಿಯನ್ನು ತಲುಪುವುದೇ ಇಲ್ಲ.

ಈ ಸಂದರ್ಭದಲ್ಲಿ ನಾವು ಗಣನೆಗೆ ತೆಗೆದುಕೊಳ್ಳಬೇಕಾದ ಇನ್ನೊಂದು ಅಂಶವಿದೆ. ಭಾರತದಲ್ಲಿ 1556ರಷ್ಟು ಹಿಂದೆಯೇ ಮುದ್ರಣಕಾರ್ಯ ಆರಂಭವಾಯಿತು. 1556ರಿಂದ ಪುಸ್ತಕಗಳ ಸಲ್ಲಿಕೆ ತಿದ್ದುಪಡಿ ವಿಧೇಯಕ ಅಂಗೀಕಾರವಾಗುವವರೆಗೆ, ಅಂದರೆ 1956ರ ವರೆಗೆ–ನಾನೂರು ವರ್ಷಗಳ ಅವಧಿಯಲ್ಲಿ–ಪ್ರಕಾಶಕರಾಗಲಿ ದೇಶದ ಗ್ರಂಥಾಲಯಗಳಾಗಲಿ ಈ ದೇಶದ ಯಾವುದೇ ಮುದ್ರಿತ ಪ್ರಕಟಣೆಯನ್ನು ಕಡ್ಡಾಯವಾಗಿ ತೆಗೆದುಕೊಂಡು ಸಂಗ್ರಹಿಸಬೇಕೆಂಬ ಯಾವುದೇ ಅಧಿನಿಯಮವೂ ಇರಲಿಲ್ಲ. ಇಡೀ ರಾಷ್ಟ್ರದ ಗ್ರಂಥಭಂಡಾರ ಎನಿಸಿಕೊಂಡ ನಮ್ಮ ನ್ಯಾಷನಲ್ ಲೈಬ್ರರಿಗೆ ಇಷ್ಟರಮಟ್ಟಿನ ಕೊರತೆ ಇದೆ. ಕನ್ನಡ ಪ್ರಕಟಣೆಗಳ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ನ್ಯಾಷನಲ್ ಲೈಬ್ರರಿಯಲ್ಲಿ 15,000 ಕನ್ನಡ ಪುಸ್ತಕಗಳಿವೆ. ಆದರೆ ಮೊದಲ ಪುಸ್ತಕ ಮುದ್ರಿತವಾದಂದಿನಿಂದ, ಅಂದರೆ 1817ರಿಂದ ಇಲ್ಲಿಯವರೆಗೆ 50,000 ಕನ್ನಡ ಪುಸ್ತಕಗಳು ಅಚ್ಚಾಗಿವೆಯೆಂದು ಅಂದಾಜುಮಾಡಲಾಗಿದೆ.

ಲಂಡನ್ನಿನ ಇಂಡಿಯ ಆಫೀಸ್ ಲೈಬ್ರರಿಯಲ್ಲಿ ಭಾರತ ಸರ್ಕಾರದ ಪ್ರಕಟಣೆಗಳನ್ನು ನಮ್ಮದೇ ಆದ ನ್ಯಾಷನಲ್ ಲೈಬ್ರರಿಯಲ್ಲಿ ಸಂಗ್ರಹಿಸಿರುವುದಕ್ಕಿಂತ ಹೆಚ್ಚಾಗಿ ಸಂಗ್ರಹಿಸ

ಲಾಗಿದೆ. ಒಟ್ಟಿನಲ್ಲಿ ಏಳು ಕೋಟಿ ಪುಸ್ತಕಗಳಿರುವ ವಾಷಿಂಗ್ಟನ್ನಿನ ಲೈಬ್ರರಿ ಆಫ್ ಕಾಂಗ್ರೆಸ್, 1 ಕೋಟಿ ಪುಸ್ತಕಗಳಿರುವ ಹಾರ್ವರ್ಡ್ ಯೂನಿವರ್ಸಿಟಿ ಲೈಬ್ರರಿ ಮೊದಲಾದವುಗಳಿಗೆ ಹೋಲಿಸಿ ನೋಡಿದರೆ ನ್ಯಾಷನಲ್ ಲೈಬ್ರರಿಯಲ್ಲಿರುವುದು 16 ಲಕ್ಷ ಮಾತ್ರ.

ಭಾರತೀಯ ಪ್ರಕಟಣೆಗಳನ್ನು ಸಾಮಾನ್ಯವಾಗಿ ಸಂಗ್ರಹಿಸಬಹುದಾಗಿತ್ತೆಂದು ನಿರೀಕ್ಷಿಸಬಹುದಾದ ಇತರ ಗ್ರಂಥಾಲಯಗಳೆಂದರೆ ಸಾರ್ವಜನಿಕ ಗ್ರಂಥಾಲಯಗಳು ಮತ್ತು ವಿಶ್ವವಿದ್ಯಾನಿಲಯದ ಗ್ರಂಥಾಲಯಗಳು. ಸ್ವಾತಂತ್ರ್ಯಪೂರ್ವದಲ್ಲಿ ಸುಮಾರು 25 ವಿಶ್ವವಿದ್ಯಾನಿಲಯಗಳಿದ್ದುವು. ಆದರೆ ಅವು ತಮ್ಮ ಬಹುಪಾಲು ಹಣವನ್ನೆಲ್ಲ ಇಂಗ್ಲಿಷ್ ಭಾಷಾ ಪ್ರಕಟಣೆಗಳನ್ನು ಕೊಳ್ಳಲು ಖರ್ಚುಮಾಡಿಬಿಟ್ಟುವು. 1968ರಲ್ಲಿ 71 ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿದ್ದ ಪುಸ್ತಕ ಸಂಗ್ರಹ 65 ಲಕ್ಷಕ್ಕಿಂತ ಹೆಚ್ಚಾಗಿರಲಿಲ್ಲ. ಹಾರ್ವರ್ಡ್ ವಿಶ್ವವಿದ್ಯಾನಿಲಯ ಒಂದರಲ್ಲೇ ಆ ಸಮಯದಲ್ಲಿ ಸುಮಾರು 90 ಲಕ್ಷ ಭಾರಿ ಸಂಗ್ರಹವಿತ್ತು. ಸಾರ್ವಜನಿಕ ಗ್ರಂಥಾಲಯಗಳು ಹಲವೆಡೆ ಚಂದಾದಾರಿ ಗ್ರಂಥಾಲಯಗಳ ರೂಪದಲ್ಲಿದ್ದುವು. ಧನಾಭಾವ ಮತ್ತು ಇಂಗ್ಲಿಷ್ ವ್ಯಾಮೋಹಗಳಿಂದಾಗಿ ಶೇಖರಿಸಬೇಕಾದಷ್ಟು ಒಳ್ಳೆಯ ಪ್ರಾದೇಶಿಕ ಭಾಷಾ ಪುಸ್ತಕಗಳನ್ನು ಶೇಖರಿಸಲು ಹಿಂದಿನವರಿಗೆ ಆಗಲಿಲ್ಲ.

ನಮ್ಮ ದೇಶದಲ್ಲಿ ಪ್ರಕಟವಾದ ಪುಸ್ತಕ ಶೇಖರಣೆಯಮಟ್ಟಿಗೆ ಹೇಳುವುದಾದರೆ ನಮ್ಮ ಗ್ರಂಥಾಲಯ ಸಂಪತ್ತು ಏನೇನೂ ಸಾಲದು ಎಂಬುದನ್ನು ಮೇಲಿನ ವಿವೇಚನೆಯಿಂದ ಗಮನಿಸಬಹುದು. (1968ರಲ್ಲಿ ನಮ್ಮ ಗ್ರಂಥಾಲಯಗಳೆಲ್ಲದರ ಒಟ್ಟು ಗ್ರಂಥ ಸಂಪತ್ತು ಸುಮಾರು 2 ಕೋಟಿಯಷ್ಟಿರಬಹುದು.)

ವಿದೇಶೀ ಪುಸ್ತಕಗಳು :

ವಿಶ್ವವಿದ್ಯಾನಿಲಯಗಳು, ಸಂಶೋಧನ ಸಂಸ್ಥೆಗಳು, ಸಾರ್ವಜನಿಕ ಗ್ರಂಥಾಲಯಗಳು, ಮೊದಲಾದವುಗಳ ಭವಿಷ್ಯವನ್ನು ರೂಪಿಸುವ ಹೊಣೆ ದೂರದೃಷ್ಟಿಯುಳ್ಳ ಹಿರಿಯ ಅಧಿಕಾರಿಗಳ ಕೈಯಲ್ಲಿತ್ತು. ಅವರ ಪರಿಶ್ರಮದ ಫಲವಾಗಿ ನಮಗೆ ಅಮೂಲ್ಯವಾದ ಇಂಗ್ಲಿಷ್ ಭಾಷಾಪುಸ್ತಕಗಳನ್ನೂ ಇತರ ವಿದೇಶೀ ಭಾಷೆಗಳ ಪುಸ್ತಕಗಳನ್ನೂ ಸಂಗ್ರಹಿಸಲು ಸಾಧ್ಯವಾಗಿದೆ. ಆದರೆ ಇಷ್ಟೂ (ಬೆಲೆಬಾಳುವ ಗ್ರಂಥಗಳ) ಒಂದೇ ಬಗೆಯ ಹಲವಾರು ಪ್ರತಿಗಳನ್ನು ಕೊಂಡುಕೊಳ್ಳಲಾಗಿದೆ. ಇದನ್ನು ನಿವಾರಿಸಬಹುದಾಗಿತ್ತು. ಅಧಿಕ ಬೆಲೆಯ ಪರಾಮರ್ಶನ ಗ್ರಂಥಗಳು, ನಿಯತಕಾಲಿಕೆಗಳ ಪೂರ್ವ ಸಂಚಿಕೆಗಳು ಮತ್ತು ನಿಯತಕಾಲಿಕಗಳ ಪ್ರಚಲಿತ ಸಂಚಿಕೆಗಳ ವಿಷಯದಲ್ಲೂ ಇಂಥ ದ್ವಿರುಕ್ತಿ ವಿಶೇಷವಾಗಿ ಕಂಡು ಬರುತ್ತದೆ. ಸಾರ್ವಜನಿಕ ಗ್ರಂಥಾಲಯಗಳ ಸಂಸ್ಥೆಗಾಗಿ ನಮ್ಮ ರಾಜಧಾನಿಗಳಲ್ಲೊಂದರಲ್ಲಿ ಒಂದು ಪ್ರತಿಗೆ 18,000 ರೂ. ಬೆಲೆಬಾಳುವಂತಹ ' Handbuch der

Physik' ಎಂಬುದರ ಮೂರು ಸೆಟ್ಟುಗಳನ್ನು ಕೊಳ್ಳಲಾಯಿತು; ಇದು ಆ ರಾಜಧಾನಿಯಲ್ಲೇ ಇರುವ ಪ್ರಧಾನ ಗ್ರಂಥಾಲಯ ಹಾಗೂ ಆದರ ಶಾಖೆಗಳ ಪೋಷಕ ಸದಸ್ಯರ ಬಳಕೆಗೆ ಮಾತ್ರ !

ಒಂದು ವಿಶ್ವವಿದ್ಯಾನಿಲಯದ 25 ವಿಭಾಗೀಯ ಗ್ರಂಥಾಲಯಗಳಲ್ಲಿ (departmental libraries) ಸುಮಾರು 3–4 ಸೆಟ್ಟು ಎನ್‌ಸೈಕ್ಲೋಪೀಡಿಯ ಬ್ರಿಟಾನಿಕ, 4 ಸೆಟ್ಟು ಎನ್‌ಸೈಕ್ಲೋಪೀಡಿಯ ಆಫ್ ಸೋಷಿಯಲ್ ಸೈನ್ಸಸ್ ಮೊದಲಾದವು ಇದ್ದುದು ಕಂಡು ಬಂತು. ಇದರ ಜೊತೆಗೆ 70–80 ನಿಯತಕಾಲಿಕಗಳಿಗೆ 2 ರಿಂದ 4ರವರೆಗೆ ಚಂದಾ. ಅಂದರೆ ಇವುಗಳಲ್ಲಿ ಒಂದೊಂದು ನಿಯತಕಾಲಿಕದ ಎರಡೆರಡು, ಮೂರು ಮೂರು, ನಾಲ್ಕು ನಾಲ್ಕು ಪ್ರತಿಗಳನ್ನು ಕೊಳ್ಳಲಾಗಿತ್ತು.

ಇಷ್ಟೆಲ್ಲ ಹೇಳಿದ್ದು ವಿದೇಶೀ ಗ್ರಂಥಗಳ ಸೇರ್ಪಡೆಯಲ್ಲಿ ನಮ್ಮ ಪ್ರಯತ್ನಗಳು ಒಂದಕ್ಕೊಂದು ಹೊಂದಿಕೆಯಿಲ್ಲದಂತೆ ಎಡ್ಡಾದಿಡ್ಡಿಯೂ ಗೊಂದಲಮಯವೂ ಆಗಿವೆ ಎಂಬ ಅಂಶವನ್ನು ಎತ್ತಿ ತೋರಿಸುವುದಕ್ಕಾಗಿ. ಸ್ವಲ್ಪಮಟ್ಟಿನ ಸಹಕಾರ ಮತ್ತು ದೂರ ದೃಷ್ಟಿಗಳಿದ್ದಿದ್ದರೆ ಇನ್ನೂ ಉಪಯುಕ್ತವೂ ವ್ಯಾಪಕವೂ ಆದ ವಿದೇಶೀ ಗ್ರಂಥಸಂಪತ್ತನ್ನು ದಾಖಲೆಗಳ ರೂಪದಲ್ಲಿ ಸಂಗ್ರಹಿಸಲು ನಮಗೆ ಸಾಧ್ಯವಾಗುತ್ತಿತ್ತು. ಈಗ ಅತ್ಯಗತ್ಯವಾಗಿ ಬೇಕಾಗಿರುವ ಪ್ರಾದೇಶಿಕ ಸಂಗ್ರಹಗಳು, ವಿಶೇಷ ಅಧ್ಯಯನಕ್ಕೆ ಸಂಬಂಧಿಸಿದ ವಿದೇಶೀಸಂಗ್ರಹಗಳು ಮೊದಲಾದವು ಗ್ರಂಥಾಲಯಗಳಲ್ಲಿಲ್ಲದಿರುವುದು ಎದ್ದು ಕಾಣುತ್ತದೆ.

ಹಸ್ತಪ್ರತಿಗಳು :

ಖಾಸಗಿ ವ್ಯಕ್ತಿಗಳ ಹಾಗೂ ಧಾರ್ಮಿಕ ಸಂಸ್ಥೆಗಳ ಬಳಿ ಇರುವ ಹಸ್ತಪ್ರತಿಗಳೂಸೇರಿದಂತೆ ದೇಶದಲ್ಲಿ ಹಲವಾರು ಹಸ್ತಪ್ರತಿಗಳ ಸಂಗ್ರಹಗಳಿವೆ. ಅವುಗಳ ಸಮಾಚಾರವೇನೆಂಬುದೇ ನಮಗೆ ಗೊತ್ತಿಲ್ಲ. ಪಾಟ್ನದಲ್ಲಿರುವ ಖುದಾಬಕ್ಷ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ (Khuda Baksha Oriental Manuscripts Library) ಯನ್ನು ಕೇಂದ್ರ ಸರ್ಕಾರ 'ನ್ಯಾಷನಲ್ ರಿಪಾಸಿಟರಿ ಫಾರ್ ಪರ್ಷಿಯನ್ ಅಂಡ್ ಅದರ್ ಮುಘಲ್ ಮ್ಯಾನ್ಯುಸ್ಕ್ರಿಪ್ಟ್ಸ್' ಎಂದು ಹೇಗೆ ನಾಮಕರಣ ಮಾಡಿತೋ ಹಾಗೆಯೇ ತಂಜಾವೂರಿನ ಸರಸ್ವತಿ ಮಹಲ್ ಲೈಬ್ರರಿಯನ್ನು 'ನ್ಯಾಷನಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಫಾರ್ ಸ್ಯಾನ್‌ಸ್ಕ್ರಿಟ್ ಅಂಡ್ ಅದರ್ ಇಂಡಿಯನ್ ಲಾಂಗ್ವೇಜ್ ಮ್ಯಾನ್ಯುಸ್ಕ್ರಿಪ್ಟ್ಸ್' ಎಂದು ನಾಮಕರಣ ಮಾಡಬೇಕೆಂಬ ಪ್ರಯತ್ನವೇನೋ ನಡೆಯಿತು. ಅಲ್ಲದೆ ಮನೆ ಮಠಗಳಲ್ಲಿ ದೂಳುತುಂಬಿ ಕೊಳೆಯುತ್ತಿರುವ ಹಸ್ತಪ್ರತಿಗಳ ಸಂರಕ್ಷಣೆ, ವ್ಯವಸ್ಥೆ ಮತ್ತು ಪ್ರಚಾರಗಳ ಬಗ್ಗೆ ಗಮನ ಹರಿಸುವ ಯಾವುದೇ ಪ್ರಯತ್ನವೂ ಆದಂತೆ ತೋರುವುದಿಲ್ಲ.

ಇದಲ್ಲದೆ ದೇಶದಲ್ಲಿ ಅನೇಕ ಪ್ರಾಚ್ಯ ಹಸ್ತ ಪ್ರತಿಗಳ ಸಂಗ್ರಹ ಕೇಂದ್ರಗಳಿವೆ. ಉದಾ : ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮೈಸೂರು, ಬರೋಡಾ,

ಮದ್ರಾಸು, ತಿರುವನಂತಪುರ, ಇತ್ಯಾದಿಯಾಗಿ. ಇವುಗಳನ್ನೇ ಒಂದು ತೋರಣವಾಗಿ ಕಟ್ಟಿ ಅವುಗಳ ಉಪಯುಕ್ತತೆ ಹೆಚ್ಚುವಂತೆ ಮಾಡಿದಲ್ಲಿ ಭಾರತೀಯ ಸಾರಸ್ವತ ಪ್ರಪಂಚಕ್ಕೆ ಬಹಳ ಲಾಭ ಉಂಟಾಗುವುದು.

ಹಸ್ತಪ್ರತಿಗಳ ರೂಪದಲ್ಲಿರುವ 19ನೆಯ ಶತಮಾನದ ಮತ್ತು ಈಗಿನ ಲೇಖಕರ ಅಪ್ರಕಟಿತ ಗ್ರಂಥಗಳನ್ನು ರಕ್ಷಿಸಿಡುವುದೂ ಅತ್ಯಗತ್ಯ. ಏಕೆಂದರೆ ಅವುಗಳಲ್ಲಿ ಎಂಥ ಕೃತಿ ರತ್ನವಿದೆಯೆಂಬುದು ಯಾರಿಗೂ ಗೊತ್ತಿಲ್ಲ.

ಖಾಸಗಿ ಸಂಗ್ರಹಗಳು :

ಈ ದೇಶದಲ್ಲಿ ಹಲವಾರು ಖಾಸಗಿ ಗ್ರಂಥಾಲಯಗಳಿವೆ. ವಿದ್ವಾಂಸರಾದ ಪ್ರಾಧ್ಯಾಪಕರು, ನ್ಯಾಯ ಶಾಸ್ತ್ರಜ್ಞರು, ಆಡಳಿತಗಾರರು, ಮತ್ತಿತರ ಪುಸ್ತಕ ಪ್ರೇಮಿಗಳು ಹಾಗೂ ಪುಸ್ತಕ ಸಂಗ್ರಹಕಾರರ ಗ್ರಂಥ ಭಂಡಾರಗಳಿವೆ. ಆದರೆ ಅವುಗಳಲ್ಲೆಲ್ಲ ಏನಿದೆ ಎಂಬುದೇ ನಮಗೆ ಗೊತ್ತಿಲ್ಲ. ಅಂತಹ ಖಾಸಗಿ ಸಂಗ್ರಹಗಳಲ್ಲಿ ಅತಿ ಮುಖ್ಯವಾದವು ಬೃಹತ್ ಗ್ರಂಥಾಲಯಗಳ ಮುಖ್ಯಭಾಗವಾಗಿಬಿಟ್ಟಿರಬಹುದು; ಉದಾಹರಣೆಗೆ ಈಗ ನ್ಯಾಷನಲ್ ಲೈಬ್ರರಿಗೆ ಭೂಷಣವಾಗಿರುವ ಅಶುತೋಷ ಮುಖರ್ಜಿ ಸಂಗ್ರಹ, ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ನೆಲೆಗೊಂಡಿರುವ ಮೋತಿಲಾಲ್ ನೆಹರು ಸಂಗ್ರಹ, ಮರಾಠವಾಡ ವಿಶ್ವವಿದ್ಯಾಲಯ ಗ್ರಂಥಾಲಯ ಲೈಬ್ರರಿ ಕೊಂಡುಕೊಂಡಿರುವ ರಾಜಾ ಶ್ಯಾಂ ಬಹಾದೂರ ಸಂಗ್ರಹ ಮೊದಲಾದವು. ಹೀಗೆ ವಿಲೀನಗೊಂಡ ಖಾಸಗಿ ಸಂಗ್ರಹಗಳು ಸಂಶೋಧಕರಿಗೆ ಎಟುಕುವಂತಾದರೂ, ಇನ್ನುಳಿದ ಅಸಂಖ್ಯ ಖಾಸಗಿ ಸಂಗ್ರಹಗಳ ಸಂಯೋಜಿತ ಪಟ್ಟಿಯೊಂದನ್ನಾದರೂ ತಯಾರಿಸುವ ಯೋಜನೆ ಬೇಡವೆ ?

III. ಸದ್ಯದ ಗ್ರಂಥಸಂಪತ್ತನ್ನು ಉಪಯೋಗಿಸಿಕೊಳ್ಳಲು ಇರುವ ತೊಂದರೆಗಳು :

ನಮ್ಮಲ್ಲಿ ಗ್ರಂಥಶೇಖರಣೆ ಸಾಕಷ್ಟಿಲ್ಲ. ಅದು ಅಸಮಗ್ರ ಎಂದು ಹೇಳಲು ಮೇಲೆ ಪ್ರಯತ್ನಿಸಲಾಗಿದೆ. ಆದರೆ ಇರುವ ಅಲ್ಪ ಗ್ರಂಥಸಂಪತ್ತನ್ನು ಕೂಡ ಪೂರ್ಣವಾಗಿ ಉಪಯೋಗಿಸುತ್ತಿಲ್ಲ. ಇವುಗಳ ಪೂರ್ಣಪ್ರಯೋಜನ ಪಡೆಯುವುದರಲ್ಲಿ ಎದುರಾಗುವ ಅಡಚಣೆಗಳೆಂದರೆ :

(1) ವಿವಿಧ ಗ್ರಂಥಾಲಯಗಳ ನಡುವೆ ಸಮಾಚಾರ ಸಂಪರ್ಕದ ಅಭಾವ; ಗ್ರಂಥಾಲಯಗಳು ತಮ್ಮ ಹಿಂದಿನ ಶೇಖರಣೆಗಳಾವುವು ಎಂಬುದನ್ನು ತಿಳಿಸುವುದಿರಲಿ, ಪ್ರಕೃತ ಸೇರ್ಪಡೆಗಳಾವುವು ಎಂಬುದನ್ನೂ ತಿಳಿಸುತ್ತಿಲ್ಲ. ಎಲ್ಲ ಗ್ರಂಥಾಲಯಗಳೂ ತಮ್ಮ ಸೇರ್ಪಡೆಗಳ ಪಟ್ಟಿಯನ್ನು ಪ್ರಕಟಿಸಿ ತಮ್ಮ ತಮ್ಮಲ್ಲೇ ವಿನಿಮಯ ಮಾಡಿಕೊಳ್ಳುತ್ತಿಲ್ಲ. ಅಂತಹ ಪಟ್ಟಿಗಳನ್ನು ವಿನಿಮಯ ಮಾಡುವುದರಿಂದ ಈಗಿರುವ ಶೇಖರಣೆಗಳನ್ನು ಬಳಸಲು ಬಹುಮಟ್ಟಿಗೆ ಸಹಾಯವಾಗುತ್ತದೆ.

(2) ಸಂಯೋಜಿತ ಪಟ್ಟಿಗಳ (union lists) ಅಭಾವ : ಗ್ರಂಥಗಳ ಅನುಕ್ರಮ ಪಟ್ಟಿಕೆಗಳೇ (serials) ಆಗಲಿ, ಕನಿಷ್ಠ ಪಕ್ಷ ಅಪರೂಪವಾದ ಪುಸ್ತಕಗಳ ಪಟ್ಟಿಗಳೇಆಗಲಿ

ಇಲ್ಲದಿರುವುದರಿಂದ ಸುತ್ತಮುತ್ತಲ ಗ್ರಂಥಾಲಯಗಳಲ್ಲಿ ಏನಿದೆ ಎಂಬುದು ಸ್ವತಃ ಹೋಗಿ ಅಲ್ಲಿರುವ ಸಂಗ್ರಹಗಳನ್ನು ಪರೀಕ್ಷಿಸಿದ ಹೊರತು ತಿಳಿಯುವುದಿಲ್ಲ. ಈ ಸಾಧನಗಳ ಅಭಾವದಿಂದಾಗಿ ಅಕ್ಕಪಕ್ಕದಲ್ಲೇ ಇರುವ, ಉದಾಹರಣೆಗೆ ದಕ್ಷಿಣ ಭಾರತದ ಗ್ರಂಥಾಲಯವೊಂದು ತನಗೆ ಬೇಕಾದ ಯಾವುದೇ ಪುಸ್ತಕವನ್ನು ಎರವಲಾಗಿ ಪಡೆಯಲು ದೂರದಲ್ಲಿರುವ ಉದಾಹರಣೆಗೆ ಶ್ರೀನಗರದಲ್ಲೋ ಕಲ್ಕತ್ತದಲ್ಲೋ ಇರುವ, ಗ್ರಂಥಾಲಯಕ್ಕೆ ಬರೆಯಬೇಕಾಗುತ್ತದೆ. ಈ ಅಡಚಣೆಯನ್ನು ಸಾಧ್ಯವಾದಷ್ಟು ಬೇಗ ನಿವಾರಿಸಬೇಕು. ವೈಜ್ಞಾನಿಕ ವಿಷಯಗಳನ್ನು ಕುರಿತಾದ ಅನುಕ್ರಮ ಪಟ್ಟಿಗಳ ಸಂಯೋಜಿತ ಕ್ಯಾಟಲಾಗುಗಳನ್ನು ರಚಿಸಲು ಇನ್ಸ್‌ಡಾಕ್, (INSDOC) ಸಂಸ್ಥೆಯೂ. ಸಮಾಜ ವಿಜ್ಞಾನವನ್ನು ಕುರಿತ ನಿಯತಕಾಲಿಕಗಳ ಅನುಕ್ರಮಪಟ್ಟಿಕೆಗಳ ಸಂಯೋಜಿತ ಕ್ಯಾಟಲಾಗುಗಳನ್ನು ರಚಿಸಲು ಐ.ಸಿ.ಎಸ್.ಎಸ್.ಆರ್. (ICSSR) ಸಂಸ್ಥೆ ಮೊದಲಾದವೂ ಸ್ತುತ್ಯರ್ಹವಾದ ಪ್ರಯತ್ನಗಳನ್ನು ಮಾಡುತ್ತಿವೆ. ಆದರೆ ಈ ಪ್ರಯತ್ನಗಳೆಲ್ಲ ಮಂದಗತಿಯಲ್ಲಿವೆ. ಇವುಗಳನ್ನು ಬಲಪಡಿಸಿ ತ್ವರೆಗೊಳಿಸುವುದು ಅತ್ಯವಶ್ಯಕವಾದ ಕಾರ್ಯ. ಮಾನವಿಕ ವಿಷಯಗಳು ಗ್ರಂಥ ಪ್ರಪಂಚದಲ್ಲಿ ಈಗ ನಿಜಕ್ಕೂ ಮಲಮಗಳಂತೆ ಉಪೇಕ್ಷಿತವಾಗಿವೆ. ಅವುಗಳ ಗ್ರಂಥಾವಳಿಗಳನ್ನು ಒಳಗೊಳ್ಳುವ ಒಂದು ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕಾಗಿದೆ.

ಪ್ರಾತಿನಿಧಿಕ ಗ್ರಂಥಾಲಯಗಳಲ್ಲಿ (representative libraries) ಮುಖ್ಯವಾದ ಪುಸ್ತಕಗಳ ಸಂಯೋಜಿತ ಕ್ಯಾಟಲಾಗಿನ ಅಭಾವ ಒಂದು ದೊಡ್ಡ ತೊಂದರೆಯಾಗಿದೆ. 1960ರ ಆರಂಭದಲ್ಲೇ ವಿಶ್ವವಿದ್ಯಾಲಯ ಅನುದಾನ ಆಯೋಗವು (U.G.C.) ವಲಯಗಳ ಆಧಾರದ ಮೇಲೆ ಪುಸ್ತಕಗಳ ಸಂಯೋಜಿತ ಪಟ್ಟಿಯನ್ನು ರಚಿಸುವ ಯೋಜನೆಯನ್ನು ಆರಂಭಿಸಿತು. ಪುಣೆ ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ಪಶ್ಚಿಮ ವಲಯದ ಕೇಂದ್ರವೆಂದು ಸೂಚಿಸಲಾಯಿತು. ಆದರೆ ಈ ಯೋಜನೆಯನ್ನು ಎಷ್ಟು ಬೇಗ ಆರಂಭಿಸಲಾಯಿತೋ ಅಷ್ಟೇ ಬೇಗ ರದ್ದುಪಡಿಸಲಾಯಿತು. ಈ ಯೋಜನೆಯನ್ನು ಕಾರ್ಯಗತಗೊಳಿಸುವುದರಲ್ಲಿ ಕ್ಯಾಟಲಾಗೀಕರಣ ವಿಧಾನ,, ವರ್ಗೀಕರಣ ಯೋಜನೆಗಳೇ ಮೊದಲಾದವುಗಳಲ್ಲಿ ಏಕರೂಪತೆ ಇಲ್ಲದಿರುವುದು-ಇವೇ ಮೊದಲಾದ ತೀವ್ರವಾದ ಕಷ್ಟಗಳಿರಬಹುದು. ಎಲ್ಲ ಮುಖ್ಯ ಪುಸ್ತಕಗಳ ಸಂಯೋಜಿತ ಪಟ್ಟಿಯನ್ನು ತಯಾರಿಸುವುದೇನೋ ಉನ್ನತಮಟ್ಟದ ಕೆಲಸ; ಆದರೆ ಅಪರೂಪದ ಪುಸ್ತಕಗಳ ಸಂಯೋಜಿತ ಕ್ಯಾಟಲಾಗಿನ ತಯಾರಿಕೆಯನ್ನಾದರೂ ಸಾಧಾರಣ ಮಟ್ಟದಲ್ಲಿ ಆರಂಭಿಸಬಹುದು.

(3) ಗ್ರಂಥಾಲಯಗಳ ನಡುವಣ ಸಹಕಾರವನ್ನು ಉತ್ತಮಗೊಳಿಸಲು ಆಡಳಿತ ವರ್ಗದ ಬೆಂಬಲ ಇಲ್ಲದಿರುವುದು ಈಚೀಚಿನವರೆಗೂ ಸೋದರ ಗ್ರಂಥಾಲಯಗಳು ಪುಸ್ತಕಗಳನ್ನು ಎರವಲಾಗಿ ಕೇಳಿದಾಗ, ನಷ್ಟಭರ್ತಿ ಪತ್ರಗಳನ್ನು (Indemnity bonds) ಕೊಡಬೇಕೆಂದು ಕೇಳುವ ಗ್ರಂಥಾಲಯಗಳಿದ್ದುವು. ಅಂತಹ ನಿರ್ಬಂಧಗಳು ಈಗಲೂ ಒಂದಲ್ಲ ಒಂದು ರೂಪದಲ್ಲಿವೆ. ಅಂತರ-ಗ್ರಂಥಾಲಯ-ಎರವಲನ್ನು

(Inter-Library Loan) ಪ್ರೋತ್ಸಾಹಿಸಲು IASLIC ಸಂಸ್ಥೆ ತೀವ್ರ ಪ್ರಯತ್ನಗಳನ್ನು ನಡೆಸುತ್ತಿದೆ. ಮೇಲೆ ಹೇಳಿದ ನಿರ್ಬಂಧಗಳಿಂದಾಗಿ ಈ ಕೆಲಸಹಿಂದೆ ಬಿದ್ದಿದೆ.

(4) ವಿಶೇಷ ಸಂಗ್ರಹಗಳು (special collections) ಹಾಗೂ ಆಗಾರ ಕೇಂದ್ರಗಳ Depository Centres) ಬಗೆಗೆ ತಿಳಿವಳಿಕೆ ಇಲ್ಲದಿರುವುದು: ನಮ್ಮ ದೇಶದಲ್ಲಿ ವಿಶ್ವಸಂಸ್ಥೆ ಹಾಗೂ ವಿದೇಶೀ ಸರ್ಕಾರಗಳು ತಮ್ಮ ಪ್ರಕಟಣೆಗಳನ್ನು ಶೇಖರಿಸಲು ಕೆಲವು ನಿರ್ದಿಷ್ಟ ಗ್ರಂಥಾಲಯುಗಳನ್ನು ತಮ್ಮ ಆಗಾರಕೇಂದ್ರಗಳಾಗಿ ಗೊತ್ತು ಮಾಡಿವೆ. ಉದಾಹರಣೆಗೆ ವಿಶ್ವಸಂಸ್ಥೆಯ ಪ್ರಕಟಣೆಗಳಿಗೆ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ಆಗಾರಕೇಂದ್ರವೆಂದು ಕರೆಯಲಾಗಿದೆ. ಪುಣೆ ಮಹಾನಗರದಲ್ಲಿರುವ ಗೋಖಲೆ ಇನ್‌ಸ್ಟಿಟ್ಯೂಟ್ ಲೈಬ್ರರಿ, ಕಲ್ಕತ್ತದ ನ್ಯಾಷನಲ್ ಲೈಬ್ರರಿ ಮೊದಲಾದವುಗಳನ್ನು ಅಂಥವೇ ಇತರ ವಿದೇಶೀ ಪ್ರಕಟಣೆಗಳ ಆಗಾರಗ್ರಂಥಾಲಯುಗಳೆಂದು ಕರೆಯಲಾಗಿದೆ. ಅಂತಹ ಮಾಹಿತಿಯನ್ನು ದೇಶದ ಇತರ ಮುಖ್ಯ ಗ್ರಂಥಾಲಯುಗಳಿಗೆ ತಿಳಿಯಪಡಿಸುವುದು ಅತ್ಯವಶ್ಯವಾದುದು. ಇದಲ್ಲದೆ ಇಂಥ ಸಂಗ್ರಹಗಳಲ್ಲಿ ಯಾವ ಯಾವ ತೆರನಾದ ಪ್ರಕಟಣೆಗಳನ್ನು ಶೇಖರಿಸಲಾಗುತ್ತಿದೆ ಎಂಬುದರ ಬಗ್ಗೆಯೂ ವಿವರಗಳನ್ನು ಇನ್ನಿತರ ಗ್ರಂಥಾಲಯುಗಳಿಗೆ ಕೊಡುವುದು ಒಳಿತು.

(5) ದುಬಾರಿ ಅಂಚೆದರಗಳು: ಹಾಲಿ ಗ್ರಂಥಸಂಪತ್ತಿನ ಪೂರ್ಣಪ್ರಯೋಜನ ಪಡೆಯಲು ದುಬಾರಿ ಅಂಚೆ ದರ ಇನ್ನೊಂದು ದೊಡ್ಡ ಅಡ್ಡಿಯಾಗಿದೆ. ಅಂತರ-ಗ್ರಂಥಾಲಯ-ಎರವಲು ಮಟ್ಟಿಗಾದರೂ ಅಂಚೆದರಗಳನ್ನು ಇಳಿಸಬೇಕೆಂದು ವಿಶ್ವವಿದ್ಯಾಲಯ ಅನುದಾನ ಆಯೋಗ ಮತ್ತು ಭಾರತ ಸರ್ಕಾರಗಳಿಗೆ ಸೂಚನೆ ನೀಡಲಾಗಿದೆ. ಆಗಿನ ಯು.ಜಿ.ಸಿ. ಅಧ್ಯಕ್ಷರಾಗಿದ್ದ ಡಾ. ಸಿ. ಡಿ. ದೇಶಮುಖ್ ಅವರು ಈ ಸಮಸ್ಯೆಯನ್ನು ಪರಿಹರಿಸಬೇಕೆಂದು ಆಶಿಸಿದ್ದರು. ಆದರೆ ಆಮೇಲೆ ಅವರು ತಮ್ಮ ಹುದ್ದೆಯನ್ನು ಬಿಟ್ಟದ್ದರಿಂದಾಗಿ ಆ ಯೋಜನೆ ಅಲ್ಲಿಗೇ ನಿಂತುಹೋಯಿತು. ಈಗಲೂ ದುಬಾರಿ ಅಂಚೆದರಗಳಿಂದಾಗಿ ವಿದ್ವಾಂಸರು ತಮ್ಮ ತಮ್ಮ ಪಟ್ಟಣ ಮತ್ತು ನಗರಗಳಲ್ಲಿ ಅಲ್ಲದೆ ಬೇರೆಡೆಯ ಗಂಥಾಲಯುಗಳಿಂದ ಪುಸ್ತಕಗಳನ್ನು ಎರವಲು ಪಡೆಯಲು ಹೆದರುತ್ತಾರೆ.

(6) ಪುಸ್ತಕ ಸಾಗಾಣಿಕೆಗೆ ಆದ್ಯತೆಯಿಲ್ಲದಿರುವುದು: ಅಂತರ ಗ್ರಂಥಾಲಯ ಎರವಲಿನ ಆಧಾರದಮೇಲೆ ಒಂದು ಗ್ರಂಥಾಲಯದಿಂದ ಇನ್ನೊಂದಕ್ಕೆ ತಲುಪುವುದು, ದೇಶದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸೇರುವುದು, ಪ್ರಕಾಶಕರಿಂದ ಪುಸ್ತಕ ವ್ಯಾಪಾರಿಗಳಿಗೂ, ಪುಸ್ತಕವ್ಯಾಪಾರಿಗಳಿಂದ ಆ ಪುಸ್ತಕಗಳು ಗ್ರಂಥಾಲಯುಗಳಿಗೂ ಸೇರುವುದು ಇವುಗಳಲ್ಲಿಉಂಟಾಗುವ ನಿಧಾನ ನಮ್ಮ ದೇಶದಲ್ಲಿ ಪುಸ್ತಕಗಳ ಬಳಕೆಯನ್ನು ಬಹುಮಟ್ಟಿಗೆ ಮುಂದಗೊಳಿಸಿವೆ. ವಾಯುಸಾರಿಗೆ, ರಸ್ತೆಸಾರಿಗೆ ಮತ್ತು ಜಲಸಾರಿಗೆ ಸಂಸ್ಥೆಗಳು ಪುಸ್ತಕಗಳ ಸಾಗಣೆಗೆ ಆದ್ಯತೆ ಕೊಡಬೇಕು. ವಸ್ತುಸಾಗಣೆ ಅಧಿಕಾರಿಗಳು ಪುಸ್ತಕದ ಭಾಂಗಿಗಳಿಗೆ ಆದ್ಯತೆ ನೀಡಬೇಕು. ಅಂಚೆ ಅಧಿಕಾರಿಗಳೂ ಪುಸ್ತಕಗಳ ತ್ವರಿತ ಬಟವಾಡೆಗೆ ಗಮನ

ಕೊಡಬೇಕು. ತುರ್ತಾಗಿ ಬೇಕಾದ ಪುಸ್ತಕಗಳನ್ನು ಪ್ರಗತಿಪರ ದೇಶಗಳಲ್ಲಿ ಬಹುಬೇಗ ವಿಮಾನದಲ್ಲಿ ಸಾಗಿಸಿ ತಲುಪಿಸುತ್ತಾರೆಂದು ತಿಳಿಯಲಾಗಿದೆ. ಗ್ರಂಥಾಲಯಗಳ ನಡುವೆ ಅಂತಹ ಕ್ಷಿಪ್ರ ಸಂಚಾರ ಇದ್ದರೆ ಮಾತ್ರ ಶ್ರೇಷ್ಠ ಭಂಡಾರಗಳನ್ನು, ವಿಶಿಷ್ಟ ಗ್ರಂಥಾಲಯಗಳನ್ನು, ಕಟ್ಟುವ ಸಾಧ್ಯತೆ ನಿಜವಾಗಿಯೂ ಇದೆ. ಅಂತಹ ಕ್ಷಿಪ್ರ ಸಂಚಾರ ಅಗತ್ಯವಾಗಿರುವುದಕ್ಕೆ ಇನ್ನೂ ಒಂದು ಕಾರಣ ಇದೆ. ಪ್ರತಿಭಾವಂತರಿಗೆ, ಜ್ಞಾನತೃಷೆ ಉಳ್ಳವರಿಗೆ ಭಾವನೆಗಳು ಮಿಂಚಿನಂತೆ ಸ್ಫುರಿಸುತ್ತವೆ. ತಕ್ಷಣವೇ ಅವರಿಗೆ ಬೇಕಾದ ಪುಸ್ತಕ ಸಾಮಗ್ರಿ ಒದಗಿಸಿದರೆ ಆ ಕ್ಷಣಿಕ ಬೆಳಕು ಜ್ಞಾನಧಾರೆಯಾಗಿ ಹರಿಯಲು ಸಾಧ್ಯ. ನಿಧಾನವಾಗಿ ಬಂದ ಗ್ರಂಥಗಳಿಗೆ ಬೇಡಿಕೆಯೇ ಇಲ್ಲದಂತಾಗಬಹುದು.

(7) ನಕಲು ಯಂತ್ರಗಳ (reprographic equipment) ಕೊರತೆ : ಸೆರಾಕ್ಸ್ (xerox) ನಕಲು ಯಂತ್ರಗಳನ್ನು ಕೊಳ್ಳಲು ಸಹಾಯಮಾಡಿದರೆ ಹಾಲಿ ಗ್ರಂಥಸಂಪತ್ತಿನ ಉಪಯುಕ್ತತೆಯನ್ನು ಸುಧಾರಿಸಬಹುದು. ಅದೃಷ್ಟವಶಾತ್ ನಕಲು ಯಂತ್ರಗಳ ತಯಾರಿಕೆಯಲ್ಲಿ ಸ್ವದೇಶೀ ಪ್ರಯತ್ನಗಳು ಯಶಸ್ವಿಯಾಗಿವೆ. ಈಗ ಸೆರಾಕ್ಸ್ ನಕಲು ಯಂತ್ರಗಳು 20,000 ರೂ.ಗಳಿಂದ 30,000 ರೂ.ಗಳ ಶ್ರೇಣಿಯಲ್ಲಿ ದೊರಕುತ್ತವೆ. ಇವುಗಳ ಮೂಲಕ ಎರವಲು ಪಡೆಯುವ ಬದಲು ಗ್ರಂಥಗಳ ನಿಯತಕಾಲಿಕೆಗಳ ಅಧ್ಯಾಯಗಳನ್ನಾಗಲೀ, ಲೇಖನಗಳನ್ನಾಗಲೀ ನಕಲು ಮಾಡಿಸಿ ತರಿಸಬಹುದು. ಈ ಈ ವಿಧಾನದಿಂದ ಅಂಚೆವೆಚ್ಚ ಕಡಿಮೆಯಾಗಲೂಬಹುದು.

(8) ಟೆಲೆಕ್ಸ್‌ನ (telex) ಕೊರತೆ : ದೇಶದ ಮುಖ್ಯ ಗ್ರಂಥಾಲಯಗಳ ನಡುವೆ ಟೆಲೆಕ್ಸ್ ಸಂಪರ್ಕ ಕಲ್ಪಿಸಬೇಕು. ನ್ಯಾಷನಲ್ ಲೈಬ್ರರಿ 1969ರ ಸುಮಾರಿನಲ್ಲಿ ವಿಶ್ವ ವಿದ್ಯಾಲಯ ಗ್ರಂಥಾಲಯಗಳೆಲ್ಲ ಟೆಲೆಕ್ಸ್ ಉಪಕರಣಗಳನ್ನು ಸ್ಥಾಪಿಸಬೇಕೆಂದು ಪ್ರೇರಿಸುವ ದಿಟ್ಟ ಪ್ರಯತ್ನ ಮಾಡಿತು. ಆದರೆ ಈ ವಿಚಾರವನ್ನೂ ಈಗ ಕೈಬಿಡಲಾಗಿದೆ.

(9) ಗ್ರಂಥಾಲಯಗಳ ಆಡಳಿತದಲ್ಲಿ ಅವ್ಯವಸ್ಥೆ : ನಮ್ಮ ಕೆಲವು ವಿದ್ಯಾಸಂಸ್ಥೆಗಳಲ್ಲಿ ಗ್ರಂಥಾಲಯಗಳ ಆಡಳಿತವನ್ನು ಗೃಹಕೃತ್ಯದ ಮಟ್ಟದಲ್ಲಿ (House keeping level) ನಡೆಸಲಾಗುತ್ತಿರುವುದು ಇನ್ನೊಂದು ನ್ಯೂನತೆ. ಕೆಲವು ಸಂಶೋಧನ ಗ್ರಂಥಾಲಯಗಳ ಆಡಳಿತವೂ ಇದೇ ರೀತಿಯೇ ಆಗಿದೆ. ಇಂಥ ಸ್ಥಿತಿಯನ್ನು ಪ್ರಾರಂಭದಲ್ಲೇ ಬದಲಾಯಿಸುವುದು ಅತ್ಯಾವಶ್ಯಕ. ಗ್ರಂಥಾಲಯಗಳನ್ನು ಜನಸಮುದಾಯದ ಪ್ರಯೋಜನಕ್ಕಾಗಿ ಸ್ಥಾಪಿಸುತ್ತಾರೆ. ಆ ಸಮುದಾಯದ ಮೇಲೆ ಅದು ಪರಿಣಾಮ ಬೀರಬೇಕಾಗಿದ್ದ ಪಕ್ಷದಲ್ಲಿ ಅವುಗಳ ಆಡಳಿತವನ್ನು ಶೈಕ್ಷಣಿಕ ಹಾಗೂ ಸಂಶೋಧನ ಮಟ್ಟದಲ್ಲಿ (Teaching and research level) ನಡೆಸಬೇಕು.

(10) ಯೋಗ್ಯ ಸಿಬ್ಬಂದಿಯ ಅಭಾವ : ಗ್ರಂಥಾಲಯಗಳಲ್ಲಿ ಬಲ್ಲವರೂ ದಕ್ಷರೂ ಆದಂತಹ ಸಿಬ್ಬಂದಿಗಳ ಕೊರತೆ ಹಾಲಿ ಗ್ರಂಥಾಲಯ ಸಂಪತ್ತಿನ ಬಳಕೆ ಕಡಮೆಯಾಗಲು ಕಾರಣವಾಗಿದೆ. ಯೋಗ್ಯರೂ ಬಲ್ಲವರೂ ಆದವರನ್ನು ನೇಮಿಸಿಕೊಂಡು ಗ್ರಂಥಾಲಯಗಳಲ್ಲಿರುವ ಪರಾಮರ್ಶನ ಗ್ರಂಥಗಳು ಹಾಗೂ ಇತರ ಸಾಮಗ್ರಿಗಳ ಬಳಕೆಯನ್ನು ಹೆಚ್ಚಿಸ

ಬಹುದು. ಅಮೆರಿಕದ ಮಹಾಕವಿಯೂ ಲೈಬ್ರರಿ ಆಫ್ ಕಾಂಗ್ರೆಸ್‌ನ ಮಾಜಿ ಗ್ರಂಥಪಾಲನೂ ಆದ ಆರ್ಚಿಬಾಲ್ಡ್ ಮ್ಯಾಕ್ಲೀಷ್, ಪುಸ್ತಕದಂಗಡಿಗಳಲ್ಲಿ ಬಲ್ಲ ಸಹಾಯಕರಿಲ್ಲದಿರುವುದರಿಂದ ಪುಸ್ತಕ ಮಾರಾಟ ಕಡಮೆಯಾಗಿದೆಯೆಂದು ಒಂದು ಕಡೆ ಹೇಳಿದ್ದಾನೆ. ಹಾಗೆಯೇ, ಸಾರ್ವಜನಿಕ ಸೇವಾಮನೋಭಾವವಿರುವವರ, ಪುಸ್ತಕಗಳು ಮತ್ತು ಗ್ರಂಥಾಲಯಗಳ ವಿಚಾರವಾಗಿ ಆಸ್ಥೆಯಿಂದ ಮಾತನಾಡುವವರ ಅಭಾವವೂ ಪ್ರಕೃತದಲ್ಲಿ ಗ್ರಂಥಾಲಯಗಳ ಬಳಕೆ ಕಡಮೆಯಾಗಿರುವುದಕ್ಕೆ ಒಂದು ಕಾರಣ.

IV. ಅಡಚಣೆಗಳ ನಿವಾರಣೋಪಾಯಗಳು

ದೇಶದ ಎಲ್ಲ ಗ್ರಂಥಾಲಯಗಳ ಪ್ರಕೃತ ಗ್ರಂಥ ಸಂಪತ್ತಿನ ಬಳಕೆಯನ್ನು ಹೆಚ್ಚಿಸಲು ಕೆಳಗೆ ಕೊಟ್ಟಿರುವ ಯೋಜನೆಯನ್ನು ಸೂಚಿಸಲಾಗಿದೆ:

(1) ಗ್ರಂಥಸೂಚಿಗೆ ಸಂಬಂಧಪಟ್ಟ ವಿವರಗಳನ್ನು ಕೂಡಲೇ ಶಿಷ್ಟರೂಪಕ್ಕೆ (Standardize) ತರುವ ಪ್ರಯತ್ನ ಮಾಡಬೇಕು. ಇದರಿಂದ ಪುಸ್ತಕ ಮೊದಲಾದವುಗಳ ಸಂಯೋಜಿತ ಕ್ಯಾಟಲಾಗಿನ ಕೆಲಸ ತೆಗೆದುಕೊಂಡಾಗಲೆಲ್ಲ ಅವುಗಳ ರಚನಾಕಾರ್ಯ ಸುಲಭವಾಗುತ್ತದೆ. ಈ ದಿಸೆಯಲ್ಲಿ ಮೊದಲ ಹೆಜ್ಜೆಯಾಗಿ ಐ. ಎನ್. ಬಿ. (Indian National Bibliography) ಘಟಕ ಕ್ಯಾಟಲಾಗು ಪಟ್ಟಿಗಳನ್ನು ಅಚ್ಚುಮಾಡಿ ಎಲ್ಲ ಗ್ರಂಥಾಲಯಗಳಿಗೆ ನಿರ್ದಿಷ್ಟ ಹಣಕ್ಕೆ ಒದಗಿಸಬೇಕು.

(2) ಇನ್ಸ್‌ಡಾಕ್, ಐ. ಸಿ. ಎಸ್. ಎಸ್. ಆರ್. ಮೊದಲಾದ ಸಂಸ್ಥೆಗಳ ನಿಯತಕಾಲಿಕಗಳ ಸಂಯೋಜಿತ ಕ್ಯಾಟಲಾಗುಗಳ ರಚನೆಯ ಕಾರ್ಯ ಕದನಬಿರುಸಿನಲ್ಲಿ ಮುಗಿಯಬೇಕು.

ಇದಕ್ಕೆ ಪೂರ್ವಭಾವಿಯಾಗಿ ಸದ್ಯಕ್ಕೆ, ತಮ್ಮಲ್ಲಿರುವ ನಿಯತಕಾಲಿಕಗಳ ಕ್ಯಾಟಲಾಗುಗಳನ್ನು ಪ್ರಕಟಿಸದ ಮುಖ್ಯವಾದ ಗ್ರಂಥಾಲಯಗಳೆಲ್ಲ ಅವುಗಳನ್ನು ಪ್ರಕಟಿಸಿ ಸೋದರ ಗ್ರಂಥಾಲಯಗಳಿಗೆ ಅವುಗಳನ್ನು ವಿನಿಮಯದ ಆಧಾರದ ಮೇಲೆ ಕಳುಹಿಸಿಕೊಡಬೇಕೆಂದು ಒತ್ತಾಯಿಸಬೇಕು.

(3) ದೇಶದ ಪ್ರಾತಿನಿಧಿಕ ಗ್ರಂಥಾಲಯಗಳಲ್ಲಿರುವಂತಹ ಮುಖ್ಯವಾದ ಹಾಗೂ ಅಪರೂಪವಾದ ಪುಸ್ತಕಗಳ ಸಂಯೋಜಿತ ಕ್ಯಾಟಲಾಗನ್ನು (National Union Catalogue) ಕೂಡಲೇ ರಚಿಸುವ ಕೆಲಸ ಆರಂಭಿಸಬೇಕು: ಮತ್ತು ಅದನ್ನು ಒಂದು ಕೇಂದ್ರ ಸ್ಥಳದಲ್ಲಿ, ಉದಾಹರಣೆಗೆ ನ್ಯಾಷನಲ್ ಲೈಬ್ರರಿಯಲ್ಲಿ, ಇಡಬೇಕು. ಈ ದಿಸೆಯಲ್ಲಿ ಮೊದಲ ಹೆಜ್ಜೆಯಾಗಿ, ಗ್ರಂಥಾಲಯಗಳಲ್ಲಿರುವ ಅಪರೂಪವಾದ ಪುಸ್ತಕಗಳ ಕ್ಯಾಟಲಾಗುಗಳನ್ನು ರಚಿಸಿ ಅವುಗಳನ್ನು ಪುಸ್ತಕಗಳ ರೂಪದಲ್ಲಿ ಪ್ರಕಟಿಸಬೇಕೆಂದು ಆಯಾ ಗ್ರಂಥಾಲಯಗಳನ್ನು ಕೇಳಿಕೊಳ್ಳಬೇಕು.

(4) 'ಇಂಡಿಯನ್ ಲೈಬ್ರರಿ ಅಸೋಸಿಯೇಷನ್' ಸಂಸ್ಥೆಯೋ ಮತ್ತಾವುದಾದರೂ ಸಂಸ್ಥೆಯೋ ದೇಶದ ಮುಖ್ಯ ಗ್ರಂಥಾಲಯಗಳಲ್ಲಿ ಪುಸ್ತಕಸಂಗ್ರಹಗಳ ವಿವರ

ಗಳನ್ನು ತಿಳಿಸುವುದಕ್ಕೇ ಮೀಸಲಾದ ಒಂದು ನಿಯತಕಾಲಿಕವನ್ನು ಪ್ರಕಟಿಸಬೇಕು. ಈ ಪತ್ರಿಕೆಯಲ್ಲಿ ಪ್ರತಿಯೊಂದು ಗ್ರಂಥಾಲಯದ ವಿಶಿಷ್ಟ ಬಗೆಯ ಪುಸ್ತಕ ಸಂಗ್ರಹಗಳನ್ನು ವಿವರಿಸುವಂತಹ ಲೇಖನಗಳನ್ನು ಪ್ರಕಟಿಸಬೇಕು.

(5) ಕಡಮೆ ಬಳಕೆಯುಳ್ಳ ಎರಡೆರಡು ಪ್ರತಿಗಳಿರುವ ಪುಸ್ತಕಗಳ ಪಟ್ಟಿಗಳನ್ನೂ, ಎರಡೆರಡು ಪ್ರತಿಗಳುಳ್ಳ ನಿಯತಕಾಲಿಕಗಳ ಪಟ್ಟಿಗಳನ್ನೂ, ತಮ್ಮ ಶೇಖರಣೆಯಲ್ಲಿ ತಪ್ಪಿ ಹೋಗಿರುವ ಸಂಚಿಕೆಗಳ ಪಟ್ಟಿಕೆಗಳನ್ನೂ ತಯಾರಿಸಬೇಕೆಂದು ಗ್ರಂಥಾಲಯಗಳನ್ನು ಕೇಳಿಕೊಳ್ಳಬೇಕು. ಇದರಿಂದ ತಮ್ಮತಮ್ಮಲ್ಲಿರುವ ಸಾಮಗ್ರಿಗಳನ್ನು ವಿನಿಮಯಿಸಿ ಕೊಳ್ಳಬಹುದು.

ಅದರಂತೆಯೇ ಕಡಮೆ ಉಪಯೋಗ ಬೀಳುವ ಅಥವಾ ಉಪಯೋಗವೇ ಇಲ್ಲ ಎನ್ನುವಂತಹ ಪಠ್ಯೇತರ ಪುಸ್ತಕಗಳನ್ನು ಗ್ರಂಥಾಲಯಗಳಿಂದ ತೆಗೆದುಹಾಕಿ ಮಾರುವ ಬದಲು ಅಂಥವುಗಳನ್ನು ಒಂದು ಕೇಂದ್ರಾಗಾರದಲ್ಲಿ ಶೇಖರಿಸಿಡುವುದರಿಂದ ಅವಕ್ಕೆ ಮುಂದೆ ಬೇಡಿಕೆ ಬಂದಾಗ ಪೂರೈಸಲು ಅನುವಾಗುತ್ತದೆ. ಉಪಯೋಗವಿಲ್ಲ ಎಂದು ಗಣಿಸಿ ಅಮೂಲ್ಯ ಗ್ರಂಥಗಳನ್ನು ರದ್ದಿಗೆ ಹಾಕಿದ ಅಥವಾ ಆಹುತಿ ಕೊಟ್ಟ ನಿದರ್ಶನಗಳು ನಮ್ಮಲ್ಲಿ ಹೇರಳವಾಗಿ ಸಿಕ್ಕುತ್ತವೆ. ಅಜ್ಞಾನಿಗಳ ಕೈಗೆ ಸಿಕ್ಕ ತಾಡೋಲೆ ಗ್ರಂಥಗಳು ಎಷ್ಟೋ ಸಲ ಚಳಿಗಾಲದಲ್ಲಿ ಕಾಯಿಸಿಕೊಳ್ಳಲಿಕ್ಕೆಂದು ಅಗ್ನಿದೇವನಿಗೆ ಸಮರ್ಪಿತವಾಗಿರು ವುದೂ ಉಂಟು,

(6) ಗ್ರಂಥಪಾಲರು ಇತರ ಗ್ರಂಥಾಲಯಗಳೊಡನೆ ಸಹಕಾರ ಯೋಜನೆಗಳನ್ನು ಹಾಕಿಕೊಳ್ಳಬೇಕು. ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯಾಗಿ ಗ್ರಂಥಪಾಲರು ಅಂತರ ಗ್ರಂಥಾಲಯ ಎರವಲು ಪದ್ಧತಿಯನ್ನು ಇನ್ನೂ ತೀವ್ರವಾಗಿ ಹಾಗೂ ಹೆಚ್ಚಿನ ಆಸ್ಥೆ ಯಿಂದ ಆರಂಭಿಸಬೇಕು.

(7) ಕನಿಷ್ಠಪಕ್ಷ ಅಂತರಗ್ರಂಥಾಲಯ ಎರವಲಿನ ಬಗ್ಗೆಯಾದರೂ ಅಂಚೆದರ ಗಳನ್ನು ಗಣನೀಯವಾಗಿ ಇಳಿಸಲು ಭಾರತ ಸರಕಾರಕ್ಕೆ ಒತ್ತಾಯ ಮಾಡಬೇಕು.

(8) ಗ್ರಂಥಾಲಯಗಳೆಲ್ಲ ಸೆರಾಕ್ಸ್ ತೆಗೆಯುವುದು, ಫೋಟೋ ನಕಲು ಮಾಡು ವುದು ಮತ್ತು ಸೂಕ್ಷ್ಮಚಿತ್ರಣ ಯಂತ್ರಗಳಂತಹ (microfilming machine) ನಕಲು ಯಂತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡಬೇಕು ಹಾಗೂ ಅದ ಕ್ಕಾಗಿ ಹಣದ ವ್ಯವಸ್ಥೆ ಮಾಡಬೇಕು.

(9) ಅಪರೂಪವಾದ ಭಾರತೀಯ ಪುಸ್ತಕಗಳಿಗಾಗಿ, ಅವುಗಳು ದೊರಕುವ ಸ್ಥಳ ಗಳಾದ ಹಳೆಯ ಪೌರ್ವಾತ್ಯ ಶಾಲೆಗಳು, ಹಳೆಯ ಚಂದಾದಾರಿಕೆ ಗ್ರಂಥಾಲಯಗಳು, ಹಳೆಯ ವಿಶ್ವವಿದ್ಯಾನಿಲಯ ಹಾಗೂ ಇತರ ವಿದ್ಯಾಸಂಸ್ಥೆಗೆ ಸಂಬಂಧಿಸಿದ ಗ್ರಂಥಾಲಯಗಳು, ಹಳೆಯ ಪುಸ್ತಕದಂಗಡಿಗಳೇ ಮೊದಲಾದುವುಗಳನ್ನು ಪರೀಕ್ಷಿಸಬೇಕು ಮತ್ತು ಇಂಥ ಪುಸ್ತಕಗಳನ್ನು ಸಂರಕ್ಷಿಸುವ ಪ್ರಯತ್ನ ಮಾಡಬೇಕು.

(10) ದೇಶದ ಪ್ರಮುಖ ಗ್ರಂಥಾಲಯಗಳ ನಡುವೆ ಟೆಲೆಕ್ಸ್ ಸಂಪರ್ಕ ಕಲ್ಪಿಸ ಬೇಕು.

(11) ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಪ್ರಕಟಣೆಗಳಿಗಾಗಿ ಕೆಲವು ಗ್ರಂಥಾಲಯಗಳನ್ನು ಆಗಾರ ಕೇಂದ್ರಗಳಾಗಿ ಗೊತ್ತುಪಡಿಸಬೇಕೆಂದು ಅವುಗಳನ್ನು ಒತ್ತಾಯಪಡಿಸಬೇಕು.

(12) ಖಾಸಗಿ ವ್ಯಕ್ತಿಗಳು ಹಾಗೂ ಧಾರ್ಮಿಕ ಮಠಗಳಲ್ಲಿ ಇರುವ ಹಸ್ತಪ್ರತಿಗಳನ್ನು ಕಾಪಾಡುವ ರಾಷ್ಟ್ರೀಯ ಹಸ್ತಪ್ರತಿ ಗ್ರಂಥಾಲಯಗಳೆರಡನ್ನು-ಒಂದನ್ನು ದೇಶ ಭಾಷೆಗಳಲ್ಲಿನ ಹಸ್ತಪ್ರತಿಗಳಿಗಾಗಿ. (ಸರಸ್ವತಿ ಮಹಲ್ ಗ್ರಂಥಾಲಯ ತಂಜಾವೂರ); ಇನ್ನೊಂದನ್ನು (ಖುದಾಬಷ್ ಗ್ರಂಥಾಲಯ, ಪಾಟ್ನಾ) ಪರ್ಷಿಯನ್, ಉರ್ದು ಹಸ್ತಪ್ರತಿಗಳಿಗಾಗಿ-ಸ್ಥಾಪಿಸುವ, ಕೇವಲ ಕಾಗದದ ಮೇಲೆಯೇ ಉಳಿದಿರುವ, ಯೋಜನೆಯನ್ನೂ ಈ ಎಲ್ಲ ಹಸ್ತಪ್ರತಿಗಳ ಒಂದು ಸಂಯುಕ್ತ ಕ್ಯಾಟಲಾಗನ್ನೂ ಮಾಡಲು ತತ್‌ಕ್ಷಣ ಆರಂಭಿಸಬೇಕು.

(13) ಈ ದೇಶದಲ್ಲಿ ಸಂಸ್ಥೆಗಳಿಂದಲೂ ವ್ಯಕ್ತಿಗಳಿಂದಲೂ ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ಲೇಖನಗಳ ಹಾಗೂ ಪುಸ್ತಕಗಳ ಬಗೆಗೆ ಮಾಹಿತಿ ಒದಗಿಸುವ ಕೆಲವು ಸ್ತುತ್ಯರ್ಹ ಪ್ರಯತ್ನಗಳು ನಡೆದಿವೆ. ಇನ್ಸ್‌ಡಾಕ್ ಅವರ "Indian Science Abstracts" ಮತ್ತು ಐ.ಸಿ.ಎಸ್.ಎಸ್.ಆರ್. ಸಂಸ್ಥೆಯ "Resarch Abstracts Quarterly" ಸಾಧನೆಗಳು ಈಗಾಗಲೇ ಸುವಿದಿತವಾಗಿವೆ. ಅದರಂತೆಯೇ ಲಿಟರೇಚರ್, ಪ್ರಾಚಿ ಜ್ಯೋತಿ [Prachi Jyothi] ಇವೇ ಮೊದಲಾದವೂ ಸ್ತುತ್ಯರ್ಹವಾದವು. ಕೆಲವು ಗ್ರಂಥಾಲಯಗಳು ಹಾಗೂ ವಿಶ್ವವಿದ್ಯಾಲಯ ಗ್ರಂಥಾಲಯಗಳು ನಿರ್ದಿಷ್ಟ ವಿಷಯ ಸಮೂಹಗಳನ್ನು ಕುರಿತ ಲೇಖನಗಳ ಸೂಚಿಗಳನ್ನು ತಯಾರಿಸುತ್ತಿವೆ; ಉದಾಹರಣೆಗೆ : ಕರ್ನಾಟಕ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳಿಗೆ ಸಂಬಂಧಿಸಿದ ನಿಯತಕಾಲಿಕೆಗಳ ಸಾಹಿತ್ಯದ ಕೈಪಿಡಿಯನ್ನು ಪ್ರಕಟಿಸುತ್ತಿತ್ತು.; ಅಂಥದೇ ಒಂದು ಪ್ರಯತ್ನವನ್ನು ಎಸ್.ಎನ್.ಡಿ.ಟಿ. ಮಹಿಳಾ ವಿಶ್ವವಿದ್ಯಾಲಯವೂ ಆರಂಭಿಸಿದೆ; ಆದರೆ ಇದು ಮಾನವಿಕ ವಿಷಯಗಳಿಗೆ ಮಾತ್ರ ಸೀಮಿತವಾಗಿದೆ. ಈ ಪ್ರಯತ್ನಗಳನ್ನೆಲ್ಲ ಏಕೀಕರಿಸಬೇಕು ಮತ್ತು ವೃಥಾ ಪುನರಾವರ್ತನೆಯನ್ನು ತಪ್ಪಿಸಬೇಕು. ಇದರಿಂದ ಸಾರಸ್ವತ ಪ್ರಪಂಚಕ್ಕೆ ತುಂಬ ಸಹಾಯವಾಗುತ್ತದೆ.

(14) ಎಲ್ಲಕ್ಕಿಂತ ಮಿಗಿಲಾಗಿ, ಬೇಡಿದೊಡನೆಯೇ ಪುಸ್ತಕಗಳನ್ನು ದೇಶದ ಯಾವುದೇ ಮೂಲೆಗೂ ತಲುಪಿಸುವಂತಹ ಗ್ರಂಥಾಲಯಗಳ ಒಂದು ಜಾಲ ಅತ್ಯಗತ್ಯ.

(15) ಅಂತಿಮವಾಗಿ ಮನುಷ್ಯರೇ ಗ್ರಂಥಾಲಯಗಳ ಉಳಿವಿಗೆ ಇಲ್ಲವೆ ಅಳಿವಿಗೆ ಕಾರಣರಾದ್ದರಿಂದ, ಗ್ರಂಥಪಾಲನ ತರಬೇತಿಗೆ ಸರಿಯಾದ ಜನರನ್ನು ಆರಿಸಿ, ಅಂಥವರನ್ನು ದೇಶದ ಗ್ರಂಥಾಲಯಗಳಿಗೂ ಗ್ರಂಥಾಲಯ ಸಮೂಹಕ್ಕೂ ನೇಮಿಸಬೇಕು.

V. ಸಾಕ್ಷರತೆ ಮತ್ತು ಗ್ರಂಥಾಲಯ ಸೇವೆ

ನಮ್ಮಲ್ಲಿ ಬಹುಪಾಲು ಜನ ಅನಕ್ಷರಸ್ಥರಾದ್ದರಿಂದ ನಮ್ಮಲ್ಲಿರುವ ಗ್ರಂಥಸಂಪತ್ತು

ಸಾಕು, ಮತ್ತು ಅವುಗಳ ಬಳಕೆಯೂ ತೃಪ್ತಿಕರವಾಗಿದೆ ಅನ್ನುವ ಒಂದು ಸಾಮಾನ್ಯ ಭಾವನೆ ಇದೆ. ಈ ಭಾವನೆ ನಮ್ಮಲ್ಲಿರುವ ಕುಂದುಕೊರತೆಗಳ ಅರಿವಿಲ್ಲದೆ, ಇದ್ದುದ್ದರಲ್ಲೇ ತೃಪ್ತಿಪಟ್ಟುಕೊಳ್ಳುವ ಮನೋವೃತ್ತಿಯನ್ನು ಸೂಚಿಸುತ್ತದೆ. ಸ್ವಾತಂತ್ರ್ಯೋತ್ತರದ 30 ವರ್ಷಗಳ ಅವಧಿಯಲ್ಲಿ ಸಾಕ್ಷರತೆ ಸೇಕಡಾ ಎರಡರಷ್ಟಾಗಿದೆ. ೧೯೭೧ರಲ್ಲಿ ಇದು ಸೇಕಡ 30ಕ್ಕೆ ಏರಿತು. (ನಿಷ್ಕೃಷ್ಟವಾಗಿ ಹೇಳುವುದಾದರೆ 29.5). ನಮ್ಮ ಸಾಧನೆ ಇಷ್ಟರ ಮಟ್ಟಿಗೆ ಆದರೂ ನಾವು ಇನ್ನೂ ಅನರಕ್ಷರತೆಯ ಸಮಸ್ಯೆಯನ್ನು ತೊಡೆದುಹಾಕುವ ಹೋರಾಟದಲ್ಲಿದ್ದೇವೆಂಬ ವಸ್ತುಸ್ಥಿತಿ ಹಾಗೆಯೇ ಉಳಿದಿದೆ.

ಓದುಬರಹಗಳನ್ನು ಸತತವಾಗಿ ಅಭ್ಯಾಸ ಮಾಡುತ್ತಲೇ ಇರಬೇಕು. ಸಂತ ಜಾನ್ ಹೇಳಿದಂತೆ ಅಧ್ಯಾತ್ಮಮಾರ್ಗದಲ್ಲಿ ಹೇಗೋ ಹಾಗೇ ಇಲ್ಲಿಯೂ ನಾವು ಪುರೋಗಾಮಿಗಳಾಗದೆ ಹೋದಲ್ಲಿ ತಿರೋಗಾಮಿಗಳಾಗಬೇಕಾಗುತ್ತದೆ. ಸೇಕಡ 30ರಷ್ಟಿರುವ ಅಕ್ಷರಸ್ಥರ ಪೈಕಿಯೂ ಬಹುಪಾಲು ಜನರಿಗೆ ಓದುಬರಹದ ಅಭ್ಯಾಸ ಇಟ್ಟುಕೊಳ್ಳಲು ಬೇಕಾದ ಸೌಲಭ್ಯಗಳ ಅಭಾವದಿಂದಾಗಿ ಆ ಅಭ್ಯಾಸವನ್ನು ಮುಂದುವರಿಸಲು ಕಷ್ಟವಾಗುತ್ತಿದೆ. ನಿರಕ್ಷರತೆ ಮರುಕಳಿಸದಿರುವಂತೆ ತಡೆಯುವುದಕ್ಕಾಗಿಯೇ ಸಾರ್ವಜನಿಕ ಗ್ರಂಥಾಲಯಗಳಿರುವುದು. ಆದರೆ ಎಲ್ಲ ಕಡೆಗಳಲ್ಲಿಯೂ ಪುಕ್ಕಟೆಯಾದ, ಗ್ರಂಥಸಂಪದ್ಭರಿತವಾದ ಗ್ರಂಥಾಲಯಗಳಿಲ್ಲದಿರುವುದರಿಂದ ಅಲ್ಪಸ್ವಲ್ಪ ಓದುಬರಹ ಕಲಿತವರಲ್ಲಿ ಕೂಡ ಕೆಲವರು ಮತ್ತೆ ಅನಕ್ಷರಸ್ಥರಾಗುತ್ತಿದ್ದಾರೆ. ನವ-ಅಕ್ಷರಸ್ಥರ ಹಾಗೂ ಇತರ ಅಕ್ಷರಸ್ಥರ ಅವಶ್ಯಕತೆಗಳಿಗೆ ಸರಿಹೊಂದುವ ಪುಸ್ತಕಗಳನ್ನು ಪ್ರಕಟಿಸಿ, ಅವು ಸಾಕಷ್ಟು ಪ್ರಮಾಣದಲ್ಲಿ ಸಾರ್ವಜನಿಕ ಗ್ರಂಥಾಲಯ ವಲಯದಲ್ಲಿ ದೊರಕುವಂತೆ ಮಾಡಬೇಕು. ಈ ಕೆಲಸ ಕದನ ಬಿರುಸಿನಲ್ಲಿ ಆಗಬೇಕು.

ತಕ್ಕಷ್ಟು ವಿದ್ಯಾವಂತರಾಗಿರುವವರ ಹಾಗೂ ಮನಸ್ಸಿನಲ್ಲಿ ಸಂಶೋಧನ ಪ್ರವೃತ್ತಿ ಈಗ ತಾನೆ ಅಂಕುರಿಸಿರುವವರ ಸಮಸ್ಯೆಯೂ ಗಂಭೀರವಾದುದು. ಅವರಿಗೆ ಪೋಷಣೆ ಮತ್ತು ಸಕಲ ರೀತಿಯ ನೆರವು ಅಗತ್ಯ. ಇದರಿಂದ ಅವರಿಗೆ ಆಯಾ ವಿಷಯದಲ್ಲಿ ಇನ್ನೂ ಹೆಚ್ಚು ಸಂಶೋಧನೆಯನ್ನು ನಡೆಸಲು ಹಾಗೂ ಉತ್ತಮ ಮಟ್ಟದ ಸಂಶೋಧನೆ ನಡೆಸಲು ಸಹಾಯವಾಗುತ್ತದೆ; ಅವರ ಮನಸ್ಸು ನಿಜವಾಗಿಯೂ ಮೌಲಿಕ ಚಿಂತನೆಯಲ್ಲಿ ತೊಡಗುತ್ತದೆ. ಪರಿಣಾಮವಾಗಿ ಇಡೀ ಜನಾಂಗ ಸುಸಂಸ್ಕೃತವಾಗುತ್ತದೆ. ಇದಕ್ಕೆ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ವಿಶಿಷ್ಟ ಬಗೆಯ ಗ್ರಂಥಾಲಯಗಳ ಸ್ಥಾಪನೆ ಮಾತ್ರವಲ್ಲದೆ ಈಗ ಇರುವ ಎಲ್ಲ ಗ್ರಂಥಾಲಯಗಳ ನಡುವೆ ಪರಸ್ಪರ ಸಹಕಾರವೂ ಅತ್ಯಗತ್ಯ. ಅಂತಿಮವಾಗಿ ಒಂದು ರಾಷ್ಟ್ರದ ಹಿರಿಮೆಯು ಎಲ್ಲ ವಿಷಯಗಳ ಮೇಲೆ ಆ ದೇಶದ ಸಂಶೋಧಕರು ಮಾಡುವ ಮೌಲಿಕ ಸಂಶೋಧನೆಯಿಂದ ಪ್ರತಿಬಿಂಬಿತವಾಗುತ್ತದೆ. ಸಂಪದ್ಭರಿತ ಗ್ರಂಥಾಲಯಗಳ ಹಾಗೂ ಅವುಗಳ ಸಹಕಾರದ ಮೂಲಕ ಮಾತ್ರ ಈ ಸಂಶೋಧಕರಿಗೆ ಅವರ ಶ್ರೇಷ್ಠಕಾರ್ಯದಲ್ಲಿ ನೆರವು ದೊರೆಯಬಹುದು.

ನಮ್ಮ ದೇಶ ವಿದೇಶೀ ವಾಚನ ಸಾಮಗ್ರಿಯನ್ನು ಕೊಳ್ಳಲು ಸುಮಾರು 10

ಕೋಟಿ ರೂ.ಗಳನ್ನು ವಿದೇಶೀ ವಿನಿಮಯ ರೂಪದಲ್ಲಿ ಖರ್ಚುಮಾಡುತ್ತಿವೆ. ಎಲ್ಲ ಗ್ರಂಥಾಲಯ ಬೇಡಿಕೆಗಳನ್ನೂ ಕ್ರೋಡೀಕರಿಸಿ ಈ ವಿದೇಶೀ ಸಾಮಗ್ರಿ ಸಂಗ್ರಹಣ ಸಮಸ್ಯೆಯನ್ನು ಇನ್ನೂ ಹೆಚ್ಚು ವೈಜ್ಞಾನಿಕವಾಗಿಯೂ ಸಹಕಾರಿತ್ವದಿಂದಲೂ ಎದುರಿಸಿದರೆ ನಾವು ಈ 10 ಕೋಟಿ ರೂ.ಗಳಿಂದ ನಮ್ಮ ಗ್ರಂಥಾಲಯಗಳಿಗೆ ಇನ್ನೂ ಉಪಯುಕ್ತವಾದ ವೈವಿಧ್ಯಮಯವಾದ ಸಂಗ್ರಹಗಳನ್ನು ಸಂಪಾದಿಸಬಹುದು. ಅಂತಹ ಯಾವುದೇ ವ್ಯವಸ್ಥೆಯ ಅಭಾವದಿಂದಾಗಿ ನಮ್ಮ ದೇಶದಲ್ಲಿ ದುಬಾರಿ ಬೆಲೆಯ ವಾಚನ ಸಾಮಗ್ರಿಗಳನ್ನು ಮತ್ತೆ ಮತ್ತೆ ಎಲ್ಲ ಗ್ರಂಥಾಲಯಗಳಿಗೂ ಕೊಳ್ಳಲಾಗುತ್ತಿದೆ; ಇದನ್ನು ನಿವಾರಿಸಬಹುದು. ಇದರಿಂದಲೇ ನಮ್ಮಲ್ಲಿರುವ ಸಂಗ್ರಹಗಳ ಗುಣಮಟ್ಟ ಇಳಿದು ಹೋಗಿರುವುದು.

ಪುಸ್ತಕಗಳೇ ವಿದ್ಯಾವಂತರನ್ನೂ ಸಂಶೋಧಕರನ್ನೂ ಸೃಷ್ಟಿಸುವಂಥದು ಎಂದೂ ಹೇಳಬಹುದು. ಒಳ್ಳೆಯ ಪುಸ್ತಕ ಸಂಗ್ರಹಗಳು–ಚೆನ್ನಾಗಿ ಆಯ್ದ ಪುಸ್ತಕಗಳು, ಪುರಾತನ ಕಾಲದಿಂದ ಈಗಿನವರೆಗೆ ಮಾನವ ಜನಾಂಗಕ್ಕೆ ತಿಳಿದಿರುವಂತಹ ಜ್ಞಾನಲೋಕವನ್ನೆಲ್ಲ ಪ್ರತಿಬಿಂಬಿಸುವಂತಹ ಪುಸ್ತಕಗಳು–ಮಹಾ ವಿದ್ವಾಂಸರ ಹಾಗೂ ಸಂಶೋಧಕರ ಸಮುದಾಯಕ್ಕೆ ಕಾಮಧೇನುವಾಗಬಹುದು. ನಮ್ಮ ದೇಶಕ್ಕೂ ನಮ್ಮ ಸರ್ಕಾರಕ್ಕೂ ಉತ್ತಮ ಭಾಪ್ರತಿವಂತರ ಹಾಗೂ ಉತ್ತಮ ಕಲ್ಪನೆ ಉಳ್ಳವರ ಅಗತ್ಯ ತೀವ್ರವಾಗಿದೆ. ನಮ್ಮಲ್ಲಿ ವ್ಯಾಪಕವೂ ವೈವಿಧ್ಯಮಯವೂ ಆದ ಗ್ರಂಥಸಂಪತ್ತು ಹಾಗೂ ಬೋಧನ ಮತ್ತು ಸಂಶೋಧನೆಗಳಿಗೆ ಅನುರೂಪವಾದ ಗ್ರಂಥಾಲಯ ಸೇವೆ ಇದ್ದಲ್ಲಿ ಇಂಥವರನ್ನು ಸರಾಗವಾಗಿ ಒದಗಿಸಿಕೊಳ್ಳಬಹುದು.

[ಅನುವಾದ : ಬಾ. ವೇ. ಶ್ರೀಧರ

೪ ವಿಶ್ವವಿದ್ಯಾನಿಲಯ ಶಿಕ್ಷಣ ಮತ್ತು ಗ್ರಂಥಾಲಯಗಳು

ಶಿಕ್ಷಣಕ್ಕೆ ಪುಸ್ತಕಗಳು ಮುಖ್ಯ

ಶಿಕ್ಷಣದ ಬಗ್ಗೆ ಮಾತನಾಡುತ್ತ ಇಂಗ್ಲಿಷ್ ಸಾಹಿತ್ಯದ ಸಮ್ರಾಟನಾದ ಡಾ ಸ್ಯಾಮ್ಯುಯಲ್ ಜಾನ್‌ಸನ್ ಒಮ್ಮೆ ಹೀಗೆ ಹೇಳಿದ್ದಾನೆ: "ಪುಸ್ತಕಗಳಿಂದಾಗುವಷ್ಟು ಉಪಯೋಗ ಉಪನ್ಯಾಸಗಳಿಂದ ಆಗುತ್ತದೆಂದು ನನಗೆ ತೋರುವುದಿಲ್ಲ. ಏಕೆಂದರೆ ಈ ಉಪನ್ಯಾಸಗಳು ಕೂಡ ಪುಸ್ತಕಗಳಿಂದಲೇ ತೆಗೆದುಕೊಂಡವು. ಪ್ರಯೋಗಗಳ ಮೂಲಕ ಕಲಿಸುವ ವಿಷಯಗಳನ್ನು ಉಪನ್ಯಾಸಗಳಿಂದ ಕಲಿಸಬಹುದೇ ಹೊರತು ಬೇರೇನನ್ನೂ ಅವುಗಳಿಂದ ಕಲಿಸಲಾಗುವುದಿಲ್ಲ."[1] ಉನ್ನತ ಶಿಕ್ಷಣ ವಲಯದಲ್ಲಿ ಪುಸ್ತಕಗಳು, ಗ್ರಂಥಾಲಯಗಳು ಇವುಗಳ ಉಪಯುಕ್ತತೆಯನ್ನು ಕುರಿತು ಏನೆಲ್ಲ ಹೇಳಬಹುದೋ ಅದೆಲ್ಲ ಈ ಸೂತ್ರಪ್ರಾಯವಾದ ಮಾತಿನಲ್ಲಿ ಅಡಕವಾಗಿದೆ. ಒಳ್ಳೆಯ ಉಪಾಧ್ಯಾಯ ತನ್ನ ಶಿಷ್ಯರ ಮನಸ್ಸಿನ ಮೇಲೆ ಪರಿಣಾಮವನ್ನು ಬೀರುತ್ತಾನೆ. ಅವನು ಅವರವರ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚು ಹೆಚ್ಚು ಓದುವಂತೆ ಅದರಲ್ಲಿ ಜ್ಞಾನತೃಷೆಯನ್ನು ಪ್ರದೀಪಿಸುತ್ತಾನೆ; ಅವರು ಸೃಜನಾತ್ಮಕ ಲೇಖಕರಾಗುವಂತೆ ಅವರಲ್ಲಿ ಚೈತನ್ಯ ತುಂಬುತ್ತಾನೆ. ಉತ್ತಮ ಉಪಾಧ್ಯಾಯರಾಗುವುದು ಹುಟ್ಟಿನಿಂದ, ಶಿಕ್ಷಣದಿಂದಲ್ಲ. ನಮ್ಮಲ್ಲಿ ಬಹುತೇಕ ಉಪಾಧ್ಯಾಯರು ತಮ್ಮ ಉಪನ್ಯಾಸಗಳ ಮೂಲಕ ವಿದ್ಯಾರ್ಥಿಗಳಿಗೆ ವಿಷಯದ ಬಗ್ಗೆ ಸ್ವಲ್ಪಮಟ್ಟಿನ ತಿಳಿವಳಿಕೆ ನೀಡಬಲ್ಲರು, ಅಷ್ಟೆ. ಆದ್ದರಿಂದ ವಿದ್ಯಾರ್ಥಿಗಳು ತರಗತಿಯ ಪಾಠದಷ್ಟಕ್ಕೆ ತೃಪ್ತರಾಗದೆ ಅವರವರ ವಿಷಯಗಳಿಗೆ ಸಂಬಂಧಿಸಿದ ವಿಶಾಲವೂ ವಿಪುಲವೂ ಆಗಿರುವ ಗ್ರಂಥಸಂಪತ್ತನ್ನು ಅರಗಿಸಿಕೊಳ್ಳಬೇಕು. ಈಗಿನ ಕಾಲದಲ್ಲಿ ಪುಸ್ತಕ ಸಂಗ್ರಹವೇ ನಿಜವಾದ ವಿಶ್ವವಿದ್ಯಾನಿಲಯ, ಎಂದು ಕಾರ್ಲೈಲ್ ಹೇಳಿದಾಗ ಅವನ ಮನಸ್ಸಿನಲ್ಲೂ ಇದೇ ಭಾವನೆ ಇತ್ತು.

ಪ್ರೌಢ ಶಿಕ್ಷಣಕ್ಕೆಲ್ಲ ಪುಸ್ತಕಗಳು ಅತಿಮುಖ್ಯವೆಂದು ಡಾ. ಜಾನ್‌ಸನ್ ಹಾಗೂ ಕಾರ್ಲೈಲ್ ಇಬ್ಬರೂ ಒಪ್ಪಿದರೂ ಇದು ಎಲ್ಲ ಶಿಕ್ಷಣತಜ್ಞರ ಅನುಭವಕ್ಕೆ ಬಂದಿರುವ

---

1 'I cannot see that !actures can do so much good as the reading of books from which the lectures are taken. I know nothing that can best be tought by lectures. except where experiments are to be shown.

2 'The true university of these days is a collection of books.

ಸಂಗತಿ. ಅವರು ಹೇಳಿರುವುದೂ ಇದನ್ನೇ. ಗ್ರಂಥಗಳ ಅದ್ಭುತ ಸ್ವಾರಸ್ಯದಿಂದ ತರುಣರ ಮನಸ್ಸನ್ನು ಉದ್ದೀಪನಗೊಳಿಸುವುದು, ತನ್ಮೂಲಕ ಅವರಿಗೆ ತಮ್ಮ ಉನ್ನತ ವಿದ್ಯಾಭ್ಯಾಸದ ಹಿರಿಯಾಸೆಗಳನ್ನು ಈಡೇರಿಸಿಕೊಳ್ಳುವಂತೆ ಮಾಡುವುದು ಮಾತ್ರವಲ್ಲದೆ ಇಡೀ ಆಯುಷ್ಯವೆಲ್ಲ ಅವರಲ್ಲಿ ಉತ್ತಮ ಗ್ರಂಥಾವಲೋಕನದ ಅಭಿರುಚಿ ಮೂಡಿಸುವುದು–ಇವೇ ಉನ್ನತ ವಿದ್ಯಾಭ್ಯಾಸದ ಮುಖ್ಯ ಗುರಿ. ವಿಶ್ವವಿದ್ಯಾನಿಲಯವನ್ನು ಪ್ರವೇಶಿಸುವ ಎಲ್ಲ ಯುವಕ ಯುವತಿಯರೂ ಅದರಿಂದ ಹೊರಬರುವಾಗ ತಮ್ಮ ಬಾಳಿನಲ್ಲಿ ಪುಸ್ತಕ ಪ್ರೇಮವನ್ನು ಹಾಸುಹೊಕ್ಕಾಗಿ ಬೆಳೆಸಿಕೊಳ್ಳಬೇಕು.

ವಿದ್ಯಾಭ್ಯಾಸ ಶುದ್ಧಾಂಗವಾಗಿ ಗುರುಪ್ರಧಾನವಾದ ಕಾಲವೊಂದಿತ್ತು. ವೇದಕಾಲೀನ ಭಾರತದಲ್ಲಿ ಜ್ಞಾನಪ್ರಸಾರ ಬಾಯಿಂದ ಬಾಯಿಗೆ ಆಗುತ್ತಿತ್ತು. ಪ್ರಾಚೀನ ಭಾರತೀಯರಿಗೆ ಉನ್ನತ ಶಿಕ್ಷಣ ಗುರುಮುಖೇನ ಆಗುತ್ತಿತ್ತು. ಈ ಭಾವನೆ ಎಷ್ಟು ಗಾಢವಾಗಿತ್ತೆಂಬುದನ್ನು ಮಹಾಭಾರತದಲ್ಲಿ ಬರುವ ಏಕಲವ್ಯ ಉಪಾಖ್ಯಾನದಿಂದ ತಿಳಿಯಬಹುದು. ಬೇಡರ ಮಗನಾದ ಏಕಲವ್ಯನಿಗೆ ಕೌರವರ ಮತ್ತು ಪಾಂಡವರ ರಾಜಗುರುವಾದ ದ್ರೋಣಾಚಾರ್ಯರು ಬಿಲ್ವಿದ್ಯೆಯನ್ನು ಹೇಳಿಕೊಡಲು ಒಪ್ಪಲಿಲ್ಲ. ಏಕಲವ್ಯನಿಗೆ ಇದರಿಂದ ತುಂಬ ನಿರಾಶೆಯಾಯಿತು. ಆದರೆ ಆತ ಎದೆಗುಂದಲಿಲ್ಲ. ತಾನೇ ದ್ರೋಣಾಚಾರ್ಯರ ಪ್ರತಿಮೆಯನ್ನು ನಿರ್ಮಿಸಿ ಅದರ ಆಸರೆಯಲ್ಲಿ ಬಿಲ್ವಿದ್ಯೆಯನ್ನು ಕಲಿಯಲಾರಂಭಿಸಿದ. ಈಗಲೂ ಪ್ರಾಥಮಿಕ ಹಾಗೂ ಸೆಕೆಂಡರಿ ಹಂತಗಳಲ್ಲಿ ವಿದ್ಯಾಭ್ಯಾಸ ಗುರುಪ್ರಧಾನವಾಗಿಯೇ ಉಳಿದಿದೆ. ಆದರೆ ವಿಜ್ಞಾನ ಹಾಗೂ ತಾಂತ್ರಿಕ ಕ್ಷೇತ್ರಗಳ ತ್ವರಿತ ಪ್ರಗತಿಯಿಂದಲೂ ತತ್ಪರಿಣಾಮವಾಗಿ ಲೋಕ ಸಂಕುಚಿತವಾಗುವುದರಿಂದಲೂ ಪ್ರಜಾಪ್ರಭುತ್ವದ ಆಗಮನ ಹಾಗೂ ಕೈಗಾರಿಕಾ ಕ್ರಾಂತಿಗಳಿಂದಲೂ ವಿದ್ಯಾಭ್ಯಾಸ, ಅದರಲ್ಲೂ ಉನ್ನತ ವಿದ್ಯಾಭ್ಯಾಸ, ಗುರುಪ್ರಧಾನವಾಗಿರಲು ಇನ್ನು ಸಾಧ್ಯವೇ ಇಲ್ಲ.

ಈಚೆಗೆ, 19ನೆಯ ಶತಮಾನದ ಕೊನೆಯ ದಶಕದಲ್ಲೊ, ಬ್ರಸೆಲ್ಸ್‌ನ ಇಬ್ಬರು–ಬ್ಯಾರಿಸ್ಟರುಗಳಾದ ಪಾಲ್ ಅಟ್ಲೆಟ್ ಮತ್ತು ಹೆನ್ರಿ ಲಾ ಫಾಂಟೇನ್–ಆಗಿನ ಸಕಲ ಜ್ಞಾನ ಸಂಪತ್ತನ್ನೂ ತಮ್ಮದಾಗಿಸಿಕೊಳ್ಳುವ ವ್ಯರ್ಥ ಕನಸನ್ನು ಕಂಡರು. ಆದರೆ ಜ್ಞಾನದ ಎಲ್ಲೆಗೆ ಮಿತಿಯೇ ಇಲ್ಲ. ಯಾವ ಶಿಕ್ಷಕನಿಗೇ ಆದರೂ ತನ್ನ ಕ್ಷೇತ್ರದಲ್ಲಿ ತಿಳಿಯಬೇಕಾದುದೆಲ್ಲವನ್ನೂ ತಿಳಿಯಲು ಸಾಧ್ಯವಿಲ್ಲ.

ಯುವಕಯುವತಿಯರು ವಿಶ್ವವಿದ್ಯಾನಿಲಯವನ್ನೋ ಕಾಲೇಜನ್ನೋ ಪ್ರವೇಶಿಸುವಾಗ ಅವರು ಮೂರು ಮುಖ್ಯ ಬದಲಾವಣೆಗಳನ್ನು ಎದುರಿಸಬೇಕಾಗುತ್ತದೆ. ಮೊದಲ ಬದಲಾವಣೆಯೆಂದರೆ ಬೋಧನ ಮಾಧ್ಯಮ ಮಾತೃಭಾಷೆಯಿಂದ ಇಂಗ್ಲೀಷ್ ಭಾಷೆಗೆ ಬದಲಾಗುವುದು. ಆದರೆ ಈಗ ಮಾತೃಭಾಷೆಯ ಮೂಲಕ ಪಾಠಗಳನ್ನು ಹೇಳಿಕೊಡಬೇಕೆಂಬ ಪ್ರಬಲವಾದ ಪ್ರವೃತ್ತಿಯೇನೋ ಇದೆ. ಈ ಒಂದು ಮುಖ್ಯ ಬದಲಾವಣೆ ಶಿಕ್ಷಣತಜ್ಞರ ಇತ್ತೀಚಿನ ವೈಚಾರಿಕತೆಯಿಂದ ಆದದ್ದು. ಆದರೂ ಈಗಲೂ ಬೋಧನೆಯನ್ನೂ ಪರೀಕ್ಷೆಗಳನ್ನೂ ಇಂಗ್ಲೀಷ್ ಮಾಧ್ಯಮದಲ್ಲಿ ನಡೆಸುವ ಅನೇಕ ವಿಶ್ವವಿದ್ಯಾ

ಲಯುಗಳೂ ಉನ್ನತ ಶಿಕ್ಷಣ ಸಂಸ್ಥೆಗಳೂ ಇವೆ. ಶೀಘ್ರದಲ್ಲೇ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳೂ ಪ್ರಾದೇಶಿಕ ಭಾಷಾ ಮಾಧ್ಯಮಕ್ಕೆ ತಿರುಗಲು ತೀರ್ಮಾನಿಸಿದರೂ ಇಂಗ್ಲಿಷ್ ಭಾಷೆ ಗ್ರಂಥಾಲಯ ಮಾಧ್ಯಮವಾಗಿ ಮುಂದುವರಿಯುತ್ತದೆ. ನಮ್ಮ ಗ್ರಂಥಾಲಯ ಗಳಲ್ಲಿ ಸೇಕಡ 60ರಿಂದ 70ರಷ್ಟು ಪುಸ್ತಕಗಳು ಮತ್ತು ನಿಯತಕಾಲಿಕಗಳು ಇಂಗ್ಲಿಷ್ ಭಾಷೆಯಲ್ಲಿವೆ. ತನ್ನ ವಿಷಯದಲ್ಲಿ ನೈಪುಣ್ಯ ಸಂಪಾದಿಸಬಯಸುವ ವಿದ್ಯಾರ್ಥಿ ಅನಿವಾರ್ಯವಾಗಿ ಈ ಇಂಗ್ಲಿಷ್ ಪುಸ್ತಕಗಳಿಗೇ ಶರಣುಹೋಗಬೇಕಾಗುತ್ತದೆ. ಅಲ್ಲದೆ ವಿಶ್ವದ ಪ್ರಧಾನ ಭಾಷೆಯಾಗಿ ಇಂಗ್ಲಿಷ್ ಭಾಷೆ ಬಾಹ್ಯಪ್ರಪಂಚವನ್ನರಿಯಲು ತೆರೆದ ಕಿಟಕಿಯಂತಿದೆ, ಪ್ರಪಂಚದ ಜ್ಞಾನಕ್ಕೆ ಅದೇ ಭಂಡಾರ, ಇಂದಿನವರೆಗೂ ಬೆಳೆದುಬಂದಿರುವ ಜ್ಞಾನಕ್ಕೆ ಹೊಂದಿಕೊಳ್ಳಲು ಉಪಾಧ್ಯಾಯ ಅಧ್ಯಯನ ಮಾಡಬೇಕಾಗಿ ಬರುತ್ತದೆ.

ವಿದ್ಯಾರ್ಥಿಗಳು ಎದುರಿಸಬೇಕಾದ ಎರಡನೆಯ ಬದಲಾವಣೆಯೆಂದರೆ ಬೋಧನ ವಿಧಾನ. ಪ್ರೌಢಶಾಲಾ ಮಟ್ಟದಲ್ಲಿ ಅವರಿಗೆ ಉಪಾಧ್ಯಾಯರು ಚಮಚೆ ಪೋಷಣೆಯನ್ನು ಅಭ್ಯಾಸ ಮಾಡಿಬಿಟ್ಟಿರುತ್ತಾರೆ. ಆದರೆ ಕಾಲೇಜು ಅಥವಾ ವಿಶ್ವವಿದ್ಯಾಲಯ ಮಟ್ಟದಲ್ಲಿ ಅವರು ಹೆಚ್ಚು ಸ್ವಾವಲಂಬಿಗಳಾಗಬೇಕಾಗುತ್ತದೆ. 50 ಅಥವಾ 60 ನಿಮಿಷಗಳ ಅವಧಿಯಲ್ಲಿ ಉಪಾಧ್ಯಾಯರು ಒಂದು ವಿಷಯಕ್ಕೆ ಸಂಬಂಧಿಸಿದಂತೆ ಅದರ ಸ್ಥೂಲ ವಿವರ ನೀಡಬಹುದು, ಅಷ್ಟೆ. ವಿಷಯದ ಆಳವೂ ವಿಸ್ತಾರವೂ ಆದ ಜ್ಞಾನ ಸಂಪಾದಿಸಲು ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ಹೋಗಿ ಅಗತ್ಯ ಮಾಹಿತಿಯನ್ನು ಗ್ರಂಥ ಮೊದಲಾದವುಗಳಿಂದ ಸಂಗ್ರಹಿಸಬೇಕು. ಇತರ ಎಲ್ಲ ಉಪನ್ಯಾಸಗಳಂತೆ ತರಗತಿಯ ಪಾಠ ಪ್ರವಚನಗಳೂ, ಹೆಚ್ಚೆಂದರೆ, ಕೈಮರಗಳಾಗಿ ವರ್ತಿಸಬಲ್ಲವು, ಅಷ್ಟೆ. ನಿಜವಾದ ಕಲಿಕೆಯನ್ನು ಗ್ರಂಥಾಲಯ ಸಿಬ್ಬಂದಿಗಳ ಸಹಾಯದಿಂದ ಗ್ರಂಥಾಲಯದಲ್ಲಿ ಮಾಡಬೇಕು.

ಕಾಲೇಜಿಗೆ ಹೋಗುವ ತರುಣರು ಎದುರಿಸುವ ಮೂರನೆಯ ಬದಲಾವಣೆಯೆಂದರೆ ಅಧ್ಯಯನ ವಿಷಯಗಳ ಸ್ವರೂಪ. ಇವು ಒಮ್ಮೆಲೇ ಬದಲಾಗಿ ಪ್ರೌಢಶಾಲೆಗಳಲ್ಲಿನ ಮಟ್ಟಕ್ಕಿಂತ ವ್ಯಾಪಕವಾಗಿರುತ್ತವೆ. ಅಂದರೆ ಇಲ್ಲಿನ ಕಲಿಕೆ ಹೆಚ್ಚು ಹೆಚ್ಚು ಪುಸ್ತಕ ಕೇಂದ್ರಿತವಾಗಿರಬೇಕು ಎಂದರ್ಥ. ನಾನು ಪುಸ್ತಕ ಕೇಂದ್ರಿತ ಎಂದಾಗ ಕೇವಲ ಪಠ್ಯ ಪುಸ್ತಕ ಕೇಂದ್ರಿತ ಎಂದರ್ಥವಲ್ಲ, ಉನ್ನತ ವಿದ್ಯಾಭ್ಯಾಸದ ಗುರಿ ಎಂದರೆ ವಿದ್ಯಾರ್ಥಿಗಳನ್ನು ಒಂದೆರಡು ಪುಸ್ತಕಗಳಿಂದ, ಅಂದರೆ ಕೇವಲ ಪಠ್ಯಪುಸ್ತಕಗಳಿಂದ, ಇತರ ತತ್ಸಂಬಂಧವಾದ ಸೋಜಿಗವಾದ ಪುಸ್ತಕ ಲೋಕಕ್ಕೆ ಒಯ್ದು ಅವರಿಗೆ ಆಯಾ ವಿಷಯಗಳಲ್ಲಿ ವಿಸ್ತಾರವೂ ಆಳವೂ ವೈವಿಧ್ಯಪೂರ್ಣವೂ ಆದ ಜ್ಞಾನ ದೊರಕಿಸಿಕೊಡುವುದು. ಈ ಮಾರ್ಗ ತುಂಬ ಬುದ್ಧಿವಂತರಾದ ವಿದ್ಯಾರ್ಥಿಗಳಿಗೆ ಹೊಸ ಹೊಸ ಸಂಶೋಧನೆ ಮಾಡಲು, ಸದ್ಯದ ಅಭಿಪ್ರಾಯಗಳನ್ನು ಬದಲಾಯಿಸಲು ಇಲ್ಲವೆ ಆಧುನಿಕ ಬೆಳವಣಿಗೆಗಳ ಬೆಳಕಿನಲ್ಲಿ ಹಳೆಯ ಭಾವನೆಗಳನ್ನು ಪುನರ್ವ್ಯಾಖ್ಯಾನಿಸಲು ಪ್ರೇರಿಸುತ್ತದೆ: ಅಂದರೆ, ತರುಣ ಮನಸ್ಸುಗಳನ್ನು ಪುಸ್ತಕಗಳಿಗೆ ಒಡ್ಡುವುದರಿಂದ ವಿದ್ಯಾರ್ಥಿಗಳಲ್ಲಿ ವಿಮರ್ಶಾ ದೃಷ್ಟಿ, ಕುದುರುತ್ತದೆ: ಇದರಿಂದ ಅವರು ವಿದ್ಯಾಕ್ಷೇತ್ರದಲ್ಲಿ ಉನ್ನತ ಶಿಖರವನ್ನೇರ

ಬಹುದು; ಅವರಿಗೆ ವಿಷಯದ ತಳಸ್ಪರ್ಶಿ ಅನುಭವವೂ ಆಗುವುದು.

ಉನ್ನತ ಶಿಕ್ಷಣಕ್ಕೆ ಗ್ರಂಥಗಳೂ ಗ್ರಂಥಾಲಯಗಳೂ ಕಮಾನಿಗೆ ತಲೆಗಂಬದಂತಿವೆ ಎಂಬುದು ಮೇಲೆ ಹೇಳಿದ್ದರಿಂದ ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಮೇಲಿಂದ ಮೇಲೆ ಬಂದ ನಿಯೋಗಗಳು ತಮ್ಮ ವಿದ್ವತ್ಪೂರ್ಣವಾದ ಭಾರಿ ಭಾರಿ ವರದಿಗಳಲ್ಲಿ ಗ್ರಂಥಾಲಯವನ್ನು ವಿಶ್ವವಿದ್ಯಾಲಯುವ ಹೃದಯ, ವಿದ್ಯಾವಂತರ ಕಾರ್ಯಾಗಾರ, ಪಂಡಿತರ ಪ್ರಯೋಗಾಲಯ ಎಂಬಿವೇ ಮೊದಲಾದ ಮಾತುಗಳಿಂದ ವಿವರಿಸಿರುವುದರಲ್ಲಿ ಆಶ್ಚರ್ಯವೇ ಇಲ್ಲ. ನಾನು ಈಗ ಒಂದು ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳೇನೆಂಬುದನ್ನು ನೋಡಿ, ಒಂದು ಒಳ್ಳೆಯ ಗ್ರಂಥಾಲಯವಿಲ್ಲದೆ ಈ ಧ್ಯೇಯೋದ್ದೇಶಗಳನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವೇ ಇಲ್ಲವೆಂದು ಮನವೊಪ್ಪುವಂತೆ ಸ್ಥಿರೀಕರಿಸುತ್ತೇನೆ.

ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು

1. ಅನಾದಿಕಾಲದಿಂದ ಮಾನವಕುಲ ಸಂಪಾದಿಸಿದ ಜ್ಞಾನರಾಶಿಯನ್ನು ಕಾಪಾಡುವುದು.

2. ಈ ಜ್ಞಾನವನ್ನು ತನ್ನ ಬೋಧನ, ಪ್ರಕಟಣ ಮತ್ತು ವಿಸ್ತರಣ ಯೋಜನೆಗಳಿಂದ ಪ್ರಸಾರ ಮಾಡುವುದು.

3. ತನ್ನ ಉಪಾಧ್ಯಾಯರು ಹಾಗೂ ಇತರ ಸಂಶೋಧಕರ ಸಂಶೋಧನ ಕಾರ್ಯದಿಂದ ಜ್ಞಾನದ ಎಲ್ಲೆಯನ್ನು ವಿಸ್ತರಿಸುವುದು.

4. ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಅತ್ಯುನ್ನತ ಶೈಕ್ಷಣಿಕ ಗೌರವ ದೊರಕಲು ಸಹಾಯ ಮಾಡಿ ಅವರಿಗೆ ಅಜೀವಪರ್ಯಂತ ಒಳ್ಳೆಯ ಗ್ರಂಥಗಳನ್ನು ಓದಲು ಅವಕಾಶ ಮಾಡಿಕೊಡುವುದು.

ಮೂಲಸಂಸ್ಥೆಯ, ಅಂದರೆ ವಿಶ್ವವಿದ್ಯಾಲಯದ, ಮೊದಲ ಧ್ಯೇಯ ಸಾಧಿಸಲು ವಿಶ್ವವಿದ್ಯಾಲಯ ಗ್ರಂಥಾಲಯವು ಗ್ರಂಥಗಳನ್ನೂ ತತ್ಸಂಬಂಧವಾದ ಸಾಮಗ್ರಿಗಳನ್ನೂ ಭಾರಿ ಪ್ರಮಾಣದಲ್ಲಿ ಸಂಗ್ರಹಿಸುತ್ತ ಹೋಗುತ್ತದೆ. ಮಾನವಕುಲ ಸಂಪಾದಿಸಿದ ಸಕಲ ಜ್ಞಾನರಾಶಿಯೂ ಇಲ್ಲಿಯವರೆಗೆ ಪ್ರಕಟವಾಗಿರುವ ಪುಸ್ತಕಗಳಲ್ಲಡಗಿದೆ. ವಿಶ್ವವಿದ್ಯಾಲಯ ಗ್ರಂಥಾಲಯ ಅತ್ಯುತ್ತಮ ವರಣ ನೀತಿಯನ್ನು ಅವಲಂಬಿಸಿ ಶ್ರೇಷ್ಠ ವಾಚನ ಹಾಗೂ ಪರಾಮರ್ಶನ ಸಾಮಗ್ರಿಯನ್ನು ಸಂಗ್ರಹಿಸುತ್ತದೆ. ಈ ಜ್ಞಾನದ ಶಕ್ತ್ಯಾಗಾರದ ಶಕ್ತಿಸಂಚಯ ಹೆಚ್ಚುತ್ತಾ ಹೋಗುತ್ತದೆ. ಈ ಕಾರಣದಿಂದಲೇ ವಿಶ್ವವಿದ್ಯಾಲಯದ ಗ್ರಂಥಾಲಯಗಳನ್ನು "ಮುಕ್ತಸಂಗ್ರಹ"ಗಳೆಂದು ಕರೆಯುವುದು.

ಒಂದು ವಿಶ್ವವಿದ್ಯಾಲಯದಲ್ಲಿ ಜ್ಞಾನಪ್ರಸಾರವನ್ನು ಬೋಧನ, ಪ್ರಕಟಣ ಮತ್ತು ವಿಸ್ತರಣ ಯೋಜನೆಗಳ ಮೂಲಕ ಮಾಡಲಾಗುವುದು.

ಪುಸ್ತಕಗಳನ್ನು 'ಶಿಕ್ಷಕನ ಶಿಕ್ಷಕ' ಎಂದು ವಿವರಿಸಲಾಗಿದೆ. ಚೆನ್ನಾಗಿ ಶಿಕ್ಷಣ ನೀಡ

ಬಯಸುವ ಶಿಕ್ಷಕರು ತಮಗೆ ಸಂಬಂಧಪಟ್ಟ ವಿಷಯದ ಬಗೆಗೆ ಹಳೆಯ ಹಾಗೂ ಇತ್ತೀಚಿನ ಮಾಹಿತಿಗಳುಳ್ಳ ಗ್ರಂಥಗಳನ್ನೂ ನಿಯತಕಾಲಿಕಗಳನ್ನೂ ಸದಾ ನೋಡುತ್ತಿರಬೇಕು. ಪುಸ್ತಕಗಳು ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಒಂದೇ ರೀತಿಯಲ್ಲಿ ಹೊಸ ಹೊಸ ಅಭಿಪ್ರಾಯಗಳನ್ನೂ ಭಾವನೆಗಳನ್ನೂ ಕೊಡುತ್ತವೆ; ಅವು ಅವರಿಗೆ ತಿಳಿವಳಿಕೆ ನೀಡುತ್ತವೆ, ಸ್ಫೂರ್ತಿ ನೀಡುತ್ತವೆ.

ಸಂಶೋಧನೆ ಹಾಗೂ ಜನಪ್ರಿಯ ಪ್ರಕಟಣೆಗಳ ಮೂಲಕ ವಿಶ್ವವಿದ್ಯಾಲಯ ಜ್ಞಾನ ಪ್ರಸಾರ ಮಾಡುತ್ತದೆ. " ಪ್ರಕಟಿಸಿ ಇಲ್ಲವೆ ಅಳಿಯಿರಿ " ಇದು ವಿದ್ವತ್ ಲೋಕದ ಘೋಷಣೆ. ಪ್ರಕಟಣೆಗಳು ಶಿಕ್ಷಕರ ವಾಚನ, ಮನನ, ಲೇಖನ ಹಾಗೂ ಶೈಕ್ಷಣಿಕ ಪ್ರಯತ್ನಗಳೆಲ್ಲದರ ಫಲಶ್ರುತಿ. ತಾನು ಬರೆಯಬೇಕಾದ ವಿಷಯದ ಮೇಲೆ ಇರುವ ಗ್ರಂಥಗಳನ್ನೆಲ್ಲ ತಿರುವಿಹಾಕುವುದರಿಂದ ಲೇಖಕನಿಗೆ ಒಂದು ಪರಿಪ್ರೇಕ್ಷ್ಯ ದೊರಕುತ್ತದೆ; ಇದರಿಂದ ಅವನಿಗೆ ನಿಜವಾಗಿಯೂ ಉಪಯುಕ್ತವಾದ ಒಂದು ಪುಸ್ತಕ ಬರೆದು ಪ್ರಕಟಿಸಲು ಸಾಧ್ಯವಾಗುತ್ತದೆ. ಇಂಥ ಒಂದು ಸಮೀಕ್ಷೆ ಅವನಿಗೆ ಒಂದು ಹಿನ್ನೆಲೆ ಕೊಡುತ್ತದೆ. ಅಲ್ಲದೆ ಅವನಿಗೆ ಇದು ಹಳೆಯ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲು ಹೊಸದೊಂದು ದಾರಿ ಹಾಕಿಕೊಳ್ಳಲೂ ನೆರವಾಗುತ್ತದೆ.

ಜನಸಾಮಾನ್ಯನ ಮನೆ ಬಾಗಿಲಿಗೆ, ಜ್ಞಾನದೀವಿಗೆಯನ್ನು ಒಯ್ಯುವ ಪ್ರಯತ್ನದಲ್ಲಿ ವಿಶ್ವವಿದ್ಯಾಲಯ ತನ್ನ ಪ್ರಕಟಣೆಗಳ ಮಾರಾಟ ನಡೆಸುತ್ತದೆ, ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟ ಕಡೆಗಳಲ್ಲೆಲ್ಲ ಜನಪ್ರಿಯವೂ ವಿದ್ವತ್ಪೂರ್ಣವೂ ಆದ ಉಪನ್ಯಾಸಗಳನ್ನು ಏರ್ಪಡಿಸುತ್ತದೆ, ತನ್ನ ಪ್ರಕಟಣೆಗಳಲ್ಲಿ ಕೆಲವನ್ನು ಆಯ್ದು ಪಟ್ಟಣಗಳಿಗೂ ಊರುಕೇರಿಗಳಿಗೂ ತೆಗೆದುಕೊಂಡು ಹೋಗಿ ಅವುಗಳನ್ನು ಅಗತ್ಯವಿರುವವರಿಗೆ ಎರವಲಾಗಿ ಕೊಡುತ್ತದೆ; ಅದು ಕಾಲಕಾಲಕ್ಕೆ ಪುಸ್ತಕ ಪ್ರದರ್ಶನಗಳನ್ನು ಏರ್ಪಡಿಸಬಹುದು, ಸರ್ಕ್ಯುಲೇಟಿಂಗ್ ಗ್ರಂಥಾಲಯಗಳನ್ನು ತೆರೆಯಬಹುದು.

ಅಲ್ಲದೆ, ವಿಶ್ವವಿದ್ಯಾಲಯ ಗ್ರಂಥಾಲಯಗಳು ವಿದ್ಯುತ್ ಪರಿವರ್ತಕಗಳಂತೆ ಕೆಲಸ ಮಾಡುತ್ತವೆ. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಶಕ್ತಿಸಂಚಯಗಳಾದ ಗ್ರಂಥಾಲಯಗಳ ಶಕ್ತಿಯನ್ನು ಉಪಯೋಗಿಸಿಕೊಂಡು ಹೆಚ್ಚು ಶಕ್ತಿಯನ್ನೋ, ಆ ಶಕ್ತಿಯ ಇನ್ನೊಂದು ರೂಪವನ್ನೋ ಉತ್ಪತ್ತಿಮಾಡುತ್ತಾರೆ. ಅವರ ಓದಿನ ಫಲವಾಗಿ ಅವರೇ ಹೊಸ ಸಿದ್ಧಾಂತಗಳನ್ನು ಮಂಡಿಸುತ್ತಾರೆ, ಬದಲಾವಣೆಗಳನ್ನು ಸೂಚಿಸುತ್ತಾರೆ; ಮತ್ತು ಇವುಗಳೆಲ್ಲ ಪುಸ್ತಕಗಳ, ನಿಯತಕಾಲಿಕಗಳ ಲೇಖನಗಳ ಮತ್ತಿತರ ಪ್ರಕಟಣೆಗಳ ರೂಪದಲ್ಲಿ ಬೆಳಕು ಕಾಣುತ್ತವೆ. ಪುಸ್ತಕಗಳಿಲ್ಲದೆ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಅನ್ನಿಸಿಕೊಳ್ಳುವ ಯಾವ ಕೆಲಸವೂ ನಡೆಯುವುದಿಲ್ಲ.

ಕೊನೆಯದಾಗಿ, ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಂದ ವಿಶ್ವವಿದ್ಯಾಲಯದ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ವಿದ್ವತ್ಪ್ರಪಂಚದಲ್ಲಿ ಅತಿ ಹೆಚ್ಚಿನ ಮಾನ್ಯತೆ ಪಡೆಯಲು ಸಹಾಯವಾಗುತ್ತದೆ. ವಿದ್ಯಾರ್ಥಿಗಳು ಎಷ್ಟೆಷ್ಟು ಗ್ರಂಥಾಲಯ ಸಂಪತ್ತಿನ ಪ್ರಯೋಜನ

ಪಡೆದುಕೊಳ್ಳುತ್ತಾರೋ, ಅಷ್ಟಷ್ಟೂ ಅವರು ತಮ್ಮ ಪರೀಕ್ಷೆಗಳಲ್ಲಿ ಚೆನ್ನಾಗಿ ಮಾಡಬಹುದು. ಆದುದರಿಂದಲೇ ಉನ್ನತ ಶಿಕ್ಷಣವನ್ನು "ಆಧುನಿಕ ಗ್ರಂಥಾಲಯದ ಪರಮ ಪ್ರಯೋಜನ ಪಡೆಯುವ ಕಲೆ" ಎಂದು ಹೇಳುವುದು.

ಈ ಹಿನ್ನೆಲೆಯಿಂದ ನಾವು ಅಮೆರಿಕ ಹಾಗೂ ಭಾರತೀಯ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳನ್ನು ಅವಲೋಕಿಸೋಣ.

ಅಮೆರಿಕ ಹಾಗೂ ಭಾರತ ವಿಶ್ವವಿದ್ಯಾಲಯ ಗ್ರಂಥಾಲಯಗಳ ನೋಟ

ಹಲವು ವರ್ಷಗಳ ಹಿಂದೆ ನನಗೆ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಭೇಟಿನೀಡುವ ಸುಯೋಗ ಒದಗಿತು. ಅದನ್ನು "ಗ್ರಂಥಾಲಯಗಳ ನಾಡು". ಎಂದು ಕರೆದಿರುವುದು ಯುಕ್ತವಾಗಿಯೇ ಇದೆ. ಅಮೆರಿಕದ ವಿಶ್ವವಿದ್ಯಾಲಯ ಗ್ರಂಥಾಲಯಗಳು ವಿಶ್ವವಿದ್ಯಾಲಯದ ವ್ಯವಹಾರಗಳಲ್ಲಿ ಒಂದು ದೊಡ್ಡ ಹಾಗೂ ಕೇಂದ್ರ ಪಾತ್ರವಹಿಸಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ನನ್ನ ಮನಸ್ಸಿನ ಮೇಲೆ ಆಳವಾದ ಪ್ರಭಾವ ಬೀರಿರುವ ಅಮೆರಿಕದ ವಿಶ್ವವಿದ್ಯಾಲಯ ಗ್ರಂಥಾಲಯಗಳ ಕೆಲವು ಮುಖ್ಯ ಗುಣಲಕ್ಷಣಗಳನ್ನು ಈಗ ಪ್ರಸ್ತಾಪಿಸಿ, ಆ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿರುವ ಪರಿಸ್ಥಿತಿಯನ್ನು ಪರಿಶೀಲಿಸಬಯಸುತ್ತೇನೆ.

ಗ್ರಂಥಾಲಯದ ಕಟ್ಟಡ

ಗ್ರಂಥಾಲಯವೇ "ವಿಶ್ವವಿದ್ಯಾಲಯದ ಕೇಂದ್ರ ಸ್ಥಾನ" ಎಂಬ ನುಡಿಯನ್ನು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ದಿಟಮಾಡಿ ತೋರಿಸಿದ್ದಾರೆ. ಅಲ್ಲಿ ಗ್ರಂಥಾಲಯ ಕಟ್ಟಡ ಕ್ಯಾಂಪಸಿನ ಕೇಂದ್ರ ಸ್ಥಾನದಲ್ಲಿದ್ದು ಇತರ ಶಾಖೆಗಳ ಕಟ್ಟಡಗಳೆಲ್ಲ ಅದರ ಸುತ್ತ ಹತ್ತಿರ ಹತ್ತಿರದಲ್ಲೇ ಇವೆ. ಅದು ಕ್ಯಾಂಪಸಿನ ಎಲ್ಲ ಕಟ್ಟಡಗಳಿಗಿಂತ ಅತ್ಯುತ್ತಮವಾದ ಭಾರಿ ಕಟ್ಟಡ. ಪ್ರಾಯಃ ಎಲ್ಲ ಕಟ್ಟಡಗಳಿಗಿಂತ ಅಲ್ಲೇ ಚಟುವಟಿಕೆ ಹೆಚ್ಚು. ಭಾವೀ ಬೆಳವಣಿಗೆಯ ಆವಶ್ಯಕತೆಗಳನ್ನು ಒಳಗೊಳ್ಳುವಂತೆ ಅದನ್ನು ಯೋಜಿಸಲಾಗಿದೆ. ಅಲ್ಲಿ ಎಲ್ಲ ಬಗೆಯ ಆಧುನಿಕ ಸೌಕರ್ಯಗಳೂ ಇವೆ. ನಮ್ಮ ದೇಶದ ವಿಶ್ವವಿದ್ಯಾಲಯ ಗ್ರಂಥಾಲಯಗಳಿಗೆ ಕಾಮಧೇನುವಾಗಿರುವ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಸ್ಥಾಪಿತವಾದಾಗಿನಿಂದ ಈಚಿನ ಅನೇಕ ವಿಶ್ವವಿದ್ಯಾಲಯಗಳು ಸ್ವತಂತ್ರವಾದ ಗ್ರಂಥಾಲಯಗಳನ್ನು ಕಟ್ಟಿಕೊಂಡಿವೆ. ಮೊದಲು ಈ ಗ್ರಂಥಾಲಯಗಳೆಲ್ಲ ಬೇರೆ ಬೇರೆ ಆಡಳಿತ ಹಾಗೂ ಶೈಕ್ಷಣಿಕ ವಿಭಾಗಗಳನ್ನೊಳಗೊಂಡ ಒಂದೇ ಕಟ್ಟಡದಲ್ಲಿದ್ದುವು. ಅವುಗಳಲ್ಲಿ ಇತರ ಅನನುಕೂಲಗಳಿದ್ದುದು ಮಾತ್ರವಲ್ಲದೆ ಅವು ಉಸಿರುಕಟ್ಟುವಷ್ಟು ಕಿಷ್ಕಿಂಧವಾಗಿದ್ದುವು. ಈಗ ಅವುಗಳಲ್ಲಿ ಬಹುತೇಕ ಕಟ್ಟಡಗಳ ನೆಲೆ ಆದರ್ಶಪ್ರಾಯವಾಗಿಲ್ಲದಿದ್ದರೂ ಅಲ್ಲಿಯ ಕಾರ್ಯಕ್ರಮಗಳಿಗೆ ಅನುಕೂಲವಾಗಿರುವಂತೆ ಅವುಗಳನ್ನು ಕಟ್ಟಿದ್ದಾರೆ. ದುರದೃಷ್ಟವಶಾತ್, ಒಂದೆರಡು ವಿಶ್ವವಿದ್ಯಾಲಯ ಗ್ರಂಥಾಲಯಗಳ ಸ್ಥಳ

ಸರಿಯಾಗಿಲ್ಲ: ಅಲ್ಲದೆ ಅವುಗಳ ಯೋಜನೆಯೂ ಅಷ್ಟೊಂದು ಸಮರ್ಪಕವಾಗಿಲ್ಲ. ಉನ್ನತಾಧಿಕಾರದಲ್ಲಿರುವವರು ಗ್ರಂಥಪಾಲನ ಅಭಿಪ್ರಾಯವನ್ನು ಸ್ವೀಕರಿಸದೆ ಅವು ಹೀಗಾಗಿರಬಹುದು, ಇಲ್ಲವೆ ಅವರು ಗ್ರಂಥಪಾಲನ ಸಲಹೆಯನ್ನಾಗಲಿ ಗ್ರಂಥಾಲಯ ಕಟ್ಟಡಗಳನ್ನು ಕಟ್ಟುವುದರಲ್ಲಿ ನಿಷ್ಣಾತನಾದವನೊಬ್ಬನ ಸಲಹೆಯನ್ನಾಗಲಿ ತೆಗೆದುಕೊಳ್ಳುವುದು ಒಳಿತೆಂದು ಭಾವಿಸಿಲ್ಲವೆಂದು ಕಾಣುತ್ತದೆ. ಹೀಗೆ ಮಾಡುವುದು ತುಂಬ ಕೆಟ್ಟದ್ದು. ಈ ಕಟ್ಟಡಗಳ ಮೇಲೆ ಲಕ್ಷಾಂತರ ರೂಪಾಯಿಗಳನ್ನು ಸುರಿದಿರುವುದು ಸಾರ್ವಜನಿಕ ಹಣದ ಅಪವ್ಯಯವಲ್ಲದೆ ಬೇರೇನೂ ಅಲ್ಲ. ಸ್ವತಂತ್ರವಾದ ಗ್ರಂಥಾಲಯ ಕಟ್ಟಡಗಳನ್ನು ಕಟ್ಟುವ ಯೋಜನೆ ಹಾಕಿಕೊಂಡಿರುವ ಇತರ ವಿಶ್ವವಿದ್ಯಾಲಯಗಳು ಈ ಅನುಭವಗಳಿಂದ ಪಾಠ ಕಲಿತುಕೊಳ್ಳಬೇಕೆಂದು ನಾವು ಆಶಿಸಬಹುದು, ಅಷ್ಟೆ.

ವಿಶ್ವವಿದ್ಯಾಲಯದ ಗ್ರಂಥಪಾಲ

ಅಮೆರಿಕನ್ ವಿಶ್ವವಿದ್ಯಾಲಯದ ಗ್ರಂಥಪಾಲನಿಗೆ ಕ್ಯಾಂಪಸಿನಲ್ಲಿ ಅಸೂಯೆ ಹುಟ್ಟಿಸುವಷ್ಟು ಉನ್ನತಸ್ಥಾನವಿದೆ. ವಿಶ್ವವಿದ್ಯಾಲಯದ ವ್ಯವಸ್ಥೆಯಲ್ಲಿ ಅವನೊಬ್ಬ ಪ್ರಮುಖ ವ್ಯಕ್ತಿ. ನನಗೆ ಕಾಲರ್‍ಯಾಡೋದ ಬೋಲ್ಡರ್‌ನ ಗ್ರಂಥಾಲಯದಲ್ಲಿ ಸುಮಾರು ಮೂರು ತಿಂಗಳ ಕಾಲ ಕೆಲಸ ಮಾಡುವ ಸದವಕಾಶ ಒದಗಿತ್ತು. ಆಗ ತಾನೆ ಅಲ್ಲಿ ಗ್ರಂಥಾಲಯಗಳ ನಿರ್ದೇಶಕರನ್ನು ಆ ವಿಶ್ವವಿದ್ಯಾಲಯದ ಉಪಾಧ್ಯಕ್ಷರನ್ನಾಗಿ ಬಡತಿ ಮಾಡಿದ್ದರು. ಹಾರ್ವರ್ಡ್ ವಿಶ್ವವಿದ್ಯಾನಿಲಯದ ಗ್ರಂಥಪಾಲರಾದ ಪಾಲ್ ಬಕ್ ಅವರು ಆ ವಿಶ್ವವಿದ್ಯಾಲಯದ ಅಧ್ಯಕ್ಷರಾಗಿ ನಿವೃತ್ತಿ ಹೊಂದಿದರು. ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ವಿಶ್ವವಿದ್ಯಾಲಯ ಗ್ರಂಥಪಾಲರು ಆ ವಿಶ್ವವಿದ್ಯಾಲಯದ ಕುಲಪತಿಯಾಗಿಯೂ ಕೆಲಸ ಮಾಡುತ್ತಿದ್ದಾರೆ. ಇವೆಲ್ಲ ಅಂಶಗಳಿಂದ ಇಂಥ ಪ್ರಮುಖಸ್ಥಾನಕ್ಕೆ ಹೆಚ್ಚು ಕಡಿಮೆ ಅತ್ಯುತ್ತಮರಾದವರನ್ನೇ ನೇಮಿಸುತ್ತಾರೆ ಎಂಬ ಅಂಶ ಸಿದ್ಧವಾಗುತ್ತದೆ.

ಬ್ರಿಟಿಷರ ಕಾಲದ ಭಾರತದಲ್ಲಿ ಉನ್ನತ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಗ್ರಂಥಾಲಯ ವಿಭಾಗವನ್ನು ಶುದ್ಧಾಂಗವಾಗಿ ಮೂಲೆಗೆ ತಳ್ಳಲಾಗಿತ್ತು. ಪರಿಣಾಮವಾಗಿ ಗ್ರಂಥಪಾಲನ ಸ್ಥಾನಕ್ಕೆ ಯಾವುದೇ ಪ್ರಾಮುಖ್ಯವನ್ನೂ ಕೊಟ್ಟಿರಲಿಲ್ಲ. ಕೆಲವೆಡೆ ಸ್ವಲ್ಪವೂ ದಕ್ಷತೆಯಿಲ್ಲದ ಆಡಳಿತಗಾರನನ್ನೋ ತನ್ನ ವೃತ್ತಿಯಲ್ಲಿ ಸಂಪೂರ್ಣವಾಗಿ ವಿಫಲನಾದ ಒಬ್ಬ ಉಪಾಧ್ಯಾಯನನ್ನೋ ಗ್ರಂಥಾಲಯ ವಿಭಾಗಕ್ಕೆ ತಂದು ಹಾಕುತ್ತಿದ್ದರು. ಆರ್ಥಿಕ ಹಾಗೂ ಸಾಂಸ್ಕೃತಿಕ ಗೊಂದಲದಲ್ಲಿ ಸಿಲುಕಿ ಒದ್ದಾಡುತ್ತಿದ್ದ ಸ್ವತಂತ್ರ ಭಾರತಕ್ಕೆ ತನ್ನ ಗೊಂದಲಮಯ ಸನ್ನಿವೇಶದಿಂದ ಪಾರಾಗಲು ಆಡಳಿತಗಾರರು, ವಿಜ್ಞಾನಿಗಳು, ಸಂಶೋಧಕರು, ತಂತ್ರಜ್ಞರು ಮೊದಲಾದವರ ಭಾರೀ ಸೈನ್ಯವೇ ಬೇಕಿತ್ತು. ಅಲ್ಲದೆ ಸ್ವತಂತ್ರ ಭಾರತ ಪ್ರಜಾಸತ್ತಾತ್ಮಕ ಜೀವನ ವಿಧಾನಕ್ಕೆ ಕಂಕಣಬದ್ಧವಾಗಿತ್ತು. ಪ್ರಜಾಸತ್ತೆ ಯಶಸ್ವಿಯಾಗಬೇಕಾದರೆ ಚುನಾಯಕ ಸಮುದಾಯ ತಿಳಿವಳಿಕೆಯುಳ್ಳದ್ದಾಗಿರಬೇಕು. ಈ ಅಂಶಗಳೆಲ್ಲ ಆಗ ಅಧಿಕಾರದಲ್ಲಿದ್ದವರನ್ನು ವಿಶ್ವವಿದ್ಯಾಲಯಗಳ ಹಾಗೂ ಇತರ ವಿದ್ಯಾಸಂಸ್ಥೆ

ಗಳ ಸಂಖ್ಯೆಯನ್ನು ಹೆಚ್ಚಿಸುವುದು ಮಾತ್ರವಲ್ಲದೆ ಸಂಶೋಧನೆಗೂ ಹೆಚ್ಚು ಪ್ರಾಮುಖ್ಯ ನೀಡುವಂತೆ ಪ್ರೇರಿಸಿದುವು. ಇದರ ಪರಿಣಾಮವಾಗಿ, ಕೆಲಸಕ್ಕೆ ಬಾರದ ಕಂತೆ, ಭೋಗದ ಬಾಬತ್ತು ಎಂದೆಲ್ಲ ಪರಿಗಣಿಸಲಾಗಿದ್ದ ಗ್ರಂಥಾಲಯ ವಿಭಾಗ ಇದ್ದಕ್ಕಿದ್ದಂತೆ ಅತ್ಯಾವಶ್ಯಕ ವಾದುದು ಎಂದಾಯಿತು. ಸಿ.ಡಿ. ದೇಶಮುಖ್ ಅವರು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಅಧ್ಯಕ್ಷರಾಗಿದ್ದರು. ಅವರ ಶ್ರೇಷ್ಠ ನೇತೃತ್ವದಲ್ಲಿ ಆಯೋಗ ಗ್ರಂಥಾಲ ಯಕ್ಕೆ ಸಲ್ಲಬೇಕಾದ ಗಣ್ಯಸ್ಥಾನವನ್ನು ಕೊಡಲು ತೀರ್ಮಾನಿಸಿತು. ಪರಿಣಾಮವಾಗಿ, ಗ್ರಂಥಾಲಯಗಳಲ್ಲಿನ ಗ್ರಂಥಪಾಲ ಹಾಗೂ ಇತರ ಹುದ್ದೆಗಳನ್ನು ಬಡತಿಮಾಡಿ ಅವು ಗಳನ್ನು ಅಧ್ಯಾಪನ ವಿಭಾಗಗಳಲ್ಲಿನ ಹುದ್ದೆಗಳಿಗೆ ಸಮ ಮಾಡಿದರು. ಇದರಿಂದ ಗ್ರಂಥಾ ಲಯ ವ್ಯವಸ್ಥೆ ಉತ್ತಮಗೊಂಡಿದೆ; ಮತ್ತು ಗ್ರಂಥಾಲಯಗಳು ಒಂದೇ ಸಮನೆ ಹೆಚ್ಚು ತ್ತಿರುವ ವಿದ್ಯಾರ್ಥಿಗಳ ಹಾಗೂ ಅಧ್ಯಾಪಕವರ್ಗದವರ ಆವಶ್ಯಕತೆಗಳನ್ನು ಮಾತ್ರವಲ್ಲದೆ ಸಂಶೋಧಕರ ಅಗತ್ಯಗಳನ್ನೂ ಪೂರೈಸಲು ಸಜ್ಜುಗೊಳ್ಳುತ್ತಿವೆ.

ಇಲ್ಲಿ ಕೆಲವು ಅಡಚಣೆಗಳೇನೋ ಇವೆ. ಅವುಗಳಲ್ಲಿ ಮುಖ್ಯವಾದದ್ದೆಂದರೆ, ವಿಶ್ವ ವಿದ್ಯಾಲಯ ಗ್ರಂಥಾಲಯ ಕಾರ್ಯ ನಿರ್ವಹಿಸಲು ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮಾ ಅಥವಾ ಡಿಗ್ರಿ ಪದವಿಯುಳ್ಳ ಒಬ್ಬ ಪದವೀಧರ ಸಾಕು ಎಂಬ ಅಭಿಪ್ರಾಯ ಶಿಕ್ಷಣ ಕ್ಷೇತ್ರದ ಕೆಲವು ಆಡಳಿತಾಧಿಕಾರಿಗಳ ಮನಸ್ಸುಗಳಲ್ಲಿ ಇನ್ನೂ ಬೇರೂರಿರುವುದು. ಗ್ರಂಥಾಲಯದ ಕಟ್ಟಡಗಳು, ಸಜ್ಜುಸರಂಜಾಮು ಮತ್ತು ಪುಸ್ತಕಗಳಿಗಾಗಿ ಹೂಡಿರುವ ಭಾರಿ ಹಣವನ್ನು ಸಮರ್ಥವಾದ ಗ್ರಂಥಾಲಯ ಸೇವೆಯನ್ನಾಗಿ ಮಾರ್ಪಡಿಸುವ ಹೊಣೆ ಹೊತ್ತಿರುವ ಸಿಬ್ಬಂದಿವರ್ಗ, ಗ್ರಂಥಾಲಯದಲ್ಲಿ ಅಧ್ಯಯನ ಮಾಡುವ ಸಂಶೋಧಕ ರೊಡನೆ ಅವರವರ ಕ್ಷೇತ್ರಗಳ ಬಗೆಗೆ ಸಂಭಾಷಿಸಲು ಮತ್ತು ಗ್ರಂಥಗಳ ನೋಂದಣಿ, ಸೂಚೀಕರಣ, ಸಂಗ್ರಹಣಗಳನ್ನು ಕೈಗೊಳ್ಳಲು ಸಮರ್ಥರಾಗಿರಬೇಕು ಎಂಬ ವಿಷಯ ವನ್ನು ಈ ಆಡಳಿತಾಧಿಕಾರಿಗಳು ಮರೆತೇಬಿಡುತ್ತಾರೆ. ಆಧುನಿಕ ವಿಶ್ವವಿದ್ಯಾಲಯ ಗ್ರಂಥಾಲಯದ ಸಿಬ್ಬಂದಿವರ್ಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ತುಂಬ ಅರ್ಹರೂ ತರಬೇತು ಪಡೆದವರೂ ಇರಬೇಕು ; ಅದರಲ್ಲಿ ವಿಷಯತಜ್ಞರೂ ಇರಬೇಕು.

ಇನ್ನೊಂದು ಸ್ವಾರಸ್ಯವಾದ ಸಂಗತಿ ನಮ್ಮ ಗಮನಕ್ಕೆ ಬರುತ್ತದೆ. ಅಮೆರಿಕದ ಹೆಚ್ಚು ಕಡಮೆ ಎಲ್ಲ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲೂ ಬೇರೆ ಬೇರೆ ರಾಜ್ಯಗಳನ್ನು ಪ್ರತಿ ನಿಧಿಸುವ ಸಿಬ್ಬಂದಿಗಳಿದ್ದಾರೆ. ಸಿಬ್ಬಂದಿಯನ್ನು ರಾಜ್ಯದಿಂದ ರಾಜ್ಯಕ್ಕೆ ವರ್ಗಾಯಿಸು ವುದರಿಂದ ಅನೇಕ ಪ್ರಯೋಜನಗಳುಂಟು. ಸಾಮಾನ್ಯವಾಗಿ ಅಮೆರಿಕದಲ್ಲಿ ತಂದೆತಾಯಿ ಗಳು ಮಕ್ಕಳನ್ನು ತಮ್ಮ ಊರ ಹೊರಗಣ ಕಾಲೇಜು, ವಿಶ್ವವಿದ್ಯಾಲಯಗಳಿಗೆ ಕಳಿಸು ವುದು ಮಾತ್ರವಲ್ಲದೆ, ತಮ್ಮ ರಾಜ್ಯದ ಹೊರಗಣ ಕಾಲೇಜು, ವಿಶ್ವವಿದ್ಯಾನಿಲಯಗಳಿಗೂ ಕಳಿಸುತ್ತಾರೆ. ನಾವು ಈ ಮೇಲ್ಪಂಕ್ತಿಯನ್ನು ಅತಿ ತುರ್ತಾಗಿ ಅನುಸರಿಸಬೇಕು. ಇದ ರಿಂದ ನಮಗೆ ಅರ್ಹರಾದ ಸಿಬ್ಬಂದಿವರ್ಗ ದೊರಕುವುದಲ್ಲದೆ ಹೆಚ್ಚಿನ ಮಟ್ಟದಲ್ಲಿ ರಾಷ್ಟ್ರೀಯ ಏಕತೆಯನ್ನು ಸಾಧಿಸಲೂ ಸಾಧ್ಯವಾಗಬಹುದು.

ಗ್ರಂಥಗಳ ಬಳಕೆಯನ್ನು ಅಭಿವೃದ್ಧಿಪಡಿಸಬೇಕೆಂಬ ಸಿದ್ಧಾಂತದ ಪ್ರತಿಪಾದಕರಿಂದ ಪ್ರಭಾವಿತರಾದ ಅಧಿಕಾರಿಗಳೂ ಕೆಲಸಗಾರರೂ ಅಮೆರಿಕದ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿದ್ದಾರೆ. ಪರಿಣಾಮವಾಗಿ, ಅಲ್ಲಿಯ ಗ್ರಂಥಾಲಯಗಳನ್ನು ಶೈಕ್ಷಣಿಕ ಹಾಗೂ ಸಂಶೋಧನ ಮಟ್ಟದಲ್ಲಿ ನಡೆಸುತ್ತಿದ್ದಾರೆಯೇ ಹೊರತು ಗೃಹಕೃತ್ಯದ ಮಟ್ಟದಲ್ಲಲ್ಲ. ಈ ಗ್ರಂಥಾಲಯಗಳು ತುಂಬ ಸಕ್ರಿಯವಾದ ಪಾತ್ರವನ್ನು, ಹೆಚ್ಚು ಕಡಮೆ ಕ್ರಾಂತಿಕಾರಿ ಪಾತ್ರವನ್ನು ವಹಿಸುತ್ತವೆ. ಈ ತತ್ವದಿಂದ ಪ್ರೇರಿತವಾಗಿ ಅಮೆರಿಕದ ಗ್ರಂಥಾಲಯಗಳು ಹೊಸಬರಿಗೆ ಪ್ರವರ್ತಕ ವ್ಯಾಸಂಗ ಕ್ರಮಗಳನ್ನು (orientation courses) ಉಪಕ್ರಮಿಸುವುವು ; ಸೊಗಸಾಗಿ ಬರೆದು ಸುಂದರವಾಗಿ ಮುದ್ರಿಸಿದ ಗ್ರಂಥಾಲಯ ಕೈಪಿಡಿಗಳನ್ನು ಹೊರಡಿಸುತ್ತವೆ; ಎಲ್ಲರೂ ಪುಸ್ತಕಗಳನ್ನು ಎರವಲು ಪಡೆಯಬಹುದಾದಂತೆ ಮುಕ್ತವ್ಯವಸ್ಥೆಯನ್ನು ಜಾರಿಗೆ ತರುತ್ತವೆ ; ಪರಾಮರ್ಶನ ವಿಭಾಗ, ವಿಸ್ತರಣ ವಿಭಾಗ, ಶ್ರವಣ ವೀಕ್ಷಣ ವಿಭಾಗ, ಸರ್ಕಾರಿ ದಾಖಲೆಗಳ ವಿಭಾಗ, ಸ್ವತಂತ್ರವಾದ ಸ್ನಾತಕಪೂರ್ವ ಗ್ರಂಥಾಲಯಗಳು, ಲಘು ವಾಚನಾಲಯಗಳು, ಹಾಸ್ಟೆಲ ಗ್ರಂಥಾಲಯಗಳು, ಸಹಕಾರೀ ಕಾರ್ಯಕ್ರಮಗಳು—ಇವೇ ಮೊದಲಾದ ಹಲವಾರು ವಿಭಾಗಗಳನ್ನು ಒದಗಿಸುತ್ತವೆ. ಈ ಯೋಜನೆಗಳಲ್ಲಿ ಮುಖ್ಯವಾದ ಕೆಲವನ್ನು ಸ್ವಲ್ಪ ವಿಸ್ತಾರವಾಗಿ ಇಲ್ಲಿ ಹೇಳಿದೆ. ಇವುಗಳನ್ನು ಇಲ್ಲಿ ಸಂಪೂರ್ಣವಾಗಿ ಕಾರ್ಯರೂಪಕ್ಕೆ ತಂದರೆ ನಮ್ಮ ಗ್ರಂಥಾಲಯಗಳು ಶ್ರೇಷ್ಠ ವಿದ್ವತ್ಕೇಂದ್ರಗಳಾಗುವುವು. ಈಗ ಪರಾಮರ್ಶನವಿಭಾಗದಿಂದ ಆರಂಭಿಸೋಣ :

ಪರಾಮರ್ಶನ ವಿಭಾಗ

ಅಮೆರಿಕದ ಗ್ರಂಥಾಲಯಗಳಲ್ಲಿ ಪರಾಮರ್ಶನ ವಿಭಾಗ ಗ್ರಂಥಗಳ ಬಳಕೆಯನ್ನು ಅಭಿವೃದ್ಧಿಪಡಿಸಲು ಬಹಳಷ್ಟು ಕಾರಣವಾಗಿದೆ. ಪರಾಮರ್ಶನ ವಿಭಾಗದ ಸಿಬ್ಬಂದಿ ವರ್ಗ ಓದುಗರಿಗೆ ಮಾರ್ಗದರ್ಶಿ, ಉಪದೇಶಕ, ಮಿತ್ರ. ಎಳೆಯರು ಗ್ರಂಥಾಲಯಗಳಲ್ಲಿ ಸ್ವತಃ ಕಾರ್ಯೋದ್ಯುಕ್ತರಾಗುವಂತೆ ಅಲ್ಲಿ ಪುಸ್ತಿಕೆಗಳನ್ನು ತಯಾರಿಸುತ್ತಾರೆ. ದೊಡ್ಡ ದೊಡ್ಡ ವಿದ್ವಾಂಸರ ಹಾಗೂ ಸಂಶೋಧಕರ ಪ್ರಯೋಜನಕ್ಕಾಗಿ ವಿಶೇಷ ವಿಷಯಗಳನ್ನು ಕುರಿತು ಗ್ರಂಥಸೂಚಿಗಳನ್ನು ತಯಾರಿಸುತ್ತಾರೆ ; ಜ್ಞಾನಾನ್ವೇಷಣೆಯಲ್ಲಿ ಓದುಗರಿಗೆ ಅನುಕೂಲವಾಗಬಹುದಾದ ಎಲ್ಲ ಕೆಲಸಕಾರ್ಯಗಳನ್ನೂ ಮಾಡುತ್ತಾರೆ.

ಪರಾಮರ್ಶನ ವಿಭಾಗದ ಸಿಬ್ಬಂದಿವರ್ಗ ಓದುಗರ ಆಸಕ್ತಿಯನ್ನು ತೀವ್ರಗೊಳಿಸುವ ಶಕ್ತಿಯಾಗಿ ವರ್ತಿಸುತ್ತದೆ. ಗ್ರಂಥಸಂಗ್ರಹ ಒಂದೇ ಸಮನೆ ಹೆಚ್ಚುತ್ತಿರುವುದು, ವರ್ಗೀಕರಣ ವಿಧಾನಗಳ ಹಾಗೂ ಕಾರ್ಡ ಕ್ಯಾಟಲಾಗಿನ ಸಂಕೀರ್ಣತೆ, ಚೆದುರಿಹೋಗಿರುವ ದೊಡ್ಡ ದೊಡ್ಡ ಕಟ್ಟಡಗಳ ಸನ್ನಿವೇಶ, ಎಲ್ಲಕ್ಕಿಂತ ಹೆಚ್ಚಾಗಿ ಆಧುನಿಕ ಗ್ರಂಥಾಲಯಗಳಲ್ಲಿ ಸ್ವತಃ ಓಡಾಡಲು ಹೊಸ ಓದುಗರ ಹಿಂಜರಿಯುವಿಕೆ—ಇವೆಲ್ಲ ಕಾರಣಗಳಿಂದ ಆಧುನಿಕ ಗ್ರಂಥಾಲಯಗಳಲ್ಲಿ ಪರಾಮರ್ಶನ ವಿಭಾಗವನ್ನು ತೆರೆಯುವ ಆವಶ್ಯಕತೆ ವಿಪರೀತವಾಗಿದೆ. ಪರಾಮರ್ಶನ ವಿಭಾಗವಲ್ಲಿ ತೀಕ್ಷ್ಣಮತಿಗಳೂ ವಿಶಾಲ ಮನೋಭಾವವುಳ್ಳ

ವರೂ ಇದ್ದರೆ ಗ್ರಂಥಾಲಯದಲ್ಲಿ ಪವಾಡವನ್ನೇ ಸಾಧಿಸಬಹುದು. ತುಂಬ ಅನುಕೂಲವಾದ ಒಂದೆರಡು ಗ್ರಂಥಾಲಯಗಳನ್ನು ಬಿಟ್ಟರೆ ನಮ್ಮ ದೇಶದ ಅನೇಕ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಇನ್ನೂ ಪರಾಮರ್ಶನ ವಿಭಾಗಗಳನ್ನು ತೆರೆಯಬೇಕಾಗಿದೆ.

ಗ್ರಂಥಾಲಯದ ವೇಳೆ

ಪರಾಮರ್ಶನ ಸೇವೆಯ ಅನಂತರ ವಾಚನ ಸಾಮಗ್ರಿಯ ಬಳಕೆಯನ್ನು ಹೆಚ್ಚಿಸಿರುವ ಇತರ ಯೋಜನೆಗಳೆಂದರೆ ಮುಕ್ತ ಪ್ರವೇಶ ಪದ್ಧತಿ, ಕೇಂದ್ರೀಕೃತ ಗ್ರಂಥಾಲಯ ಸೇವೆಗಳು ಮೊದಲಾದವು. ಭಾರತದಲ್ಲೂ ಈ ಯೋಜನೆಗಳು ಬಳಕೆಯಲ್ಲಿರುವುದರಿಂದ, ನಾನು ಅಮೆರಿಕ ಸಂಯುಕ್ತ ಸಂಸ್ಥಾನದ ಗ್ರಂಥಾಲಯಗಳನ್ನು ಓದುಗರಿಗೆ ಎಷ್ಟು ಹೆಚ್ಚು ಹೊತ್ತು ತೆರೆಯುತ್ತಾರೆಂಬುದನ್ನು ಹೇಳಬಯಸುತ್ತೇನೆ. ಸಂಯುಕ್ತ ಸಂಸ್ಥಾನದಲ್ಲಿ ಬಹುತೇಕ ವಿಶ್ವವಿದ್ಯಾಲಯ ಗ್ರಂಥಾಲಯಗಳನ್ನು ಹೆಚ್ಚು ಹೊತ್ತು ತೆಗೆದಿರುತ್ತಾರೆ. ಅವುಗಳಲ್ಲಿ ಕೆಲವು ಬೆಳಿಗ್ಗೆ 7ರಿಂದ ಮಧ್ಯರಾತ್ರಿಯವರೆಗೆ, ಅಂದರೆ ದಿನಕ್ಕೆ ಸುಮಾರು 17 ಗಂಟೆಗಳ ಕಾಲ ತೆರೆದಿರುತ್ತವೆ. ಈಚೀಚೆಗೆ ನಮ್ಮ ದೇಶದಲ್ಲೂ ಗ್ರಂಥಾಲಯಗಳು ಕೆಲಸಮಾಡುವ ಅವಧಿಯನ್ನು ವಿಸ್ತರಿಸಲಾಗಿದೆ ; ಆದರೂ ಅದು ದಿನಕ್ಕೆ ಸಾಧಾರಣ 10 ಗಂಟೆಗಳಾಗಬಹುದು. ಗ್ರಂಥಾಲಯಗಳನ್ನು ಹೆಚ್ಚು ಕಾಲ ತೆರೆದರೆ ವಿದ್ಯಾರ್ಥಿಗಳು ವಾಚನ ಮಂದಿರಗಳಲ್ಲಿ ಕಿಕ್ಕಿರಿದಿರುತ್ತಾರೆ ಎಂಬ ನನ್ನ ನಂಬಿಕೆ ಬಲವಾಗುತ್ತದೆ. ನಮ್ಮ ವಿದ್ಯಾರ್ಥಿಗಳಲ್ಲಿ ಬಹುಪಾಲು ಕಡಮೆ ಆದಾಯ ವರ್ಗಕ್ಕೆ ಸೇರಿದವರು, ಅವರಿಗೆ ವ್ಯಾಸಂಗಕ್ಕಾಗಿ ತಮ್ಮ ತಮ್ಮ ಮನೆಗಳಲ್ಲಿ ಪ್ರತ್ಯೇಕವಾದ ಕೊಠಡಿಗಳಿರುವುದಿಲ್ಲ. ಒಂದು ಪಕ್ಷ ಅವರಿಗೆ ಪ್ರತ್ಯೇಕ ಕೊಠಡಿಗಳಿದ್ದರೂ ಪ್ರೌಢ ಅಧ್ಯಯನಕ್ಕೆ ಬೇಕಾದ ಶಾಂತ ವಾತಾವರಣ ಅವರಿಗೆ ಇರುವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ, ಅನೇಕ ಅತ್ಯವಶ್ಯವಾದ ಪರಾಮರ್ಶನ ಗ್ರಂಥಗಳು–ಉದಾಹರಣೆಗೆ ಒಳ್ಳೆಯ ನಿಘಂಟು, ಒಳ್ಳೆಯ ವಿಶ್ವಕೋಶ ಮೊದಲಾದವು–ಇರುವುದಿಲ್ಲ. ಒಂದು ವಿಷಯವನ್ನು ಚೆನ್ನಾಗಿ ಅರಿತುಕೊಳ್ಳಬೇಕಾದರೆ ಈ ಪರಾಮರ್ಶನ ಗ್ರಂಥಗಳ ಆವಶ್ಯಕತೆ ತುಂಬ ಇದೆ. ಗ್ರಂಥಾಲಯಗಳನ್ನು ಅಲ್ಪಕಾಲ ತೆರೆಯುವುದರಿಂದ ನಮ್ಮಲ್ಲಿರುವ ಅಲ್ಪ ಗ್ರಂಥ ಸಂಪತ್ತಿನ ಬಳಕೆಯನ್ನು ಓದುಗರಿಗೆ ತಪ್ಪಿಸಿದಂತಾಗುತ್ತದೆ. ಸಂಯುಕ್ತ ಸಂಸ್ಥಾನದಂತಹ ಶ್ರೀಮಂತ ದೇಶದಲ್ಲೇ ತಮ್ಮ ಗ್ರಂಥಾಲಯಗಳನ್ನು ಜನರು ಎಚ್ಚರವಾಗಿರುವಷ್ಟು ಕಾಲ ತೆರೆಯುವಾಗ ನಮ್ಮ ಸಮಾಜದಂತಹ ಬೆಳೆಯುತ್ತಿರುವ ಸಮಾಜದಲ್ಲಿ ಮುಂದಿನ ಆಡಳಿತಗಾರರು, ಉಪಾಧ್ಯಾಯರು, ಯೋಜಕರು, ತಂತ್ರಜ್ಞರು ಮತ್ತು ವಿಜ್ಞಾನಿಗಳ ಉಪಯೋಗಕ್ಕಾಗಿ ಗ್ರಂಥಾಲಯಗಳ ಕೆಲಸದ ವೇಳೆಯನ್ನು ವಿಸ್ತರಿಸುವುದು ಹೆಚ್ಚು ಸೂಕ್ತವೆಂದು ಕಾಣುತ್ತದೆ.

ಶ್ರವಣ – ವೀಕ್ಷಣ ಸಾಧನಗಳು

ಶ್ರವಣ–ವೀಕ್ಷಣ ವಿಭಾಗ ವಿಶ್ವವಿದ್ಯಾಲಯ ಗ್ರಂಥಾಲಯದ ಇನ್ನೊಂದು ಮುಖ್ಯ

ಅಂಗ. ಅಮೆರಿಕದ ವಿಶ್ವವಿದ್ಯಾಲಯುಗಳಲ್ಲಿ ಹೆಚ್ಚು ಕಡಮೆ ಎಲ್ಲ ವಿಭಾಗಗಳ ಉಪಾಧ್ಯಾಯರೂ ತಮ್ಮ ತಮ್ಮ ತರಗತಿ ಉಪನ್ಯಾಸಗಳಿಗೆ ಪೂರಕವಾಗಿ, ಪೋಷಕವಾಗಿ ಶ್ರವಣ ವೀಕ್ಷಣ ಸಾಧನಗಳನ್ನು ಧಾರಾಳವಾಗಿ ಬಳಸುತ್ತಾರೆ. ಇವುಗಳಲ್ಲಿ ಚಲನಚಿತ್ರಗಳು, ಸ್ಲೈಡುಗಳು, ಕಿರುಚಾರುಚಿತ್ರಗಳು, ಲಿಂಗ್ವಫೋನು, ದೀರ್ಘಾವಧಿಯ ಧ್ವನಿಮುದ್ರಿಕೆಗಳು ಮೊದಲಾದುವೆಲ್ಲ ಇರುತ್ತವೆ. ಬೋಧನ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಈ ಸಾಧನಗಳ ಪ್ರಾಮುಖ್ಯ ಎಷ್ಟೆಂಬುದನ್ನು ಎಷ್ಟು ಒತ್ತಿಹೇಳಿದರೂ ಸಾಲದು. ಅವು ತರಗತಿ ಉಪನ್ಯಾಸಗಳಿಗೆ ಹೆಚ್ಚಿನ ಅರ್ಥವನ್ನೂ ನೈಜತೆಯ ಅರಿವನ್ನೂ ಕೊಡುತ್ತವೆ. ಷೇಕ್ಸ್ ಪಿಯರನ ಓಥೆಲೊ ನಾಟಕವನ್ನು ಬೋಧಿಸುವವನು ಈ ನಾಟಕದ ಧ್ವನಿವಾಹಿನಿಯನ್ನು ಹಾಕುವುದರಿಂದ ಇಲ್ಲವೆ ಚಿತ್ರವನ್ನು ತೋರಿಸುವುದರಿಂದ ನಾಟಕವನ್ನು ಇನ್ನೂ ಚೆನ್ನಾಗಿ ವಿದ್ಯಾರ್ಥಿಗಳಿಗೆ ಹೇಳಿಕೊಡಬಹುದು. ಶಸ್ತ್ರಚಿಕಿತ್ಸೆಯ ಅಧ್ಯಾಪಕ ಈ ದೇಶದಲ್ಲಿ ಕಾಣಸಿಗದ ತಂತ್ರಗಳು ಹಾಗೂ ಉಪಕರಣಗಳಿಂದ ನ್ಯೂಯಾರ್ಕ್ ಆಸ್ಪತ್ರೆಯಲ್ಲಿ ನಡೆದ ಒಂದು ಮುಖ್ಯವಾದ ಶಸ್ತ್ರಚಿಕಿತ್ಸೆಯ ಚಿತ್ರವನ್ನು ತೋರಿಸಿ ವಿದ್ಯಾರ್ಥಿಗಳಿಗೆ ಮಂದಟ್ಟಾಗುವಂತೆ ಹೇಳಿಕೊಡಬಹುದು. ವಿದೇಶೀ ಭಾಷೆಗಳನ್ನು ಕಲಿಯುವ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ತರಗತಿ ಪಾಠಗಳ ಜೊತೆಗೆ ಲಿಂಗ್ವಫೋನ್ ರೆಕಾರ್ಡುಗಳೂ ಅತ್ಯುತ್ತಮ ಬೋಧನ ಸಾಧನಗಳು.

ನಮ್ಮಲ್ಲಿ ಕೆಲವು ಗ್ರಂಥಾಲಯಗಳು ಶ್ರವಣ–ವೀಕ್ಷಣ ಸಾಧನಗಳನ್ನು ಸ್ಥಾಪಿಸಲಾರಂಭಿಸಿವೆ ; ಈ ಯೋಜನೆಯನ್ನು ಭರದಿಂದ ಮುಂದುವರಿಸಬೇಕು. ಸದ್ಯದಲ್ಲಿ ಜಾರಿಯಲ್ಲಿರುವ ಆಮದು ನಿರ್ಬಂಧಗಳನ್ನು ಸಡಿಲಗೊಳಿಸಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಬೇಕು.

ಗ್ರಂಥಾಲಯ ಸಹಕಾರ

ಸಂಯುಕ್ತ ಸಂಸ್ಥಾನಕ್ಕೆ ಭೇಟಿನೀಡುವವರೆಲ್ಲರ ಅರಿವಿಗೆ ಬರುವ ಇನ್ನೊಂದು ಮುಖ್ಯ ಸಂಗತಿಯೆಂದರೆ ಅಲ್ಲಿಯ ಗ್ರಂಥಾಲಯಗಳ ಸಹಕಾರ. ಗ್ರಂಥಾಲಯ ಸಹಕಾರವೆಂದರೆ, ಪೋಷಕರ ವಿಷಯದಲ್ಲಿ, ಅವರು ಸದಸ್ಯರಾಗಿರುವ ಗ್ರಂಥಾಲಯಗಳಲ್ಲಿ ಮಾತ್ರವಲ್ಲದೆ ದೇಶದ ಸಾಮಗ್ರಿಗಳನ್ನು ಬಳಸಲು ಯಾವ ನಿರ್ಬಂಧವೂ ಇರದಂತೆ ಗ್ರಂಥಸಂಪತ್ತಿಯನ್ನು ಉಪಯೋಗಿಸುವ ಅವಕಾಶ ಕಲ್ಪಿಸಿಕೊಡುವುದು.

ಗ್ರಂಥಾಲಯಗಳ ನಡುವೆ ಎರವಲನ್ನು ಕೊಡುವುದು, ಗ್ರಂಥಗಳು ಹಾಗೂ ನಿಯತಕಾಲಿಕಗಳ ಸಂಯೋಜಿತ ಕ್ಯಾಟಲಾಗುಗಳನ್ನು ತಯಾರಿಸುವುದು, ವಾಚನ ಸಾಮಗ್ರಿಗಳನ್ನು ಪಡೆದುಕೊಳ್ಳಲು ಸಹಕರಿಸುವುದು. ವೃತ್ತಪತ್ರಿಕೆಗಳು ಅಪರೂಪವಾದ ಗ್ರಂಥಗಳು ಮೊದಲಾದುವುಗಳ ಸೂಕ್ಷ್ಮ ಛಾಯಾಚಿತ್ರಗಳನ್ನು ತೆಗೆಯುವ ಯೋಜನೆಗಳಲ್ಲಿ ಸಹಕರಿಸುವುದು–ಇವೆಲ್ಲ ಸಂಯುಕ್ತ ಸಂಸ್ಥಾನಕ್ಕೆ ಭೇಟಿಕೊಡುವವರ ಮನಸ್ಸಿನ ಮೇಲೆ ಮುದ್ರೆಯೊತ್ತುತ್ತವೆ. ಈ ಯೋಜನೆಗಳಿಂದಾಗಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿನ

ಗ್ರಂಥಪಾಲರು ತಮ್ಮ ಪೋಷಕರಿಗೆ ವಾಚನ ಹಾಗೂ ಪರಾಮರ್ಶನ ಸಾಮಗ್ರಿಗಳನ್ನು ಒದಗಿಸುವ ವಿಷಯದಲ್ಲಿ ಮಾತ್ರ ಸಾಧ್ಯವಿಲ್ಲ ಎಂಬ ಪದ ತಮ್ಮ ನಿಘಂಟಿನಲ್ಲಿ ಇಲ್ಲವೇ ಇಲ್ಲ ಎಂದು ಹೆಮ್ಮೆ ಪಡುತ್ತಾರೆ : ಇದು ನಿಜವೂ ಹೌದು. ಈ ಕಾರ್ಯಕಲಾಪಗಳಿಂದ ಅಮೆರಿಕದ ಗ್ರಂಥಾಲಯಗಳಿಗೆ ಬೇಕಾದಷ್ಟು ಕಾಲ, ಹಣ ಮತ್ತು ಶಕ್ತಿ ಉಳಿತಾಯ ವಾಗಿದೆ. ಪರಿಣಾಮವಾಗಿ ಅಲ್ಲಿ ಸಿಬ್ಬಂದಿವರ್ಗವನ್ನು ವರ್ಗೀಕರಣ, (ಸೂಚೀಕರಣ) ಮೊದಲಾದ ಪ್ರತಿನಿತ್ಯ ಮಾಡಿದ್ದೇ ಮಾಡುವ ಕೆಲಸಗಳಿಗೆ ಹಚ್ಚುವ ಬದಲು ಸ್ಟ್ಯಾಕು ಗಳಲ್ಲಿ ಹಾಗೂ ವಾಚನಮಂದಿರಗಳಲ್ಲಿನ ಓದುಗರ ನೆರವಿಗೆ ಬಳಸಲಾಗುತ್ತದೆ.

ಭಾರತದಲ್ಲಿ ನಾವು ಈ ವಿಷಯಗಳಲ್ಲೆಲ್ಲ ತುಂಬ ಅನುಭವವುಳ್ಳ ನಮ್ಮ ಅಮೆ ರಿಕದ ಸೋದರರ ಮೇಲ್ಪಂಕ್ತಿಯನ್ನು ಅನುಸರಿಸಬೇಕು. ಈಗ ನಮ್ಮ ದೇಶದಲ್ಲಿ ಸಹ ಕಾರೀ ವಾತಾವರಣ ಸೃಷ್ಟಿಯಾಗಿದೆ. ನಮ್ಮ ಅತ್ಯಲ್ಪ ಸಂಪನ್ಮೂಲಗಳ ಅಂದರೆ ಅರ್ಥಿಕ ಸಿಬ್ಬಂದಿ ಹಾಗೂ ವಾಚನ ಸಾಮಗ್ರಿಗಳ ಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕಾದರೆ ಈ ವಾತಾವರಣ ಮತ್ತಷ್ಟು ಜೋರಾಗಬೇಕು. ಎರವಲು ಕೊಡಲು ಇನ್ನೂ ಹಿಂಜರಿ ಯುವ ಗ್ರಂಥಾಲಯಗಳು ಈಗಲೂ ಇವೆ. ತಮಗೆ ಬೇಕಾದ ವಾಚನ ಸಾಮಗ್ರಿಗಳು ಪಕ್ಕದ ಗ್ರಂಥಾಲಯದಲ್ಲೇ ದೊರೆಯುವಾಗಲೂ ಯಾವುದೋ ದೂರದಲ್ಲಿರುವ ಗ್ರಂಥಾ ಲಯದಿಂದ ಅವುಗಳನ್ನು ತರಿಸಿಕೊಳ್ಳಲಾಗುತ್ತಿದೆ. ಇದನ್ನು ತಪ್ಪಿಸಬಹುದು. ಇದ ರಿಂದೆಲ್ಲ ಸಂಶೋಧಕರಿಗೆ ಕಷ್ಟವಾಗುತ್ತಿದೆ ; ವೈಜ್ಞಾನಿಕ ಸಂಶೋಧನೆ ತಟಸ್ಥವಾಗುತ್ತಿದೆ ; ದೇಶದಲ್ಲಿ ಜನಸಾಮಾನ್ಯ ಸ್ವಪರಿಪೂರ್ಣನೂ ಸಮೃದ್ಧನೂ ಆಗುವ ದಿನ ಮುಂದೆ ಮುಂದೆ ಹೋಗುತ್ತಿದೆ. ಈಗಾಗಲೇ ನಾವು ಮುಂದುವರಿದ ದೇಶಗಳಿಗಿಂತ ತುಂಬ ಹಿಂದೆ ಬಿದ್ದಿದ್ದೇವೆ. ನಾವು ಇರುವೆಡೆ ಇರಬೇಕಾದರೂ ನಾವು ಧಾವಿಸಬೇಕು. ಆದ್ದರಿಂದ ನಾವು ಈ ವಿಷಯದಲ್ಲಿ ಸ್ವಲ್ಪವೂ ವಿಳಂಬ ಮಾಡಕೂಡದು.

ವೈಜ್ಞಾನಿಕ ಸಂಶೋಧನೆಯ ಮುಂಚೂಣಿಯಲ್ಲಿರಬಯಸುವ ದೇಶದಲ್ಲಿ ಕನಿಷ್ಠ ಪಕ್ಷ 30,000 ವೈಜ್ಞಾನಿಕ ನಿಯತಕಾಲಿಕಗಳಿರಬೇಕು. ನಮ್ಮ ದೇಶದಲ್ಲಿರುವ ಐನೂರು ಆರುನೂರು ವಿದ್ಯಾಸಂಸ್ಥೆಗಳಿಂದಲೂ ನಮಗೆ ದೊರಕುವುದು ಕೇವಲ 25,000 ನಿಯತ ಕಾಲಿಕಗಳು. ಅಂದರೆ ನಾವು ಜಗತ್ತಿನ ಇತರ ಮುಂದುವರಿದ ದೇಶಗಳ ಸಮಕ್ಕೆ ಬರ ಬೇಕಾದರೆ ಇನ್ನೂ 5,000 ನಿಯತಕಾಲಿಕೆಗಳು ಬೇಕು ಎಂದಾಯಿತು. ಇನ್ನು 5,000 ನಿಯತಕಾಲಿಕಗಳಿಗೆ ಚಂದಾದಾರಿಕೆ–ಅದೂ ವಿದೇಶಗಳಲ್ಲಿ ಪ್ರಕಟವಾದವು–ಸುಲಭಸಾಧ್ಯ ವಲ್ಲ. ಅಲ್ಲದೆ ಇದಕ್ಕೆ ತುಂಬ ವಿದೇಶೀ ವಿನಿಮಯ ಬೇಕು. ನಾವು ಗ್ರಂಥಗಳ ಸೇರ್ಪಡೆ, ವಾಚನಸಾಮಗ್ರಿಗಳನ್ನು ತಾಂತ್ರಿಕವಾಗಿ ನಕಲು ಮಾಡುವಿಕೆ, ಸಂಗ್ರಹಣ ಕೇಂದ್ರಗಳು ಮೊದಲಾದ ವಿಷಯಗಳಲ್ಲಿ, ಪರಸ್ಪರ ಸಹಕರಿಸಿದರೆ ಇವನ್ನೆಲ್ಲ ಸಂಗ್ರಹಿಸಬಹುದು. ಈ ವಿಷಯಗಳಲ್ಲೆಲ್ಲ ಸಂಯುಕ್ತ ಸಂಸ್ಥಾನ ದಾರಿ ತೋರಿಸಿಕೊಟ್ಟಿದೆ. ನಾವು ಅದರ ಅನು ಭವದಿಂದ ಬಹಳ ಲಾಭ ಪಡೆಯಬಹುದು.

ಸರ್ಕಾರಿ ದಾಖಲೆಗಳು

ಅಮೆರಿಕವಿಶ್ವವಿದ್ಯಾಲಯ ಗ್ರಂಥಾಲಯಗಳ ಇನ್ನೊಂದು ವೈಶಿಷ್ಟ್ಯವನ್ನು ನಾವು ಅನುಸರಿಸಬೇಕು. ಅದು ಸರ್ಕಾರೀ ದಾಖಲೆಗೆ ಸಂಬಂಧಿಸಿದುದು. ಅಮೆರಿಕದ ಸಂಯುಕ್ತ ಹಾಗೂ ಸಂಸ್ಥಾನ ಸರ್ಕಾರಗಳು ತಮ್ಮ ಪ್ರಕಟಣೆಗಳನ್ನು ಸಂಗ್ರಹಿಸಿಡಲು ಆದರ್ಶಪ್ರಾಯ ವಾದೆಡೆ ಇರುವ ಕೆಲವು ವಿಶ್ವವಿದ್ಯಾನಿಲಯ ಗ್ರಂಥಾಲಯಗಳನ್ನು ಆಗಾರ ಕೇಂದ್ರಗಳಾಗಿ ಗೊತ್ತುಮಾಡುತ್ತವೆ. ಇದರಿಂದ, ಸರ್ಕಾರಿ ದಾಖಲೆಗಳನ್ನು ಅಡಿಗಡಿಗೆ ನೋಡಬೇಕಾದ ವಿದ್ವಾಂಸರಿಗೂ ಸಂಶೋಧಕರಿಗೂ ಅವು ಬೇಗನೆ ದೊರಕುತ್ತವೆ. ಕಲ್ಕತ್ತದ ರಾಷ್ಟ್ರೀಯ ಗ್ರಂಥಾಲಯವನ್ನು ಬಿಟ್ಟರೆ ದೇಶದ ಮತ್ತಾವ ಗ್ರಂಥಾಲಯವೂ ಸಾಕಷ್ಟು ಕೇಂದ್ರ ಸರ್ಕಾರೀ ದಾಖಲೆಗಳ ಪ್ರಾತಿನಿಧಿಕ ಸಂಗ್ರಹಗಳನ್ನು ಇಟ್ಟಿರುವುದಾಗಿ ಹೆಮ್ಮೆಪಟ್ಟು ಕೊಳ್ಳುವಂತಿಲ್ಲ. ರಾಜ್ಯದ ಯಾವುದೇ ಗ್ರಂಥಾಲಯದಲ್ಲೂ ರಾಜ್ಯ ಸರ್ಕಾರದ ದಾಖಲೆ ಗಳಿಲ್ಲದಿರುವುದಂತೂ ಎದ್ದು ಕಾಣುತ್ತದೆ. ಕರ್ಣಾಟಕ ಸರ್ಕಾರ ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳ ಜಂಟಿ ಆಶ್ರಯದಲ್ಲಿ "ಸಾಮಾಜಿಕ ಬದಲಾವಣೆಯಲ್ಲಿ ವಿದ್ವಜ್ಜನರ ಪಾತ್ರ" ಎಂಬ ವಿಷಯದ ಮೇಲೆ ಹಲವುವರುಷಗಳ ಹಿಂದೆ ನಡೆದ ಒಂದು ಗೋಷ್ಠಿಯಲ್ಲಿ ಕರ್ನಾಟಕ ರಾಜ್ಯದ ಮೂರು ವಿಶ್ವವಿದ್ಯಾಲಯಗಳ ಅಧ್ಯಾಪಕರು, ಕೇಂದ್ರ ಹಾಗೂ ರಾಜ್ಯ ಸರ್ಕಾರಿ ದಾಖಲೆಗಳು ಸುಲಭವಾಗಿ ದೊರಕುತ್ತಿಲ್ಲದೆ ತಮ್ಮ ಸಂಶೋಧನ ಕಾರ್ಯಕ್ಕೆ ಬಹಳ ತೊಂದರೆಯಾಗಿದೆಯೆಂದು ಒಮ್ಮತದಿಂದ ಹೇಳಿಕೊಂಡರು. ಸಂಶೋಧ ಕರ ಈ ಕೊರತೆಯನ್ನು ರಾಜ್ಯಸರ್ಕಾರಗಳು ಎಷ್ಟು ಬೇಗ ನಿವಾರಿಸುವವೋ ಅಷ್ಟು ಅವು ಗಳಿಗೆ ಕ್ಷೇಮ.

ಕಂಪ್ಯೂಟರುಗಳ ಬಳಕೆ

ಅಮೆರಿಕ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳ ದೃಷ್ಟಿಯಲ್ಲಿ ಎದ್ದು ಕಾಣುವ ಅತ್ಯಂತ ಮಹತ್ವಪೂರ್ಣಕ್ರಾಂತಿಯೆಂದರೆ ಸ್ವಯಂಚಾಲಿತ ಯಂತ್ರವ್ಯವಸ್ಥೆ ತಾಂತ್ರಿಕ ಹಾಗೂ ವೈಜ್ಞಾನಿಕ ಸಂಶೋಧನೆಗಳ ಫಲವಾಗಿ ದೊರೆತಿರುವ ನಕಲು ಯಂತ್ರಗಳು, ಪುಸ್ತಕ ವಾಹಕಗಳು, ಫ್ಲೆಕ್ಸೊ ಲೇಖನಗಳು, ನಿರ್ವಾತ ಮಾರ್ಜಕಗಳು–ಇವೇ ಮೊದ ಲಾದ ಹೆಚ್ಚು ಕಡಮೆ ಎಲ್ಲ ಸಾಧನೋಪಾಯಗಳನ್ನೂ ಪಡೆದಿರುವುದೇ ಅಲ್ಲದೆ ಅಮೆರಿ ಕದ ಗ್ರಂಥಾಲಯಗಳು ಈಗ ಜ್ಞಾನವನ್ನು ರಕ್ಷಿಸಿಡಲು ಕಂಪ್ಯೂಟರುಗಳನ್ನು ಪ್ರಯೋಗಿಸಿ ನೋಡುತ್ತಿವೆ. ಓದುಗ ಸುಮ್ಮನೆ ತನ್ನ ಹಾಸಿಗೆಯ ಮೇಲೆ ಮಲಗಿಕೊಂಡು ಒಂದು ನಂಬರಿಗೆ ಟೆಲಿಫೋನ್ ಫಲಕವನ್ನು ತಿರುಗಿಸಿ ತನಗೆ ಬೇಕಾದ ವಾಚನ ಸಾಮಗ್ರಿಯನ್ನು ಪಡೆಯಬಹುದಾದಂತಹ ಕಾಲ ಹತ್ತಿರದಲ್ಲಿ ಇರಬಹುದು.

ಸಂಯುಕ್ತ ಸಂಸ್ಥಾನವನ್ನು ಆಧುನಿಕ ಗ್ರಂಥಾಲಯ ಚಳವಳಿಯ ತಾಯಿನಾಡು ಎಂದು ಪ್ರಶಂಸಿಸಿರುವುದು ಯುಕ್ತವಾಗಿಯೇ ಇದೆ. ಇದರ ಪ್ರಭಾವ ಭಾರತೀಯ ಗ್ರಂಥಾಲಯ ಚಳವಳಿಯ ಮೇಲೆ ಸಾಕಷ್ಟು ಆಗಿದೆ ಎನ್ನುವುದರಲ್ಲಿ ಆಶ್ಚರ್ಯವಿಲ್ಲ.

ಅಮೆರಿಕ ಸಂಯುಕ್ತ ಸಂಸ್ಥಾನದ ಗ್ರಂಥಾಲಯಗಳು ಹೇಗೆ ಕೆಲಸಮಾಡುತ್ತವೆ ಎನ್ನುವುದನ್ನು ನೋಡಲು ಇಲ್ಲವೆ ಅಲ್ಲಿಯ ಗ್ರಂಥಾಲಯ ವಿಜ್ಞಾನದ ಶಿಕ್ಷಣ ಪಡೆಯಲು ಹೋದ ಭಾರತೀಯ ವಿಶ್ವವಿದ್ಯಾಲಯದ ಹಾಗೂ ಇತರ ಗ್ರಂಥಪಾಲರು ತಮ್ಮ ಅವಲೋಕನದಿಂದ ಪ್ರಭಾವಿತರಾಗಿದ್ದಾರೆ. ಪರಿಣಾಮವಾಗಿ, ಅವರಲ್ಲಿ ಬಹಳಷ್ಟು ಜನ ಅಮೆರಿಕದ ಗ್ರಂಥಾಲಯ ವ್ಯವಸ್ಥೆ ಹಾಗೂ ಆಡಳಿತ ಕ್ರಮದ ಕೆಲವು ಅತ್ಯುತ್ತಮ ಅಂಶಗಳನ್ನು ತಮ್ಮ ತಮ್ಮ ಗ್ರಂಥಾಲಯಗಳಲ್ಲಿ ಜಾರಿಗೆ ತಂದಿದ್ದಾರೆ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗದಿಂದಾಗಿ ಮತ್ತು ಡಾ. ಎಸ್. ಆರ್. ರಂಗನಾಥನ್, ಶ್ರೀ ಬಿ. ಎಸ್. ಕೇಶವನ್, ಪ್ರೊ. ಡಿ. ಎನ್. ಮಾರ್ಷಲ್ ಮೊದಲಾದ ಶ್ರೇಷ್ಠ ಗ್ರಂಥಪಾಲರ ಪರಿಶ್ರಮದ ಫಲವಾಗಿ ನಮ್ಮ ವಿಶ್ವವಿದ್ಯಾಲಯಗಳ ಗ್ರಂಥಾಲಯ ಪರಿಸ್ಥಿತಿಯಲ್ಲಿ ಒಂದು ಕ್ರಾಂತಿ ನಡೆಯುತ್ತಿದೆ. ಈ ಕ್ರಾಂತಿ ಯಶಸ್ವಿಯಾಗಬೇಕಾದರೆ ಈ ಎರಡು ದೇಶಗಳ ನಡುವೆ ಇನ್ನೂ ಹೆಚ್ಚಿನ ಫಲಕಾರಿಯಾದ ಸಹಕಾರ ಅತ್ಯಗತ್ಯ.

[ಅನುವಾದ : **ಬಾ ವೇ ಶ್ರೀಧರ**

೫/ವೈಜ್ಞಾನಿಕ ಗ್ರಂಥಾಲಯ

ವೈಜ್ಞಾನಿಕ ಗ್ರಂಥಾಲಯುಗಳು ವಿಶಿಷ್ಟ ಗ್ರಂಥಾಲಯುಗಳ ವರ್ಗಕ್ಕೆ ಸೇರಿದವುಗಳು. ಸಾಮಾನ್ಯ ಗ್ರಂಥಾಲಯುಗಳ ಕತೆ ಇತಿಹಾಸದೊಡನೆ ಹಾಸುಹೊಕ್ಕಾಗಿ ಬೆಳೆದುಬಂದಿದೆ. ಆದರೆ ವಿಶಿಷ್ಟ ಗ್ರಂಥಾಲಯುಗಳ ಕತೆ ಈ ಶತಮಾನದ ಆದಿಯಿಂದ ಆರಂಭವಾಗುತ್ತದೆ. ವೈಜ್ಞಾನಿಕ ಸಂಶೋಧನೆಗಳು ದ್ವಿಗುಣಿತಗೊಂಡು ಅವುಗಳ ಪ್ರಯೋಜನಕ್ಕೆ ಮನಸೋತ ಜನಸಾಮಾನ್ಯರು, ಸರಕಾರಗಳು, ಉದ್ದಿಮೆಗಳು ಅವುಗಳಿಗೆ ಮನ್ನಣೆ ಕೊಟ್ಟಂದಿನಿಂದ ವಿಜ್ಞಾನಕ್ಕೆ, ವೈಜ್ಞಾನಿಕ ಸಂಶೋಧನೆಗಳಿಗೆ ಅಗ್ರಸ್ಥಾನ ದೊರಕಿತು. ಇದರಿಂದ ವೈಜ್ಞಾನಿಕ ಸಂಶೋಧಕರ ಬಳಗ ಗಮನಾರ್ಹವಾಗಿ ಬೆಳೆಯಿತು. ಸಾಮಾನ್ಯ ಗ್ರಂಥಾಲಯುಗಳಲ್ಲಿ ಈ ಸಂಶೋಧಕ ಬಳಗದವರು ವೈಶಿಷ್ಟ್ಯಪೂರ್ಣ ಸೇವೆಯನ್ನು ಅಪೇಕ್ಷಿಸತೊಡಗಿದರು. ಸಂಶೋಧನಾ ಕೇಂದ್ರಗಳಲ್ಲಿ (ಪ್ರಯೋಗ ಶಾಲೆಗಳ ವಲಯದಲ್ಲಿ) ಬೆಳೆದುಬಂದ ಗ್ರಂಥ ಸಂಗ್ರಹಗಳು ಅವ್ಯವಸ್ಥಿತವಾಗಿದ್ದುದರಿಂದ ವಿಜ್ಞಾನಿಗಳ (ಏಕಾಗ್ರತೆಯು) ಅಭ್ಯಾಸಕ್ಕೆ ಅನಾನುಕೂಲತೆಯಾಗಿತ್ತು. ಇದೆಲ್ಲ ಸಫಲವಾಗಿ ಪ್ರತ್ಯೇಕವಾದ ವೈಜ್ಞಾನಿಕ ಗ್ರಂಥಾಲಯುಗಳ ಆವಶ್ಯಕತೆ ಹುಟ್ಟಿಕೊಂಡಿತು.

ವೈಜ್ಞಾನಿಕ ಸಂಶೋಧನೆಗಳು ಶತಮಾನಗಳಿಂದ ನಡೆದುಬಂದಿದ್ದರೂ ವೈಜ್ಞಾನಿಕ ಯುಗ ಪ್ರಾರಂಭವಾದದ್ದು ಇತ್ತೀಚೆಗೆ ಮಾತ್ರ. ಜರ್ಮನ್ ದೇಶದ ಪ್ರಸಿದ್ಧ ಭೌತ ವಿಜ್ಞಾನಿ ವಿಲ್‌ಹೆಲ್ಮ ರೋಂಟ ಜೆನ್ (Roentgen) 1866ರಲ್ಲಿ ಈ ಕಿರಣವನ್ನು (Xray) ಸಂಶೋಧಿಸಿ ಇಲೆಕ್ಟ್ರಾನಿಕ್ ಯುಗದ ನಾಂದಿ ಹಾಡಿದ. ಅಂದಿನಿಂದ ಪ್ರಪಂಚದಾದ್ಯಂತ ವಿಜ್ಞಾನಿಗಳು ಅವಿರತವಾಗಿ ನಾನಾ ಮುಖವಾಗಿ ಸಂಶೋಧನೆ ನಡೆಸುತ್ತಿದ್ದಾರೆ. ನಿಸರ್ಗದ ಅಂತರಾಳವನ್ನು ಹೊಕ್ಕು ರಹಸ್ಯವನ್ನು ಭೇದಿಸಿ ಅದರ ಸಿರಿಯನ್ನು ಸೂರೆಗೊಂಡು, ಶ್ರಮವರಿಯದ ನಿರಂತರ ಸಾಹಸದಿಂದ ನೂತನ ಸಂಶೋಧನೆಗಳನ್ನು ಬೆಳಕಿಗೆ ತಂದಿದ್ದಾರೆ.

ಕೆಳಗೆ ಹೇಳುವ ಕಾರಣಗಳಿಂದಾಗಿ ಈ ಸಾಹಸಪೂರ್ಣ ಉಪಕ್ರಮಕ್ಕೆ ಪ್ರಪಂಚದ ಎಲ್ಲ ರಾಷ್ಟ್ರಗಳೂ ಪ್ರೋತ್ಸಾಹ ಹಾಗೂ ಪ್ರಚೋದನೆ ಕೊಡುತ್ತವೆ.

1) ವೈಜ್ಞಾನಿಕ ಸಂಶೋಧನೆಗಳ ವರದಾನದಿಂದ ಜನಸಾಮಾನ್ಯರ ನಿತ್ಯಜೀವನವನ್ನು ಸುಗಮ, ಸತ್ವಪೂರಿತ ಹಾಗೂ ಸುಂದರಗೊಳಿಸುವದು.

2) ಪ್ರತಿಯೊಂದು ರಾಷ್ಟ್ರದ ಸಂರಕ್ಷಣೆ ಪಡೆಯನ್ನು ಅತ್ಯಾಧುನಿಕ ರೀತಿಯಿಂದ ಸುಸಜ್ಜಿತಗೊಳಿಸಿಕೊಳ್ಳುವುದು ; ಹಾಗೂ

3) ಸ್ವದೇಶದ ಸರಕುಗಳನ್ನುಉತ್ಕೃಷ್ಟ ಮಟ್ಟದಲ್ಲಿ ತಯಾರಿಸಿ ಪರದೇಶದ ಸ್ಪರ್ಧಾತ್ಮಕ ಮಾರುಕಟ್ಟೆಗಳಲ್ಲಿ ಅವುಗಳಿಗೆ ಬೇಡಿಕೆ ದೊರಕಿಸಿಕೊಳ್ಳುವದು.

ಪ್ರಪಂಚದ ಪ್ರಗತಿಪರ ದೇಶಗಳೆಲ್ಲವೂ ಈ ಮೂರು ಅಂಶಗಳಲ್ಲಿ ಅಗ್ರಸ್ಥಾನವನ್ನು ಪಡೆಯಲು ಅವಿಶ್ರಾಂತವಾಗಿ ಪರಿಶ್ರಮಿಸುತ್ತಿವೆ. ಹಿಂದುಳಿದ ದೇಶಗಳು ಪ್ರಗತಿಯ ಗುರಿಯತ್ತ ಅಂಬೆಗಾಲು ಹಾಕುತ್ತಿವೆ. ಪ್ರಗತಿಯ ಕನಸು ಕಾಣುತ್ತಿವೆ. ಆ ಕನಸು ನನಸಾಗುವದು ವಿಜ್ಞಾನಭಾಗ್ಯದೇವತೆಯ ವರಪ್ರಸಾದದಿಂದ ಮಾತ್ರ ಸಾಧ್ಯ.

ನಿಜವಾದ ವೈಜ್ಞಾನಿಕ ಸಂಶೋಧನೆಗಳು ಪ್ರಪ್ರಥಮವಾಗಿ ರೂಪುಗೊಳ್ಳುವದು ವಿಜ್ಞಾನಿಯು ಗ್ರಂಥಾಲಯದ ಪ್ರಶಾಂತ ವಾತಾವರಣದಲ್ಲಿ ತಾನು ನಡೆಸಿದ ಪ್ರಯೋಗ ವನ್ನು ಕುರಿತು ತಪೋಮಗ್ನ ವ್ಯಾಸಂಗ ಮಾಡುತ್ತಿರುವಾಗ. ಹೀಗೆ ಗ್ರಂಥಾಲಯಗಳಲ್ಲಿ ಓದಿನಲ್ಲಿ ಮಗ್ನನಾದಾಗ ಸುಳಿದ ಹೊಸ ಸಂಶೋಧನೆಗಳ ವಿಚಾರಗಳನ್ನು ನಂತರ ಆ ವಿಜ್ಞಾನಿ ಪ್ರಯೋಗಶಾಲೆಯಲ್ಲಿ ಪ್ರಾತ್ಯಕ್ಷಿಕವಾಗಿ ಪರಿಶೀಲಿಸಿ ಪ್ರಸಿದ್ಧಿಪಡಿಸುವನು. ಹೀಗಾಗಿ ಯಾವುದೊಂದು ವೈಜ್ಞಾನಿಕ ಸಂಶೋಧನೆಗೆ ಪ್ರಯೋಗ ಶಾಲೆಯಷ್ಟೇ ಗ್ರಂಥಾ ಲಯವು ಅನಿವಾರ್ಯವಾದ ಮತ್ತು ಅಮೂಲ್ಯವಾದ ಆವಶ್ಯಕತೆಯಾಗಿದೆ.

ಇಂಥ ವೈಜ್ಞಾನಿಕ ಗ್ರಂಥಾಲಯಗಳ ವೈಶಿಷ್ಟ್ಯಗಳೇನು ? ಅವುಗಳ ಬೇಡಿಕೆಗಳೇನು ಎಂಬುದನ್ನು ಕುರಿತು ಸ್ವಲ್ಪ ವಿಚಾರ ಮಾಡಬಹುದು.

ಸಾಮಾನ್ಯ ಗ್ರಂಥಾಲಯಗಳನ್ನು ಸಾಂಸ್ಕೃತಿಕ ಹಾಗೂ ಶೈಕ್ಷಣಿಕ (Cultural and Educational) ಗ್ರಂಥಾಲಯಗಳೆಂದು ಬಣ್ಣಿಸುವುದಾದರೆ ಈ ವೈಜ್ಞಾನಿಕ ಗ್ರಂಥಾ ಲಯಗಳನ್ನು ಸಂಶೋಧನ (Research) ಗ್ರಂಥಾಲಯಗಳೆಂದು ಪರಿಗಣಿಸಬಹುದು. ವೈಜ್ಞಾನಿಕ ಗ್ರಂಥಾಲಯಗಳು ಸಾಮಾನ್ಯ ಗ್ರಂಥಾಲಯಗಳಿಂದ ಮುಖ್ಯವಾಗಿ 4 ಅಂಶ ಗಳಲ್ಲಿ ಭಿನ್ನವಾಗಿರುತ್ತವೆ.

1) ಗ್ರಂಥ ಸಂಗ್ರಹ
2) ಸಿಬ್ಬಂದಿ
3) ಆಡಳಿತ ವ್ಯವಸ್ಥೆ
4) ಓದುಗರಿಗೆ ಒದಗಿಸಬಹುದಾದ ಸೇವೆಯ ರೀತಿ.

ಈ ನಾಲ್ಕು ಅಂಶಗಳಲ್ಲಿ ವೈಜ್ಞಾನಿಕ ಗ್ರಂಥಾಲಯ ಹೇಗೆ ಭಿನ್ನವಾಗಿರುತ್ತದೆ, ವ್ಯವಸ್ಥಿತವಾಗಿರುತ್ತದೆ ಎಂಬುದನ್ನು ನೋಡೋಣ.

1.ಗ್ರಂಥ ಸಂಗ್ರಹ. ಸಾಮಾನ್ಯ ಗ್ರಂಥಾಲಯದಲ್ಲಿನ ಗ್ರಂಥಸಂಗ್ರಹ ಜ್ಞಾನ ಪ್ರಪಂಚದ ಎಲ್ಲ ಶಾಖೆಗಳನ್ನು ಪ್ರತಿನಿಧಿಸುತ್ತದೆಯಲ್ಲದೆ ಸಂಖ್ಯೆಯಲ್ಲಿ ವಿಪುಲವಾಗಿರು ತ್ತದೆ.

ಆದರೆ ವೈಜ್ಞಾನಿಕ ಗ್ರಂಥಾಲಯದ ಸಂಗ್ರಹ ವಿಜ್ಞಾನಪ್ರಪಂಚಕ್ಕೆ ಮಾತ್ರ ಸೀಮಿತ ವಾಗಿರುತ್ತದೆ. ಸಾಮಾನ್ಯವಾಗಿ ಗಾತ್ರದಲ್ಲಿ ಚಿಕ್ಕದಾಗಿರುತ್ತದೆ. ಕೆಲವೊಂದು ಸಂಶೋ ಧನ ಸಂಸ್ಥೆಗಳ ಅಂಗವಾಗಿ ಬೆಳೆದುಬಂದ ವೈಜ್ಞಾನಿಕ ಗ್ರಂಥಾಲಯಗಳ ಗ್ರಂಥಸಂಗ್ರಹ ವಿಜ್ಞಾನಪ್ರಪಂಚದ ಯಾವುದೇ ಒಂದು ವಿಶಿಷ್ಟ ಭಾಗವನ್ನೋ, ಅಂಶವನ್ನೋ ಕುರಿತ

ದ್ದಿರಬಹುದು. ಮುಂಬೈ ಮಹಾನಗರದಲ್ಲಿರುವ (Tata Institute of Fundamental Research) ಇದರ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಇದರ ಗ್ರಂಥಾಲಯದಲ್ಲಿನ ಗ್ರಂಥಸಂಗ್ರಹಣ ಬಹು ಅಂಶ ಗಣಿತಶಾಸ್ತ್ರ, ಭೌತಶಾಸ್ತ್ರ, ಶಿಲ್ಪ ಶಾಸ್ತ್ರ, ರಸಾಯನಶಾಸ್ತ್ರ ಮುಂತಾದವುಗಳಿಗೆ ಮಾತ್ರ ಪರಿಮಿತವಾಗಿದೆ. ಅಮೇರಿಕೆ ಯೊಂದರಲ್ಲಿಯೇ ಹಿಮ (Snow) ಬರ್ಫ (Ice) ಹಾಗೂ ಮಂಜು ಮುಂತಾದ ಸೂಕ್ಷ್ಮ ವಿಷಯಗಳ ಬಗ್ಗೆ ಸಂಶೋಧನೆ ನಡೆಸಿರುವ ಸಂಸ್ಥೆಗಳ ಸಂಖ್ಯೆ 300ರಕ್ಕೂ ಮಿಕ್ಕಿವೆ. ಇವುಗಳ ಅಂಗವಾಗಿರುವ ಗ್ರಂಥಾಲಯಗಳ ವಾರ್ತಾಕೇಂದ್ರಗಳ ಗ್ರಂಥ ಸಂಗ್ರಹಗಳು ಇನ್ನಷ್ಟು ವಿಶಿಷ್ಟವಾಗಿವೆ.

ಸಾಮಾನ್ಯ ಗ್ರಂಥಾಲಯಗಳಲ್ಲಿ ಗ್ರಂಥಗಳೂ ಹಾಗೂ ನಿಯತಕಾಲಿಕೆಗಳೂ ವಿಪುಲ ವಾಗಿರುತ್ತವೆ. ಆದರೆ ವೈಜ್ಞಾನಿಕ ಗ್ರಂಥಾಲಯಗಳಲ್ಲಿ ಇವುಗಳಲ್ಲದೆ ಇತರ ಪ್ರಕಾರದ ಮುಖ್ಯಾಂಶ ಸಾಹಿತ್ಯವನ್ನು ಸಂಗ್ರಹಿಸಬೇಕಾಗುತ್ತದೆ. ಇವುಗಳಲ್ಲಿ ಪ್ರಮುಖವಾದವು ಗಳೆಂದರೆ: ವೈಜ್ಞಾನಿಕ ಸಂಶೋಧನೆಯ ವರದಿಗಳು. ಪ್ರಪಂಚದ ಅನೇಕ ಸ್ವತಂತ್ರ ಹಾಗೂ ಸಾರ್ವಜನಿಕ ಸಂಶೋಧನಾ ಕೇಂದ್ರಗಳ, ಸರಕಾರೀ ಪ್ರಯೋಗಶಾಲೆಗಳ, ಸರಕಾರದ ವಿವಿಧ ವೈಜ್ಞಾನಿಕ ವಿಭಾಗಗಳ (Government departments) ಔದ್ಯಮಿಕ ಸಂಶೋಧನಾ ಪ್ರಯೋಗ ಶಾಲೆಗಳ ಪ್ರಕಟಣೆಗಳು ಇತ್ಯಾದಿ. ಅಲ್ಲದೆ ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ಲೇಖನಗಳ ಪ್ರತಿಗಳು: ವೈಜ್ಞಾನಿಕ ಪ್ರಬಂಧಗಳು (Theses) ಹಾಗೂ ವಿಜ್ಞಾನದ ಪ್ರೌಢ ಉಪನ್ಯಾಸಗಳನ್ನು ಸಂಗ್ರಹವಾಗಿ ತಿಳಿಸುವ ಹೊತ್ತಿಗೆಗಳು (Dissertations): ವರ್ತಮಾನ ಪತ್ರಿಕೆಗಳಿಂದ ಕತ್ತರಿಸಿ ತೆಗೆದ ವಿಷಯ ಭಾಗಗಳು (press cuttings) ವೈಜ್ಞಾನಿಕ ಸ್ವಾಮ್ಯದ ಸನ್ನದುಗಳು (Patents); ವಿಶಿಷ್ಟ ಜಾಹೀರಾತುಗಳು; ಸಂಶೋಧನೆಯನ್ನು ಕುರಿತ ವಿವರಣ ಪತ್ರಗಳು (Specifications); ನಕ್ಷೆಗಳು; ಪುಟಗಳು (Standards) ಚಿತ್ರಗಳು; ಸೂಕ್ಷ್ಮ ಪತ್ರಗಳು (Micro documents) ವಿದೇಶ ಭಾಷೆಗಳಲ್ಲಿ ಪ್ರಕಟವಾದ ಲೇಖನಗಳ ಭಾಷಾಂತರ ಗಳು; ನಿಯತಕಾಲಿಕೆಗಳಲ್ಲಿನ ಲೇಖನ ಸೂಚಿಗಳು (Indices), ಸಾರಸಂಗ್ರಹಗಳು (Abstracts) (ಇಂಥ ಸಾರಸಂಗ್ರಹ ಪತ್ರಿಕೆಗಳ ಸಂಖ್ಯೆ 3500ಕ್ಕೂ ಮಿಕ್ಕಿದೆ)—

2. ಸಿಬ್ಬಂದಿ: ಇಂಥ ವಿಶಿಷ್ಟ ಗ್ರಂಥ ಸಂಗ್ರಹವನ್ನು ದಕ್ಷ ರೀತಿಯಿಂದ ವ್ಯವಸ್ಥೆ ಗೊಳಿಸಿ ಬೆಳೆಸಿಕೊಂಡು ಬರುವ ಹೊಣೆ ಮಹತ್ತರವಾದುದು. ಈ ಕೆಲಸ ಸಾಮಾನ್ಯ ಗ್ರಂಥಾಲಯದ ಸಿಬ್ಬಂದಿಯಿಂದ ಅಸಾಧ್ಯ. ವೈಜ್ಞಾನಿಕ ವಿಷಯಗಳಲ್ಲಿ ಆಳವಾಗಿ ವ್ಯಾಸಂಗಮಾಡಿ ಗ್ರಂಥಾಲಯ ವಿಜ್ಞಾನದಲ್ಲಿ ವಿಶೇಷ ತರಬೇತಿ ಹೊಂದಿದ ಸಮರ್ಥ ಸಿಬ್ಬಂದಿಯು ಇಲ್ಲಿ ಅವಶ್ಯವಾಗಿ ಬೇಕು. ಸಾಮಾನ್ಯ ಗ್ರಂಥಾಲಯದಲ್ಲಿ ಓದುಗರ ಸಂಖ್ಯೆ ವಿಪುಲ. ಅವರ ಬೇಡಿಕೆಗಳು ಗಾತ್ರದಲ್ಲಿ ವಿವಿಧ ಹಾಗೂ ವಿಪುಲ. ಆದರೆ ಆದರಲ್ಲಿ ಆಳ, ತೀಕ್ಷ್ಣತೆ, ಮೊನಚು ಕಡಿಮೆ. ಓದುಗರ ವ್ಯಕ್ತಿಶಃ ಪರಿಚಯ ಕಡಿಮೆ. ಅಸಾಧ್ಯವೆಂದರೂ ಸರಿಯೇ; ಆದರೆ ವಿಶಿಷ್ಟ ಗ್ರಂಥಾಲಯದ ಗ್ರಂಥಭಂಡಾರಿ ತನ್ನ

ಪ್ರತಿಯೊಬ್ಬ ಓದುಗನನ್ನೂ ಅವನ ನಿಜನಾಮದಿಂದ, ಅದೇಕೆ ಅವನ ಉಪನಾಮದಿಂದ ಕರೆಯುವಷ್ಟು ಸುಪರಿಚಿತ ; ಸ್ನೇಹಪರ.

ಈತ ತನ್ನ ಓದುಗರಾದ ವೈಜ್ಞಾನಿಕ ಸಂಶೋಧಕರೊಡಗೂಡಿ ಕೆಲಸಮಾಡಬೇಕಾಗುತ್ತದೆ. ಅವರು ನಡೆಸಿಕೊಂಡು ಬರುತ್ತಿರುವ ಸಂಶೋಧನೆಗಳ ಪರಿಚಯ ಅವನಿಗೆ ಅಗತ್ಯ. ಇವನ ಸಹಾಯಕರೂ ವಿಜ್ಞಾನ ವಿಷಯಗಳಲ್ಲಿ ಪರಿಣತಿ ಹೊಂದಿದವರೂ, ಗ್ರಂಥಾಲಯ ಶಾಸ್ತ್ರದ ಗುಟ್ಟುಗಳನ್ನರಿತವರೂ ಆಗಿರಬೇಕಾಗುತ್ತದೆ. ಸಂಶೋಧಕರಿಗೆ ಬೇಕಾಗುವ ವಿದೇಶ ಭಾಷೆಗಳಲ್ಲಿಯ ಲೇಖನಗಳ ಭಾಷಾಂತರಗಳನ್ನೊದಗಿಸಲು ಭಾಷಾಂತರಕಾರರು ಬೇಕು. ವಿಪುಲವಾಗಿ ಪ್ರಕಟವಾಗುತ್ತಿರುವ, ನಿಯತಕಾಲಿಕೆಗಳಲ್ಲಿರುವ ಲೇಖನಗಳ ವೈಜ್ಞಾನಿಕ ಹಾಗೂ ತಾಂತ್ರಿಕ ವರದಿಗಳ ಸಾರವನ್ನೊದಗಿಸಲು ಒಬ್ಬಿಬ್ಬರು ಸಾರಸಂಗ್ರಾಹಕರಿರಬೇಕು. ಅವರಿಲ್ಲದಿದ್ದಲ್ಲಿ ಕೊನೆಯ ಪಕ್ಷ ಸೂಚೀಕಾರರು, ಲೇಖನಗಳ ಫೋಟೋ ಅಥವಾ ಸೂಕ್ಷ್ಮಪತ್ರಕ (microfilms) ಗಳನ್ನೊದಗಿವಸಲು ಫೋಟೋಗ್ರಾಫರರು ಇತ್ಯಾದಿಯಾಗಿ ವಿಶೇಷ ಸಿಬ್ಬಂದಿ ವೈಜ್ಞಾನಿಕ ಗ್ರಂಥಾಲಯದಲ್ಲಿ ಅವಶ್ಯವಾಗಿ ಇರಬೇಕು.

3). ವ್ಯವಸ್ಥೆ ಹಾಗೂ ಆಡಳಿತ : ವೈಜ್ಞಾನಿಕ ಗ್ರಂಥಾಲಯಗಳ ಗ್ರಂಥಸಂಗ್ರಹ ವಿಶಿಷ್ಟವಾದುದರಿಂದ ಅವುಗಳ ಆಯ್ಕೆಯನ್ನು ಬಹು ಪರಿಶ್ರಮದಿಂದ ಹಾಗೂ ಸೂಕ್ಷ್ಮ ರೀತಿಯಿಂದಾಗಿ ಮಾಡಬೇಕಾಗುತ್ತದೆ. ಗ್ರಂಥಗಳನ್ನು ತರಿಸಿಕೊಳ್ಳುವ ಕಾರ್ಯವನ್ನು (acquiring) ಬಹು ಶೀಘ್ರವಾಗಿ ಮಾಡಬೇಕಾಗುತ್ತದೆ. ಆರ್ಡರುಗಳನ್ನು ತಂತಿ ಮೂಲಕ ಅಥವಾ ಟೆಲಿಫೋನ್ ಮೂಲಕ ಕೊಡಬೇಕಾಗುವದು. ಆರ್ಡರು ಮಾಡಿದ ಸಾಹಿತ್ಯವನ್ನು ಒಮ್ಮೊಮ್ಮೆ ವಿಮಾನಮಾರ್ಗವಾಗಿ ತರಿಸಿಕೊಳ್ಳಬೇಕಾಗುವದು. ಸಾಮಾನ್ಯ ಗ್ರಂಥಗಳ ಉಪಯುಕ್ತತೆ ಅನೇಕ ವರುಷಗಳವರೆಗೆ ಇರಬಹುದು. ಆದರೆ ತಾಂತ್ರಿಕ ವೈಜ್ಞಾನಿಕ ವರದಿಗಳು ನಿಯತಕಾಲಿಕಗಳಲ್ಲಿಯ ಲೇಖನಗಳು ಇವುಗಳ ಜೀವಮಾನ ಬಹಳೇ ಸಣ್ಣದು. ಇವುಗಳು ಬೆಳಿಗ್ಗೆ ಉದಯಿಸಿ, ಮಧ್ಯಾಹ್ನಕ್ಕೆ ಅರಳಿ, ಮಟ ಮಟಿಸಿ ಸಾಯಂಕಾಲಕ್ಕೆ ಬಾಡಿಹೋಗುತ್ತವೆ.

ಈ ವಿಶಿಷ್ಟ ಸಂಗ್ರಹದ ವರ್ಗೀಕರಣ ಮಾಡುವಾಗ ಸಾಮಾನ್ಯ ವರ್ಗೀಕರಣ ಪದ್ಧತಿಯನ್ನು ಅನುಸರಿಸುವಂತಿಲ್ಲ. ಈ ಕೆಲಸಕ್ಕಾಗಿ ಅಂತಸ್ಥ ವರ್ಗೀಕರಣ ವಿಧಾನವನ್ನು (Depth Classification) ಬಳಸಬೇಕಾಗುತ್ತದೆ. ಪ್ರಪಂಚದಲ್ಲಿ ಇಂಥ ಮಾನ್ಯತೆ ಪಡೆದ ವರ್ಗೀಕರಣ ಪದ್ಧತಿಗಳೆಂದರೆ Universal Decimal Classification ಹಾಗೂ Colon Classification ಗಳು.

ಇದರಂತೆಯೇ ವೈಜ್ಞಾನಿಕ ಗ್ರಂಥಾಲಯದಲ್ಲಿನ ಸೂಚಿ, ವಿಶೇಷ ವಿವರಗಳನ್ನು, ಸಹಾಯಕವಾದ ಇತರ ಪತ್ರಕಗಳನ್ನು, ಒಳಗೊಂಡಿರಬೇಕಾಗುತ್ತದೆ. ಒಂದೇ ಒಂದು ಗ್ರಂಥದ ಅನೇಕ ಅಧ್ಯಾಯಗಳಿಗೆ ಮತ್ತು ನಿಯತಕಾಲಿಕೆಗಳಲ್ಲಿನ ಲೇಖನಗಳಿಗೆ ಇಲ್ಲಿ ಬೇರೆ ಬೇರೆ ಪತ್ರಕ (ಕಾರ್ಡು)ಗಳನ್ನು ಒದಗಿಸಬೇಕಾಗುತ್ತದೆ.

ಸಾಮಾನ್ಯ ಗ್ರಂಥಾಲಯಗಳಲ್ಲಿ ಅವಶ್ಯವಾಗಿ ಬೇಕಾಗುವ ಗ್ರಂಥ ಬೀರುಗಳು, ಸೂಚೀ ಖಾನೆಗಳ ಪೆಟ್ಟಿಗೆಗಳು, ಓದುಗರ ಮೇಜುಗಳು. ನಿಯತಕಾಲಿಕೆಗಳನ್ನು ಇಡಲು ವಿಶಿಷ್ಟವಾದ ಷೆಲ್ಫ್‌ಗಳು ಇತ್ಯಾದಿಗಳನ್ನಲ್ಲದೆ, ವೈಜ್ಞಾನಿಕ ಗ್ರಂಥಾಲಯ ವಿಶೇಷ ಯಂತ್ರೋಪಕರಣಗಳನ್ನು ಸಂಗ್ರಹಿಸಬೇಕಾಗುತ್ತದೆ. ಇವುಗಳಲ್ಲಿ ಮಹತ್ವವಾದವುಗಳೆಂದರೆ: ಮೈಕ್ರೊಫಿಲ್ಮಿಂಗ ಹಾಗೂ ಫೋಟೋ ಪ್ರತಿ, ಝೆರಾಕ್ಸ್ ಪ್ರತಿ ತೆಗೆಯುವ ಉಪಕರಣಗಳು. ಮೈಕ್ರೊಫಿಲ್ಮ ಮುಂತಾದ ಸೂಕ್ಷ್ಮ ಪತ್ರಗಳನ್ನೋದುವಕ್ಕೋಸ್ಕರ ಮೈಕ್ರೊ ಫಿಲ್ಮ ರೀಡರ್, ಕಾರ್ಡ ರೀಡರ್ ಮುಂತಾದವುಗಳು ವೈಜ್ಞಾನಿಕ ಗ್ರಂಥಾಲಯಗಳಲ್ಲಿ ಅವಶ್ಯವಾಗಿ ಇರಬೇಕಾಗುತ್ತದೆ. ಪ್ರಗತಿಪರ ವೈಜ್ಞಾನಿಕ ಗ್ರಂಥಾಲಯಗಳಲ್ಲಿ ಕಂಪ್ಯೂಟರಗಳನ್ನೇ ಗ್ರಂಥಗಳಲ್ಲಿನ ಮಾಹಿತಿ ಶೋಧನೆಗೆ ಅಳವಡಿಸಿಕೊಂಡಿರುತ್ತಾರೆ.

ವೈಜ್ಞಾನಿಕ ಗ್ರಂಥಾಲಯದ ಆಯವ್ಯಯ ಪಟ್ಟಿಕೆಯಲ್ಲಿ ನಿಯತಕಾಲಿಕೆಗಳ ಹಿಂದಣ ಸಂಪುಟಗಳನ್ನು ಕೊಳ್ಳುವುದಕ್ಕೆ, ಈಗಿನ ನಿಯತಕಾಲಿಕೆಗಳನ್ನು ಆದಷ್ಟು ಸಮಗ್ರವಾಗಿ ವರ್ಗಣಿಮೂಲಕ ತರಿಸಿಕೊಳ್ಳುವುದಕ್ಕೆ ಸೂಕ್ಷ್ಮ, ಪತ್ರಕಗಳ (Microdocuments) ಸಂಗ್ರಹಣೆಗೆ, ಫೋಟೋಗ್ರಾಫ್ ವೆಚ್ಚಕ್ಕೆ, ಟೆಲಿಫೋನ್, ಟೆಲಿಗ್ರಾಂ ವೆಚ್ಚಕ್ಕೆ, ಇತರ ಸಾಮಾನ್ಯ ಗ್ರಂಥಾಲಯಗಳಲ್ಲಿನಕ್ಕಿಂತ ಹೆಚ್ಚು ಹಣ ಮೀಸಲಾಗಿರುತ್ತದೆ.

4). ವೈಜ್ಞಾನಿಕ ಗ್ರಂಥಾಲಯಗಳು ಸಲ್ಲಿಸುವ ವಿಶೇಷ ಸೇವೆಗಳು : ಸಾಮಾನ್ಯ ಗ್ರಂಥಾಲಯಗಳಲ್ಲಿ ಗ್ರಂಥಗಳನ್ನು ಕೊಡಕೊಳ್ಳುವ ವ್ಯವಹಾರ ಜಾಸ್ತಿಯಾಗಿರುತ್ತದೆ. ಹೀಗಾಗಿ ಅಲ್ಲಿನ ಸೇವೆಯ ಕೇಂದ್ರ ಗ್ರಂಥಪರಿಸರಣ ಮಾತ್ರ; ವೈಜ್ಞಾನಿಕ ಗ್ರಂಥಾಲಯದಲ್ಲಿ ಅದು ವಿಶಿಷ್ಟ ವೈಜ್ಞಾನಿಕ ಸಂಗತಿಯ ಶೋಧದಲ್ಲಿ ಕೇಂದ್ರೀಕೃತವಾಗಿರುತ್ತದೆ. ಸಂಶೋಧನೆಯಲ್ಲಿ ತೊಡಗಿದ ವಿಜ್ಞಾನಿಗೆ ಸಮಗ್ರ ಗ್ರಂಥವನ್ನು ಪರಿಶೀಲಿಸುವ ಸಮಯವೂ ಇರುವದಿಲ್ಲ, ತಾಳ್ಮೆಯೂ ಇರುವದಿಲ್ಲ.

ವೈಜ್ಞಾನಿಕ ಸಂಶೋಧನೆಗಳನ್ನು ಆರ್ಥಿಕ ಅಭಿವೃದ್ಧಿಗಾಗಿ ಅಳವಡಿಸಿಕೊಳ್ಳಬೇಕಾದರೆ ಈ ಅವಸರದ ಪ್ರಸಂಗದಲ್ಲಿ ಸಂಶೋಧಕರು ಸಂಶೋಧನೆಗಳನ್ನು ನಡೆಸಿಕೊಂಡು ಹೋಗುವಲ್ಲಿ ವೈಜ್ಞಾನಿಕ ಗ್ರಂಥಾಲಯಗಳು ವಿಶೇಷ ಪರಿಶ್ರಮ ಪಡುತ್ತವೆ. ಸಂಶೋಧಕ ತನ್ನ ಸಂಶೋಧನೆಗಳನ್ನು ಸಮರ್ಥ ಹಾಗೂ ಶೀಘ್ರ ರೀತಿಯಲ್ಲಿ ನಡೆದುಕೊಂಡು ಹೋಗಲು ಬಹಳಷ್ಟು ವೈಜ್ಞಾನಿಕ ಸಾಹಿತ್ಯವನ್ನು ಅವಲೋಕಿಸಬೇಕಾಗುತ್ತದೆ. ಈ ಸಾಹಿತ್ಯ ಸಮೂಹದ ಗಾತ್ರ ಅಲ್ಪವಾದದ್ದೇನಲ್ಲ. 1750ನೇ ಇಸವಿಯಲ್ಲಿ ಪ್ರಪಂಚದಲ್ಲಿ ಒಟ್ಟಾರೆ ಹತ್ತೇ ಹತ್ತು ವೈಜ್ಞಾನಿಕ ನಿಯತಕಾಲಿಕೆಗಳಿದ್ದುವಂತೆ. ಇಂದಿಗೆ ಇವುಗಳ ಸಂಖ್ಯೆ 2 ಲಕ್ಷಕ್ಕೂ ಮೀರಿದೆ. ಕೇವಲ ಜೀವ–ವೈದ್ಯಶಾಸ್ತ್ರಗಳಿಗೆ (Bio-Medical sciences) ಸಂಬಂಧಿಸಿದ ನಿಯತಕಾಲಿಕೆಗಳ ಸಂಖ್ಯೆಯೇ 7 ಸಾವಿರಕ್ಕೂ ಮಿಕ್ಕಿದೆ 1950ರಲ್ಲಿ ರಸಾಯನ ಶಾಸ್ತ್ರಜ್ಞರು ಹದಿನೈದು ದಿವಸಗಳಲ್ಲಿ 558 ಶಾಸ್ತ್ರೀಯ ಲೇಖನಗಳನ್ನು ಪ್ರಸಿದ್ಧಿಸುತ್ತಿದ್ದರು. ಕೆಮಿಕಲ್ ಅಬ್‌ಸ್ಟ್ರಾಕ್ಟ (Chemical Abstracts) ಎಂಬ ರಸಾಯನ ಶಾಸ್ತ್ರದ ಸಾರಸಂಗ್ರಹ ಪತ್ರಿಕೆಯಲ್ಲಿ ಬರುವ ಸಾರಸಂಗ್ರಹಗಳನ್ನು

ಗಮನಿಸಿದರೆ ಇಂದು ದಿನವೊಂದಕ್ಕೆ 1600ಕ್ಕೂ ಮಿಕ್ಕಿ ಲೇಖನಗಳು ಪ್ರಸಿದ್ಧಿಗೊಳ್ಳುತ್ತಿವೆ.

ಹೀಗೆ ಜೋಗಜಲಪಾತದೋಪಾದಿಯಲ್ಲಿ ಅಚ್ಚುಕೂಟಗಳಿಂದ ಹೊರಬೀಳುತ್ತಿರುವ ಈ ಸಾಹಿತ್ಯವನ್ನೆಲ್ಲ ಅವಲೋಕಿಸಲು ಯಾವಾಗಲೂ ಅವಸರದಲ್ಲಿರುವ ವಿಜ್ಞಾನಿಗೆ ಹೇಗೆ ಸಾಧ್ಯ ?

ಅಂತೆಯೇ ಅವನು ಸಂಶೋಧನೆ ನಡೆಸಿಕೊಂಡು ಹೋಗುತ್ತಿರುವ ಸಂಸ್ಥೆಯ ಗ್ರಂಥಭಂಡಾರಿ ಅವನ ನೆರವಿಗೆ ಧಾವಿಸುತ್ತಾನೆ. ಅವನಿಗೆ ಬೇಕಾದ ವಿಷಯಗಳಲ್ಲಿ ಮೂಡಿಬರುವ ಲೇಖನಗಳನ್ನು ಅವಲೋಕಿಸಿ ಅವುಗಳಲ್ಲಿ ಪ್ರಮುಖವಾದವುಗಳ ಸಾರವನ್ನು ಅವನಿಗೆ ನೀಡುತ್ತಾನೆ. ಇಂಥ ಲೇಖನಗಳು ಸಂಶೋಧಕನಿಗೆ ತಿಳಿಯದೆ ಅನ್ಯಭಾಷೆಯಲ್ಲಿದ್ದಲ್ಲಿ ಅವುಗಳನ್ನು ಅವನು ಬಲ್ಲ ಭಾಷೆಯಲ್ಲಿ ಸಮರ್ಪಕವಾಗಿ ರೂಪಾಂತರಿಸಿ ಕೊಡುತ್ತಾನೆ. ತನ್ನ ಗ್ರಂಥಾಲಯದಲ್ಲಿ ಇಲ್ಲದೆ ಹೋದ ನಿಯತಕಾಲಿಕೆಗಳ ಲೇಖನಗನ್ನಾಗಲೀ ಶಾಸ್ತ್ರೀಯ ವರದಿಗಳನ್ನಾಗಲೀ ಇನ್ನಾವದೋ ಗ್ರಂಥಾಲಯದಿಂದ ಎರವಲಾಗಿಯಾಗಲಿ, ಝೆರಾಕ್ಸ್ ಮೈಕ್ರೊಫಿಲ್ಮ ಅಥವಾ ಕಾರ್ಡು ಮೂಲಕವಾಗಿಯಾಗಲೀ ಅತಿಶೀಘ್ರವಾಗಿ ತರಿಸಿಕೊಡುತ್ತಾನೆ. ಇಂಥ ಗ್ರಂಥಗಳಲ್ಲಿ ಅಡಕವಾದ ಮತ್ತು ಸಂಶೋಧಕನಿಗೆ ಅವಶ್ಯವಾದ ಭಾಗಗಳನ್ನು ಅವನು ಬೇಡಿದಾಕ್ಷಣ ಟೆಲಿವಿಜನ್ ಮೂಲಕ ಲಭ್ಯಮಾಡಿಕೊಡಬಹುದಾಗಿದೆ. ತಾಂತ್ರಿಕ ಸಂಶೋಧನೆಗಳು ಸಫಲವಾಗಿ ಸಂಶೋಧಕನಿಗೆ ದುರ್ಲಭವೆನಿಸಿದ ಸಾಮಗ್ರಿ ಸಲೀಸಾಗಿ ಶೀಘ್ರದಲ್ಲಿಯೇ ದೊರೆಯುವ ಸುದಿನಗಳು ಬಂದಿವೆ. ಸಂಶೋಧಕನ ಸಂಶೋಧನ ಸಮಸ್ಯೆಗಳನ್ನೆಲ್ಲ ತನ್ನವೆಂದು ಪರಿಗಣಿಸಿ ಅವನ ಭುಜಕ್ಕೆ ಭುಜ ಹಚ್ಚಿ, ಅವನ ಕಷ್ಟ ಕಾರ್ಪಣ್ಯಗಳಲ್ಲಿ ಸಹಭಾಗಿಯಾಗಿ ವೈಜ್ಞಾನಿಕ ಗ್ರಂಥಪಾಲ ಕೆಲಸ ಮಾಡುತ್ತಾನೆ. ಸಂಶೋಧನೆ ಫಲಕಾರಿಯಾದಲ್ಲಿ ಸಂಶೋಧಕನಿಗೆ ಮಾತ್ರ ಮಾನಸನ್ಮಾನ ದೊರೆಯುತ್ತವೆ; ತನಗೆ ಇಲ್ಲ ಎಂಬ ಮತ್ಸರ ಭಾವನೆ ಇವನಲ್ಲಿ ಮೂಡಿಬರುವುದಿಲ್ಲ. ತನ್ನ ನೆರವಿನಿಂದಾಗಿ ಸಂಶೋಧಕ ಇನ್ನೂ ಹೆಚ್ಚು ಹೊಸ ಸಂಶೋಧನೆಗಳನ್ನು ಮಾಡಲಿ, ಅವುಗಳ ಮೂಲಕ ಜನಸಾಮಾನ್ಯರ ನಿತ್ಯ ಜೀವನ ಹಗುರಾಗಲಿ, ಆನಂದಮಯವಾಗಲಿ, ಅದರಿಂದ ಮಾನವ ಜೀವನದಲ್ಲಿಯ ಅಜ್ಞಾನದ ಅಂಧಕಾರವು ದೂರವಾಗಲಿ, ಮಾನವತೆ ಅಸತ್ಯದಿಂದ ಸತ್ಯದೆಡೆಗೆ ಅಡಿಯಿಡಲಿ, ಸಾವಿನಿಂದ ಅಮರತ್ವದೆಡೆಗೆ ಸಾಗಲಿ, ಎಂಬುದಿಷ್ಟೇ ಅವನ ಬಯಕೆ.

೬ / ಕರ್ನಾಟಕದಲ್ಲಿ ಗ್ರಂಥಾಲಯ ಸಹಕಾರ

ಪೀಠಿಕೆ

ಗ್ರಂಥಾಲಯ ಕ್ಷೇತ್ರದಲ್ಲಿ ಸಹಕಾರದ ಧ್ಯೇಯ ಎಂದರೆ, ಇರುವ ಗ್ರಂಥಸಂಗ್ರಹವನ್ನು ಅತ್ಯಂತ ಹೆಚ್ಚು ಜನರಿಗೆ ಅತ್ಯಂತ ಹೆಚ್ಚು ಉಪಯೋಗವಾಗುವಂತೆ ಮಾಡುವುದು. ಹಾಗೆಯೇ ಗ್ರಂಥಾಲಯಗಳಿಗೆ ಒದಗಿಸಿದ ನಿಧಿಯನ್ನು ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುವುದು. ಅಷ್ಟೇ ಅಲ್ಲ, ಬಹು ದೂರದ ಸ್ಥಳಗಳಿಗೆ ವಿವಿಧ ದಾಖಲೆಗಳನ್ನೂ ವಾಚನ ಸಾಮಗ್ರಿಗಳನ್ನೂ ದೊರಕಿಸುವುದು, ತುಂಬ ಜೀರ್ಣಾವಸ್ಥೆಯಲ್ಲಿರುವ ಮತ್ತು ಬೇರೆ ವಿಧದಿಂದ ಲಭ್ಯವಾಗದ ಅಪರೂಪ ವಾಚನ ಸಾಮಗ್ರಿಯನ್ನು ಓದುಗರಿಗೆ ಒದಗಿಸುವುದು ಕೂಡ ಗ್ರಂಥಾಲಯ ಸಹಕಾರದ ಕಕ್ಷೆಗೆ ಒಳಪಟ್ಟ ವಿಷಯವೇ ಆಗಿದೆ. ವಾಚಕರಿಗೆ ಅದೆಷ್ಟೇ ದುರ್ಲಭ ವಾಚನ ಸಾಮಗ್ರಿಯಾಗಿದ್ದರೂ ಅವರ ಆ ಬೇಡಿಕೆಗಳನ್ನು ಪೂರೈಸುವ ಭರವಸೆಯನ್ನು ಗ್ರಂಥಾಲಯ ಸಹಕಾರ ಕೊಡುತ್ತದೆ. ಅವರು ತಮ್ಮ ಸ್ಥಳೀಯ ಗ್ರಂಥಾಲಯವನ್ನು ಒಳಹೊಕ್ಕರೆ ಅದರಿಂದ ಜಗತ್ತಿನೆಲ್ಲೆಡೆಯ ಗ್ರಂಥಸಂಗ್ರಹದ ಸಾನ್ನಿಧ್ಯದಲ್ಲಿದ್ದೇವೆ ಎಂಬ ಭಾವನೆ ತಳೆಯುವಂತೆ ಮಾಡುವುದೂ ಸಹಕಾರದ ವಿಷಯವೇ. ವಾಚಕರಿಗೂ, ಅವರು ಅರಸುವ ದಾಖಲೆಗಳಿಗೂ ನಡುವೆ ಇರುವ ದೂರವನ್ನೂ ಕಾಲದೇಶಗಳಲ್ಲದೆ ಈಗ ಭಾಷೆಯ ಅಂತರವನ್ನೂ ಕಡಮೆಮಾಡುತ್ತದೆ. ಗ್ರಂಥಾಲಯದ ಪಂಚಶೀಲವು ಸಮರ್ಪಕವಾಗಿ ಕಾರ್ಯಗತವಾಗುವಂತೆ ಮಾಡುತ್ತದೆ.

ಗ್ರಂಥಾಲಯದ ವಿಚಾರದಲ್ಲಿಯೂ ಕರ್ನಾಟಕವು ಯಾವಾಗಲೂ ಪ್ರಗತಿಯ ಮುಂಚೂಣಿಯಲ್ಲೇ ಇದ್ದುದು ಕಂಡುಬರುತ್ತದೆ. ಸಹಕಾರವನ್ನು ಅನುಷ್ಠಾನದಲ್ಲಿ ತರಬಹುದಾದ ಅನೇಕ ಮಾರ್ಗಗಳಿರುವುದನ್ನು ಇಲ್ಲಿನ ಗ್ರಂಥಾಲಯ ಕ್ಷೇತ್ರದಲ್ಲಿ ನೋಡಬಹುದಾಗಿದೆ.

ಕರ್ನಾಟಕ : ವಿವಿಧ ಗ್ರಂಥಾಲಯಗಳ ಆಗರ

ನಮ್ಮ ದೇಶದಲ್ಲಿ ಗ್ರಂಥಾಲಯ ಶಾಸನವನ್ನು ಜಾರಿಗೆ ತಂದ ಮೂರನೆಯ ರಾಜ್ಯವೇ ಕರ್ನಾಟಕ. ಇಲ್ಲಿ ಐದು ವಿಶ್ವವಿದ್ಯಾನಿಲಯಗಳಿವೆ : ಮೈಸೂರು (1916) ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (1916), ಕರ್ನಾಟಕ (1950), ಬೆಂಗಳೂರು (1964), ಮತ್ತು ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾನಿಲಯ (1964). ಇವಲ್ಲದೆ ಇವುಗಳಿಗೆ ಅಂಟಿಕೊಂಡಂತೆ, ಮಂಗಳೂರು, ಕಲಬುರ್ಗಿ, ಶಿವಮೊಗ್ಗೆ, ಸಂಡೂರು, ಕಾರವಾರಗಳಲ್ಲಿ ಸ್ನಾತಕೋತ್ತರ ಕೇಂದ್ರಗಳಿವೆ. ಈ ಎಲ್ಲವೂ ಸೊಗಸಾದ ಗ್ರಂಥಾಲಯಗಳನ್ನು ನಿರ್ಮಿಸಿಕೊಂಡಿವೆ. ಇವಲ್ಲದೆ ರಾಜಧಾನಿಯಲ್ಲೇ ಅನೇಕ ವಿಶಿಷ್ಟವೂ ಸಾಮಾನ್ಯ

ತೆರದವೂ ಆದ ಗ್ರಂಥಾಲಯಗಳಿವೆ. ಇವು ಪರಸ್ಪರ ಪೂರಕವಾಗಿವೆ, ಪೋಷಕವಾಗಿವೆ. ರಾಜ್ಯ ಕೇಂದ್ರ ಗ್ರಂಥಾಲಯವಿದೆ, ಕನ್ನಡ ಸಾಹಿತ್ಯ ಪರಿಷತ್ತು, ಹೈಕೋರ್ಟ್, ಇಂಡಿಯನ್ ಕಲ್ಚರಲ್ ಅಸೋಸಿಯೇಷನ್, ಅಖಿಲ ಭಾರತ ಮಾನಸಿಕ ಆರೋಗ್ಯ ಸಂಸ್ಥೆ, ಭಾರತೀಯ ವಿದ್ಯಾಭವನ, ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್, ಎನ್. ಎ. ಎಲ್., ಟಿಈಎಲ್ ಸಿ ಎಮ್ ಟಿ ಐ, ಐಟಿಐ, ಎಚ್ ಎಂ ಟಿ, ಎಚ್ ಎ ಎಲ್ ಮೊದಲಾದ ಭಾರತ ಸರಕಾರದ ಸ್ಥಾವರಗಳು, – ಮುಂತಾದ ಸಂಸ್ಥೆಗಳಿಗೆ ಸೇರಿದ ಗ್ರಂಥಾಲಯಗಳಿವೆ. ನಗರದ ಹೊರಗೆ ಗ್ರಾಮಾಂತರ ಪ್ರದೇಶದಲ್ಲಿಯೂ ವಿಶಿಷ್ಟರೀತಿಯ ಗ್ರಂಥಾಲಯಗಳಿವೆ. ಮೈಸೂರಿನಲ್ಲಿರುವ ಭಾರತ ಸರಕಾರದ ಮುಖ್ಯ ಶಾಸನತಜ್ಞರ ಕಚೇರಿಯಲ್ಲಿ ಪ್ರಾಚೀನ ಭಾರತ ಇತಿಹಾಸ, ಶಾಸನ ಶಾಸ್ತ್ರ, ಪ್ರಾಕ್ತನ ಶಾಸ್ತ್ರಗಳಿಗೆ ಸಂಬಂಧಿಸಿದ ಅಪೂರ್ವವಾದ ಗ್ರಂಥಸಂಗ್ರಹವಿದೆ. ಕೇಂದ್ರ ಆಹಾರ ಸಂಶೋಧನ ಸಂಸ್ಥೆ, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಭಾರತೀಯ ಭಾಷಾ ಸಂಸ್ಥೆ ಇವೂ ಮೈಸೂರಿನಲ್ಲಿದ್ದು ಸೊಗಸಾದ ವಿಶಿಷ್ಟ ಗ್ರಂಥಭಂಡಾರಗಳನ್ನು ಹೊಂದಿವೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಹಿಸ್ಟಾರಿಕಲ್ ರಿಸರ್ಚ್ ಸೊಸೈಟಿ, ಕೆ. ಆರ್. ಐ. ಇತ್ಯಾದಿ ಸಂಸ್ಥೆಗಳ ಗ್ರಂಥಾಲಯಗಳು ಗಣನೀಯವಾಗಿದೆ. ಇತ್ತೀಚೆಗೆ ಮಾಜೀ ಕೇಂದ್ರ ಶಿಕ್ಷಣ ಸಚಿವ ಡಾ. ವಿ. ಕೆ. ಆರ್. ವಿ. ರಾವ್ ಅವರ ಸೂಚನೆಯಂತೆ ಬೆಂಗಳೂರಿನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಇಕನಾಮಿಕ್ ಎಂಡ್ ಸೋಷಿಯಲ್ ಚೇಂಜ್ ಎಂಬ ಸಂಸ್ಥೆ ಹೊಸದಾಗಿ ಪ್ರಾರಂಭ ವಾಗಿದೆ. ಇತ್ತೀಚೆಗೆ ರಾಜ್ಯಸರಕಾರವು ತಜ್ಞರೊಬ್ಬರ ಸಲಹೆ ಪಡೆದುಕೊಂಡು ತನ್ನ ಕಾರ್ಯಸೌಧದ ಪ್ರಧಾನ ಗ್ರಂಥಾಲಯವನ್ನು ಅತ್ಯಾಧುನಿಕವಾಗಿ ಸಜ್ಜುಗೊಳಿಸಲು ಸನ್ನಾಹ ಮಾಡಿದುದು ಗ್ರಂಥಾಲಯ ಸಹಕಾರದ ಶುಭದಿನಗಳಿಗೆ ನಾಂದಿಯಾಗಿದೆ.

ಇವಿಷ್ಟರ ಜೊತೆಗೆ ನಾಲ್ಕುನೂರಕ್ಕೂ ಮಿಕ್ಕಿದ ಕಾಲೇಜುಗಳ ಪುಸ್ತಕ ಭಂಡಾರ ಗಳಿವೆ. ಸಾವಿರಾರು ಪ್ರೌಢಶಾಲೆಗಳ ಭಂಡಾರಗಳಿವೆ. ತುಂಬ ಹಳೆಯ ಕಾಲೇಜು ಗಳು ಮತ್ತು ಹೈಸ್ಕೂಲುಗಳ ಗ್ರಂಥಾಲಯಗಳಲ್ಲಂತೂ ಕನ್ನಡದ ಕೆಲವು ಅಪರೂಪದ ಅತಿ ಪ್ರಾಚೀನ ಪುಸ್ತಕಗಳು ಸೇರಿವೆ, ಕರ್ನಾಟಕದಲ್ಲಿ ಮತ್ತೆಲ್ಲೂ ದೊರಕದಂಥ ಕೆಲವು ಗ್ರಂಥಗಳು ಇಲ್ಲಿವೆ.

ಗ್ರಂಥಾಲಯ ಸಹಕಾರದ ಕ್ಷೇತ್ರಗಳು

ಇವೆಲ್ಲ ಸೇರಿ ಗ್ರಂಥಾಲಯ ಸಹಕಾರವನ್ನು ಭವ್ಯ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಲು ಕರ್ನಾಟಕದಲ್ಲಿ ಆದರ್ಶ ಸ್ಥಿತಿಯನ್ನು ಉಂಟುಮಾಡಿವೆ. ಈ ಸಹಕಾರವನ್ನು ಈ ಕ್ಷೇತ್ರಗಳಲ್ಲಿ ರೂಪಿಸಿಕೊಂಡು ಕಾರ್ಯಗತಗೊಳಿಸಬಹುದು :

1. ಗ್ರಂಥಾಲಯಗಳ ನಡುವೆ ತಡೆಯಿಲ್ಲದೆ ಪತ್ರವ್ಯವಹಾರ.
2. ಅಂತರ – ಗ್ರಂಥಾಲಯ ಎರವಲುಗಳು

3: ಅಂತರ – ಗ್ರಂಥಾಲಯ ಟಿಕೆಟುಗಳ ಮನ್ನಣೆ.
4. ಸಹಕಾರೀ ಸೂಚೀಕರಣ.
5. ದ್ವಿಪ್ರತಿಗಳ ವಿನಿಮಯ.
6. ಸಹಕಾರೀ ಕೊಳ್ಳಿಕೆ ಯೋಜನೆಗಳು.
7. ಸಹಕಾರೀ ಮೈಕ್ರೋ ಫಿಲ್ಮಿಂಗ್ ಯೋಜನೆಗಳು.
8. ದಾಖಲಾತಿ ಸೇವೆ. (documentation service)
9. ದುಬಾರಿ ಬೆಲೆಯ ಆಧುನಿಕ ಉಪಕರಣಗಳ ಸಹಕಾರೀ ಬಳಕೆ.

ಗ್ರಂಥಾಲಯಗಳ ನಡುವೆ ಅಡೆತಡೆಯಿಲ್ಲದ ಪತ್ರವ್ಯವಹಾರ

ಈ ಎಲ್ಲ ಗ್ರಂಥಾಲಯಗಳ ನಡುವೆ ನಿರಂತರವಾದ ಪತ್ರವ್ಯವಹಾರವಿಲ್ಲವಾಗಿದೆ. ಮೈಸೂರು, ಬೆಂಗಳೂರು, ಕರ್ನಾಟಕ ಈ ಮೂರು ವಿಶ್ವವಿದ್ಯಾನಿಲಯಗಳನ್ನು ಬಿಟ್ಟರೆ ಮಿಕ್ಕ ಗ್ರಂಥಾಲಯಗಳಲ್ಲಿ ಪರಸ್ಪರ ವ್ಯವಹಾರ ಇಲ್ಲ. ಕ್ರಮವಾಗಿ ಮತ್ತು ವ್ಯವಸ್ಥಿತವಾಗಿ ಹೊಸ ಸೇರ್ಪಡೆ ಪಟ್ಟಿಗಳನ್ನು ವಿನಿಮಯ ಮಾಡಿಕೊಳ್ಳುವುದು, ವಾರ್ಷಿಕ ವರದಿಗಳ ಗ್ರಂಥಸೂಚಿಗಳ ಮತ್ತು ಮಾನೋಗ್ರಾಫ್‌ಗಳ ವಿನಿಮಯ ಆಗುತ್ತಿಲ್ಲ. ಇದು ಸಾಧಿತವಾದರೆ ಫಲಪ್ರದ ಸಹಕಾರದ ಅನುಷ್ಠಾನಕ್ಕೆ ದಾರಿಯಾದಂತಾಗುತ್ತದೆ.

ಕೊನೆಯಪಕ್ಷ ಮೈಸೂರು, ಕರ್ನಾಟಕ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಟೆಲೆಕ್ಸ್ ವ್ಯವಸ್ಥೆಯನ್ನು ಸ್ಥಾಪಿಸಿದರೆ ಸಹಕಾರ ಸ್ವಲ್ಪವಾದರೂ ಸಿದ್ಧಿಸೀತು.

ಸದ್ಯದಲ್ಲೇ ಇನ್ನೆರಡು ವಿಶ್ವವಿದ್ಯಾನಿಲಯಗಳು ಗುಲ್ಬರ್ಗದಲ್ಲೂ ಮಂಗಳೂರಿನಲ್ಲೂ ರೂಪುಗೊಳ್ಳಲಿವೆ. ಈಗ ಇಲ್ಲಿ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿವೆ. ಪೂರ್ಣಪ್ರಮಾಣದ ವಿಶ್ವವಿದ್ಯಾನಿಲಯಗಳಾಗಿ ಇವು ಬೆಳೆಯುವ ದಿನ ದೂರವಿಲ್ಲ.

ಎಲ್ಲಕ್ಕಿಂತ ಮೊದಲನೆಯ ಹೆಜ್ಜೆಯಾಗಿ ಗ್ರಂಥಾಲಯಗಳ ಗ್ರಂಥಪಾಲರ ಸಭೆಯೊಂದನ್ನು ನಡೆಸಬೇಕು. ಈಗಿರುವ ಪರಿಸ್ಥಿತಿಯಲ್ಲಿ ಮೈಸೂರಿನ ಅಖಿಲಭಾರತ ವಾಕ್ ಶ್ರವಣ ಸಂಸ್ಥೆ; ಬೆಂಗಳೂರಿನ ಕೈಗಾರಿಕಾ ಸ್ಥಾವರಗಳು ಮುಂತಾದೆಡೆಗಳಲ್ಲಿನ ಗ್ರಂಥಾಲಯಗಳ ವಿಷಯ ಹೆಚ್ಚು ತಿಳಿದಿಲ್ಲ. ಈ ಎಲ್ಲ ಗ್ರಂಥಾಲಯಗಳ ಮುಖ್ಯರ ನಡುವೆ ಮಾತುಕತೆ, ವಿಚಾರವಿನಿಮಯ ಅತ್ಯಂತ ತುರುತಾಗಿ ನಡೆಯಬೇಕು, ಆದರಿಂದ ಮುಂದಿನ ಸಹಕಾರ ಸುಗಮವಾದೀತು.

ಕರ್ನಾಟಕದ ಗ್ರಂಥಾಲಯಗಳ ನಡುವೆ ವ್ಯವಹಾರದ ಒಂದು ಸರಣಿಯನ್ನು ಸ್ಥಾಪಿಸುವ ಸಲುವಾಗಿ ಮೈಸೂರು ಗ್ರಂಥಾಲಯ ಸಂಘ ಅಥವಾ ರಾಜ್ಯ ಕೇಂದ್ರ ಗ್ರಂಥಾಲಯ ಅಥವಾ ಯಾವುದಾದರೂ ಒಂದು ವಿಶ್ವವಿದ್ಯಾನಿಲಯದ ಗ್ರಂಥಾಲಯದ ವತಿಯಿಂದ ಒಂದು ವಾರ್ತಾಪತ್ರವನ್ನು ಹೊರಡಿಸಬಹುದು. ಈ ವಾರ್ತಾಪತ್ರದಲ್ಲಿ ಎಲ್ಲ ಗ್ರಂಥಾಲಯಗಳಿಗೂ ಆಸಕ್ತಿಯುಂಟಾಗುವ ನೂತನ ಗ್ರಂಥಗಳ ಸೇರ್ಪಡೆ, ಪೀಠೋಪಕರಣಗಳು ಮತ್ತು ಸಲಕರಣೆಗಳು, ಅಲ್ಲಲ್ಲಿ ಲಭ್ಯವಾಗುತ್ತಿರುವ ವಿಶೇಷ ಸೇವೆಗಳು, ಹೊಸ ನೇಮ

ಕಾತಿಗಳು, ಖಾಲಿ ಇರುವ ಹುದ್ದೆಗಳು, ವಿನಿಮಯಕ್ಕಾಗಿ ದೊರಕುವ ಪುಸ್ತಕಗಳು, ನಿಯತಕಾಲಿಕಗಳ ದ್ವಿಪ್ರತಿಗಳು ಇತ್ಯಾದಿ ಮಾಹಿತಿಗಳನ್ನೂ ಪ್ರಕಟಿಸಬಹುದು.

ಅಂತರ-ಗ್ರಂಥಾಲಯ ಎರವಲು

ಈಗ ಮೂರೂ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ಯಶಸ್ವಿಯಾಗಿ ಎರವಲು ಕಾರ್ಯಕ್ರಮವನ್ನು ನಡೆಸುತ್ತಿವೆ. ಟೆಲೆಕ್ಸ್ ಸೌಲಭ್ಯ ಬಂದರೆ ಬಹುಶಃ ವಿಶ್ವವಿದ್ಯಾನಿಲಯದ ಗ್ರಂಥಾಲಯಗಳ ನಡುವೆ ಎರವಲು ಕಾರ್ಯಕ್ರಮ ಇನ್ನೂ ಪರಿಣಾಮಕಾರಿಯಾಗಿ ಹೆಚ್ಚಬಹುದು. ಇವುಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮಾನವಿಕ ಶಾಸ್ತ್ರಗಳು ಮತ್ತು ಸಮಾಜ ಶಾಸ್ತ್ರಗಳ ವಿಭಾಗದಲ್ಲಿ ಸಮೃದ್ಧವಾದ ಸಂಗ್ರಹವನ್ನು ಪಡೆದಿದೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಾದರೋ ವಿಜ್ಞಾನ ಹಾಗೂ ಸಮಾಜವಿಜ್ಞಾನ ನಿಯತಕಾಲಿಕಗಳ ಹಳೆ ಸಂಚಿಕೆಗಳ ಸಂಗ್ರಹ ಉತ್ತಮವಾಗಿದೆ. ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ವೈಜ್ಞಾನಿಕ ಸಂಗ್ರಹ ಗಣನೀಯವಾಗಿದೆ.

ಈ ಸಂಸ್ಥೆಗಳು ಈಗ ಹಾಕಿಕೊಂಡಿರುವ ನೀತಿನಿಯಮಗಳು ಹೀಗಿವೆ : (1) ಎಲ್ಲ ವಾಚನ ಸಾಮಗ್ರಿಯೂ, ಕೈಬರಹದ ಪ್ರೌಢನಿಬಂಧಗಳೂ ಮತ್ತು ಓಲೆಗರಿ ಹಸ್ತಪ್ರತಿಗಳೂ ಸೇರಿದಂತೆ, ಎರವಲು ದೊರಕಬೇಕು. (2) ಎರವಲಿನ ಅವಧಿಯು ಪುಸ್ತಕ ವಾಚನ ಪದ್ಧತಿಯನ್ನು ಬೆಳೆಸುವುದನ್ನು ಅವಲಂಬಿಸಿರಬೇಕು. (3) ಅಂಚೆವೆಚ್ಚವನ್ನು ಎರವಲು ತೆಗೆದುಕೊಳ್ಳುವ ಗ್ರಂಥಾಲಯವು ವಹಿಸಬೇಕು. (4) ಹೋಗಿ ಬರುವ ಎರಡೂ ಕಡೆಯ ರವಾನೆಯನ್ನು ತಡೆದುಕೊಳ್ಳುವಂತೆ ಪ್ಯಾಕಿಂಗ್ ಸುಭದ್ರವಾಗಿರಬೇಕು. (5) ಎರವಲು ಬೇಡಿಕೆಯಲ್ಲಿ ಸಾಧ್ಯವಿದ್ದಷ್ಟೂಮಟ್ಟಿಗೆ ಗ್ರಂಥಸೂಚೀ ವಿವರಗಳು ಇರಬೇಕು. (6) ಬಹು ಅಪರೂಪದ ಮತ್ತು ಸೂಕ್ಷ್ಮವಾದ ವಾಚನ ಸಾಮಗ್ರಿಯನ್ನು ಗ್ರಂಥಾಲಯದ ಆವರಣದಿಂದ ಹೊರಕ್ಕೆ ಕೊಡಲಾಗದು. (7) ಅಂತಹ ಸಾಮಗ್ರಿಯನ್ನು ವಿಮೆಮಾಡಿದ ಅಂಚೆಯಲ್ಲಿ ಕಳುಹಿಸಬೇಕು. (8) ಎರವಲು ಸಾಮಗ್ರಿ ಬಂದುದಕ್ಕೆ ಎರಡೂ ಕಡೆಯಿಂದ ತಪ್ಪದೆ ರಸೀತಿ ಇರಬೇಕು.

ಯಾವುದೋ ಒಂದು ಸಲ ಎರವಲಾಗಿ ಕಳುಹಿಸಿದ ಒಂದು ಪಿ ಎಚ್‌ಡಿ ನಿಬಂಧವು ಸ್ವಲ್ಪ ಹಾಳಾದ ಸ್ಥಿತಿಯಲ್ಲಿ ಹಿಂದಕ್ಕೆ ಬಂದ ಒಂದು ಸಂದರ್ಭವನ್ನು ಬಿಟ್ಟರೆ, ಈ ಯೋಜನೆ ಸಮರ್ಪಕವಾಗಿ ನಡೆಯುತ್ತಿದೆ. ಇಂತಹ ಘಟನೆಗಳಿಂದ ಎರವಲು ಕೊಡುವ ಗ್ರಂಥಾಲಯದ ಉತ್ಸಾಹ ಕುಂಠಿತವಾಗುತ್ತದೆ. ಎರವಲಾಗಿ ಪಡೆದ ವಾಚನ ಸಾಮಗ್ರಿಯನ್ನು ಅದರ ಉಪಯೋಗ ಮುಗಿದೊಡನೆಯೇ ಅಚ್ಚುಕಟ್ಟಾಗಿ ಸುಭದ್ರವಾಗಿ ಹಿಂದಕ್ಕೆ ಕಳುಹಿಸಲು ಎಲ್ಲ ಜಾಗರೂಕತೆಯನ್ನೂ ವಹಿಸಬೇಕು.

ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳು ಹಾಗೂ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಗ್ರಂಥಾಲಯಗಳಲ್ಲಿ ಜೆರಾಕ್ಸ್ ಯಂತ್ರವನ್ನಿ

ಡಲಾಗಿದೆ. ಇದರಿಂದಾಗಿ ನಿಯತಕಾಲಿಕಗಳ ಹಳೆ ಸಂಚಿಕೆಗಳ ಉಪಯೋಗ ಅಧಿಕವಾಗುವುದು ಸಾಧ್ಯವಿದೆ. ಅವುಗಳನ್ನೇ ಎರವಲಾಗಿ ಕಳಿಸುವ ಬದಲು ಆಗತ್ಯವಾದ ಲೇಖನಗಳ ಜೆರಾಕ್ಸ್ ಪ್ರತಿ ತೆಗೆದು ಕಳುಹಿಸುವುದು ಸುಲಭ. ಅಂದರೆ ಇದರಿಂದ (1) ಅಂಚೆ ವೆಚ್ಚದ ಉಳಿತಾಯ (2) ಹಳೆ ಸಂಚಿಕೆಗಳು ಹಾಳಾಗದಂತೆ ಉಳಿಸಿಕೊಳ್ಳುವ ಸೌಲಭ್ಯ (3) ಸಂಶೋಧಕನು ನಿರ್ದಿಷ್ಟಕಾಲದಲ್ಲಿ ಹಿಂದಿರುಗಿಸಬೇಕೆಂಬ ನಿಯಮವಿಲ್ಲದೆ ತನ್ನ ಬಳಿಯೇ ತನಗೆ ಅಗತ್ಯವಾದ ಲೇಖನದ ಪ್ರತಿಯನ್ನು ಇಟ್ಟುಕೊಳ್ಳಬಹುದಾದ ಅನುಕೂಲತೆ – ಸಿದ್ಧಿಸುತ್ತವೆ.

ಟಿಕೆಟುಗಳ ಒದಗಣೆ

ಈ ಮೂರೂ ವಿಶ್ವವಿದ್ಯಾಲಯ ಗ್ರಂಥಾಲಯಗಳೂ ಬಳಕೆದಾರರಿಗೆ ಗುರುತಿನ ಟಿಕೆಟುಗಳನ್ನು ಕೊಡುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಗ್ರಾಹಕ ಟಿಕೆಟುಗಳನ್ನು ಕೊಡಲಾಗುತ್ತಿದೆ. ರಾಜ್ಯದೊಳಗೆ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಒಂದಲ್ಲ ಒಂದು ಕಾರಣಕ್ಕಾಗಿ ಚಲಿಸುತ್ತಿರಬೇಕಾಗುತ್ತದೆ. ಅವರ ಅಧ್ಯಯನ ವಿಷಯದ ಆಯ್ಕೆ, ಅಥವಾ ಕಾಲೇಜಿನಲ್ಲಿ ಸೀಟು ದೊರಕುವಿಕೆ – ಹೀಗೆ ಯಾವುದಾದರೂ ಕಾರಣದಿಂದ ಅವರು ಬೇರೆ ವಿಶ್ವವಿದ್ಯಾನಿಲಯ ಕ್ಷೇತ್ರಕ್ಕೆ ಹೋಗಬೇಕಾಗುತ್ತದೆ. ಅಂಥವರಿಗೆ ರಾಜ್ಯದ ಗ್ರಂಥಾಲಯಗಳಲ್ಲಿ ವಾಚನ ಸೌಲಭ್ಯಕ್ಕೆ ಮುಕ್ತ ಅವಕಾಶವಿರಬೇಕು. ಅಂಥವರಿಗೆ ಸಂದರ್ಶಕರು ಎಂಬ ಕಾರ್ಡು ಕೊಟ್ಟು ಗ್ರಂಥಾಲಯವನ್ನು ಅವರು ಬಳಸುವಂತೆ ಮಾಡಬಹುದು. ಅತ್ಯುತ್ತಮ ಮಾರ್ಗವೆಂದರೆ, ಭಾವಚಿತ್ರ ಸಹಿ ಇವಿಷ್ಟೂ ಇರುವ ಗುರುತಿನ ಟಿಕೆಟನ್ನು ಪರೀಕ್ಷಿಸಿ ಅದಷ್ಟರ ಬಲದಿಂದಲೇ ಅವರು ತಮ್ಮ ಗ್ರಂಥಾಲಯವನ್ನು ಉಪಯೋಗಿಸಿಕೊಳ್ಳಲು ಅವಕಾಶ ಕೊಡಬಹುದು.

ಸ್ಥಳೀಯ ವಿದ್ಯಾರ್ಥಿಗಳ ಬೇಡಿಕೆಯನ್ನು ಗಮನಿಸಿಕೊಂಡು ಈ ಗ್ರಂಥಗಳನ್ನು ಎರವಲು ಒಯ್ಯುವ ಸವಲತ್ತು ಸಹಿತವಾಗಿ ಹೊರ ವಿಶ್ವವಿದ್ಯಾನಿಲಯಗಳಿಂದ ಬಂದ ವಿದ್ಯಾರ್ಥಿಗಳಿಗೆ ಅವರ ಗ್ರಾಹಕ ಕಾರ್ಡುಗಳ ಮೇಲೆ ಪುಸ್ತಕಗಳನ್ನು ಎರವಲು ಕೊಡುವುದೂ ಸಾಧ್ಯವಾಗಬಹುದು. ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ವಿಚಾರವೆಂದರೆ ಅಂಥ ವಿದ್ಯಾರ್ಥಿಗಳು ಆಯಾ ಚಾಲ್ತಿ ವರ್ಷಕ್ಕೆ ಸಂಬಂಧಿಸಿದ ಎರವಲು ಪಡೆಯುವ ಟಿಕೆಟುಗಳನ್ನು ಹೊಂದಿದ್ದಾರೆಯೇ ಎಂದು ಪರೀಕ್ಷಿಸುವುದು. ಸಾಮಾನ್ಯವಾಗಿ ಈ ಟಿಕೆಟುಗಳನ್ನು ಒಂದು ಶೈಕ್ಷಣಿಕ ವರ್ಷದ ಅವಧಿಗೆ ನೀಡಲಾಗುತ್ತದೆ. ಎರವಲು ಪಡೆಯುವ ಟಿಕೆಟುಗಳನ್ನು ವರ್ಷಾಂತ್ಯದ ಪರೀಕ್ಷೆಗಳು ಮುಗಿದೊಡನೆ ಹಿಂತೆಗೆದುಕೊಂಡರೂ ವಾಚಕ ಕಾರ್ಡುಗಳನ್ನು ಮುಂದಿನ ಶಿಕ್ಷಣ ವರ್ಷಾರಂಭದವರೆಗೂ ಉಳಿಸಿಕೊಳ್ಳಲಾಗುತ್ತದೆ.

ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳ ಆಡಳಿತಕ್ಕೆ ಏಕರೂಪತೆ ಕೊಡುವ ಹಾಗೂ ಅವುಗಳನ್ನು ಸರಕಾರದ ನಿಯಂತ್ರಣಕ್ಕೆ ಒಳಪಡಿಸುವ ಮಸೂದೆ ಕಾರ್ಯಗತ

ವಾಗಿದೆ. ಹಾಗಾಗಿ ಒಂದು ವಿಶ್ವವಿದ್ಯಾನಿಲಯ ನೀಡಿರುವ ಗ್ರಾಹಕ ಹಾಗೂ ವಾಚಕ ಕಾರ್ಡುಗಳನ್ನು ಇನ್ನೊಂದು ವಿಶ್ವವಿದ್ಯಾನಿಲಯ ಮಾನ್ಯಮಾಡಿ ಅನುಕೂಲ ಒದಗಿಸುವುದು ಅತ್ಯಂತ ಮಹತ್ವದ ಸುಲಭದ ವಿಚಾರವಾಗಿದೆ.

ಸಹಕಾರೀ ಸೂಚೀಕರಣ

ಈ ಮೂರೂ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ಕಳೆದ ವರ್ಷಗಳಲ್ಲಿ ಹೊಸದಾಗಿ ಕೊಂಡ ಪುಸ್ತಕಗಳ ಪಟ್ಟಿಯನ್ನೂ, ಆ ಗ್ರಂಥ ಸಂಗ್ರಹಗಳನ್ನೂ ಪರೀಕ್ಷಿಸಿದರೆ ಕೊನೆಯಲ್ಲಿ 60ರಷ್ಟು ಸೇರ್ಪಡೆ ಸಮಾನವಾಗಿದೆ ಎಂಬುದನ್ನು ನೋಡಬಹುದು.

ಕನ್ನಡ ಪುಸ್ತಕಗಳಿಗೆ ಸಂಬಂಧಿಸಿದಂತೆ ಮೂರೂ ವಿಶ್ವವಿದ್ಯಾನಿಲಯಗಳು ಒಂದು ನಿಯಮ ಹಾಕಿಕೊಂಡು ಪ್ರಕಟವಾದ ಮುಖ್ಯ ಕನ್ನಡ ಗ್ರಂಥಗಳೆಲ್ಲವನ್ನೂ ತಲಾ 2 ಪ್ರತಿಗಳಂತೆ ಕೊಳ್ಳುತ್ತಿವೆ. ಆದ್ದರಿಂದ ಈ ಗ್ರಂಥಾಲಯಗಳು ಪೂರ್ಣ ಸಹಕಾರದಿಂದ ಕೆಲಸಮಾಡಿ ಕನ್ನಡ ಪುಸ್ತಕಗಳ ಸೂಚೀಕರಣ ವರ್ಗೀಕರಣಗಳನ್ನು ಕೈಗೊಳ್ಳಬಹುದು. ಇತರ ಪುಸ್ತಕಗಳ ಬಗ್ಗೆ ಕೂಡ ಭಾಗಶಃ ಸಹಕರಿಸಿ ಕೆಲಸ ಮಾಡಬಹುದು. ಈ ಸಂದರ್ಭದಲ್ಲಿ ಮೂರು ವಿಶ್ವವಿದ್ಯಾನಿಲಯ ಗ್ರಂಥಾಲಯಗಳೂ ಕ್ಯಾಟಲಾಗು ಕಾರ್ಡುಗಳನ್ನು ಅಚ್ಚುಮಾಡಿಸುತ್ತವೆ ಎಂಬುದನ್ನೂ ಸೂಚೀಕರಣಕ್ಕಾಗಿ ಯೂನಿಟ್. ಕಾರ್ಡ್ ಮಾದರಿಯನ್ನು ಅನುಸರಿಸುತ್ತಿವೆ ಎಂಬುದನ್ನೂ ಗಮನಿಸಬಹುದು. ವರ್ಗೀಕರಣದ ವಿಚಾರದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಗ್ರಂಥಾಲಯವು ದ್ವಿಬಿಂದು (ಕೋಲನ್) ಪದ್ಧತಿಯನ್ನು ಅಳವಡಿಸಿಕೊಂಡಿದ್ದರೆ ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ದಶಾಂಶ (ಡೆಸಿಮಲ್) ವರ್ಗೀಕರಣದ 17ನೆಯ ಆವೃತ್ತಿಯನ್ನು ಅಳವಡಿಸಲಾಗಿದೆ. ಆದರೆ ಇದೇನೂ ಈ ವಿಷಯದಲ್ಲಿ ಸಹಕಾರಕ್ಕೆ ತಡೆಯಾಗುವುದಿಲ್ಲ. ಹೆಚ್ಚು ಮಂದಿ ತಜ್ಞರನ್ನು ಹೊಂದಿ ವರ್ಗೀಕರಣದ ಜವಾಬುದಾರಿ ಹೊತ್ತುಕೊಳ್ಳುವ ಗ್ರಂಥಾಲಯವು ವರ್ಗ ಸಂಖ್ಯೆಗಳನ್ನು ಎರಡೂ ವಿಧಾನಗಳಿಂದ ನಿರ್ದಿಷ್ಟಪಡಿಸಬಹುದು. ಈ ಕ್ಷೇತ್ರದಲ್ಲಿ ಸಹಕಾರಕ್ಕೆ ತುಂಬ ಅವಕಾಶವಿದೆ, ಇದರಿಂದ ಗ್ರಂಥಾಲಯಗಳಿಗೆ ತುಂಬ ಪ್ರಯೋಜನವಾಗುತ್ತದೆ.

ದ್ವಿಪ್ರತಿಗಳ ವಿನಿಮಯ

(1) ನಿಯತಕಾಲಿಕಗಳ ಬಿಡಿಪ್ರತಿಗಳು: ಮೂರೂ ವಿಶ್ವವಿದ್ಯಾನಿಲಯಗಳು ಹಿಂದೆ ಸಂಗ್ರಹಿಸಿದ ನಿಯತಕಾಲಿಕಗಳ ಬಿಡಿಪ್ರತಿಗಳ ಸಂಗ್ರಹವನ್ನು ಬೆಳೆಸಿವೆ. ಪ್ರತಿಯೊಂದರಲ್ಲೂ ಸುಮಾರು ಎರಡು ಸಾವಿರ ಬಿಡಿಸಂಚಿಕೆಗಳಿವೆ. ಹಾಗೆಯೇ ಅವುಗಳ ನಿಯತಕಾಲಿಕ ಸಂಗ್ರಹಗಳಲ್ಲಿ ಅಲ್ಲಲ್ಲೇ ತೆರಪುಗಳೂ ಇವೆ. ಎಲ್ಲ ಗ್ರಂಥಾಲಯಗಳಿಗೂ ಲಾಭದಾಯಕವಾಗುವಂತೆ ಸಹಕಾರ ಇಲ್ಲಿ ಸಾಧ್ಯ. ದ್ವಿಪ್ರತಿಗಳ ಹಾಗೂ ತೆರಪುಗಳ ಪಟ್ಟಿಯನ್ನು ತಯಾರಿಸಿ ವಿನಿಮಯಮಾಡಿಕೊಳ್ಳಬೇಕು. ಅವುಗಳನ್ನು ರಾಜ್ಯದ ಹೊರಗಿನ ಗ್ರಂಥಾ

ಲಯುಗಳಿಗೂ ಕಳುಹಿಸಿಕೊಡಬಹುದು. ಇದರಿಂದ ತಮ್ಮಲ್ಲಿರುವ ತೆರಪುಗಳನ್ನು ಸ್ವಲ್ಪ ಮಟ್ಟಿಗೆ ತುಂಬಿಕೊಳ್ಳುವುದಕ್ಕೂ ದ್ವಿಪ್ರತಿಗಳಿಗೆ ಒದಗಿಸಬೇಕಾದ ಸ್ಥಳಾವಕಾಶ ಹಾಗೂ ದಾಸ್ತಾನು ಸಮಸ್ಯೆಗಳ ನಿವಾರಣೆಗೂ ದಾರಿಯಾಗುತ್ತದೆ.

ಇತರ ಗ್ರಂಥಾಲಯುಗಳು ಕೇಳುವ ದ್ವಿಪ್ರತಿಗಳನ್ನು, ಅವುಗಳನ್ನು ಹೊಂದಿರುವ ಗ್ರಂಥಾಲಯವು ಯಾವುದೇ ವೆಚ್ಚವಿಲ್ಲದೆ, ಗಣನೀಯ ಪ್ರಮಾಣದ್ದಾದರೆ ಪ್ಯಾಕಿಂಗ್ ಮತ್ತು ಅಂಚೆ ವೆಚ್ಚವನ್ನು ಮಾತ್ರ ಕೇಳಿ, ಕಳುಹಿಸಬಹುದು.

ಇಂಥ ಪಟ್ಟಿಯನ್ನು ಮೊದಲ ಬಾರಿಗೆ 1969–70ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮಾಡಿತು. ಕರ್ನಾಟಕ ವಿಶ್ವವಿದ್ಯಾನಿಲಯ ಗ್ರಂಥಾಲಯ ಈಚೆಗೆ ಅಂಥ ಪಟ್ಟಿಯನ್ನು ತಯಾರಿಸಿ ದೇಶದಲ್ಲಿನ ಮುಖ್ಯ ಗ್ರಂಥಾಲಯುಗಳಿಗೆ ಕಳಿಸಿದೆ. ಇತರ ಗ್ರಂಥಾಲಯುಗಳೂ ಅದಕ್ಕೆ ಪ್ರತಿಕ್ರಿಯೆ ತೋರಿಸುತ್ತಿವೆ.

(2) ಹಿಂದಿನ ಸಂಪುಟಗಳ ಪೂರ್ಣ ಶ್ರೇಣಿ: ಇಂತಹ ದ್ವಿಪ್ರತಿ ಶ್ರೇಣಿಗೆ ಹೆಚ್ಚು ಉಪಯೋಗವಿರುವುದಿಲ್ಲವಾದ್ದರಿಂದ ಅವನ್ನು ಕೇಳುವ ಗ್ರಂಥಾಲಯಕ್ಕೆ ಸುಲಭವಾಗಿ ಕೊಡಬಹುದು.

(3) ಪುಸ್ತಕಗಳು : ಒಂದು ಗ್ರಂಥಾಲಯದಲ್ಲಿ ಹೆಚ್ಚಾಗಿ ಉಪಯೋಗವಾಗುತ್ತಿಲ್ಲದ ಹಾಗೂ ಹೆಚ್ಚಿನ ಪ್ರತಿಗಳಿರುವ ಪುಸ್ತಕಗಳನ್ನೂ ಹೀಗೆ ವಿನಿಮಯ ಮಾಡಿಕೊಳ್ಳಬಹುದು.

ಸಹಕಾರೀ ಕೊಳ್ಳಿಕೆ

ಬೆಂಗಳೂರಿನಲ್ಲಿ ವಿಶ್ವವಿದ್ಯಾನಿಲಯ ಗ್ರಂಥಾಲಯುಗಳು ಮೂರಿವೆ. ಬೆಂಗಳೂರು ವಿಶ್ವವಿದ್ಯಾಲಯ ಗ್ರಂಥಾಲಯ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಗ್ರಂಥಾಲಯ ಹಾಗೂ ಕೃಷಿ ವಿಶ್ವವಿದ್ಯಾಲಯ ಗ್ರಂಥಾಲಯ. ಇವು ವಾಚನ ಸಾಮಗ್ರಿಯ ಕೊಳ್ಳಿಕೆಯಲ್ಲಿ ಹೆಚ್ಚು ಸಹಕಾರ ತೋರಿಸಬಹುದು. ಸುತ್ತಮುತ್ತಣ ಗ್ರಾಮಾಂತರ ಪ್ರದೇಶದ ಗ್ರಂಥಾಲಯುಗಳು ಆಮೇಲೆ ಈ ಯೋಜನೆಯಲ್ಲಿ ಪಾಲುಗೊಳ್ಳಬಹುದು. ಬಹುಮುಖ್ಯ ನಿಯತಕಾಲಿಕೆಗಳ ಏರ್ ಮೇಲ್ ಆವೃತ್ತಿಗಳು, ದುಬಾರಿ ಬೆಲೆಯ ಪರಾಮರ್ಶನ ಗ್ರಂಥಗಳು ಮತ್ತು ತುಂಬ ಬೆಲೆಯ ನಿಯತಕಾಲಿಕೆಗಳ ಹಿಂ ಪ್ರತಿಗಳು– ಇದನ್ನು ಹೀಗೆ ಸಹಕಾರೀ ಆಧಾರದಿಂದ ಕೊಳ್ಳಬಹುದು.

ಕರ್ನಾಟಕ ವಿಶ್ವವಿದ್ಯಾಲಯ ಗ್ರಂಥಾಲಯವನ್ನು ಯು ಎನ್ ದಾಖಲೆಗಳಿಗೆ ಒಂದು ಡೆಪಾಸಿಟರಿ ಕೇಂದ್ರವೆಂದು ಪರಿಗಣಿಸಲಾಗಿದೆ. ಆದ್ದರಿಂದ ಇತರ ಗ್ರಂಥಾಲಯಗಳು ಯು ಕೆ ಅಥವಾ ಯು ಎಸ್ ಎ ಮೊದಲಾದ ವಿದೇಶೀ ಸರಕಾರಗಳನ್ನು ತಮ್ಮ ದಾಖಲೆಗಳ ಸಂಗ್ರಹ ಕೇಂದ್ರವೆಂದು ಪರಿಗಣಿಸಬೇಕೆಂದು ಕೇಳಬಹುದು. ಇಂಥ ಸಂಗ್ರಹಗಳು ಕರ್ನಾಟಕ ರಾಜ್ಯ ಮಾತ್ರವಲ್ಲ, ಇಡೀ ದಕ್ಷಿಣ ಭಾರತಕ್ಕೇ ಉಪಯುಕ್ತವಾಗುತ್ತವೆ.

ಹೀಗೆಯೇ ಕೆಲವು ನಿರ್ದಿಷ್ಟ ವಿಷಯುಗಳು ಮತ್ತು ದೇಶಗಳಿಗೆ ಸಂಬಂಧಿಸಿದ ಸಂಗ್ರಹ ಗಳನ್ನು ಸಮರ್ಪಕವಾಗಿ ಕಟ್ಟಲು ರಾಜ್ಯದಲ್ಲಿನ ಗ್ರಂಥಾಲಯುಗಳು ಶ್ರಮಿಸಬಹುದು.

ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಆಸಕ್ತಿ ತಳೆಯುವ ಪ್ರಪಂಚದಲ್ಲಿನ ವಿವಿಧ ದೇಶಗಳಿಗೆ ಸಂಬಂಧಪಟ್ಟ ಪ್ರಾತಿನಿಧಿಕ ಸಂಗ್ರಹಗಳನ್ನು ರೂಪಿಸುವುದು ಎಲ್ಲ ಗ್ರಂಥಾ ಲಯುಗಳಿಗೂ ಸಾಧ್ಯವಿಲ್ಲ. ಆಫ್ರಿಕಾ, ಲ್ಯಾಟಿನ್ ಅಮೇರಿಕಾ, ಇತರ ಆಗ್ನೇಯ ಏಷ್ಯಾದ ದೇಶಗಳು ಇಂತಹ ಅಭಿವೃದ್ಧಿ ಶೀಲ ದೇಶಗಳಿಗೆ ಸಂಬಂಧಿಸಿದಂತೆ ಸಮಗ್ರವಾದ ಗ್ರಂಥಸಂಗ್ರಹಗಳನ್ನು ರಾಜ್ಯದ ಮೂರು ವಿಶ್ವವಿದ್ಯಾನಿಲಯ ಗ್ರಂಥಾಲಯುಗಳ ಸಹಕಾರದ ಮೂಲಕ ಮಾತ್ರ ಕಟ್ಟಬಹುದು. ಮಧ್ಯಪ್ರಾಚ್ಯ ದೇಶಗಳಿಗೆ ಸಂಬಂಧಿಸಿ ದಂತೆ ಮೈಸೂರು ವಿಶ್ವವಿದ್ಯಾಲಯ ಗ್ರಂಥಾಲಯ ಇಂಥ ಪ್ರಯತ್ನವನ್ನು ಈಗಾಗಲೆ ಕೈಗೊಂಡಿದೆ.

ಹಾಗೆಯೇ ವಿಷಯ ವಿಶಿಷ್ಟತೆಯನ್ನು ಗುರಿಯಾಗಿಟ್ಟುಕೊಳ್ಳಬಹುದು. ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಗ್ರಂಥಾಲಯವು ಏರೋನಾಟಿಕ್ಸ್, ಸಂಪರ್ಕ ಹಾಗೂ ಕೈಗಾರಿಕಾ ತಂತ್ರ ಶಾಸ್ತ್ರ ಮುಂತಾದ ವಿಷಯುಗಳ ವಿಶಿಷ್ಟ ಸಂಗ್ರಹವನ್ನು ರೂಪುಗೊಳಿಸಿದೆ. ಕೃಷಿ ಮತ್ತು ಅದಕ್ಕೆ ಸಂಬಂಧಿಸಿದಂತಹ ಇತರ ವಿಷಯುಗಳ ವಿಶಿಷ್ಟ ಸಂಗ್ರಹ ಕೃಷಿ ವಿಶ್ವವಿದ್ಯಾಲಯ ಗ್ರಂಥಾಲಯುದಲ್ಲಿ ರೂಪುಗೊಳ್ಳುತ್ತಿದೆ. ಇದನ್ನು ಪ್ರಾರಂಭವಾಗಿಟ್ಟುಕೊಂಡು ಇತರ ಗ್ರಂಥಾಲಯುಗಳು ಇತರ ವಿಷಯ ಕ್ಷೇತ್ರಗಳನ್ನು ಆರಿಸಿಕೊಳ್ಳಬಹುದು. ಇದರಿಂದ ಇದ್ದ ಅಲ್ಪ ಹಣದಲ್ಲೇ ಪ್ರಪಂಚದ ಬೇರೆ ಬೇರೆ ದೇಶಗಳಿಗೆ ಸಂಬಂಧಿಸಿದ ಹಾಗೆ ಮತ್ತು ವಿವಿಧ ವಿಷಯುಗಳಿಗೆ ಸಂಬಂಧಿಸಿದಂತೆ ವ್ಯಾಪಕ ವಾದ ಹಾಗೂ ಪ್ರಾತಿನಿಧಿಕವಾದ ಸಂಗ್ರಹಗಳನ್ನು ಕರ್ನಾಟಕದಲ್ಲಿನ ಎಲ್ಲ ಗ್ರಂಥಾಲಯ ಗಳೂ ಕೆಲವೇ ವರ್ಷಗಳಲ್ಲಿ ಹೊಂದಬಹುದು. ಇದರಿಂದಾಗಿ ರಾಜ್ಯದಲ್ಲಿನ ಸಂಶೋಧ ಕರು ಸಂಶೋಧನಾರ್ಥವಾಗಿ ರಾಜ್ಯದ ಹೊರಗಿನ ಬಹುದೂರದ ಗ್ರಂಥಾಲಯುಗಳಿಗೆ ಶರಣು ಹೋಗುವುದು ತಪ್ಪಿ, ಹಣದ ಹಾಗೂ ವೇಳೆಯ ಉಳಿತಾಯವಾಗುತ್ತದೆ.

ಸಹಕಾರೀ ಮೈಕ್ರೋಫಿಲಂ ಯೋಜನೆಗಳು

ಕನ್ನಡ ಭಾಷೆಯ ವೃತ್ತಪತ್ರಿಕೆಗಳು ಮೂರೂ ವಿಶ್ವವಿದ್ಯಾಲಯ ಗ್ರಂಥಾಲಯ ಗಳಿಗೆ ಬೇಕು. ರಾಷ್ಟ್ರೀಯ ಪ್ರಾಮುಖ್ಯವುಳ್ಳ ಇಂಗ್ಲೀಷ್ ಪತ್ರಿಕೆಗಳನ್ನೂ ಅವು ಸಂಗ್ರಹಿ ಸಿಡಬೇಕಾಗುತ್ತದೆ. ಬೆಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯವು 1968ರಿಂದ ಕೆಲವು ಮುಖ್ಯ ವರ್ತಮಾನಪತ್ರಿಕೆಗಳನ್ನು ಸಂಗ್ರಹಿಸಿಡುತ್ತಿದೆ. ಇದಕ್ಕೆ ತಕ್ಕಷ್ಟು ಸ್ಥಳಾವಕಾಶ ಒದಗಿಸುವುದೇ ಒಂದು ಮುಖ್ಯ ಸಮಸ್ಯೆಯಾಗುವುದರಿಂದ ಮೂರೂ ವಿಶ್ವವಿದ್ಯಾನಿಲಯ ಗ್ರಂಥಾಲಯುಗಳು ವೃತ್ತಪತ್ರಿಕಾ ಪ್ರಕಾಶಕರೊಂದಿಗೆ ಒಂದು ಒಪ್ಪಂದಕ್ಕೆ ಬಂದು ಪತ್ರಿಕೆಗಳನ್ನು ಮೈಕ್ರೋಫಿಲಂ ಮಾಡಿಇಡಲು ವ್ಯವಸ್ಥೆ ಮಾಡು ವುದು ವಿಹಿತ.

ಪುಸ್ತಕಗಳು ಹಸ್ತಪ್ರತಿಗಳು ಅಧಿಕೃತ ದಾಖಲೆಗಳು ಮುಂತಾದ ಸೂಕ್ಷ್ಮ ವಸ್ತುಗಳನ್ನು ಮೈಕ್ರೋಫಿಲಂ ಮಾಡಬೇಕು. ಅಲ್ಲದೆ ಕರ್ನಾಟಕ ರಾಜ್ಯ ಸರಕಾರದ ದಾಖಲೆಗಳ ಸಂಗ್ರಹ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಗೋವಾ ಮತ್ತು ಪಾಂಡಿಚೆರಿಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಇರುವ ದಾಖಲೆಗಳನ್ನೂ ಮೈಕ್ರೋಫಿಲಂ ಮಾಡುವ ಯೋಜನೆ ಯುಕ್ತವಾದದ್ದು.

ಇದಾದಮೇಲೆ ಲಂಡನಿನ ಇಂಡಿಯಾ ಆಫೀಸ್ ಲೈಬ್ರೆರಿಯಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಕಾಪಾಡಿ ಇಟ್ಟಿರುವ ದಾಖಲೆಗಳನ್ನು ವ್ಯಾಪಿಸುವಂತೆ ಈ ಮೈಕ್ರೋಫಿಲಂ ಯೋಜನೆಯನ್ನು ವಿಸ್ತರಿಸಬಹುದು. ಹಾಗೆಯೇ ವಿದೇಶೀ ಗ್ರಂಥಾಲಯಗಳಾದ ಬ್ರಿಟಿಷ್ ಮ್ಯೂಸಿಯಂ ಲೈಬ್ರೆರಿ, ವಾಷಿಂಗ್‌ಟನ್ನಿನ ಲೈಬ್ರೆರಿ ಆಫ್ ಕಾಂಗ್ರೆಸ್, ನ್ಯೂಯಾರ್ಕ್ ಪಬ್ಲಿಕ್ ಲೈಬ್ರೆರಿ, ಪ್ಯಾರಿಸಿನ ಬಿಬ್ಲಿಯೋಥಿಕ್ ನ್ಯಾಷನೇಲ್ ಮತ್ತು ಜರ್ಮನಿಯ ಕೆಲ ಮುಖ್ಯ ಗ್ರಂಥಾಲಯಗಳು-ಇಲ್ಲಿರುವ ಅಪೂರ್ವ ಕನ್ನಡ ಗ್ರಂಥಗಳನ್ನು ಮೈಕ್ರೋಫಿಲಂ ಮಾಡಬಹುದು. ಮೇಲ್ಕಂಡ ಗ್ರಂಥಾಲಯಗಳಲ್ಲಿ ಸಂಗ್ರಹಿಸಿಟ್ಟಿರುವ ಕನ್ನಡಿಗರಿಂದ ಬರೆಯಲ್ಪಟ್ಟ ಸಂಸ್ಕೃತ ಹಸ್ತಪ್ರತಿಗಳಿಗೂ ಇದನ್ನು ಅನ್ವಯಿಸಬಹುದು.

ದಾಖಲಾತಿ ಸೇವೆಗಳು

ಕರ್ನಾಟಕ ಸರಕಾರವು ಪ್ರತಿಯೊಂದು ಸರಕಾರೀ ದಾಖಲೆಯ ಒಂದೊಂದು ಪ್ರತಿಯನ್ನು ರಾಜ್ಯದ ಮೂರೂ ವಿಶ್ವವಿದ್ಯಾನಿಲಯ ಗ್ರಂಥಾಲಯಗಳಿಗೆ ಕಳುಹಿಸಿಕೊಡಲು ತತ್ವಶಃ ಒಪ್ಪಿದೆ. (ಆದರೆ ಈ ಒಪ್ಪಿಗೆ ಇನ್ನೂ ಕಾರ್ಯಗತವಾಗಿಲ್ಲ). ಇವುಗಳಲ್ಲಿ ಯಾವುದಾದರೂ ಒಂದು ವಿಶ್ವವಿದ್ಯಾನಿಲಯವು ಸರಕಾರೀ ಅಧಿಕಾರಿಗಳಿಗೂ ವಿದ್ವಾಂಸರಿಗೂ ಸರಕಾರೀ ದಾಖಲೆಗಳಿಗೆ ಸಂಬಂಧಿಸಿದಂತೆ ದಾಖಲಾತಿ ಸೇವೆಯನ್ನು ಒದಗಿಸುವ ಕಾರ್ಯಕ್ರಮ ಹಾಕಿಕೊಳ್ಳುವುದು ಮೇಲು.

ಆಧುನಿಕ ಉಪಕರಣಗಳ ಸಹಕಾರೀ ಬಳಕೆ

ಕಂಪ್ಯೂಟರ್, ಮೈಕ್ರೋಫಿಲಂ ಮಾಡುವ ಅಥವಾ ಛಾಯಾ ಚಿತ್ರ ಪ್ರತಿಮಾಡುವ ಯಂತ್ರ, ಫ್ಲೆಕ್ಸೋರೈಟರ್ ಮುಂತಾದ ಭಾರೀ ಬೆಲೆಯುಳ್ಳ ಆಮದು ಮಾಡಿಕೊಳ್ಳಲು ಈಗ ಸಾಧ್ಯವಿಲ್ಲದಿರುವ ಸಲಕರಣೆಗಳನ್ನು ಸಮಾನವಾಗಿ ಹಂಚಿಕೊಂಡು ಬಳಸುವುದರಿಂದಲೂ ಬಹುಮಟ್ಟಿನ ಪ್ರಯೋಜನ ದೊರೆತೀತು. ಬೆಂಗಳೂರಿನಲ್ಲಿ ಕಂಪ್ಯೂಟರುಗಳಿವೆ. ಇನ್ಸ್‌ಡಾಕ್ ಸಂಸ್ಥೆಯ ಪ್ರಾದೇಶಿಕ ಕಚೇರಿಯಲ್ಲಿ ಬಹು ಸೂಕ್ಷ್ಮವಾದ ಪ್ರತಿ ಮಾಡುವ ಯಂತ್ರೋಪಕರಣಗಳಿವೆ. ಅಲ್ಲಿ ಒಂದು ಫ್ಲೆಕ್ಸೋರೈಟರ್ ಕೂಡ ಇದೆ. ಮೈಸೂರಿನ ಓರಿಯಂಟಲ್ ಲೈಬ್ರೆರಿಯಲ್ಲಿ ಮೈಕ್ರೋಫಿಲ್ಮಿಂಗ್ ಮತ್ತು ಫೋಟೋ ಕಾಪಿಯಿಂಗ್ ಯಂತ್ರಗಳಿವೆ. ಆದರೆ ಅವುಗಳ ಗರಿಷ್ಠ ಉಪಯೋಗವನ್ನು ಇನ್ನೂ ಪಡೆಯಲಾಗಿಲ್ಲ. ರಾಜ್ಯದ ಗ್ರಂಥಾಲಯಗಳಲ್ಲಿ ಬಾಕಿ ಬಿದ್ದಿರುವ ಸೂಚೀಕರಣ ಕೆಲಸ

ವನ್ನು ಬೇಗನೆ ಮುಗಿಸಲು ಇನ್ಸ್‌ಡಾಕ್‌ನಲ್ಲಿರುವ ಫ್ಲೆಕ್ಸೋರೈಟರನ್ನು ಬಳಸಿಕೊಳ್ಳಬಹುದು. ಇದರಿಂದ ಪ್ರತಿ ನಿಮಿಷಕ್ಕೊಂದು ಸೂಚೀ ಪತ್ರದ ಪ್ರತಿಯನ್ನು ಪಡೆಯಬಹುದು.

ಕಾಲೇಜು ಗ್ರಂಥಾಲಯಗಳು

ರಾಜ್ಯದಲ್ಲಿ ಸುಮಾರು ನಾಲ್ಕುನೂರು ಕಾಲೇಜುಗಳಿವೆ. ಈಚೆಗೆ ಈ ಕಾಲೇಜುಗಳಲ್ಲಿ ಪರಿಣತಿ ಪಡೆದ ಗ್ರಂಥಪಾಲರನ್ನು ನೇಮಿಸಿಕೊಳ್ಳಲಾಗುತ್ತಿದೆಯಾದರೂ ಸೂಚೀಕರಣ ಮತ್ತು ವರ್ಗೀಕರಣಗಳಲ್ಲಿ ಪ್ರತಿಯೊಂದು ಗ್ರಂಥಾಲಯವೂ ಬೇಕಾದಷ್ಟು ಬಾಕಿಯುಳಿಸಿಕೊಂಡಿವೆ ; ಇದೆಲ್ಲವನ್ನೂ ಮುಗಿಸಿಕೊಂಡ ಹೊರತು ಗ್ರಂಥಪಾಲರು ಪರಿಣಾಮಕಾರಿಯಾಗಿ ಸೇವೆಸಲ್ಲಿಸುವುದು ಕಷ್ಟವಾಗುತ್ತದೆ. ಈ ಗ್ರಂಥಪಾಲರುಗಳಿಗೆ ಅಂದಂದಿನ ಕೆಲಸದ ಹೊರೆಯೇ ವಿಪರೀತವಾಗಿದ್ದು ಬಾಕಿ ಕೆಲಸ ಹಾಗೆಯೇ ಅನಿರ್ದಿಷ್ಟ ಕಾಲ ಉಳಿದುಹೋಗುತ್ತದೆ. ಮೂರೂ ವಿಶ್ವವಿದ್ಯಾನಿಲಯಗಳು ಇಲ್ಲಿ ಮುಂದೆ ಬಂದು ಕಾಲೇಜು ಗ್ರಂಥಾಲಯಗಳಲ್ಲಿ ಬಾಕಿಯುಳಿದಿರುವ ಕೆಲಸಗಳನ್ನು ಪೂರೈಸಲು ಸಲಹೆಗಳನ್ನೂ, ಸಹಾಯವನ್ನೂ ನೀಡಬಹುದು.

ಈ ಕಾಲೇಜು ಗ್ರಂಥಾಲಯಗಳು ಕೊಳ್ಳುವ ಪುಸ್ತಕಗಳಲ್ಲಿ ಕೊನೆಯಪಕ್ಷ ಅರ್ಧದಷ್ಟು ಸಮಾನವಾಗಿರುತ್ತವೆ. ನಾಲ್ಕೈದು ಪ್ರಮುಖ ಹಾಗೂ ಪ್ರಾತಿನಿಧಿಕ ಕಾಲೇಜು ಗ್ರಂಥಾಲಯಗಳ ಸಂಗ್ರಹದ ಪಟ್ಟಿ ಮಾಡಿದರೆ ಮಿಕ್ಕ ಗ್ರಂಥಾಲಯಗಳು ಆ ಪಟ್ಟಿಯೊಂದಿಗೆ ತಮ್ಮ ಸಂಗ್ರಹದಲ್ಲಿರುವ ಸಮಾನ ಶೀರ್ಷಿಕೆಗಳನ್ನು ತಾಳೆನೋಡಬಹುದು. ಫ್ಲೆಕ್ಸೋರೈಟರ ಅಥವಾ ಕಂಪ್ಯೂಟರ್ ಸಹಾಯದಿಂದ ಈ ಸಮಾನ ಗ್ರಂಥಗಳ ವರ್ಗೀಕರಣ ಮತ್ತು ಸೂಚೀಕರಣ ಕೆಲಸಗಳನ್ನು ನಿರ್ವಹಿಸಿ ಈ ಕಾಲೇಜು ಗ್ರಂಥಾಲಯಗಳ ತಾಂತ್ರಿಕ ಕಾರ್ಯದಲ್ಲಿ ಉಳಿಯುವ ಬಾಕಿಯನ್ನು ಕರಗಿಸಬಹುದು.

ಹಸ್ತಪ್ರತಿ ಗ್ರಂಥಾಲಯಗಳು

ಕರ್ನಾಟಕದಲ್ಲಿ ಹಲವಾರು ಹಸ್ತಪ್ರತಿ ಗ್ರಂಥಾಲಯಗಳಿವೆ. ಅವುಗಳಲ್ಲಿ ಗಮನಾರ್ಹವಾದುವೆಂದರೆ ಮೈಸೂರು ವಿಶ್ವವಿದ್ಯಾನಿಲಯದ ಓರಿಯಂಟಲ್ ಲೈಬ್ರೆರಿಯ ಹಸ್ತಪ್ರತಿ ಭಂಡಾರ, ಧಾರವಾಡದ ಕನ್ನಡ ರಿಸರ್ಚ್ ಇನ್ಸ್‌ಟಿಟ್ಯೂಟ್ ಸಂಸ್ಥೆಗೆ ಸೇರಿದ ಹಸ್ತಪ್ರತಿ ಗ್ರಂಥಾಲಯ ಮತ್ತು ಮೂಡುಬಿದರೆಯಲ್ಲಿರುವ ಹಸ್ತಪ್ರತಿಗಳ ಸಂಗ್ರಹ. ಇವಲ್ಲದೆ ಖಾಸಗಿ ಸಂಗ್ರಹಗಳಲ್ಲಿ, ಧಾರ್ಮಿಕ ಸಂಸ್ಥೆಗಳಲ್ಲಿ ಹಸ್ತಪ್ರತಿ ಭಂಡಾರಗಳಿವೆ. ಈ ಎಲ್ಲ ಸಂಗ್ರಹಗಳ ಒಂದು ಸಮಗ್ರ ಸೂಚಿಯನ್ನು ತಯಾರಿಸುವ ಸಹಕಾರೀ ಯೋಜನೆಯೊಂದನ್ನು ಸರಕಾರ ಹಾಗೂ ರಾಜ್ಯದ ವಿಶ್ವವಿದ್ಯಾನಿಲಯಗಳು ಕೈಕೊಂಡಲ್ಲಿ ಸಂಶೋಧಕರಿಗೆ ಬಹಳಷ್ಟು ಸಹಾಯವಾಗುವುದು.

ಇನ್ನುಳಿದ ಕ್ಷೇತ್ರಗಳು

ಸಹಕಾರವನ್ನು ಆಚರಣೆಗೆ ತರಲು ಅವಕಾಶವಿರುವ ಇನ್ನೂ ಕೆಲವು ಕ್ಷೇತ್ರಗಳಿವು:

1. ಅಕ್ವಿಸಿಷನ್ ರಿಜಿಸ್ಟರ್, ಕ್ಯಾಟಲಾಗು ಕಾರ್ಡ್, ಗ್ರಾಹಕರ ಬಳಕೆಗೆ ಬೇಕಾದ ಚೀಟಿ–ಮೊದಲಾದ ಲೇಖನ ಸಾಮುಗ್ರಿ ಮತ್ತು ದಾಖಲೆಗಳನ್ನು ಪರಸ್ಪರ ಸಹಕಾರ ದಿಂದ ತಯಾರಿಸಿ ಹಂಚಬಹುದು. ಇದರಿಂದ ಈ ದಾಖಲೆಗಳ ತಯಾರಿಕೆಯಲ್ಲಿ ಒಂದು ಮಟ್ಟವನ್ನು ಕಾಯ್ದುಕೊಳ್ಳುವದಲ್ಲದೆ ಅವುಗಳನ್ನು ಸುಲಭ ಬೆಲೆಗೆ ಪಡೆಯಬಹುದು.

2. ಇದರಂತೆಯೇ ಸಹಕಾರದಿಂದ ಒಟ್ಟಿಗೆ ಲೆಕ್ಕದಲ್ಲಿ ಪೀಠೋಪಕರಣಗಳ ಕೊಳ್ಳಿಕೆ.

3. ತಾಂತ್ರಿಕ ಪರಿಣತಿ ಪಡೆದ ಸಿಬ್ಬಂದಿಯ ವಿನಿಮಯ

4. ವಿರಳವಾದ, ಅಪರೂಪವಾದ ಪುಸ್ತಕಗಳು, ಹಿಂದಿನ ಸಂಪುಟಗಳ ಸಮಗ್ರ ಸಂಯುಕ್ತ ಸೂಚಿಗಳ ತಯಾರಿಕೆ. ಈ ಸಂಯುಕ್ತ ಸೂಚಿಗಳ ಸಹಾಯದಿಂದ ಸಂಶೋಧ ಕರು ತಮಗೆ ಬೇಕಾಗುವ ಸಂಶೋಧನ ಸಾಮುಗ್ರಿ ಎಲ್ಲಿ ಇದೆ ಎಂಬುದನ್ನು ಕಂಡುಹಿಡಿ ಯಲು ಬಹಳೇ ಅನುಕೂಲವಾಗುವದು.

5. ಅಲ್ಪ ಬಳಕೆ ಗ್ರಂಥಗಳ ಗುದಾಮುಗಳು (storage centres) ಕಡಮೆ ಉಪಯೋಗವಾಗುವ ನಿಯತಕಾಲಿಕೆಗಳು, ಪ್ರೌಢನಿಬಂಧಗಳು, ಪ್ರಬಂಧಗಳು ಹಾಗೂ ಬಹಳ ಕಡಮೆ ಉಪಯೋಗಕ್ಕೆ ಬರುವ ಇತರ ವಾಚನ ಸಾಮುಗ್ರಿಗಳನ್ನು ಪ್ರತ್ಯೇಕವಾಗಿ ಒಂದು ಕೇಂದ್ರದಲ್ಲಿ ಸಂಗ್ರಹಿಸಿಡುವಿಕೆ. ಗ್ರಂಥಾಲಯ ದಿನೇ ದಿನೇ ಬೆಳೆಯುವ ಸಂಸ್ಥೆ. ಈ ಕಾರಣಕ್ಕಾಗಿ ಅಲ್ಲಿ ಸ್ಥಳಸಂಕೋಚದ ಸಮಸ್ಯೆ ಸದಾ ತಲೆ ಎತ್ತೇ ಇರುತ್ತದೆ. ಇಂಥ ಕೇಂದ್ರಗಳ ನಿರ್ಮಾಣದಿಂದ ರಾಜ್ಯದಲ್ಲಿನ ಎಲ್ಲ ಗ್ರಂಥಾಲಯಗಳು ಸ್ಥಳಾಭಾವದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು.

* * *

ಸಂಬಂಧಪಟ್ಟವರೆಲ್ಲರೂ ಮುಕ್ತಮನಸ್ಸಿನಿಂದ ಸಹಕರಿಸಿದರೆ ಸಹಕಾರವನ್ನು ಆಚರಣೆಯಲ್ಲಿ ತರಲು ಖಂಡಿತ ಸಾಧ್ಯ. ಸ್ವಪ್ರತಿಷ್ಠೆಯನ್ನು ಬಿಡುವುದು, ಸೌಲಭ್ಯ ಗಳನ್ನೂ, ಹೊಣೆಗಾರಿಕೆಗಳನ್ನೂ ಸಮಾನವಾಗಿ ಹಂಚಿಕೊಳ್ಳುವುದು ಇದಕ್ಕೆ ಅಗತ್ಯ. ಕರ್ನಾಟಕ ರಾಜ್ಯದಲ್ಲಿ ಗ್ರಂಥಪಾಲರು ಪರಸ್ಪರ ಸಹಕರಿಸುವುದಕ್ಕೆ ಬ್ರಹ್ಮಾಂಡವಾದ ಅವಕಾಶವಿದೆ. ಈ ಗ್ರಂಥಾಲಯಗಳ ಗ್ರಂಥಪಾಲರಿಗೆ ಸಹಕಾರೀ ಯೋಜನೆಗಳಲ್ಲಿ ಮುನ್ನಡೆದು ಒಳಿತು ಸಾಧಿಗಲು ಮುಕ್ತ ಅವಕಾಶ, ಸ್ವಾತಂತ್ರ್ಯ ಕೊಡಬೇಕಾದದ್ದು, ತಡೆಯುಂಟುಮಾಡದಿರುವುದು ಅಧಿಕಾರಿಗಳ ಕರ್ತವ್ಯ. ಪರಿಣಾಮಕಾರಿಯಾದ ಸಹಕಾರದಿಂದ ಹಣದ ಉಳಿತಾಯ ಮಾತ್ರವಲ್ಲ, ಸಂಶೋಧನಾ ಯೋಜನೆಗಳು ತೀವ್ರ ತರವಾಗಿ ಪೂರೈಸಲು ಅನುಕೂಲವಾಗುತ್ತದೆ. ಅದರಿಂದ ದೇಶದ ಆರ್ಥಿಕತೆ ಮಾತ್ರ ವಲ್ಲ, ಸಾಂಸ್ಕೃತಿಕ ನಿಲುಮೆಯೇ ಉನ್ನತ ಮಟ್ಟಕ್ಕೇರುವುದರಲ್ಲಿ ಸಂದೇಹವಿಲ್ಲ.

[ಅನುವಾದ : ಆರ್ ಎಲ್ ಅನಂತರಾಮಯ್ಯ

೭ / ಕಾಲೇಜು ಗ್ರಂಥಾಲಯಗಳನ್ನು ಸಚೇತನಗೊಳಿಸುವ ಸಾಧನಗಳು

ಈಗ ನಾವು ಬದುಕಿರುವುದು ಮಾನವನ ಇತಿಹಾಸದಲ್ಲಿಯೇ ಒಂದು ಅಪರೂಪವಾದ, ಜಟಿಲ ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿ. 19ನೆಯ ಶತಮಾನದ ವಿಖ್ಯಾತ ಆಂಗ್ಲ ಕಾದಂಬರಿಕಾರನಾದ ಚಾರಲ್ಸ್ ಡಿಕನ್ಸ್‌ನು ತನ್ನ A Tale of Two Cities ಎಂಬ ಕಾದಂಬರಿಯನ್ನು ಪ್ರಾರಂಭಿಸಿದ್ದು ಈ ವಾಕ್ಯದಿಂದ : "It was the best of times: and it was the worst of times."

ನಮ್ಮ ಪರಿಸ್ಥಿತಿಯನ್ನು ಈ ಒಂದು ವಾಕ್ಯ ಎಷ್ಟು ಸೂಚ್ಯವಾಗಿ ಬಣ್ಣಿಸಿದೆ! ಪರಸ್ಪರ ವಿರೋಧಿಯಾದ ಜೀವನ ಮೌಲ್ಯಗಳ ಸಂಘರ್ಷಣೆಯ ತಿರುಗಣಿ ಮಡುವಿನಲ್ಲಿ ನಾವು ಈಗ ಸಿಕ್ಕಿದ್ದೇವೆ.

ಈ ವಿಷಮ ಸ್ಥಿತಿಯಿಂದ ನಮ್ಮನ್ನು ಉದ್ಧರಿಸಬಹುದಾದ ಒಂದೇ ಒಂದು ಮಹತ್ವದ ಸಾಧನವೆಂದರೆ ಶಿಕ್ಷಣ. ಅದಕ್ಕಾಗಿ ಶಾಲೆ ಕಾಲೇಜುಗಳಲ್ಲಿ ಕೊಡಲಾಗುವ ಶಿಕ್ಷಣದ ಗಾತ್ರ, ರೀತಿ, ನಡತೆಗಳ ಬಗೆಗೆ ನಾವು ಈಗ ಜಾಗರೂಕರಾಗಬೇಕಾದ ಕಾಲ ಬಂದಿದೆ. ಶಿಕ್ಷಣದ ಗುರಿ ಬರೀ ವೈಯಕ್ತಿಕ ಐಹಿಕ ಸುಖ ಸಂಪತ್ತುಗಳಿಗೆ ಮಾತ್ರ ಸೀಮಿತವಾಗಿರಬಾರದು. ಅದು ಸಾಮುದಾಯಿಕ ಹಾಗೂ ಪಾರಮಾರ್ಥಿಕ ಹಿತಾಹಿತಗಳನ್ನೂ ಗಮನಿಸುವಂತಾಗಬೇಕು. ಈ ದಿಶೆಯಲ್ಲಿ ಶ್ರಮಿಸಬೇಕಾದರೆ, ಭೂತ ವರ್ತಮಾನ ಹಾಗೂ ಭವಿಷ್ಯತ್ತುಗಳ ಏಕಸೂತ್ರತೆಯ ಅರಿವಿದ್ದ ಶಿಕ್ಷಣತಜ್ಞರು ಬೇಕು. ಹಾಗೂ ಅವರ ಬೆಂಗಾವಲಾಗಿ ನಿಂತು, ವಿಶ್ವದ ಅಗಾಧ ಜ್ಞಾನವನ್ನೆಲ್ಲ ಅವರಿಗೆ ಅಣಿಗೊಳಿಸಿಕೊಡುವ ಒಳನೋಟವಿದ್ದ ಗ್ರಂಥಜ್ಞಾನಿಗಳು ಬೇಕು, ಗ್ರಂಥಪಾಲರು ಬೇಕು.

ಉಚ್ಚ ಶಿಕ್ಷಣದಲ್ಲಿ ಗ್ರಂಥಗಳು : ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆ ಶೈಕ್ಷಣಿಕ ಸಂಸ್ಥೆಗಳ ಆದ್ಯ ಹೊಣೆ. ಬರೀ ಪರೀಕ್ಷೆಗಳನ್ನು ಪಾಸುಮಾಡಿ "ಸರ್ಟಿಫಿಕೇಟು"ಗಳನ್ನು ಪಡೆಯುವುದೇ ವಿದ್ಯೆಯ ಅಂತಿಮ ಗುರಿಯಲ್ಲ. ಅಂತೆಯೇ ವಿದ್ಯಾರ್ಥಿಗಳಲ್ಲಿ ವಿದ್ಯೆಯ ಬಗೆಗೆ ಹಾಗೂ ಗ್ರಂಥಗಳ ಬಗೆಗೆ ಆಸಕ್ತಿ ಸದಾ ಜಾಗೃತವಿರಬೇಕು. ಈ ವಿಷಯದ ಬಗ್ಗೆ ಬರೆಯುತ್ತ ಫ್ರೆಡರಿಕ್ ಮೆಯೆರ್ ಎಂಬ ಅಮೆರಿಕನ್ ಶೈಕ್ಷಣಿಕ ತತ್ತ್ವಜ್ಞಾನಿಯು "If the students learn to love books, their entire existence will change. Old age will lose part of its terror & time will be something purely phenominal. Distance will have no meaning and the past will be intriguing as the future. And they will never be alone even in times of illness and despair. To love books is to see the ideal possibilities of

humanity." ಎಂದು ಹೇಳಿದ್ದಾನೆ. ಆಧುನಿಕ ಶಿಕ್ಷಣ ಕ್ರಮದಲ್ಲಿಯಂತೂ ಪುಸ್ತಕಗಳ ಮಹತ್ವ ಬಹಳವಾಗಿದೆ. ಕಾಲೇಜಿನ ಕಾರಿಡಾರುಗಳಲ್ಲಿ ಕಿಕ್ಕಿರಿದು ತುಂಬುತ್ತಿರುವ ವಿದ್ಯಾರ್ಥಿವೃಂದ, ಅಲ್ಪ ಸಂಖ್ಯೆಯಲ್ಲಿರುವ ಶಿಕ್ಷಕರು, ಮನುಷ್ಯನ ಹತೋಟಿ ಮೀರಿ, ದಂತಕತೆಯಲ್ಲಿಯ ಶೀಶೆಯನ್ನೊಡೆದು ಹೊರ ಬಂದ "ಜೀನೀ"ಯಂತೆ ವಿಸ್ಫೋಟಿಸಿ ನಿಂತ ಜ್ಞಾನದ ವಿರಾಡ್ರೂಪ, ಇವೆಲ್ಲವೂ ಶಿಕ್ಷಣ ಕ್ರಮದಲ್ಲಿ ಗ್ರಂಥಾಲಯದ ಮಹತ್ವವನ್ನು ಬೆರಳಿಟ್ಟು ತೋರಿಸುತ್ತಿವೆ.

ಶಾಲೆ ಬಿಟ್ಟು ಕಾಲೇಜಿಗೆ ಬಂದೊಡನೆ ವಿದ್ಯಾರ್ಥಿಗೆ ಮೊದಲು ಅರಿವಾಗುವುದು, ಅಲ್ಲಿಯ ಭವ್ಯತೆ, ಅದರ ಜೊತೆಗೆ ತನ್ನ ಅಸಹಾಯಕತೆ. ಶಾಲೆಯಲ್ಲಿ ಪ್ರತಿ ಶಿಕ್ಷಕರಿಂದ ದೊರೆತ ವೈಯಕ್ತಿಕ ಲಕ್ಷ್ಯದ ಕವಚ ಕಳಚಿ ಹೋಗಿ, ಬೆಳೆದ ಮರಿ ಗುಬ್ಬಚ್ಚಿಯಂತೆ ಅವನು ಇಲ್ಲಿ ಸ್ವತಂತ್ರನಾಗಿ ಹಾರಲು ಕಲಿತುಕೊಳ್ಳಬೇಕಾಗುತ್ತದೆ. ಶಿಕ್ಷಣದ ರೀತಿಯಲ್ಲಿಯ ನವೀನತೆ, ಮೊದಲಿಗಿಂತ ಕ್ಲಿಷ್ಟ ಹಾಗೂ ವಿಪುಲವಾಗಿದ್ದ ಅಭ್ಯಾಸಕ್ರಮ, ಕಲಿಸುವ ರೀತಿಯ ಹೊಸತನ, ಓದಿದರೆ ಓದಿ, ಬಿಟ್ಟರೆ ಬಿಡಿ ಎನ್ನುವ ಸ್ವಚ್ಛಂದದ ವಾತಾವರಣ, ಇವೆಲ್ಲ ವಿದ್ಯಾರ್ಥಿಗೆ ದಿಗ್ಭ್ರಮೆ ಉಂಟುಮಾಡುತ್ತವೆ. ಶಾಲೆಯಲ್ಲಿ ಬೇಡಿ ಬಯಸಿ ಕನವರಿಸಿದ ಸ್ವಾತಂತ್ರ್ಯ ಇಲ್ಲಿ ಅನಾಯಾಸವಾಗಿ ಕೈಗೆ ಸಿಕ್ಕಾಗ ಅದು ಭಯಾನಕವೆನಿಸುತ್ತದೆ. ಈ ಸ್ವಾತಂತ್ರ್ಯ ಅವನಿಗೆ ಅಸಹನೀಯವಾಗುತ್ತದೆ. ಈ ಸ್ವೈರ ವೃತ್ತಿಗೆ ಕಡಿವಾಣ ಹಾಕಿ, ಸ್ವಾವಲಂಬಿಯಾಗಿ ಸರಿಯಾದ ರೀತಿಯಲ್ಲಿ ಬೆಳೆಯಲು ವಿದ್ಯಾರ್ಥಿಗೆ ಸಮಯ, ಬುದ್ಧಿ ಎರಡೂ ಬೇಕಾಗುತ್ತವೆ.

ಮುಕ್ಕಾಲು ಗಂಟೆಯ ಒಂದು ಪಿರಿಯಡ್ಡಿನಲ್ಲಿ ಶಿಕ್ಷಕರು ಯಾವುದೇ ಒಂದು ವಿಷಯದ ಪೂರ್ಣ ವಿವೇಚನೆ ಮಾಡಲಾರರು. ಅಷ್ಟು ಸ್ವಲ್ಪ ಸಮಯದಲ್ಲಿ ಅವರು ಅದರ ರೂಪರೇಷೆಗಳನ್ನಷ್ಟು ಹೇಳಿ, ವಿಷಯದತ್ತ ಮಾರ್ಗದರ್ಶನ ಮಾಡಲು ಮಾತ್ರ ಶಕ್ತರಾಗುತ್ತಾರೆ. ಈ "ಭಾಷಣ"ಗಳು ಸ್ವಯಂಪೂರ್ಣವಾಗಿರುವುದಿಲ್ಲ. ಇವುಗಳ ಉಪಯುಕ್ತತೆಯು ಮರ್ಯಾದಿತವಾಗಿರುತ್ತದೆ. ಡಾ। ಜಾನ್‌ಸನ್ ಹೇಳಿದಂತೆ "I cannot see that lectures can do so much good as reading the books from which these lectures are taken" ಹೀಗಾಗಿ ವಿದ್ಯಾರ್ಥಿಯು ಮೂಲ ಗ್ರಂಥಗಳ ವಾಚನದ ಮೇಲೆ ಹೆಚ್ಚು ಭಾರ ಹಾಕಬೇಕಾಗಿ ಬರುತ್ತದೆ. ಇಂಥ ವಾಚನ, ಗ್ರಂಥಾಲಯದ ಶಾಂತ ಪರಿಸರದಲ್ಲಿ, ಗ್ರಂಥ ಸಾಗರದ ಮಧ್ಯದಲ್ಲಿ ಸಾಗಬೇಕಾಗುತ್ತದೆ.

ವಿದ್ಯಾರ್ಥಿಗಳು ಓದಬೇಕಾದ ಪಠ್ಯಪುಸ್ತಕಗಳಾದರೂ, ಜ್ಞಾನದ ಪ್ರಾತಿನಿಧಿಕ ಸಂಗ್ರಹವಿದ್ದು ಅವು ಮುಂದೆ ವಿದ್ಯಾರ್ಥಿಯನ್ನು ಮೂಲ ಜ್ಞಾನದೆಡೆಗೆ ಒಯ್ಯುವ ಕೇವಲ ಜ್ಞಾನದೀವಿಗೆಗಳಾಗಿವೆ. ಕಾಲೇಜಿನಲ್ಲಿ ಶಿಕ್ಷಕರು ಮಾಡುವ ಮುಖ್ಯ ಕೆಲಸವೆಂದರೆ ಈ ಮಾರ್ಗದರ್ಶನ. ಪಠ್ಯಪುಸ್ತಕದ ಸೀಮೆಯ ಆಚೆಗಿರುವ ಸಮಗ್ರ ಸಾಹಿತ್ಯದೆಡೆಗೆ ವಿದ್ಯಾರ್ಥಿಗಳನ್ನು ಕರೆದೊಯ್ಯುವುದು. ಇಂಥ ಗ್ರಂಥಗಳ ಬಗ್ಗೆ ಅವರ

ಆಸಕ್ತಿಯನ್ನು, ಕುತೂಹಲವನ್ನು ಕೆರಳಿಸಿ ಅವರಿಗೆ ವಾಚನಾಭಿರುಚಿಯನ್ನು ತಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಮಾಡಿಕೊಳ್ಳುವಂತೆ ಮಾಡುವುದು.

ಉಚ್ಚ ಶಿಕ್ಷಣದಲ್ಲಿ ಗ್ರಂಥಾಲಯಗಳ ಪಾತ್ರವು ಎಷ್ಟು ಮಹತ್ವದ್ದೆನ್ನುವುದು ಇದರಿಂದ ತಾನೆ ವಿದಿತವಾಗುತ್ತದೆ. ಅಮೆರಿಕೆಯ ಕವಿ ಕಾರ್ಲ್ ಶಾಪಿರೋ ಗ್ರಂಥಾಲಯವನ್ನು "ಶಿಕ್ಷಕರೆಲ್ಲರೂ ಪೂರ್ಣವಾಗಿ ರಜೆ ಹೋಗಿರುವ ಕಾಲೇಜಿಗೆ" ಹೋಲಿಸಿದ್ದಾನೆ.

ಗ್ರಂಥಪಾಲಕರು : ಕಾಲೇಜು ಗ್ರಂಥಾಲಯಗಳ ಉಪಯುಕ್ತತೆ ಮುಖ್ಯವಾಗಿ ಅಲ್ಲಿ ಕೆಲಸ ಮಾಡುವ ನೌಕರವರ್ಗದ ಯೋಗ್ಯತೆ, ಕಾರ್ಯಕ್ರಮ ಹಾಗೂ ಪ್ರಾಮಾಣಿಕತೆ ಇವುಗಳನ್ನವಲಂಬಿಸಿದೆ. ಗ್ರಂಥಾಲಯದ ಕಟ್ಟಡ, ಗ್ರಂಥಗಳು, ಹಾಗೂ ಸಂಸ್ಥೆಯ ಗ್ರಂಥಾಲಯದ ಮೇಲೆ ಮಾಡುವ ವೆಚ್ಚ, ಇವುಗಳು ಕೂಡ ಅಷ್ಟೇ ಮಹತ್ವದ ಅಂಶಗಳಾಗಿವೆ. ಆದರೆ ಕೊನೆಗೆ ಗ್ರಂಥಾಲಯದ ಯೋಗ್ಯತೆಯ ಅಳತೆಗೋಲೆಂದರೆ, ಅಲ್ಲಿಯ ಗ್ರಂಥಭಾಂಡಾರಿ ಹಾಗೂ ಅಲ್ಲಿಯ ನೌಕರವರ್ಗ.

ಶಿಕ್ಷಣಕ್ಷೇತ್ರದಲ್ಲಿ ಯಶಸ್ಸು ಗಳಿಸದೆ ಸೋತ ಶಿಕ್ಷಕ, ಅಥವಾ ಆಡಳಿತದ ಯಾವುದೇ ವಿಭಾಗದಲ್ಲಿಯೂ ಚೆನ್ನಾಗಿ ಕೆಲಸ ಮಾಡಲಿಕ್ಕಾಗದೆ ಅಸಮರ್ಥನೆಂದು ನಿರ್ಣೀತನಾದ ಅಧಿಕಾರಿ, ಅಥವಾ ಅಂಗ ವಿಕಲತ್ವ ಇಲ್ಲವೇ ಇನ್ನಾವುದಾದರೂ ದೈಹಿಕ ಅಥವಾ ಮಾನಸಿಕ ದುರ್ಬಲತೆಯಿಂದ ಬಳಲುವ ವ್ಯಕ್ತಿ – ಇಂಥವರು ಗ್ರಂಥಭಾಂಡಾರಿಗಳ ಕೆಲಸಕ್ಕೆ ಯೋಗ್ಯರೆಂದು ತಿಳಿಯಲ್ಪಡುತ್ತಿದ್ದ ವಿಷಮ ಕಾಲವೊಂದಿತ್ತು. ಕೆಲವೆಡೆ ಇನ್ನೂ ಇದೆ. ಮುಂದೆ ಇನ್ನೊಂದು ಕಾಲ ಬಂತು : ಆಗ ಅಪ್ರಚಲಿತ ವಿಷಯಗಳ ಬಗೆಗೆ ಅಗಾಧ ಜ್ಞಾನ ಸಂಪಾದಿಸಿದ ಪಂಡಿತರು ಈ ಅಧಿಕಾರಕ್ಕೆ ಯೋಗ್ಯರಾದರು. ಆದರೆ ಇವರಿಗೆ ತಮ್ಮ ವಿಷಯವೊಂದನ್ನು ಬಿಟ್ಟು, ಮಿಕ್ಕ ವಿಷಯಗಳ ಬಗೆಗೆ ಆಸಕ್ತಿಯಾಗಲಿ, ಪರಿಣತಿಯಾಗಲಿ ಸಹಾನುಭೂತಿಯಾಗಲಿ ಎಳ್ಳಷ್ಟೂ ಇರುತ್ತಿರಲಿಲ್ಲ. ಈಗ ಮಾತ್ರ ಸರಿಯಾದ ಕಾಲ ಬಂದಂತೆ ಕಾಣುತ್ತದೆ. ಯಾಕೆಂದರೆ ಈಗಿನ ಆದರ್ಶ ಗ್ರಂಥಭಾಂಡಾರಿ ಎಂದರೆ, ಅವನು ಯಾವುದಾದರೂ ಒಂದು ವಿಷಯದ ಮೇಲೆ ಪ್ರಭುತ್ವವುಳ್ಳವನಾಗಿರಬೇಕು, ಸಮರ್ಥ ಆಡಳಿತಗಾರನಾಗಿರಬೇಕು, ಹಾಗೂ ಜನಸೇವಾಕಾಂಕ್ಷಿಯಾಗಿರಬೇಕು. ಗ್ರಂಥಭಾಂಡಾರಿಯೆಂದರೆ ಬಹುಶ್ರುತ ಸವ್ಯಸಾಚಿ. ಹಾಗೂ ಕಾಲೇಜಿನ ಆವಾರದಲ್ಲಿಯೇ ಅತಿ ಜಾಣ ಹಾಗೂ ಸಹಕಾರಿಯಾದ ವ್ಯಕ್ತಿಯಾಗಿರಬೇಕು.

ಪಾಶ್ಚಾತ್ಯ ರಾಷ್ಟ್ರಗಳು ಈ ಮಾತಿನ ಮಹತ್ವವನ್ನರಿತಿವೆ. ಅಂತೆಯೇ ಹೊಸದಾಗಿ ಪ್ರಾರಂಭವಾಗಲಿರುವ ಒಂದು ಕಾಲೇಜು ಅಥವಾ ವಿಶ್ವವಿದ್ಯಾಲಯದಲ್ಲಿ, ಅವರು ಮೊಟ್ಟಮೊದಲು ನಿಯಮಿಸುವುದು ವ್ಹಾಯಿಸ್-ಚಾನ್ಸಲರರನ್ನಲ್ಲ ; ಅಥವಾ ರಜಿಸ್ಟ್ರಾರರನ್ನು ಅಲ್ಲ, ಆದರೆ ಗ್ರಂಥಭಾಂಡಾರಿಯನ್ನು – ಅಮೇರಿಕೆಯ ಕೆಲವು ವಿಶ್ವವಿದ್ಯಾಲಯಗಳಲ್ಲಿ ಕರ್ತವ್ಯದಕ್ಷನಾದ ಒಬ್ಬ ಗ್ರಂಥಭಾಂಡಾರಿಯು ತನ್ನ ಕಾರ್ಯದಕ್ಷತೆಯ ಹಾಗೂ ಯೋಗ್ಯತೆಯ ಬಲದಿಂದ ವ್ಹಾಯಿಸ್–ಚಾನ್ಸಲರರ ಪದವಿಯವರೆಗೂ ಏರಬಹುದು; ಅದೇ ರೀತಿ ನಿವೃತ್ತರಾದ ವ್ಹಾಯಿಸ್–ಚಾನ್ಸಲರರು ಎಷ್ಟೋ ಸಲ ಗ್ರಂಥಭಾಂಡಾರಿಯ

ಅಧಿಕಾರವನ್ನು ವಹಿಸಿದ್ದು ಉಂಟು. ಸಾರಾಂಶವೆಂದರೆ, ಯಾರನ್ನೂ ಎಂಥವರನ್ನೂ ತಂದು ಗ್ರಂಥಭಾಂಡಾರಿಯನ್ನಾಗಿ ಮಾಡಬಹುದೆಂಬುದು ಈಗಲೂ ಸಹ ನಮ್ಮಲ್ಲಿ ಅನೇಕ ಕಡೆ ಪ್ರಚಲಿತವಿರುವ ವಿಚಾರ, ತುಂಬ ಅಪಾಯಕಾರಿಯಾದದ್ದು. ನಿಜವಾದ ಯೋಗ್ಯತೆಯುಳ್ಳ, ಶೈಕ್ಷಣಿಕ ಪಾತ್ರತೆಯಿದ್ದ - ಉದ್ದಾಮ ವ್ಯಕ್ತಿಯನ್ನೇ ಈ ಮಹತ್ವದ ಸ್ಥಳಕ್ಕೆ ನಿಯಮಿಸಿಕೊಳ್ಳಬೇಕು. ಯಾಕೆಂದರೆ, ಕೊನೆಗೆ ಒಂದು ವಿಶ್ವವಿದ್ಯಾಲಯದ ಯೋಗ್ಯತೆಯನ್ನು ಜನರು ಅಳೆಯುವುದು ಅಲ್ಲಿಯ ಗ್ರಂಥಾಲಯದ ಮೇಲಿಂದ ; ಹಾಗೂ ಅಲ್ಲಿಂದ ಹೊರಬಿದ್ದ ಮೇಧಾವಿಗಳ ಕಾರ್ಯದಿಂದ.

ಗ್ರಂಥಾಲಯದಲ್ಲಿಯ ಪೂರಕವರ್ಗವಾದರೂ ನಿಷ್ಣಾತ ಹಾಗೂ ಶೈಕ್ಷಣಿಕ ಪಾತ್ರತೆಯುಳ್ಳವರಿರಬೇಕು. ಬರೀ ಒಬ್ಬ ಗ್ರಂಥಭಾಂಡಾರಿ ತಾನೇ ತಾನಾಗಿ ಏನನ್ನೂ ಸಾಧಿಸಲಾರ. ಅಲ್ಲದೆ ಸಾಕಷ್ಟು ಕೆಲಸಗಾರರಿರದಿದ್ದರೆ, ಪುಸ್ತಕ ಹಾಗೂ ಕಟ್ಟಡಗಳ ಮೇಲೆ ವೆಚ್ಚ ಮಾಡಿದ ಹಣವು ವ್ಯರ್ಥವಾಗಬಹುದು. ಹಾಗೂ ಗ್ರಂಥಾಲಯ ವಿಭಾಗಕ್ಕೆ ಸ್ವತಂತ್ರ ಅಸ್ತಿತ್ವವಿದ್ದು, ಉಳಿದ ವಿಭಾಗಗಳ ಶಿಕ್ಷಕರೊಡನೆ ಗ್ರಂಥಭಾಂಡಾರಿಯು ಸರಿಸಾಟಿಯಾಗಿ ನಿಲ್ಲುವಂತಿರಬೇಕು. ಇಂಥ ಆದರ್ಶ ವಾತಾವರಣದಲ್ಲಿ ಮಾತ್ರ ಗ್ರಂಥಾಲಯದ ಕಾರ್ಯ ಪೂರ್ಣ ಪರಿಣತಿಯನ್ನು ಹೊಂದಲು ಸಾಧ್ಯವಿದೆ.

ಗ್ರಂಥಭಾಂಡಾರಿಯಾದರೂ ತನಗೆ ಕೊಟ್ಟ ಈ ಗೌರವವನ್ನು ದಕ್ಕಿಸಿಕೊಳ್ಳುವ ಯೋಗ್ಯತೆಯುಳ್ಳವನಾಗಿರಬೇಕು. ಗೌರವವೆನ್ನುವುದು ಒಂದು ವಿಚಿತ್ರ ವಸ್ತು. ಅದನ್ನು ಯಾರೂ ತಾವೇ ತಾವಾಗಿ ಕೊಡುವುದಿಲ್ಲ. ನಾವೇ ಅದನ್ನು ಶ್ರಮಪೂರ್ವಕವಾಗಿ ಗಳಿಸಬೇಕಾಗುತ್ತದೆ. ಕಷ್ಟಸಹಿಷ್ಣುಗಳಾಗಿ ನಾವು ಕೆಲಸ ಮಾಡಬೇಕು. ನಮ್ಮ ರೀತಿ ನಡತೆಗಳು ಎತ್ತರದವಾಗಿರಬೇಕು. ಸದಾ ಪಾಂಡಿತ್ಯದ ಸಾನ್ನಿಧ್ಯವನ್ನು ಹೊಂದುವ ತವಕದಿಂದ ನಾವು ಪ್ರೇರಿತರಾಗಿರಬೇಕು. ನಾವು ಯಾವ ಸಂಸ್ಥೆಯಲ್ಲಿ ಸೇವೆ ಗೈಯುತ್ತಿರುವೆವೋ ಆ ಸಂಸ್ಥೆಗೆ ಆದರ್ಶಪ್ರಾಯರಾಗಬೇಕು. ಅಂದಾಗಲೇ ದೇಶದಾದ್ಯಂತ ಗ್ರಂಥಪಾಲಕರ ದರ್ಜೆ ಮೇಲೇರಲು ಸಾಧ್ಯವೆನ್ನುವುದನ್ನು ನಾವು ನೆನಪಿನಲ್ಲಿಡಬೇಕು.

ಶಿಕ್ಷಣ ಕ್ಷೇತ್ರದಲ್ಲಿ ಗ್ರಂಥಾಲಯ ವಿಭಾಗವು ಮಾಡಬಹುದಾದ ಹಲವಾರು ಕೆಲಸಗಳಿವೆ. ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ, ಅವರಿಗೆ ಬೇಕಾಗುವ ಪುಸ್ತಕಗಳನ್ನು ಕೊಡುವುದಷ್ಟೇ ಅಲ್ಲದೇ, ಅವರಿಗೆ ಕಾಲಕಾಲಕ್ಕೆ ಬೇಕಾಗುವ ಸಂದರ್ಭ ಸಹಾಯ, ಗ್ರಂಥಸೂಚಿಯ ಸೇವೆ (bibliographical service) ಮುಂತಾದ ಸೇವೆಯನ್ನು ಭೇದ-ಭಾವವಿಲ್ಲದೆ, ಆಸೆ-ಆಮಿಷಗಳಿಲ್ಲದೆ ಸಲ್ಲಿಸಬೇಕು. "ಸಂಶೋಧನೆ" ಯಲ್ಲಿ ತೊಡಗಿರುವವರಿಗೆ ತೃಪ್ತಿಕರವಾಗಿ ಸೇವೆ ಸಲ್ಲಿಸುವಷ್ಟು ಗ್ರಂಥಾಲಯ ರಚನೆ ಪರಿಪೂರ್ಣವಾಗಬೇಕು.

ಗ್ರಂಥಭಾಂಡಾರಿಯೆಂದರೆ ಪುಸ್ತಕಗಳು ಹಾಗೂ ಓದುಗರ ನಡುವೆ ಇದ್ದ ಒಂದು ಅಡ್ಡ ಗೋಡೆಯಲ್ಲ. ಅವರಿಬ್ಬರನ್ನೂ ಒಂದುಗೂಡಿಸುವ ಒಂದು ಶಕ್ತಿಯುತ ಸಾಧನ. ನುರಿತ ವ್ಯಾಪಾರಿಯಂತೆ ಕಲಾತ್ಮಕವಾಗಿ ತನ್ನ ಸರಕುಗಳನ್ನು ಓದುಗರ ಮನಸ್ಸಿನ ಮೇಲೆ

ಬಿಂಬಿಸಿ, ಪ್ರಕಟಣೆ, ಪ್ರಚಾರಣೆಗಳ ಮೂಲಕ ಅತಿ ಹೆಚ್ಚು ಸಂಖ್ಯೆಯಲ್ಲಿ ಓದುಗರನ್ನು ಆಕರ್ಷಿಸಿ, ಅತಿ ಹೆಚ್ಚು ಸಂಖ್ಯೆಯಲ್ಲಿ ಪುಸ್ತಕಗಳು ಉಪಯೋಗಿಸಲ್ಪಡುವಂತೆ ಅವನು ನೋಡಿಕೊಳ್ಳಬೇಕು. ರವಿವಾರ ಹಾಗೂ ರಜೆಯ ದಿನಗಳಲ್ಲಿ, ಆದೇಕೆ ನಿದ್ರೆಯ ಗಂಟೆಗಳನ್ನುಳಿದು ಇನ್ನುಳಿದ ಎಲ್ಲ ಸಮಯದಲ್ಲಿ ಕೂಡ ಗ್ರಂಥಾಲಯವು ಓದುಗರಿಗೆ ಲಭ್ಯವಿರಬೇಕು.

ಗ್ರಂಥ ಪಾಲಕನದು ಪವಿತ್ರವಾದ ಕಾರ್ಯಕ್ಷೇತ್ರ. ಸಂಸಾರವೆಂಬ ವಿಷಯದಲ್ಲಿ ಎರಡೇ ಎರಡು ಅಮೃತಮಯವಾದ ಫಲಗಳಿವೆ. ಅವೆಂದರೆ ಕಾವ್ಯಾಮೃತ ರಸಾಸ್ವಾದನೆ ಹಾಗೂ ಸಜ್ಜನರೊಡನೆ ಸಲ್ಲಾಪ. ಗ್ರಂಥಾಲಯದಲ್ಲಿ ತನ್ನ ಸುತ್ತ ಇದ್ದ ಗ್ರಂಥಗಳ ಸಂಗ್ರಹದಲ್ಲಿ ಮೊದಲನೆಯ ಫಲ ಗ್ರಂಥಪಾಲಕನಿಗೆ ದೊರಕುತ್ತದೆ. ಎರಡನೆಯದು ಜ್ಞಾನಪಿಪಾಸುಗಳಾದ ಓದುಗರ ಸಂಗದಲ್ಲಿ ಅವನಿಗೆ ಲಭ್ಯವಾಗುತ್ತದೆ.

ಗ್ರಂಥಗಳೆಂದರೆ ನಿರ್ಜೀವ ವಸ್ತುಗಳಲ್ಲ. ಅವುಗಳಲ್ಲನೇಕವು ಜಗತ್ತಿನ ಮಹಾಮಹಾ ಮೇಧಾವಿಗಳ ಸಾಹಿತಿಗಳ ಕೃತಿರಸಗಳು, ಪ್ರಪಂಚದ ಇತಿಹಾಸವನ್ನೇ ಬದಲಿಸಿದ ಮಹಾ ಶಕ್ತಿಗಳು, ಗ್ರಂಥಾಲಯದ ಶೆಲ್ಫುಗಳಲ್ಲಿ ಒಬ್ಬ ಕಾಳಿದಾಸನೋ, ಒಬ್ಬ ಶೇಕ್ಸ್‌ಪಿಯರನೋ, ಒಬ್ಬ ಅರಿಸ್ಟಾಟಲನೋ, ಒಬ್ಬ ಶಂಕರನೋ – ಇಂಥ ಅನೇಕ ಮಹನೀಯರು ತಮ್ಮ ತಮ್ಮ ಅಭಿಮಾನಿಗಳ ಆಗಮನವನ್ನು ಚಾತಕ ಪಕ್ಷಿಯ ಹಾಗೆ ನಿರೀಕ್ಷಿಸುತ್ತಾ ವಿರಮಿಸುತ್ತಿರುತ್ತಾರೆ. ಇತ್ತಕಡೆ ಇವರನ್ನು ಅರಸಿಕೊಂಡು ಗ್ರಂಥಾಲಯಕ್ಕೆ ದಿನವೂ ಎಡೆಬಿಡದೆ ಬರುವ ವಾಚಕರ ತಂಡ ಇರುತ್ತದೆ. ಮೇಲೆ ಹೇಳಿದ ಮೇರು ಕೃತಿಕರ್ತರ ಧ್ಯೇಯೋದ್ದೇಶಗಳನ್ನು ಬಲ್ಲವನಾಗಿ ಓದುಗರ ಮನದ ಇಂಗಿತವನ್ನು ಕಂಡುಕೊಂಡವನಾಗಿ, ಇಬ್ಬರನ್ನೂ ಸರಿಯಾದ ಸಮಯಕ್ಕೆ ಒಂದೆಡೆ ತರುವ ಮಾಂತ್ರಿಕನೇ ಗ್ರಂಥಪಾಲಕನು.

ಗ್ರಂಥಪಾಲಕನ ವ್ಯೂಹಗಳು

ಈ ತನ್ನ ಮಹಾಕಾರ್ಯದಲ್ಲಿ ಯಶಸ್ಸು ಗಳಿಸಲು ಗ್ರಂಥಪಾಲಕನು ಅನೇಕ ವ್ಯೂಹಗಳನ್ನು ರಚಿಸುವನು. ಗ್ರಂಥಗಳನ್ನು ಆಯ್ದುಕೊಳ್ಳುವುದರಲ್ಲಿ ನಿಪುಣತೆ ತೋರಿಸುವ ನಾನಾ ತರದ ಗ್ರಂಥಗಳನ್ನಲ್ಲದೆ – ಗ್ರಂಥೇತರ ಸಾಮಗ್ರಿಗಳಾದ ಫಿಲ್ಮುಗಳನ್ನು, ಸ್ಲೈಡುಗಳನ್ನು, ನಕ್ಷೆಗಳನ್ನು, ಚಿತ್ರಗಳನ್ನು, ಗ್ರಾಮಫೋನ್ ರಿಕಾರ್ಡುಗಳನ್ನು, ಟೇಪುಗಳನ್ನು – ಮುಂತಾದವುಗಳನ್ನು ಸುವ್ಯವಸ್ಥಿತವಾಗಿ ಸಂಗ್ರಹಿಸುವನು. ಇದಕ್ಕೆಲ್ಲ ಅವನಿಗೆ ಸಾಕಷ್ಟು ಹಣದ ಸೌಲಭ್ಯ ಬೇಕೇಬೇಕು. ಸಾಮಾನ್ಯವಾಗಿ ಕಾಲೇಜು ಗ್ರಂಥಾಲಯದಲ್ಲಿ ಕನಿಷ್ಠ ಒಬ್ಬ ಓದುಗನಿಗೆ ವರ್ಷಕ್ಕೆ ರೂ. 50/-ರಷ್ಟಾದರೂ ಗ್ರಂಥಗಳನ್ನು ಕೊಳ್ಳುವುದರ ಮೇಲೆ ಖರ್ಚು ಮಾಡಲೇಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗೆ ತಲಾ 50ರಷ್ಟು ಗ್ರಂಥಗಳಿರಲೇಬೇಕು.

ಮುಕ್ತದ್ವಾರ ಪದ್ಧತಿ

ಮುಕ್ತದ್ವಾರ ಪದ್ಧತಿಯು ಗ್ರಂಥಪಾಲಕನು ಗ್ರಂಥಗಳ ಉಪಯುಕ್ತತೆಯನ್ನು ಹೆಚ್ಚಿಸುವುದಕ್ಕೋಸ್ಕರ ಹೂಡುವ ಅನೇಕ ಉಪಾಯಗಳಲ್ಲಿ ಅತಿ ಮಹತ್ವವಾದುದು. ಈ ಪದ್ಧತಿಯ ಪ್ರಕಾರ ಸುವ್ಯವಸ್ಥಿತವಾಗಿ ಇಡಲ್ಪಟ್ಟ ಗ್ರಂಥಾಲಯದಲ್ಲಿ ಓದುಗನಿಗೆ ತನಗೆ ಬೇಕಾದ ಗ್ರಂಥಗಳನ್ನು ಆಯ್ದುಕೊಳ್ಳಲು ಗ್ರಂಥಗಳನ್ನಿಟ್ಟ ಬೀರುಗಳಿಗೆ ನೇರವಾಗಿ ಹೋಗಿ ಸ್ವಚ್ಛಂದದಿಂದ ಗ್ರಂಥಗಳನ್ನು ಅವಲೋಕಿಸುವ ಅವಕಾಶ ದೊರೆಯುತ್ತದೆ. ಈ ಪದ್ಧತಿಯಿಂದ ಗ್ರಂಥಗಳು ಜಾಸ್ತಿಯಾಗಿ ಕಳೆದುಹೋಗುವ ಪ್ರಮೇಯವಿದ್ದರೂ, ಓದುಗರಲ್ಲಿ ಪುಸ್ತಕಗಳ ಬಗ್ಗೆ ಆಸಕ್ತಿಯನ್ನು ಕೆರಳಿಸಲು, ಅವನ ಅಮೂಲ್ಯ ವೇಳೆಯನ್ನು ಉಳಿಸಲು ಇದೊಂದೇ ಮಹತ್ತರವಾದ ಉಪಾಯ. ಗ್ರಂಥ ಚೌರ್ಯದ ಭೀತಿಯಿಂದ ಎಲ್ಲ ಗ್ರಂಥಗಳನ್ನೂ ಬೀರುವಿನಲ್ಲಿಟ್ಟು ಬೀಗ ಹಾಕಿ ಅವುಗಳನ್ನು ಸುಲಭವಾಗಿ ಓದುಗನಿಗೆ ಸಿಗದಂತೆ ಮಾಡಿದ್ದಾದರೆ, ಓದುಗನ ದೃಷ್ಟಿಯಿಂದ ಗ್ರಂಥಾಲಯದಲ್ಲಿದ್ದ ಎಲ್ಲ ಗ್ರಂಥಗಳೂ ಕಳುವಾಗಿ ಹೋದಂತೆಯೇ ಸರಿ.

ಗ್ರಂಥಗಳ ಕಳವು

ಗ್ರಂಥ ಪಾಲಕರಿಗೆ ಅಪ್ರಿಯವಾದ ಆದರೆ ಅನಿವಾರ್ಯವಾದ ಮಹತ್ವದ ಸಮಸ್ಯೆಯೊಂದರೆಡೆಗೆ, ನಾನು ಇಲ್ಲಿ ನೆರೆದಿರುವ ಸದ್ಗೃಹಸ್ಥರ ಲಕ್ಷ್ಯವನ್ನು ಸೆಳೆಯಲಿಚ್ಛಿಸುತ್ತೇನೆ. ಅದೆಂದರೆ ಗ್ರಂಥಾಲಯದಿಂದ ಕಳೆದುಹೋಗುವ ಪುಸ್ತಕಗಳು. ಕಳೆದುಹೋದ ಪುಸ್ತಕಗಳ ಜವಾಬುದಾರಿಯನ್ನು ಗ್ರಂಥ ಭಾಂಡಾರಿಯ ತಲೆಗೆ ಕಟ್ಟುವ ಪದ್ಧತಿಯನ್ನು ನಾನು ನಿಷೇಧಿಸುತ್ತೇನೆ. ಗ್ರಂಥಚೌರ್ಯ ಒಂದು ಸಾಮಾಜಿಕ ಸಮಸ್ಯೆ. ಅತಿ ಸೂಕ್ಷ್ಮತರ ವಿಜ್ಞಾನ ಯಂತ್ರೋಪಕರಣಗಳ ನಾಯಿಕಾವಲನ್ನೂ ಧಿಕ್ಕರಿಸಿ, ವಜ್ರ-ವೈಡೂರ್ಯಗಳನ್ನು ಕದಿಯುವ ಜನರಿರುವ ಅಮೆರಿಕೆಯಲ್ಲಿ ಪುಸ್ತಕಗಳಲ್ಲಿನ ಚಿತ್ರಗಳನ್ನು ಕತ್ತರಿಸುವ ಹಾಗೂ ಚಿಕ್ಕಪುಟ್ಟ ಹೊತ್ತಿಗೆಗಳನ್ನು ಹೊತ್ತುಕೊಂಡು ಹೋಗುವ ಚಿಕ್ಕ ಕಳ್ಳರೂ ಇದ್ದೇ ಇದ್ದಾರೆ. ಊರಲ್ಲಿ ಕಳವಾಗಬಾರದೆಂದು ಪೊಲೀಸರಿರುತ್ತಾರೆ. ಆದರೆ ಪೊಲೀಸರಿದ್ದಾರೆಂದು ಕಳವಾಗುವುದೇನೂ ನಿಲ್ಲುವುದಿಲ್ಲ. ಹಾಗೂ ಆದ ಕಳವಿನ ಹೊಣೆಯನ್ನೇನೂ ಯಾರೂ ಪೊಲೀಸರ ತಲೆಗೆ ಕಟ್ಟುವುದಿಲ್ಲ. ಎಂದಮೇಲೆ ಕಳೆದುಹೋದ ಪುಸ್ತಕಗಳ ಹೊಣೆಯನ್ನು ಗ್ರಂಥಭಾಂಡಾರಿಯ ತಲೆಯ ಮೇಲೆ ಹೇರುವುದು ಎಷ್ಟು ಹಾಸ್ಯಾಸ್ಪದ ! ಅಲ್ಲದೆ ಗ್ರಂಥ ಭಾಂಡಾರಿಯು ಪುಸ್ತಕಗಳನ್ನು ಕಾಯಲಿಕ್ಕೆಂದು ಮಾತ್ರ ಇದ್ದ ಪೊಲೀಸನಂತೂ ಖಂಡಿತ ಅಲ್ಲ. ಇಂಥ ಭೀತಿ ಗ್ರಂಥಭಾಂಡಾರಿಗಳ ತಲೆಯ ಮೇಲೆ ಸತತವಾಗಿ ಡೇಮಾಕ್ಲಿಸನ ಖಡ್ಗದಂತೆ ನೇತಾಡುತ್ತಿದ್ದರೆ ಅವರಿಂದ ಒಳ್ಳೆಯ ಸೇವೆಯನ್ನು ನಾವು ಅಪೇಕ್ಷಿಸಬಹುದಾದರೂ ಹೇಗೆ ?

ಪರಿಚಯಾತ್ಮಕ ಶಿಬಿರ

ಗ್ರಂಥಭಾಂಡಾರಿಯು ಮಾರ್ಗದರ್ಶಕನಿದ್ದಂತೆ ಶಿಕ್ಷಕನೂ ಹೌದು. ಗ್ರಂಥಾಲಯ

ದಲ್ಲಿನ ಗ್ರಂಥ ಸಂಗ್ರಹವನ್ನು ತಾನು ಪೂರ್ತಿಯಾಗಿ ಅರಿತುಕೊಂಡು, ವಿದ್ಯಾರ್ಥಿಗಳಿಗೆ ಓದಿನ ವಿಷಯದಲ್ಲಿ ಮಾರ್ಗದರ್ಶನ ಮಾಡುವಂಥವನಾಗಿರಬೇಕು. ಗ್ರಂಥಾಲಯದ ಉಪ ಯೋಗದ ವಿಷಯವಾಗಿ ವರ್ಷಾರಂಭದಲ್ಲಿ ಹೊಸ ವಿದ್ಯಾರ್ಥಿಗಳಿಗಾಗಿ ಪರಿಚಯಾತ್ಮಕ ಶಿಬಿರಗಳನ್ನು (Orientation Courses) ಏರ್ಪಡಿಸಬೇಕು. ಪ್ರತಿ ತಿಂಗಳೂ ಹೊಸ ದಾಗಿ ಶೇಖರಿಸಿದ ಗ್ರಂಥಗಳ ವರ್ಗೀಕೃತ ಯಾದಿಯನ್ನು ಓದುಗರ ಉಪಯೋಗಕ್ಕಾಗಿ ಸಿದ್ಧಪಡಿಸಬೇಕು. ಇದೇ ರೀತಿ ಹೊಸ ಪುಸ್ತಕಗಳನ್ನು ಆಕರ್ಷಕ ರೀತಿಯಲ್ಲಿ ಗ್ರಂಥಾ ಲಯದ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸಬೇಕು. ಇವೆಲ್ಲ ವಿಧಾನಗಳಿಂದ ಓದುಗರು ಸ್ವಾಭಾವಿಕವಾಗಿಯೇ ಗ್ರಂಥಗಳಲ್ಲಿ ಹಾಗೂ ವಾಚನದಲ್ಲಿ ಅನುರಕ್ತಿಯನ್ನು ಹೊಂದು ವಂತಾಗುತ್ತದೆ.

ಗ್ರಂಥ ಪ್ರದರ್ಶನ

ಇವಲ್ಲದೆ ಕಾಲಕಾಲಕ್ಕೆ ಬೇರೆ ಬೇರೆ ವಿಷಯಗಳ ಮೇಲೆ ಹಾಗೂ ವಿಶೇಷ ಸಂದರ್ಭ ಗಳಲ್ಲಿ ಗ್ರಂಥಪ್ರದರ್ಶನಗಳನ್ನು ಏರ್ಪಡಿಸಬೇಕು. ಹಾಗೂ ಗ್ರಂಥಾಲಯಗಳಲ್ಲಿ ವಿರಳ ಪುಸ್ತಕಗಳನ್ನು 'ಸ್ಥಾನಿಕ ಮಹಾತ್ಮೆಗೆ ಸಂಬಂಧಿಸಿದ' ಗ್ರಂಥಸಂಗ್ರಹಗಳನ್ನು ಬೇರೆ ಬೇರೆ ಯಾಗಿ ಬೆಳೆಸಿಕೊಂಡು ಬಂದು ಇವುಗಳ ಶಾಖೆಗಳನ್ನೇ ತೆರೆಯಬೇಕು.

ಭಾಷಣದ ಕ್ರಮ

ವಿಷಯ ತಜ್ಞರಿಂದ ಗ್ರಂಥಾಲಯಕ್ಕೆ ಅಥವಾ ಗ್ರಂಥಗಳಿಗೆ ಸಂಬಂಧಿಸಿದ ವಿಷಯ ಗಳ ಮೇಲೆ ಭಾಷಣಗಳನ್ನಿಡಿಸಬೇಕು. ಪ್ರಮುಖ ಕವಿಗಳಿಂದ ಕವಿತಾವಾಚನ, ಉದ್ಬೋಧಕ ಚಲನಚಿತ್ರಗಳನ್ನು ತೋರಿಸುವದು, ಚಿತ್ರಕಲಾಪ್ರದರ್ಶನ, ವಿರಳ ಹಸ್ತ ಪ್ರತಿಗಳ ಪ್ರದರ್ಶನ ಇವುಗಳನ್ನೆಲ್ಲ ಏರ್ಪಡಿಸಬೇಕು. ಇಂಥ ಕಾರ್ಯಕ್ರಮಗಳನ್ನು ಮೇಲಿಂದ ಮೇಲೆ ಹಮ್ಮಿಕೊಳ್ಳುವದರಿಂದ ಓದುಗರ ಮೇಲೆ ಪುಸ್ತಕಗಳ ಮಹತ್ವ ಹಾಗೂ ಉಪಯುಕ್ತತೆ ಇವುಗಳನ್ನು ಬಿಂಬಿಸಲೂ ಸಾಧ್ಯವಾಗುತ್ತದೆ.

ವಿದ್ಯಾರ್ಥಿಗಳ ವಾಚನದಲ್ಲಿ ಶುಚಿತ್ವವನ್ನು ಕಾಯ್ದುಕೊಳ್ಳುವದು ಗ್ರಂಥಾಲಯಗಳ ಆದ್ಯ ಕರ್ತವ್ಯ.

ಸಂಶೋಧನೆ ಈಗ ಅಸಾಧ್ಯವಾಗಿ ಬೆಳೆದು, ಜ್ಞಾನದ ಸ್ಫೋಟವಾಗಿದೆ. ಪುಸ್ತಕ ಗಳು ನಿರೀಕ್ಷೆಯನ್ನು ಮೀರಿದ ವೇಗದಲ್ಲಿ ಪ್ರಕಟವಾಗುತ್ತಿವೆ. ಇವುಗಳ ಮೇಲೆ ಲಕ್ಷ್ಯ ವಿಡುವುದು ಅಸಾಧ್ಯ ಕೆಲಸವಾಗಿದೆ. 70,000 ಲಕ್ಷ ಪುಟಗಳು ಪ್ರತಿ ವರ್ಷ ಜಗತ್ತಿ ನಲ್ಲಿ ಮುದ್ರಿಸಲ್ಪಡುತ್ತಿವೆ. ವರ್ಷ ಒಂದರಲ್ಲಿ ರಶಿಯಾ ಸುಮಾರು 70 ಸಾವಿರದಷ್ಟು ಗ್ರಂಥಗಳನ್ನು ಪ್ರಕಟಿಸುತ್ತದೆ. ಅಮೇರಿಕೆ 12 ಸಾವಿರದಷ್ಟು ಗ್ರಂಥಗಳನ್ನು, ಇಂಗ್ಲಂಡ, ಜಪಾನ 20 ಸಾವಿರದಷ್ಟು ಗ್ರಂಥಗಳನ್ನು ಭಾರತ 25 ಸಾವಿರದಷ್ಟು ಗ್ರಂಥಗಳನ್ನು ವರುಷವೊಂದಕ್ಕೆ ಪ್ರಕಟಿಸುತ್ತಿವೆ.

ವಿಜ್ಞಾನ ಕ್ಷೇತ್ರದಲ್ಲಿಯೇ ಒಂದು ಲಕ್ಷಕ್ಕೆ ಮಿಕ್ಕಿ ನಿಯತಕಾಲಿಕೆಗಳು ಹೊರಡುತ್ತಿವೆ. ಜಗತ್ತಿನಲ್ಲಿ ಬರೀ Bio-medical sciences ವಿಷಯಕ್ಕೆ ಮಾತ್ರ ಸಂಬಂಧಿಸಿದ 7000 ನಿಯತಕಾಲಿಕೆಗಳು ಪ್ರಕಟವಾಗುತ್ತಿವೆ. Chemical Abstracts ಒಂದರಲ್ಲೇ 1967ರಲ್ಲಿ 2,40,000 ಲೇಖನಗಳ ಸಾರಾಂಶಗಳಿದ್ದವು. 1970ರಲ್ಲಿ ಇವುಗಳ ಸಂಖ್ಯೆ 3,10,000 ಮಿಕ್ಕಲಿದೆ. ಈ ವಿಪುಲ ಲೇಖನರಾಶಿಯೊಳಗಿಂದ ಓದುಗರಿಗೆ ಬೇಕಾಗುವ ಮಾಹಿತಿಯನ್ನು ಹುಡುಕಿ ತೆಗೆಯುವದಾದರೆ ಬಣವೆಯಲ್ಲಿ ಅಡಗಿದ ಸೂಜಿಯನ್ನು ಅರಸಿದಂತೆಯೇ ಸರಿ.

ಹೀಗೆ ಜೋಗದ ಜಲಪಾತದೋಪಾದಿಯಲ್ಲಿ ಅಚ್ಚುಕೂಟಗಳಿಂದ ಹೊರಬೀಳುವ ಗ್ರಂಥ ಹಾಗೂ ಲೇಖನ ರಾಶಿಯನ್ನು ವಿಂಗಡಿಸಿ, ಸರಿಯಾಗಿ ಅಣಿಮಾಡಿಟ್ಟು ಓದುಗರಿಗೆ, ಸಂಶೋಧಕರಿಗೆ ಅವರು ಯಾವಾಗ ಏನು ಬೇಡುತ್ತಾರೆಯೋ ಅದನ್ನು ಒದಗಿಸುವ ವ್ಯಕ್ತಿಗಳು ಗ್ರಂಥಪಾಲಕರು. ಒಂದು ದೇಶದಲ್ಲಿನ ಗ್ರಂಥಾಲಯದಲ್ಲಿನ ಪುಸ್ತಕದಲ್ಲಿದ್ದ ಮಾಹಿತಿಯನ್ನು ಇನ್ನೊಂದು ದೇಶದಲ್ಲಿನ ಗ್ರಂಥಾಲಯದಲ್ಲಿನ ಓದುಗನಿಗೆ ಒದಗಿಸಿ ಕೊಡುವದಕ್ಕೋಸ್ಕರ ಕಂಪ್ಯೂಟರ ಯಂತ್ರವನ್ನು, ಲೇಸರ ಕಿರಣಗಳನ್ನು ಉಪಯೋಗಿಸಲಾಗುತ್ತಿದೆಯಾದರೂ ಗ್ರಂಥಪಾಲಕನು ಈ ವಿಷಯದಲ್ಲಿ ತಾಳಬೇಕಾದ ಪಾತ್ರದ ಗಾತ್ರ ಕಡಿಮೆಯದೇನೂ ಅಲ್ಲ.

ಇಂದಿನ ಯುವಜನರು ನಾಳೆಯ ನಾಗರಿಕರು, ರಾಷ್ಟ್ರದ ಭವಿಷ್ಯ ನಿರ್ಮಾಪಕರು. ಅವರ ಯೋಗಕ್ಷೇಮ, ದೇಹದಾರ್ಢ್ಯ, ಬುದ್ಧಿಮತ್ತೆ, ನೈತಿಕ ಮಟ್ಟ–ಇಂತು ಅವರ ಸರ್ವಾಂಗೀಣ ಬೆಳವಣಿಗೆ, ಅಭಿವೃದ್ಧಿ, ಅವರಿಗಿಂತ ಹಿರಿಯರಾದ ನಮ್ಮ ಹೊಣೆ. ಈಗಿನ ಎಳೆಯರು ಬೆಳೆಯುತ್ತಿರುವದು ಹಿತಕರವಲ್ಲದ, ಸಮಾಧಾನಕರವಲ್ಲದ, ಆಪ್ಯಾಯಮಾನವಲ್ಲದ ವಾತಾವರಣದಲ್ಲಿ. ರುಚಿಗೆಟ್ಟ ಹಾಗೂ ಹದಗೆಟ್ಟ ಚಲನ ಚಿತ್ರಗಳು ವಿಪುಲವಾಗಿರುವ ಈ ಕಾಲದಲ್ಲಿ ಅವುಗಳ ಪರಿಣಾಮವಾಗಿ ಎಳೆಯರು ಚಂಚಲಚಿತ್ತರಾಗುತ್ತಿದ್ದಾರೆ. ಸಿಲೋನ್ ಆಕಾಶವಾಣಿಯಿಂದ ತೂರಿಬರುತ್ತಿರುವ ಚಲನಚಿತ್ರ ಸಂಗೀತದ ಇಂಚರ ರವ ಅವರನ್ನು ಶುಚಿಯಾದ ಸಂಗೀತಕ್ಕೆ ಕಿವುಡರನ್ನಾಗಿ ಮಾಡಿಬಿಡುತ್ತಿದೆ. ಎಲ್ಲೆಡೆಯಲ್ಲಿಯೂ ವಿರಾಡ್ರೂಪವಾಗಿ ಗೋಚರಿಸುವ ಅಶ್ಲೀಲ ಚಿತ್ರ ಭಿತ್ತಿಗಳು ಮುಗ್ಧರಾದ ಅವರ ಸುಪ್ತಚೇತನದಲ್ಲಿದ್ದ ದುರಾಶೆಗಳನ್ನು ಬಡಿದೆಬ್ಬಿಸುತ್ತಿವೆ. ಶೀಲ ಹಾಗೂ ಶುಚಿಯನ್ನು ದೂರ ದೂರವಾಗಿರಿಸಿಕೊಂಡ ಅಸಹ್ಯವಾದ ಮುಖಪತ್ರಗಳಲ್ಲಿ ಅಡಕವಾದ ಕಾದಂಬರಿಗಳು ಅವರನ್ನು ದುರ್ಮಾರ್ಗಕ್ಕೆ ಕರೆದೊಯ್ಯಲು ಯತ್ನಿಸುತ್ತಿವೆ. ಈ ಎಲ್ಲ ದುಷ್ಟ ಆಘಾತಗಳಿಂದ ಎಳೆಯರನ್ನು ದೂರವಿರಿಸುವದು ನಮ್ಮೆಲ್ಲರ ಆದ್ಯ ಕರ್ತವ್ಯ. ಉತ್ಕೃಷ್ಟಗ್ರಂಥಾಲಯ ಸೇವೆಯಿಂದ ನಾವು ಇವುಗಳಿಗೊಂದು ರಾಮಬಾಣ ಸೃಜಿಸುವದು ಸಾಧ್ಯ.

ಇಂಥ ಗ್ರಂಥಾಲಯದ ಸಹಾಯದಿಂದ ನಮ್ಮ ಯುವಜನರು ತಮ್ಮ ಬಾಳಿನ ಭವಿಷ್ಯವನ್ನು ಭವ್ಯವಾಗಿ ರೂಪಿಸಿಕೊಳ್ಳಲಿ; ವಿಶ್ವವಿದ್ಯಾಲಯ ಪದವಿ ಪ್ರಶಸ್ತಿಗಳನ್ನು

ಅತ್ಯುಚ್ಚ ತರಗತಿಯಲ್ಲಿ ಗಳಿಸಲಿ; ಒಳ್ಳೆಯ ವಿಚಾರಗಳನ್ನೊಳಗೊಂಡ, ಉದಾತ್ತ ಧ್ಯೇಯಗಳನ್ನು ಅವರ ಮನಃಚಕ್ಷುವಿನ ಮುಂದೆ ಯಾವಾಗಲೂ ಇಡುವಂಥ ಶುಚಿಯಾದ, ರುಚಿಯಾದ ಸಾಹಿತ್ಯದ ಸೌರಭವನ್ನೀಂಟುವ ಹವ್ಯಾಸವನ್ನು ಬಾಳಿನುದ್ದಕ್ಕೂ ಹೊಂದಲಿ ಎಂದು ಆಶಿಸಿ, ಈ ಸದವಕಾಶ ಕಲ್ಪಿಸಿಕೊಟ್ಟ ಪ್ರಿನ್ಸಿಪಾಲ್ ಹರಿದಾಸಭಟ್ಟರಿಗೆ ಮತ್ತೊಮ್ಮೆ ನಮಿಸಿ, ವಿರಮಿಸುವೆ.*

---

* 'ಕಾಲೇಜು ಗ್ರಂಥಾಲಯಗಳು' ಎಂಬ ವಿಷಯ ಕುರಿತು ಉಡುಪಿಯ ಎಂ ಜಿ ಎಂ ಕಾಲೇಜಿನವರು 6–9–1970ರಂದು ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಮಾಡಿದ ಅಧ್ಯಕ್ಷ ಭಾಷಣ.

೮ / ಕನ್ನಡ ಗ್ರಂಥಸೂಚಿ ರಚನೆಯ ಸಾಹಸ

ಗ್ರಂಥ ಸೂಚಿಗಳು ಆಯಾ ರಾಷ್ಟ್ರದ, ಜನಾಂಗದ, ಬೌದ್ಧಿಕ ಸಾಧನೆಯ ಅಳತೆ ಗೋಲುಗಳು ; ಅಲ್ಲಿನ ವಿಚಾರವಂತರು ಜ್ಞಾನ ವಿಜ್ಞಾನ ಕ್ಷೇತ್ರಗಳಲ್ಲಿ ಮಾಡಿದ ಕೃಷಿಯ ವೈಖರಿಯ ಚಿತ್ರ, ನಕ್ಷೆ.

ಒಂದು ರಾಷ್ಟ್ರದಲ್ಲಿ ಅನೇಕ ಭಾಷೆಗಳಿದ್ದಲ್ಲಿ ಅಲ್ಲಿನ ಗ್ರಂಥಸೂಚಿಗಳು ಆ ದೇಶದ ಭಾಷೆಗಳ ಶಕ್ತಿ ಸಾಮರ್ಥ್ಯಗಳ ಒರೆಗಲ್ಲುಗಳಾಗಿ ಪರಿಣಮಿಸುತ್ತವೆ.

ಗ್ರಂಥಸೂಚಿಗಳು ಸಂಶೋಧಕರಿಗೆ ಅವರವರ ಸಂಶೋಧನೆಯ ಕ್ಷೇತ್ರಕ್ಕೆ ಸಂಬಂಧಿಸಿದ ಹಳೆ ಹೊಸ ಗ್ರಂಥಗಳ ಪರಿಚಯ ಮಾಡಿಕೊಡುತ್ತವೆ. ಹೊಸದಾಗಿ ಸಂಶೋಧನೆ ಮಾಡಬಯಸುವವರಿಗೆ ಯಾವ ವಿಷಯವನ್ನು ತಾವು ಆರಿಸಿಕೊಳ್ಳ ಬಹುದು ಎಂಬುದನ್ನು ಸೂಚಿಸುವಲ್ಲಿ ತುಂಬ ಉಪಯುಕ್ತವಾಗುತ್ತವೆ. ಗ್ರಂಥಪಾಲ ಕರಿಗೆ ಹೊಸ ಗ್ರಂಥಗಳ ಆಯ್ಕೆಯಲ್ಲಿ, ಇನ್ನುಳಿದ ಗ್ರಂಥಗಳ ಲೇಖಕರು, ಪ್ರಕಾಶಕರು, ಬೆಲೆ ಮುಂತಾದ ವಿವರಗಳನ್ನು ತಿಳಿದುಕೊಳ್ಳಲು ನೆರವಾಗುತ್ತವೆ. ಪುಸ್ತಕ ವ್ಯಾಪಾರಿ ಗಳಿಗೂ ಇವು ಬೇಕೇಬೇಕು.

ಗ್ರಂಥಸೂಚಿಗಳು ಸಾಮಾನ್ಯ ಸ್ವರೂಪದವಾಗಿರಬಹುದು, ಇಲ್ಲವೆ ಒಂದು ಭಾಷೆಗೆ, ಒಂದು ವಿಷಯಕ್ಕೆ, ಒಂದು ಪ್ರದೇಶಕ್ಕೆ, ಒಂದು ರಾಜ್ಯಕ್ಕೆ ವಿಶೇಷವಾಗಿ ಸೀಮಿತವಾಗಿರ ಬಹುದು.

ಗ್ರಂಥಸೂಚಿಗಳ ರಚನೆಯ ಇತಿಹಾಸ, ಗ್ರಂಥರಚನೆಯ ಇತಿಹಾಸದಷ್ಟೇ, ಲೇಖನ ಕಲೆಯ ಚರಿತ್ರೆಯಷ್ಟೇ ಪುರಾತನವಾದುದು. ಬೆಬಿಲೋನಿಯ, ಆಸ್ಸೀರಿಯಾಗಳಲ್ಲಿನ ಪ್ರಾಚೀನ ಗ್ರಂಥಾಲಯಗಳಲ್ಲಿ ಇಟ್ಟಂಗಿ ರೂಪದ ಗ್ರಂಥಗಳಿದ್ದವು. ಅವುಗಳನ್ನು ಸರಿ ಯಾಗಿ ವರ್ಗೀಕರಿಸಿ, ಸೂಚಿ ಪಟ್ಟಿಕೆಗಳ ಸಹಿತ ಪೆಟ್ಟಿಗೆಗಳಲ್ಲಿ ಇರಿಸಲಾಗಿರುತ್ತಿತ್ತು.

ನಲಂದಾ, ತಕ್ಷಶಿಲೆ, ನಾಗಾಯಿಗಳಲ್ಲಿನ ಪ್ರಾಚೀನ ಭಾರತೀಯ ಗ್ರಂಥಪಾಲಕರು ವರ್ಗೀಕರಣ, ಸೂಚೀಕರಣಗಳಲ್ಲಿ ಪಾರಂಗತರಿದ್ದರು.

ಆದರೆ ಆಗಿನ ಜ್ಞಾನ ಸಾಮ್ರಾಜ್ಯ ಈಗಿನಂತೆ ಇಷ್ಟೊಂದು ಶಾಖೋಪಶಾಖೆ ಯಾಗಿ ವಿರಾಟ್ ಸ್ವರೂಪ ತಳೆದಿರಲಿಲ್ಲ. ಧರ್ಮ, ದರ್ಶನ, ಜ್ಯೋತಿಷ, ಆಯು ರ್ವೇದ, ಕಾವ್ಯಶಾಸ್ತ್ರ, ರಾಜ್ಯಶಾಸ್ತ್ರ ಇವೇ ಕೆಲವು ವಿಷಯಗಳಿಗೆ ಮಾತ್ರ ಸೀಮಿತ ವಾಗಿತ್ತು.

ಈಗಲೋ ! ಜ್ಞಾನದ ವಿಸ್ತಾರ ಅಪಾರವಾಗಿದೆ. ಕ್ಷಣಕ್ಷಣಕ್ಕೂ ಹೊಸ ಸಂಶೋಧನೆ ಗಳು ಆಗುತ್ತಿವೆ. ತನ್ಮೂಲಕ ಹೊಸ ಜ್ಞಾನ ಸಂಚಯವಾಗುತ್ತ ನಡೆದಿದೆ. ದಿನದಿನವೂ

ಬೆಳೆಯುತ್ತಿರುವ ಈ ಜ್ಞಾನ, ಗ್ರಂಥರಾಶಿಯಲ್ಲಿ ರಕ್ಷಿತವಾಗಿರುತ್ತದೆ. ಅಂತೆಯೇ ಈ ಗ್ರಂಥಗಳ ವರ್ಗೀಕರಣ ಸೂಚೀಕರಣಗಳೂ ಮಹತ್ವಪೂರ್ಣವೂ ಸೂಕ್ಷ್ಮವೂ ಆದ ಕೆಲಸ ಗಳಾಗಿವೆ.

ಆಧುನಿಕ ಭಾರತದಲ್ಲಿನ ಗ್ರಂಥಸೂಚಿಗಳ ರಚನೆಯ ಕತೆ ಬಹು ಸ್ವಾರಸ್ಯಮಯ ವಾಗಿದೆ.

೧೮೬೩ರ ಸುಮಾರಿಗೆ ಲಂಡನ್ ಮಹಾನಗರದಲ್ಲಿರುವ ರಾಯಲ್ ಏಶಿಯಾಟಿಕ್ ಸೊಸೈಟಿಯ ಆಗಿನ ಡೈರೆಕ್ಟರರಾಗಿದ್ದ ಎಚ್. ಹ್ಯಾಂಪಟನ್ ಅವರು, ಹಾಗೂ ಉಪಾಧ್ಯ ಕ್ಷರುಗಳಾಗಿದ್ದ ಮ್ಯಾಕೆಂರಿಝಿ ಮುಂತಾದವರು ಆಗಿನ ಸೆಕ್ರೆಟರಿ ಆಫ್ ಸ್ಟೇಟ ಫಾರ್ ಇಂಡಿಯಾ ಆಗಿದ್ದ ಸರ್ ಚಾರ್ಲಸ್ ವುಡ್ ಅವರಿಗೆ ಈ ಮುಂದಿನ ಅಭಿಪ್ರಾಯದ ಕಾಗದ ಬರೆದು ವಿನಂತಿ ಮಾಡಿಕೊಂಡರು :

"ಭಾರತದಲ್ಲಿ ಒಳ್ಳೆಯ ಗ್ರಂಥಗಳ ರಚನೆಯ ಹಾಗೂ ಪ್ರಕಟನೆಯ ಕಾರ್ಯ ದಿನೇ ದಿನೇ ವರ್ಧಿಸುತ್ತಿದೆ. ಈ ಗ್ರಂಥಗಳ ಅವಲೋಕನ, ವ್ಯಾಸಂಗ, ಬ್ರಿಟಿಶ್ ವಿದ್ವಾಂಸ ರಿಗೂ ಹಾಗು ಭಾರತಕ್ಕೆ ಸರಕಾರೀ ಅಧಿಕಾರಿಗಳಾಗಿ ಹೋಗುವ ಬ್ರಿಟಿಶ್ ತರುಣರಿಗೂ ತುಂಬ ಉಪಯುಕ್ತವಾಗಿ ಪರಿಣಮಿಸುತ್ತದೆ. ಇಂಥ ಗ್ರಂಥಗಳನ್ನು ಇಲ್ಲಿ ಯಾವದೇ ಒಂದು ಗ್ರಂಥಾಲಯದಲ್ಲಿ ಸಂಗ್ರಹಿಸುವುದು ಅತ್ಯವಶ್ಯ. ಕೊನೆಯಪಕ್ಷ ಭಾರತದಲ್ಲಿ ಪ್ರಕಟವಾದ ಹಾಗು ಆಗುವ ಗ್ರಂಥಗಳ ವರ್ಗೀಕೃತ ಸೂಚಿಯು ನಮಗೆ ದೊರೆಯುವಂತಾ ದರೆ ಮಹದುಪಕಾರವಾದೀತು."

ಸರ್ ಚಾರ್ಲಸ್ ವುಡ್ ಅವರು ಭಾರತದ ಆಗಿನ ಗವರ್ನರ್ ಜನರಲ್ಲರಾಗಿದ್ದ ಲಾರ್ಡ ಎಲ್ಗಿನ್ ಅವರ ಗಮನವನ್ನು ಈ ವಿಷಯದ ಕಡೆ ಸೆಳೆದರು. ಭಾರತ ಸರಕಾರ ತಕ್ಷಣ ಎಲ್ಲ ಪ್ರಾಂತೀಯ ಸರಕಾರಗಳಿಗೆ ಆಯಾ ಪ್ರಾಂತಗಳಲ್ಲಿ ಪ್ರಕಟವಾಗುವ ಗ್ರಂಥಗಳ ಸೂಚಿಗಳ ರಚನೆಯ ಬಗ್ಗೆ ಹಾಗೂ ಇಂಡಿಯಾ ಆಫೀಸಿಗೆ ಗ್ರಂಥಗಳನ್ನು ಪುಕ್ಕಟೆಯಾಗಿ ಕಳಿಸುವ ಬಗ್ಗೆ ಸೂಕ್ತ ಆದೇಶವಿತ್ತಿತು.

ಈ ಆದೇಶದ ಪ್ರಕಾರ ಆಗಿನ ಮುಂಬಯಿ ಪ್ರಾಂತದ ಶಿಕ್ಷಣಾಧಿಕಾರಿಯಾಗಿದ್ದ ಎ. ಗ್ರ್ಯಾಂಟ ಅವರು ತಮ್ಮ ಪ್ರಾಂತದಲ್ಲಿ ೧೮೬೪ರ ವರೆಗೆ ಪ್ರಕಟವಾದ ಎಲ್ಲ ಗ್ರಂಥಗಳ ವರ್ಗೀಕೃತ ಸೂಚಿಯೊಂದನ್ನು ತಯಾರಿಸಿದರು. ಮತ್ತು ಅದನ್ನು ಸರಕಾರಕ್ಕೆ ಸಾದರ ಪಡಿಸುತ್ತ ಎಲ್ಲ ಪ್ರಕಾಶಕರೂ, ಮುದ್ರಣಕಾರರೂ ಅವರು ಪ್ರಕಟಿಸಿದ, ಮುದ್ರಿಸಿದ ಗ್ರಂಥಗಳ ಎರಡೆರಡು ಪ್ರತಿಗಳನ್ನು ಸರಕಾರವು ಕೊಂಡುಕೊಳ್ಳುವ ಬಗ್ಗೆ ಕಾಯದೆ ಯೊಂದನ್ನು ಪಾಸು ಮಾಡಬೇಕೆಂದು ಸೂಚಿಸಿದರು. ಈ ಎರಡು ಪ್ರತಿಗಳಲ್ಲಿ ಒಂದು ಇಂಡಿಯಾ ಆಫೀಸ ಲೈಬ್ರರಿಗೂ, ಇನ್ನೊಂದು ಮುಂಬಯಿ ವಿಶ್ವವಿದ್ಯಾಲಯದ ಗ್ರಂಥಾ ಲಯಕ್ಕೂ ಮಾಸಲಾಗಿರಬೇಕೆಂದು ಸೂಚಿಸಿದರು.

ಈ ಸೂಚನೆ ೧೮೬೭ರಲ್ಲಿ ಅಂಶತಃ ಕೃತಿಯಲ್ಲಿಳಿಯಿತು. ಆ ವರುಷ ಪಾಸಾದ Press and Registration of Books Act ಪ್ರಕಾರ ದೇಶದಲ್ಲಿ ಪ್ರಕಟವಾಗುವ

ಗ್ರಂಥಗಳ ಕೆಲವು ಪ್ರತಿಗಳು ಪ್ರಾಂತೀಯ ಸರಕಾರಗಳಿಗೆ ನೇರವಾಗಿ ಉಚಿತವಾಗಿ ಬರುವಂತಾಯಿತು. ಈ ರೀತಿ ಬಂದ ಗ್ರಂಥಗಳ ವ್ಯವಸ್ಥೆಗೆಂದು ಪ್ರತಿಯೊಂದು ಪ್ರಾಂತೀಯ ಸರಕಾರವು Registrar of Native Publications ಎಂಬ ಹಿರಿ ಹುದ್ದೆಯನ್ನು ನಿರ್ಮಿಸಿ ಯೋಗ್ಯ ಅಧಿಕಾರಿಯೊಬ್ಬನನ್ನು ನೇಮಿಸಿಕೊಂಡಿತು. ಈ ಅಧಿಕಾರಿಯ ಹಿರಿತನದಲ್ಲಿಯೇ ದೇಶೀಯ ಪ್ರಕಟನೆಗಳ ಸೂಚಿಯು Catalogue of Native Publications ನಿಯತಕಾಲಿಕವಾಗಿ ಪ್ರಕಟನೆಗೊಳ್ಳಹತ್ತಿತು.

ಮುಂದೆ ೧೮೭೧ ರಲ್ಲಿ ಮುಂಬಯಿ ಸರಕಾರ ತನಗೆ ಅಲ್ಲಿಯವರೆಗೆ ಬಂದ ಎಲ್ಲ ದೇಶೀಯ ಗ್ರಂಥಗಳನ್ನು ಮುಂಬಯಿ ವಿಶ್ವವಿದ್ಯಾಲಯದವರಿಗೆ ಒಪ್ಪಿಸಿಕೊಟ್ಟಿತು. ಹಾಗೂ ಮುಂದೆ ಪ್ರತಿ ವರುಷ ಬರುವ ಗ್ರಂಥಗಳನ್ನು ಸೂಚಿಗಳು ತಯಾರಾದ ಬಳಿಕ ವಿಶ್ವವಿದ್ಯಾಲಯದವರಿಗೇ ಕೊಡಬೇಕೆಂದು ತೀರ್ಮಾನಿಸಿತು.

ಹೀಗೆ ಇಪ್ಪತ್ತು ವರುಷಗಳು ಉರುಳಿ ಹೋದವು. ೧೮೯೧ ರಲ್ಲಿ ವಿಶ್ವವಿದ್ಯಾಲಯಕ್ಕೆ ತಾನು ಪುಕ್ಕಟೆಯಾಗಿ ಕೊಟ್ಟ ಗ್ರಂಥಗಳ ಗತಿಯೇನಾಗಿರಬಹುದೆಂದು ಯೋಚಿಸಿ ಆ ಕುರಿತು ವಿಶ್ವವಿದ್ಯಾಲಯದ ರಜಿಸ್ಟ್ರಾರರನ್ನು ಸರಕಾರ ವಿಚಾರಿಸಿತು.

ಪ್ರತ್ಯುತ್ತರವಾಗಿ ಆಗಿನ ರಜಿಸ್ಟ್ರಾರರಾಗಿದ್ದ ಮ್ಯಾಕಡೊನಾಲ್ಡ ಅವರು, ಅಲ್ಲಿಯವರೆಗೆ ಸರಕಾರ ಕಳಿಸಿದ್ದ ೨೨,೫೨೪ ಗ್ರಂಥಗಳಲ್ಲಿ ೫೧೭೪ ಗ್ರಂಥಗಳು ಗೆದ್ದಲಿಂದ ನಾಶವಾಗಿ ಹೋದವೆಂದೂ, ಉಳಿದವುಗಳನ್ನು ಇಟ್ಟುಕೊಳ್ಳಲು ತಮಗೆ ಸ್ಥಳಾಭಾವವಿದೆಯೆಂದೂ, ತಿಳಿಸಿ ಗ್ರಂಥಗಳನ್ನು ಸರಕಾರಕ್ಕೆ ವಾಪಸ್ಸು ಮಾಡಿ ಬಿಟ್ಟರು! ನಾಶವಾದ ಗ್ರಂಥಗಳಲ್ಲಿ ಕನ್ನಡ ಗ್ರಂಥಗಳೆಷ್ಟಿದ್ದವೋ ತಿಳಿಯದು.

ಯಾವ ಭಾರತೀಯ ಗ್ರಂಥಗಳ ಸಂಗ್ರಹಣ ಹಾಗೂ ಸೂಚೀಕರಣ ಕಾರ್ಯದಲ್ಲಿ ರಾಯಲ್ ಏಶಿಯಾಟಿಕ್ ಸೊಸೈಟಿಯವರು ಆಸ್ಥೆವಹಿಸಿ ಕಾಯದೆ ಪಾಸುಮಾಡಿಸಿಕೊಂಡರೋ, ಆ ಗ್ರಂಥಗಳೇ, ತಾವು ಬೇಡದೆ, ತಮ್ಮ ಬಾಗಿಲೊಳಗೆ ಬಂದಾಗ ನಮ್ಮವರು ತೋರಿದ ಆದರದ, ಸ್ವಾಗತದ ಮಾದರಿ ಇದು!

ದೇಶೀ ಭಾಷೆಗಳ ಗ್ರಂಥ ಸೂಚಿಯನ್ನು ತಯಾರಿಸುವ ಮುನ್ನ Registrar of Native Publications ಇನ್ನೊಂದು ಕೆಲಸ ಮಾಡುತ್ತಿದ್ದ. ಅದೆಂದರೆ ಪರಮತ ಅಸಹಿಷ್ಣು ಪರ ಗ್ರಂಥಗಳನ್ನು, ಅಶ್ಲೀಲ ಗ್ರಂಥಗಳನ್ನು ಸರಕಾರದ ಭದ್ರತೆಯನ್ನು ಶಿಥಿಲಗೊಳಿಸುವ ಗ್ರಂಥಗಳನ್ನು ವಿಂಗಡಿಸಿ, ಅವುಗಳ ಪ್ರಕಾಶಕರ ಮೇಲೆ ಶಿಸ್ತಿನ ಕ್ರಮ ಕೈಕೊಳ್ಳುವದು ಹಾಗೂ ಆ ಗ್ರಂಥಗಳನ್ನು ಜಪ್ತುಮಾಡುವದು. ಈ ರೀತಿ ನಾಶವಾಗಿ ಹೋದ ಗ್ರಂಥಗಳೆಷ್ಟೊ? ಹುಡುಕಿದರೆ ಅವುಗಳ ಹೆಸರುಗಳು ಕೂಡ ಸಿಗುವಂತಿಲ್ಲ.

ಭಾರತದಲ್ಲಿ ನೆಲೆಸಿದ ಕ್ರಿಶ್ಚಿಯನ್ ಮಿಶನರಿಗಳೂ ಕ್ರೈಸ್ತಮತಕ್ಕೆ ಸಂಬಂಧಪಟ್ಟ ಗ್ರಂಥಗಳ ಸೂಚಿಗಳನ್ನು ಕಾಲಕಾಲಕ್ಕೆ ತಯಾರಿಸಿ ಪರದೇಶಗಳಲ್ಲಿರುವ ತಮ್ಮ ತಮ್ಮ ಮುಖ್ಯ ಕಚೇರಿಗಳಿಗೆ ವರದಿ ಕಳಿಸುತ್ತಿದ್ದರು.

ಹೀಗೆ ೧೮೬೪ ರಿಂದ ಇಲ್ಲಿ ಪ್ರಕಟವಾಗುತ್ತಿದ್ದ ಗ್ರಂಥಗಳ ಸೂಚಿಗಳು ಕಾಲ ಕಾಲಕ್ಕೆ ಪ್ರಕಟವಾಗುತ್ತಿದ್ದರೂ ಭಾಷಾವಾರು ಗ್ರಂಥ ಸೂಚಿಗಳ ಕೊರತೆ ಇಂದಿಗೂ ಇದ್ದೇ ಇದೆ. ಕನ್ನಡನಾಡು ಆಗಿನ ಹಲವಾರು ಆಡಳಿತ ವಿಭಾಗಗಳಲ್ಲಿ ಹರಿದು ಹಂಚಿ ಹೋಗಿದ್ದರಿಂದ ಕನ್ನಡ ಗ್ರಂಥಗಳ ಸಮಗ್ರ ಸೂಚಿ ಆಗುವ ಸಂಭವವೇ ಇರಲಿಲ್ಲ.

ಕನ್ನಡದಲ್ಲಿ ೧೮೧೭ ರಿಂದ ಇಂದಿನವರೆಗೆ ಸುಮಾರು ೪೦–೪೫ ಸಾವಿರ ಗ್ರಂಥಗಳು ಅಚ್ಚಾಗಿವೆಯೆಂದು ಅಂದಾಜು ಮಾಡಲಾಗಿದೆ. ಆದರೆ ದೇಶದ, ಅದೇಕೆ ಪ್ರಪಂಚದ ಯಾವದೇ ಗ್ರಂಥಾಲಯದಲ್ಲಿ ೧೫ ಸಾವಿರಕ್ಕಿಂತ ಹೆಚ್ಚು ಕನ್ನಡ ಗ್ರಂಥಗಳಿಲ್ಲ; ಭಾರತದ ರಾಷ್ಟ್ರೀಯ ಗ್ರಂಥಾಲಯದಲ್ಲಿಯೇ ೧೫ ಸಾವಿರಕ್ಕಿಂತ ಹೆಚ್ಚು ಕನ್ನಡ ಗ್ರಂಥಗಳಿಲ್ಲ. ಕನ್ನಡದಲ್ಲಿ ಪ್ರಕಟವಾದ ಗ್ರಂಥಗಳು ಒಂದೆಡೆಯಲ್ಲಿಯಾದರೂ ಕುತೂಹಲಿಗಳಿಗೆ ನೋಡಲಿಕ್ಕೆ ದೊರೆಯಬಾರದೆ ? ಕನಿಷ್ಠ ಪಕ್ಷ ಅಚ್ಚಾದ ಎಲ್ಲ ಕನ್ನಡ ಗ್ರಂಥಗಳ ವರ್ಗೀಕೃತ ಸೂಚಿಯೊಂದಾದರೂ ಬೇಡವೆ ?

ಈ ದಿಸೆಯಲ್ಲಿಯ ಚಿಂತನೆಯ ಫಲವಾಗಿ ೧೯೬೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯು ಕನ್ನಡ ಗ್ರಂಥಗಳ ವರ್ಗೀಕೃತ ವಿವರಣಾತ್ಮಕ ಸೂಚಿಯ ರಚನೆಯ ಯೋಜನೆಯನ್ನು ಹಮ್ಮಿಕೊಂಡಿತು. ಕನ್ನಡದಲ್ಲಿ ಮೊಟ್ಟಮೊದಲು ಸಿರಾಂಪುರದಲ್ಲಿ ಅಚ್ಚಾದ ಡಾ. ವಿಲಿಯಂ ಕ್ಯಾರಿ ಅವರ **Grammar of the Kurnata Language** ದಿಂದ ಪ್ರಾರಂಭ ಮಾಡಿ ೧೯೬೮ರ ಕೊನೆವರೆಗೆ ಅಚ್ಚಾದ ಎಲ್ಲ ಗ್ರಂಥಗಳನ್ನು ಈ ಸೂಚಿಯಲ್ಲಿ ಸೇರಿಸುವ ಸಾಹಸೋದ್ದೇಶದಿಂದ ೪ ಜನ ಸಂಶೋಧಕ ಸಹಾಯಕರನ್ನು ನೇಮಿಸಿಕೊಂಡಿತು. ಕನ್ನಡ ಗ್ರಂಥಗಳಿರಬಹುದಾದ ದೇಶದಲ್ಲಿನ ಎಲ್ಲ ಗ್ರಂಥಾಲಯಗಳಿಗೆ, ಪುಸ್ತಕ ಅಂಗಡಿಗಳಿಗೆ, ವೈಯಕ್ತಿಕ ಗ್ರಂಥ ಸಂಗ್ರಹಗಳಿಗೆ, ಈ ಸಂಶೋಧಕ ಸಹಾಯಕರು ಭೇಟಿ ಇತ್ತು ಅಲ್ಲಿ ಕಂಡುಬಂದ ಕನ್ನಡ ಗ್ರಂಥಗಳಿಗೆ ಪಟ್ಟಿಕೆಗಳನ್ನು ತಯಾರಿಸಿಕೊಂಡು ಬಂದರು.

ಕನ್ನಡ ಗ್ರಂಥಗಳ ಕ್ಯಾಟಲಾಗುಗಳನ್ನು–ಉದಾಹರಣೆಗೆ ಬಾರ್ನೆಟ್‌ರವರು ತಯಾರಿಸಿದ **Catalogue of the Kannada Badaga and Kurg Books in the Library of the British Museum**, ಪ್ರಾಂತೀಯ ಸರಕಾರಗಳು ತಯಾರಿಸಿದ ದೇಶೀ ಗ್ರಂಥಗಳ ಸೂಚಿಗಳನ್ನು, ಪ್ರಕಾಶಕರ, ಪುಸ್ತಕ ವ್ಯಾಪಾರಿಗಳ, ಇನ್ನುಳಿದ ಗ್ರಂಥಾಲಯಗಳ ಕ್ಯಾಟಲಾಗುಗಳನ್ನು ತರಿಸಿಕೊಂಡು, ವೀಕ್ಷಿಸಿ, ಪಟ್ಟಿಗಳನ್ನು ತಯಾರಿಸಿದರು. ಲೇಖಕರು, ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು ಇವರೊಡನೆ ಪುಸ್ತಕಗಳ ಬಗ್ಗೆ ವಿವರಗಳನ್ನು ತಿಳಿದುಕೊಳ್ಳಲು ವೈಯಕ್ತಿಕವಾಗಿ ಪತ್ರವ್ಯವಹಾರವನ್ನು ನಡೆಸಿದರು. ವರ್ತಮಾನ ಪತ್ರಗಳಲ್ಲಿ ಈ ಬಗ್ಗೆ ಮನವಿಗಳನ್ನು ಪ್ರಕಟಿಸಿ, ತಮ್ಮ ಗಮನಕ್ಕೆ ಅದುವರೆಗೆ ಬಾರದೆ ಇದ್ದ ಹೆಚ್ಚಿನಗ್ರಂಥಗಳ ಬಗ್ಗೆ ಮಾಹಿತಿ ಕಲೆ ಹಾಕಿದರು. ನಿಯತಕಾಲಿಕೆಗಳಲ್ಲಿ ವಿಮರ್ಶಿತವಾದ ಗ್ರಂಥಗಳ ಯಾದಿಗಳನ್ನು ತಯಾರಿಸಿದರು.

ಈ ಎಲ್ಲ ಪರಿಶ್ರಮದ ಫಲ ಸುಮಾರು ೫೦ ಸಾವಿರ ಪಟ್ಟಿಕೆಗಳ ಸಂಗ್ರಹ.

ಇಷ್ಟಾದರೂ, ಕೊನೆಯ ಪಕ್ಷ ಇನ್ನೂ ನೂರಕ್ಕೆ ೨೫ರಷ್ಟು ಗ್ರಂಥಗಳ ಬಗ್ಗೆ ಮಾಹಿತಿ ದೊರೆತಿಲ್ಲವೆಂದು ಹೇಳಬಹುದು. ಉದಾಹರಣೆಗಾಗಿ ಕನ್ನಡದಲ್ಲಿ ಗಾಂಧೀಜಿಯವರ ಕೃತಿಗಳ ಅನುವಾದಗಳನ್ನು ಬಿಟ್ಟು ಅವರನ್ನು ಕುರಿತಾದ ಗ್ರಂಥಗಳ ಸಂಖ್ಯೆ ೧೫೦ ರಿಂದ ೨೦೦ರ ವರೆಗೆ ಇರಬಹುದೆಂದು ಗಣಿಸಲಾಗಿದೆ. ಆದರೆ ಕನ್ನಡ ಗ್ರಂಥ ಸೂಚಿಯು ಸಂಶೋಧಕ ಸಹಾಯಕರ ಕಣ್ಣಿಗೆ ಬಿದ್ದವುಗಳು ೫೦ ಮಾತ್ರ. ಇತ್ತೀಚೆಗೆ ಗಾಂಧಿ ಪ್ರತಿಷ್ಠಾನ ಕೇಂದ್ರದ ಪರವಾಗಿ ಭಾರತೀಯ ಸಮಾಜಶಾಸ್ತ್ರ ಸಂಶೋಧಕ ಸಂಸ್ಥೆಯು ಗಾಂಧೀಜಿ ಕುರಿತಾದ ಗ್ರಂಥಸೂಚಿಯ ಯೋಜನೆಯೊಂದನ್ನು ಹಮ್ಮಿಕೊಂಡಿದೆ. ಇದರ ಕಾರ್ಯಕರ್ತರ ಪರಿಶ್ರಮದ ಫಲವಾಗಿ ಒಟ್ಟಾರೆ ೧೫೦ ಗ್ರಂಥಗಳ ವಿವರಗಳನ್ನು ಕಲೆ ಹಾಕಲಾಗಿದೆ. ಇನ್ನುಳಿದವುಗಳ ಬಗ್ಗೆ ಶೋಧನೆ ನಡೆದಿದೆ.

ಇದೇ ಸಂದರ್ಭದಲ್ಲಿ ಇನ್ನೊಂದು ತೆರನಾದ ಉದಾಹರಣೆಯ ಉಲ್ಲೇಖವೂ ಅವಶ್ಯ. ಕನ್ನಡನಾಡಿನ ಒಂದು ಗ್ರಂಥಾಲಯದಲ್ಲಿ ಹಳೆಯ ಕನ್ನಡ ಗ್ರಂಥಗಳು ಜೀರ್ಣ ಪರಿಸ್ಥಿತಿಯಲ್ಲಿದ್ದುವಂತೆ. ಇವುಗಳನ್ನು ಉದ್ಧಾರಮಾಡಿ, ರಟ್ಟು ಕಟ್ಟಿಸಿ ಜತನವಾಗಿ ಇಡುವ ಬದಲು, ಮೇಲಿನ ಅಧಿಕಾರಿಗಳು ಅವುಗಳಿಂದ ಇನ್ನುಳಿದ ಗ್ರಂಥಗಳಿಗೂ ಗೆದ್ದಲು ತಗಲಬಹುದೆಂದು ಭಯಪಟ್ಟುಕೊಂಡು, ಅವುಗಳಿಗೆ ಅಗ್ನಿಸಂಸ್ಕಾರ ಮಾಡಲು ಅಲ್ಲಿನ ಗ್ರಂಥಪಾಲಕನಿಗೆ ಆದೇಶ ನೀಡಿದರಂತೆ. ಹೀಗಾಗಿ ಅನೇಕ ವಿರಳ ಕನ್ನಡ ಗ್ರಂಥಗಳು ವ್ಯರ್ಥ ನಾಶವಾಗಿ ಹೋದವು. ಕನ್ನಡ ಸೂಚಿಯ ಸಹಾಯಕರು ಆ ಗ್ರಂಥಾಲಯಕ್ಕೆ ಹೋದಾಗ ಗ್ರಂಥಗಳ ಬದಲು ಅವರಿಗೆ ಈ ಮಾಹಿತಿ ಮಾತ್ರ ದೊರೆಯಿತು !

ಇದಕ್ಕೆ ಪ್ರತಿಯಾಗಿ ಪರದೇಶಗಳಲ್ಲಿ ವಿರಳ ಗ್ರಂಥಗಳನ್ನು ಗೌರವಿಸುವ ಬಗೆಯನ್ನು ಈಗ ಗಮನಿಸೋಣ.

ಪ್ರಪಂಚದಲ್ಲಿಯೇ ಮೊದಲಿಗೆ ಅಚ್ಚಾದ ಗ್ರಂಥವಾದ ಗುಟ್ಟೆನ್ ಬರ್ಗನ ಬೈಬಲ್ಲಿನ ಪ್ರತಿಯೊಂದು ಅಮೇರಿಕೆಯಲ್ಲಿ ೧೮ ದಶಲಕ್ಷ ರೂಪಾಯಿಗಳಿಗೆ ಇತ್ತೀಚೆಗೆ ಮಾರಾಟಕ್ಕೆ ಲಭ್ಯವಿತ್ತು, ಈ ಗ್ರಂಥ ಅಚ್ಚಾದ ವರುಷ ೧೪೫೫.

೧೪೬೫ರಲ್ಲಿ ಮುದ್ರಿತವಾದ ಲ್ಯಾಕ್ ಟಾನ್ಸಿಯಸ್ ಎಂಬವನ ಕ್ಯಾಥೊಲಿಕ್ ದರ್ಶನ ಗ್ರಂಥವೊಂದನ್ನು ಮೊನ್ನೆ ತಾನೇ ಅಮೇರಿಕೆಯ House of LE Dieff ಎಂಬ ಸಂಸ್ಥೆಯವರು ೩,೯೬೦೦೦ ರೂಪಾಯಿಗಳಿಗೆ ಕೊಂಡುಕೊಂಡರು.

ವಿರಳ ಗ್ರಂಥಗಳ ಬೆಲೆ ಅರಿಯದ ನಾವೆಷ್ಟು ಮುಗ್ಧರು !

ಅದೇನೇ ಇರಲಿ. ಪ್ರಸ್ತುತ ಕನ್ನಡ ಗ್ರಂಥಸೂಚಿಯಲ್ಲಿ ನಮೂದಿಸಲ್ಪಡುವ ಪ್ರತಿಯೊಂದು ಗ್ರಂಥದ ಬಗ್ಗೆ ಸಂಪೂರ್ಣ ವಿವರಗಳನ್ನು ಕೊಡಲಾಗಿದೆ. ಇಷ್ಟು ವಿವರಗಳನ್ನು ಇನ್ನಾವ ಸೂಚಿಯಲ್ಲೂ ಕೊಟ್ಟಿಲ್ಲವೆಂದು ಹೇಳಬಹುದು. ಈ ವಿವರಗಳೆಂದರೆ ೧ ವಿಷಯ ೨ ಲೇಖಕರ ಹೆಸರು. ಅವರು ಹುಟ್ಟಿದ ವರುಷ ಇತ್ಯಾದಿ, ೩ ಅವರ ಕಾವ್ಯನಾಮ ೪ ಗ್ರಂಥದ ಶೀರ್ಷಿಕೆ ೫ ಸಂಪಾದಕ, ಭಾಷಾಂತರಕಾರ, ಚಿತ್ರಕಾರ ಇವರು

ಗಳ ಹೆಸರು ೬ ಆವೃತ್ತಿ, ಸಾಧ್ಯವಿದ್ದಲ್ಲಿ ಮೊದಲನೆ ಆವೃತ್ತಿ ಪ್ರಕಟವಾದ ವರುಷ, ೭ ಪ್ರಕಟನೆಯ ಸ್ಥಳ. ೮ ಪ್ರಕಾಶಕ. ೯ ಪ್ರಕಾಶನದ ವರ್ಷ ೧೦ ಮಾಲೆಯ ಹೆಸರು ೧೧ ಪುಟಸಂಖ್ಯೆ ೧೨ ಆಕಾರ ೧೩ ರಟ್ಟು ೧೪ ಬೆಲೆ ೧೫ ವಿವರ ೧೬ ಗ್ರಂಥ ಇದ್ದ ಗ್ರಂಥಾಲಯದ ಹೆಸರು ಇತ್ಯಾದಿ. ಪ್ರತಿಯೊಂದು ಆವೃತ್ತಿಯಲ್ಲಿ ಅಚ್ಚುಹಾಕಿದ ಪ್ರತಿಗಳ ಸಂಖ್ಯೆ ಕೊಟ್ಟಿದ್ದರೆ ಚನ್ನಾಗಿರುತ್ತಿತ್ತೇನೋ.

ಭಾಷಾಂತರವಾದ ಗ್ರಂಥಗಳ ಮೂಲ ಭಾಷೆಯಲ್ಲಿನ ಶೀರ್ಷಿಕೆಯನ್ನು ಕೊಡುವ ಪ್ರಯತ್ನ ಮಾಡಲಾಗಿದೆ. ಈ ಎಲ್ಲ ವಿವರಗಳನ್ನು ಅವು ಪುಸ್ತಕದಲ್ಲಿ ಸಿಗದೇ ಹೋದಲ್ಲಿ ಬೇರೆ ಮೂಲಗಳಿಂದ ದೊರಕಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

ವಿಷಯಗಳ ಪ್ರಕಾರ ರಚಿಸಲಾಗುವ ಈ ಸೂಚಿಯ ೮ ಸಂಪುಟಗಳಲ್ಲಿ ೧ ಗ್ರಂಥ ಕರ್ತೃ ಸೂಚಿ ೨ ಶೀರ್ಷಿಕೆ ಸೂಚಿ. ೩ ವಿಷಯ, ಉಪ ವಿಷಯ ಸೂಚಿ, ೪ ಪ್ರಕಾಶನ ಮಾಲೆಯ ಯಾದಿ. ೫ ಪ್ರಕಾಶಕರ ಯಾದಿ–ಇವುಗಳನ್ನು ಅನುಬಂಧಗಳನ್ನಾಗಿ ಕೊಡುವ ಪ್ರಯತ್ನ ನಡೆದಿದೆ. ಇದಲ್ಲದೆ ಗ್ರಂಥ ಸೂಚಿಯ ಪ್ರಯೋಜನ ಇನ್ನಿಷ್ಟು ಹೆಚ್ಚುವಂತೆ ಪ್ರತಿ ದಶಕಕ್ಕೂ ಪ್ರಕಟವಾದ ಕನ್ನಡ ಗ್ರಂಥಗಳ ಸಂಖ್ಯೆ, ವಿಷಯವಾದ ಗ್ರಂಥಗಳ ಸಂಖ್ಯೆ, ಭಾಷಾವಾರು ಭಾಷಾಂತರಗಳ ಸಂಖ್ಯೆ, ವಿಷಯವಾರ ಭಾಷಾಂತರಗಳ ಸಂಖ್ಯೆ, ಇವುಗಳ ಕೋಷ್ಟಕಗಳನ್ನು ಕೊಡುವ ಯೋಜನೆಯೂ ಇದೆ.

ಸೂಚಿಯ ಮೊದಲ ಐದು ಸಂಪುಟಗಳು ಈಗಾಗಲೇ ಪ್ರಕಟವಾಗಿವೆ*. ಮೊದಲನೆಯ ಸಂಪುಟ ವಿಜ್ಞಾನ ಶಾಸ್ತ್ರಕ್ಕೆ ಸಂಬಂಧಿಸಿದ ೧೪೪೯ ಗ್ರಂಥಗಳನ್ನು ಹೆಸರಿಸಿದೆ. ಈ ಸಂಪುಟದ ವಿಷಯ ಸೂಚಿಯ ಮೇಲೆ ಕಣ್ಣಾಡಿಸಿದಾಗ ವಿಜ್ಞಾನದ ಕ್ಲಿಷ್ಟವಾದ ಉಪಶಾಖೆಗಳಾದ "ಸಾಪೇಕ್ಷವಾದ", "ರೇಡಾರ್" "ಸ್ವಮೂತ್ರ ಚಿಕಿತ್ಸೆ" ಮುಂತಾದ ವಿಷಯಗಳ ಮೇಲೆ ಕನ್ನಡದಲ್ಲಿ ಗ್ರಂಥಗಳಿದ್ದುದು ಮನಸ್ಸಿಗೆ ನೆಮ್ಮದಿ ತಂದು

---

* ಎರಡನೆ ಸಂಪುಟ, ಸಾಮಾನ್ಯ ವಿಷಯಗಳು, ಉಪಯುಕ್ತ ಹಾಗೂ ಲಲಿತ ಕಲೆಗಳು, ಭಾಷಾಶಾಸ್ತ್ರ, ಅನುಭಾವ, ಧರ್ಮ, ತತ್ವಜ್ಞಾನ ಇವುಗಳಿಗೆ ಮೀಸಲಾಗಿದ್ದು ಅದರ 5327 ಗ್ರಂಥಗಳ ಉಲ್ಲೇಖಗಳಿವೆ.

ಮೂರನೆ ಸಂಪುಟ ಸಾಮಾನ್ಯ ಸಾಹಿತ್ಯ ಹಾಗೂ ಕಾವ್ಯಕ್ಕೆ ಮೀಸಲಾಗಿದ್ದು 4129 ಉಲ್ಲೇಖಗಳನ್ನೊಳಗೊಂಡಿದೆ.

ನಾಲ್ಕನೆಯ ಸಂಪುಟದಲ್ಲಿ ಗದ್ಯ, ನಾಟಕ, ಸಣ್ಣಕತೆ, ಪ್ರಬಂಧಗಳಿಗೆ ಸೇರಿದ ೩೭೭೩ ಉಲ್ಲೇಖಗಳೂ, ಐದನೆಯ ಸಂಪುಟದಲ್ಲಿ ೨೫೭೧ ಕಾದಂಬರಿಗಳ ಉಲ್ಲೇಖಗಳೂ ಸೇರಿವೆ.

ಇದಲ್ಲದೆ ಎರಡು ವಾರ್ಷಿಕ ಸಂಪುಟಗಳೂ–೧೯೬೯–೭೧ ಮೂರು ವರ್ಷಗಳಲ್ಲಿ ಪ್ರಕಟವಾದ ೨೭೨೨ ಗ್ರಂಥಗಳ ವಿವರಗಳ ಸಂಪುಟ ಹಾಗೂ ೧೯೭೨–೭೩–ಈ ಎರಡು ವರುಷಗಳಲ್ಲಿ ಪ್ರಕಟವಾದ ೨೪೮೮ ಗ್ರಂಥಗಳ ವಿವರಗಳನ್ನೊಳಗೊಂಡ ಸಂಪುಟ–ಬೆಳಕುಕಂಡಿವೆ.

ಕೊಟ್ಟರೂ "ಲೇಸರ ಕಿರಣಗಳು" "ವಾತಾವರಣ ಕಲ್ಮಷ" (Environmental pollution) ಮುಂತಾದ ನವೀನ ವಿಷಯಗಳ ಮೇಲೆ ಕನ್ನಡದಲ್ಲಿ ಗ್ರಂಥಗಳಿಲ್ಲದಿರುವದು ಖೇದವನ್ನುಂಟುಮಾಡುತ್ತದೆ.

ಈ ಸೂಚಿಯಲ್ಲಿ ನಮೂದಿಸಲ್ಪಡುವ ಎಲ್ಲ ಗ್ರಂಥಗಳ ಒಂದು ಪ್ರತಿಯನ್ನಾದರೂ–ಅದು ಗ್ರಂಥ ರೂಪದಲ್ಲಿರಲಿ, ಮೈಕ್ರೋಫಿಲ್ಮ್ ರೂಪದಲ್ಲಿರಲಿ, ರಾಜ್ಯದಲ್ಲಿನ ಒಂದು ಗ್ರಂಥಾಲಯದಲ್ಲಿಯಾದರೂ ಸಂಗ್ರಹಿಸಿಡಬೇಕು. ಇದರಿಂದಾಗಿ ಜ್ಞಾನ-ವಿಜ್ಞಾನ ಕ್ಷೇತ್ರಗಳ ಬೇರೆ ಬೇರೆ ಶಾಖೆ-ಉಪಶಾಖೆಗಳಲ್ಲಿ ಕನ್ನಡ ಗ್ರಂಥಗಳ ಅಭಾವವನ್ನು ಗುರುತಿಸಿ, ತಜ್ಞರ ಸಹಾಯದಿಂದ ಆ ವಿಷಯಗಳಲ್ಲಿ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸುವ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲು ಅನುಕೂಲವಾಗುತ್ತದೆ.

ದೇಶೀಯ ಭಾಷೆಗಳು ಶಿಕ್ಷಣದ ಮಾಧ್ಯಮಗಳಾಗಿ ಆಡಳಿತ ಭಾಷೆಗಳಾಗಿ ಮೆರೆಯಬೇಕಾದ ಈ ಸನ್ನಿವೇಶದಲ್ಲಿ ಇಂಥ ಸೂಚಿಗಳಿಂದ ಎಷ್ಟು ಪ್ರಯೋಜನವಾದೀತೆಂದು ಬೇರೆ ಒತ್ತಿ ಹೇಳಬೇಕಿಲ್ಲ.

[ಧಾರವಾಡದ ಆಕಾಶವಾಣಿ ಕೃಪೆ

೯ / ಕನ್ನಡದಲ್ಲಿ ವೈವಿಧ್ಯಮಯ ವಾಚನಾಭಿರುಚಿ

ಪ್ರಸ್ತಾವನೆ :

ಹಂಗೇರಿ ದೇಶದಲ್ಲಿ ಶತ ಶತಮಾನಗಳಿಂದ ಬಂದ ಜಾನಪದ ಕಥೆಯೊಂದು ಇನ್ನೂ ಜೀವಂತವಿದೆ. ಆ ಕಥೆಯ ಅಮೃತ ಸಂದೇಶ ಇಂತಿದೆ :

"ಯಾವನೊಬ್ಬನು ಮಾನವ ತನ್ನ ಇಹ ಜೀವನವನ್ನು ಸಾರ್ಥಕವಮಾಡಿಕೊಳ್ಳ ಬೇಕೆಂದು ಬಯಸಿದರೆ, ಅವನು ಒಬ್ಬ ಒಳ್ಳೆಯ ಮಗನನ್ನು ಪಡೆಯಬೇಕು, ಇಲ್ಲವಾದಲ್ಲಿ ನೂರು ಫಲ ವೃಕ್ಷಗಳನ್ನು ನೆಡಬೇಕು. ಒಂದು ಉತ್ಕೃಷ್ಟ ಗ್ರಂಥವನ್ನಾದರೂ ಬರೆದು ಪ್ರಕಟಿಸಬೇಕು"

ಈ ಸಂದೇಶವನ್ನೇ ಸ್ವಲ್ಪ ಮಟ್ಟಿಗೆ ಮಾರ್ಪಡಿಸಿ ನಮ್ಮ ಕನ್ನಡ ನಾಡಿನ ಎರಡು ಕೋಟಿಗೂ ಮಿಕ್ಕಿದ ನಿರಕ್ಷರ ಕುಕ್ಷಿಗಳಾದ ಬಂಧು ಬಗಿನಿಯರನ್ನು ಗಮನದಲ್ಲಿಟ್ಟುಕೊಂಡು ಹೇಳುವದಾದರೆ ಮೇಲೆ ಹೇಳಿದ ಮೂರು ಮಹತ್ ಸಾಧನೆಗಳು ಕೈಗೆ ಎಟುಕದ ಪಕ್ಷದಲ್ಲಿ ಕೊನೆಗೆ ಒಳ್ಳೆಯ ಗ್ರಂಥ ಒಂದನ್ನು ಪಠನ ಮಾಡಿ ಅಥವಾ ಮಾಡಿಸಿ ಪುಣ್ಯ ಪಡೆದುಕೊಂಡು ಜೀವನವನ್ನು ಸಾರ್ಥಕಮಾಡಿಕೊಳ್ಳಲೆಳಸಬಾರದೇ ? ರಾಮಾಯಣ, ಮಹಾಭಾರತ ಮುಂತಾದ ಪುರಾಣ ಪುಣ್ಯ ಕಥೆಗಳನ್ನು ಪಠನ ಮಾಡಿದವರಿಗೆ ಪುಣ್ಯ ಫಲ ದೊರಕುತ್ತದೆಂದು ನಮ್ಮ ಹಿರಿಯರು ಇಂದಿಗೂ ಸಾರಿ ಸಾರಿ ಹೇಳುತ್ತಿಲ್ಲವೇ ? ಇನ್ನಾದರೂ ಇಂಥ ಪುಸ್ತಕ ಪಠನ ಭಾಗ್ಯ ಹೊಂದಿ ಧನ್ಯರಾಗಬೇಡವೆ ?

ಗ್ರಂಥಗಳ ಮಹತಿ :

ಗ್ರಂಥಗಳೆಂದರೆ ಜಾತಿಗೆ ಬಾರದ ದರಿದ್ರ ವಸ್ತುಗಳೆಂದು ಪರಿಗಣಿಸುವ ಕಾಲ ವೊಂದಿತ್ತು. ಆದರೆ ಗ್ರಂಥಗಳು ನಿಜವಾಗಿಯೂ ಪ್ರಭಾವರಹಿತವಾಗಿದ್ದಲ್ಲಿ, ನೀರಸ ನಿರುಪಯೋಗಿ ವಸ್ತುಗಳಾಗಿದ್ದಲ್ಲಿ ಅವನ್ನೇಕೆ ಅಧಿಕಾರದಲ್ಲಿದ್ದವರು ಪುನಃ ಪುನಃ ಬಹಿಷ್ಕರಿಸುತ್ತಿದ್ದರು ? ಬೆಂಕಿಗೆ ಆಹುತಿ ನೀಡುತ್ತಿದ್ದರು ?

ಪುಸ್ತಕ ಮಹಿಮೆಯನ್ನು ಕುರಿತು ಬರೆಯುತ್ತ ಬಾರ್ಥೋಲಿನಿ ಎಂಬ ಗ್ರಂಥಪಾಲಕ ಹೀಗೆ ಉದ್ಗಾರ ತೆಗೆದಿದ್ದಾನೆ : "ಗ್ರಂಥಗಳಿಲ್ಲದಿದ್ದಲ್ಲಿ ದೇವರೇ ಮೂಕನಾಗಿ ಬಿಡುತ್ತಾನೆ. ನ್ಯಾಯ ದೇವತೆ ನಿದ್ರಿಸುತ್ತಾಳೆ ; ವಿಜ್ಞಾನ ದೇವತೆ ವಿಶ್ರಾಂತಿ ಪಡೆಯುತ್ತಾಳೆ ತತ್ವಜ್ಞಾನ ಕುಂಟುತ್ತದೆ, ಸಾಹಿತ್ಯ ಬಾಯಿಗೆ ಬೀಗ ಜಡಿದುಕೊಂಡು ಬಿಡುತ್ತದೆ. ಉಳಿದುದೆಲ್ಲವೂ ಗಾಢಾಂಧಕಾರದಲ್ಲಿ ಮುಳುಗಿಬಿಡುತ್ತದೆ ಎಂದು".

ಮೇ 1958 ರಲ್ಲಿ ಓದನ್ನು ಕುರಿತು ಮೊಟ್ಟ ಮೊದಲಿನ ರಾಷ್ಟ್ರೀಯ ಪರಿಷತ್ತು ಸೇರಿತ್ತು. ಅದರ ಉದ್ಘಾಟನೆ ಭಾರತ ಸರಕಾರದ ಶಿಕ್ಷಣ ಸಲಹೆಗಾರರಾಗಿದ್ದ ಶ್ರೀ ಕೆ. ಜಿ. ಸೈಯಿದೈನ ಅವರ ಹಸ್ತದಿಂದ ಆಯಿತು. ಬಾರ್ಥೋಲಿನಿಯ ಈ ಮಾತುಗಳನ್ನೇ ಪುನರುಚ್ಚರಿಸುತ್ತ ಶ್ರೀ ಸೈಯಿದೈನ ಅವರ ಸಲ್ಲಿಸಿದ ಪ್ರಾರ್ಥನೆ ಇಂದಿನ ಈ ಪ್ರಸಂಗಕ್ಕೂ ಅನ್ವಯಿಸುವಂತಿರುವುದರಿಂದ ಅದನ್ನೇ ಸ್ವಲ್ಪ ಮಾರ್ಪಡಿಸಿ ಇಲ್ಲಿ ಕೊಡಬಯಸುತ್ತೇನೆ.

"ದೇವರೇ ದಯಪಾಲಿಸು : ನಮ್ಮ ರಾಷ್ಟ್ರೀಯ ಜೀವನದಲ್ಲಿ ಗ್ರಂಥಗಳಿಗೆ ತಕ್ಕ ಸ್ಥಾನ ಕಲ್ಪಿಸಿಕೊಡಲು ನಾವು ಏನೆಲ್ಲ ಮಾಡಬೇಕೋ ಅವುಗಳನ್ನೆಲ್ಲಾ ಮಾಡುವಂತೆ ಅನುಗ್ರಹಿಸು. ಅದರಿಂದ ದೇವವಾಣಿಯನ್ನು ನಾವು ಆಲಿಸುವಂತಾಗಲಿ ; ನ್ಯಾಯದೇವತೆ ನಮ್ಮೀ ದೇಶದಲ್ಲಿ ಸದಾ ಜಾಗ್ರತವಾಗಿರಲಿ. ವಿಜ್ಞಾನ ಜಯಭೇರಿ ಹೊಡೆದು ನಮ್ಮ ಜೀವನ ಮಟ್ಟ ಏರಿಸಲಿ ; ನಮ್ಮ ತತ್ವಜ್ಞಾನ ಹಿಂದಿನಂತೆ ಮತ್ತೆ ಪ್ರಪಂಚದಲ್ಲೆಲ್ಲೂ ವಿಜಯಿಯಾಗಲಿ ; ಭಾರತೀಯ ಸಾಹಿತ್ಯ, ದೇವತೆಗಳ ನಾಲಿಗೆ ಹೊಂದಿ ನುಡಿಯಲಿ ; ನಮ್ಮ ದೇಶದಲ್ಲಿ ಕವಿದ ಅಜ್ಞಾನದ ಕಾರ್ಗತ್ತಲೆ ಕಳೆದು ಎಲ್ಲಲ್ಲೂ ಬೆಳಕು ಬೀಳಲಿ" ಎಂದು.

ಶ್ರೀ ಸೈಯಿದೈನ ಅವರ ಆತ್ಮದ ಮೊರೆ ಇಂದಿಗೂ ಅರಣ್ಯರೋದನವಾಗಿಯೇ ಉಳಿದಿದೆ. ಅವರು ಕಂಡ ಕನಸು ಇನ್ನೂ ಕನಸಾಗಿಯೇ ಉಳಿದಿದೆ.

ಈ ಹೊತ್ತು ಪ್ರಪಂಚದಲ್ಲಿ ಪ್ರಗತಿಪಥದಲ್ಲಿದ್ದು ತಲೆಯೆತ್ತಿ ನಡೆಯುವ, ವೈಭವದಲ್ಲಿ ಮೆರೆಯುವ ರಾಷ್ಟ್ರಗಳೆಲ್ಲ ಗ್ರಂಥಗಳಿಗೆ ಹಾಗೂ ಅವುಗಳ ಪಠಣಕ್ಕೆ ತಮ್ಮ ದೈನಂದಿನ ಜೀವನದಲ್ಲಿ ಅತ್ಯುನ್ನತ ಸ್ಥಾನ ಕಲ್ಪಿಸಿಕೊಟ್ಟಿದ್ದೇ ಅವುಗಳ ಅಭ್ಯುದಯಕ್ಕೆ ಕಾರಣ. 60 ವರುಷಗಳ ಹಿಂದೆ ದಟ್ಟ ದಾರಿದ್ರ್ಯದಲ್ಲಿ ಝಾರರ ದಾಸ್ಯದಲ್ಲಿ ರಶಿಯಾ ತೊಳಲಾಡುತ್ತಿತ್ತು. ಕೇವಲ 33 ವರುಷಗಳ ಹಿಂದೆ ಜಪಾನ್ ಎರಡನೇ ಮಹಾಯುದ್ಧದಲ್ಲಿ ಜರ್ಜರಿತವಾಗಿ ಹೋಗಿತ್ತು. ಬರೀ 15 ವರುಷಗಳ ಹಿಂದೆ ಕ್ಯೂಬಾ ಅಜ್ಞಾನದ ಗಾಢಾಂಧಕಾರದಲ್ಲಿ ಮುಳುಗಿ ಹೋಗಿತ್ತು. ಇಂದು ಇವೆಲ್ಲ ಸಂಪನ್ನ ರಾಷ್ಟ್ರಗಳಾಗಿ ಮೆರೆಯುವುದಕ್ಕೆ ಪ್ರಬಲ ಕಾರಣವೆಂದರೆ ಅವು ಗ್ರಂಥಗಳಿಗೆ ಶರಣು ಹೋದುದು.

ಜಪಾನಿನಲ್ಲಿ ಓದಿನ ಹವ್ಯಾಸ :

ಇಂದು ಪುಟ್ಟ ದೇಶವಾದ ಜಪಾನಿನಲ್ಲಿ "ಓದು" ಅತಿ ಮಹತ್ವದ ದೈನಂದಿನ ಕಾರ್ಯಕ್ರಮವಾಗಿದೆ. ವಿದ್ಯಾರ್ಥಿಗಳು, ಗೋಲ್ಫ ಆಟಗಾರರು, ಕಂಪನಿ ಮಾಲಿಕರು, ಗೌಂಡಿಗಳು ಕೆಲಸ ಹಾಗೂ ನಿದ್ರೆ ಸಮಯ ಬಿಟ್ಟು ಉಳಿದ ವೇಳೆಯಲ್ಲಿ ಏನನ್ನಾದರೂ ಓದುತ್ತಲೇ ಇರುತ್ತಾರೆ. ಕರ್ಮಚಾರಿಗಳು, ದಿನವೂ ರೈಲಿನಲ್ಲಿ ಓಡಾಡುವಾಗ ಏಕಾಕಿಯಾಗಿದ್ದ ವ್ಯಾಪಾರಿಗಳು ಊಟ ಮಾಡುವಾಗ, ಗೃಹಿಣಿಯರು ಕೇಶಾಲಂಕಾರ ಗೃಹದಲ್ಲಿ ತಮ್ಮ ಸರದಿ ಕಾಯುತ್ತಿದ್ದಾಗ, ವಿದ್ಯಾರ್ಥಿಗಳು ಎರಡು ಕ್ಲಾಸುಗಳ ನಡುವೆ ಟೀ ಕಾಫೀ ಸೇವಿಸುತ್ತಿದ್ದಾಗ ಏನಾದರೂ ಓದುತ್ತಲೇ ಇರುತ್ತಾರೆ. ಇದಕ್ಕಾಗಿ ಪ್ರಕಾಶಕರು ಆ ದೇಶದಲ್ಲಿ ಪ್ರತಿ ವರುಷ ತಲಾ 8 1/2 ಗ್ರಂಥಗಳನ್ನು ಬೆಳಕಿಗೆ ತರುತ್ತಾರೆ. ಮುದ್ರಿತ ಶಬ್ದಗಳ ಮೇಲೆ ಅವರಿಗೇಕೆ ಇಷ್ಟು ಮೋಹ ?

ಓದು ಏಕೆ ?

ಅ ಓದು ಮಾನವ ಸಹಜವಾದ ಹವ್ಯಾಸ; ಅದು ಅವನ ಅದಮ್ಯ ಚೇತನದ ಪ್ರತೀಕ; ಅವನ ಅಜೇಯ ಬುದ್ಧಿಯ ನಿರಂತರ ಹಂಬಲ.

ಆ ಓದಿನಿಂದಲೇ ಮಾನವ ಸುಸಂಸ್ಕೃತನಾಗಿ ಸಿರಿವಂತ ಬಾಳನ್ನು ಬಾಳಲು ಸಾಧ್ಯ. ಈ ಸಂಸಾರವೆಂಬ ವಿಷವೃಕ್ಷದಲ್ಲಿ ಎರಡೇ ಎರಡು ಅಮೃತೋಪಮ ಫಲಗಳು: ಅವೆಂದರೆ ಕಾವ್ಯಾಮೃತ ರಸಾಸ್ವಾದ, ಸಜ್ಜನರೊಡನೆ ಸಲ್ಲಾಪ ಎಂದು ನಮ್ಮ ಹಿರಿಯರು ಸಾರಿಲ್ಲವೇ ?

ಇ ಜೀವನದಲ್ಲಿ ಪ್ರಗತಿ ಸಾಧಿಸಲು ಓದು ಅವಶ್ಯ. 1961ರಲ್ಲಿ ಫೈಡೆಲ್ ಕ್ಯಾಸ್ಟ್ರೋ ಕ್ಯೂಬಾದ ಧುರೀಣತ್ವ ವಹಿಸಿದ. ಆಗ್ಗೆ ಕ್ಯೂಬಾದಲ್ಲಿ ಅನಕ್ಷರತೆ ತಾಂಡವವಾಡುತ್ತಿತ್ತು. ದೇಶದ ಪ್ರಗತಿಗೆ ನಿರಕ್ಷರತೆಯೇ ದೊಡ್ಡ ವೈರಿ ಎಂದು ಬಗೆದ ಕ್ಯಾಸ್ಟ್ರೋ ಕೇವಲ ಕೆಲವೇ ಕೆಲವು ವರ್ಷಗಳಲ್ಲಿ ಅನಕ್ಷರತೆಯನ್ನು ಹೊಡೆದೋಡಿಸಿದ. ನಂತರ ಸಾಕ್ಷರತೆಯನ್ನು ಸದಾ ಕಾಪಾಡಿಕೊಂಡಿರಲು ಅನಿವಾರ್ಯ ಸಾಧನಗಳಾದ ಗ್ರಂಥಗಳು ತನ್ನ ನಾಡಿನವರಿಗೆ ನಿತ್ಯ ಸಿಗುವಂತೆ ವ್ಯವಸ್ಥೆ ಮಾಡಿದ. ಇಂದು ಕ್ಯೂಬಾದಲ್ಲಿ ಪ್ರಪಂಚದ ಮೂಲೆ ಮೂಲೆಯಲ್ಲಿ ಪ್ರಕಟವಾದ ಅತ್ಯಾಧುನಿಕ ಗ್ರಂಥಗಳ ದೇಶೀ ಭಾಷಾಂತರಗಳು ಅತಿ ಸುಲಭವಾಗಿ ಅಂದರೆ ಗಾಳಿ ನೀರು ಎಷ್ಟು ಸುಲಭವಾಗಿ ದೊರೆಯುವುವೋ ಅಷ್ಟೇ ಸಲೀಸಾಗಿ ಹೇರಳವಾಗಿ ದೊರಕುತ್ತವೆ.

ಈ ಜ್ಞಾನಪಿಪಾಸೆಯನ್ನು ಓದಿನಿಂದಲೇ ತಣಿಸಿಕೊಳ್ಳಬಹುದು. ಓದುವ ಕಲೆಯೆಂದರೆ ಒಂದು ಸಂವಾದ, ಸಂಭಾಷಣೆ, ಇದ್ದ ಹಾಗೆ. ಈ ಸಂಭಾಷಣೆಯಲ್ಲಿ, ಚರ್ಚೆಯಲ್ಲಿ ಪಾಲುಗಾರರೆಂದರೆ ಓದುಗ, ಲೇಖಕ. ಅಥವಾ ಅದನ್ನು ಎರಡು ಮನಸ್ಸುಗಳ ಅಥವಾ ಬುದ್ಧಿಗಳ ನಡುವಿನ ಮಂಥನ ಎಂದು ಹೇಳಬಹುದು.

ಉ ಯಾವದೇ ಒಂದು ಪ್ರಜಾಪ್ರಭುತ್ವದಲ್ಲಿ ಪ್ರಜ್ಞಾವಂತ ನಾಗರಿಕನಾಗಿ ಬಾಳಿ ಬದುಕಲು ಓದು ಅತ್ಯಾವಶ್ಯಕ.

ಊ ಪರದೇಶಗಳ, ಪರಸಂಸ್ಕೃತಿಗಳ ಅರ್ಥಮಾಡಿಕೊಂಡು ಸಹಜೀವನದ ಆದರ್ಶ ಕರಗತ ಮಾಡಿಕೊಳ್ಳಲು, ರೂಢಿಸಿಕೊಳ್ಳಲು ಓದೇ ಮುಖ್ಯ ರಾಜಮಾರ್ಗ. ಅಂತೆಯೇ ಯುನೆಸ್ಕೋದವರು 1972ನ್ನು ಅಂತರ ರಾಷ್ಟ್ರೀಯ ಪುಸ್ತಕ ವರ್ಷವನ್ನಾಗಿ ಆಚರಿಸಲು ಪ್ರಪಂಚದ ಸಮಸ್ತ ರಾಷ್ಟ್ರಗಳಿಗೆ ಕರೆ ಕೊಟ್ಟದ್ದು.

ಎ ಓದು ಮನರಂಜನೆಯ ಸಾಧನವೂ ಹೌದು. ಇನ್ನು ಕೆಲವರು ಇದನ್ನು ವೇಳೆ ಕಳೆಯಲಿಕ್ಕೆ ಬಳಸಿಕೊಂಡರೆ ಮತ್ತು ಕೆಲವರು ಓದನ್ನು ನಿದ್ದೆ ಗುಳಿಗೆ ಎಂದು ಉಪಯೋಗಿಸುವದೂ ಉಂಟು.

ಏ ಕೊನೆಯದಾಗಿ ಓದು ಮಾನವನ ಜನ್ಮಸಿದ್ಧ ಹಕ್ಕು. ಇದನ್ನು ಅವನಿಂದ ಕಸಿದುಕೊಳ್ಳುವ ಅಧಿಕಾರ ಯಾರಿಗೂ ಇಲ್ಲ.

ರೇಡಿಯೋ, ಟೆಲಿವಿಜನ್, ಸಿನೇಮಾ ಇವೆಲ್ಲ ಬಂದ ಮೇಲೆಯೂ ಗ್ರಂಥಪಠನ ಅವಶ್ಯವೇ ಎಂದು ಪ್ರಶ್ನಿಸಬಹುದು. ನಿರಕ್ಷರ ಕುಕ್ಷಿಗಳೂ ಕೂಡ ಈ ಮೂರು ಆಧುನಿಕ ಮಾನವನ ಸಾಧನೆಗಳಿಂದ ಕಲಿಯಬಹುದು; ಮನಸ್ಸನ್ನು ರಂಜಿಸಿಕೊಳ್ಳಬಹುದು. ಆದರೂ ಓದುಬಲ್ಲವರೆಲ್ಲರಿಗೂ, ಅದರಲ್ಲೂ ಬಡವರಿಗೆ ಗ್ರಂಥ ಪಠನವೇ ಅತಿ ಸರಳ ಅತಿ ವೈವಿಧ್ಯಮಯ, ಅತಿ ಸುಲಭವಾಗಿ ಕೈಗೆಟುಕಬಲ್ಲ, ಅತಿ ಕಡಿಮೆ ವೆಚ್ಚದಲ್ಲಿ ದೊರೆಯಬಹುದಾದ ಜ್ಞಾನಾರ್ಜನೆಯ ಸಾಧನ, ಸಂಗಾತಿ.

ಓದಿನ ಹಂತಗಳು

ಗ್ರಂಥಪಠನವನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಬಹುದು :

1. Browsing ಗ್ರಂಥಗಳಲ್ಲಿ ಸುಮ್ಮನೆ ಕಣ್ಣಾಡಿಸುವದು, ಮನರಂಜಿಸಿಕೊಳ್ಳುವದು ಅಥವಾ ವೇಳೆ ಕಳೆಯುವದಕ್ಕಾಗಿ ಪುಸ್ತಕ ಸಂಪರ್ಕ ಇಟ್ಟುಕೊಳ್ಳುವದು.

2. Reading ಜ್ಞಾನಾರ್ಜನೆಗಾಗಿ ಗ್ರಂಥಪಠನ ಮಾಡುವದು. ಕಸಬುಗಳಲ್ಲಿ ಪರಿಣತಿ ಹೊಂದುವದಕ್ಕೆ, ಪರೀಕ್ಷೆಗಳಲ್ಲಿ ತೇರ್ಗಡೆಯಾಗುವದಕ್ಕೆ, ಗ್ರಂಥ ಬರೆಯಲಿಕ್ಕೆ ಭಾಷಣ ಮಾಡಲಿಕ್ಕೆ ಓದುವದು ಇತ್ಯಾದಿಗಳೆಲ್ಲ ಈ ವರ್ಗಕ್ಕೆ ಸೇರಿದವು.

3. Research ಸಂಶೋಧನೆಗಾಗಿ ಓದು. ಇದು ಗಂಭೀರ ಸ್ವರೂಪದ್ದು. ಸಂಶೋಧಕ ವರ್ಗಕ್ಕೆ ಈ ತೆರನಾದ ಓದು ಮೀಸಲು.

ಕೊನೆಯ ಮಟ್ಟ ಬಿಟ್ಟು, ಅಂದರೆ ಸಂಶೋಧನೆಗಾಗಿ ಓದು ಬಿಟ್ಟು, ಉಳಿದ ಎರಡು ಮಟ್ಟಗಳ ಓದನ್ನು ಮಕ್ಕಳಿಂದ ಮುದುಕರವರೆಗೆ, ಮಹಿಳೆಯರಿಂದ ಮ್ಯಾನೆಜರವರೆಗೆ, ಪಾಮರರಿಂದ ಪಂಡಿತರವರೆಗೆ, ಕಾರ್ಮಿಕರಿಂದ ಕೋಟ್ಯಾಧೀಶರವರೆಗೆ, ಸಮಾಜದ ಎಲ್ಲ ವರ್ಗದವರೂ ಮಾಡಬಹುದು. ಈ ಎಲ್ಲ ಓದುಗರನ್ನು ಈ ಕೆಳಗಿನಂತೆ ವಿಂಗಡಿಸಬಹುದು.

1. ಚಿಕ್ಕಮಕ್ಕಳು (ಕಿಂಡರ ಗಾರ್ಟನ್)
2. ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳು
3. ಪ್ರೌಢ ಶಾಲೆಯ ವಿದ್ಯಾರ್ಥಿಗಳು
4. ಕಾಲೇಜ ಹಾಗೂ ಉಚ್ಚ ಶಿಕ್ಷಣದ ವಿದ್ಯಾರ್ಥಿಗಳು
5. ಶಿಕ್ಷಕರು ಹಾಗೂ ಸಂಶೋಧಕರು
6. ವ್ಯವಸಾಯದಲ್ಲಿರುವವರು : ಇಂಜನಿಯರರು, ಡಾಕ್ಟರು, ವಕೀಲರು.
7. ಉದ್ದಿಮೆದಾರರು, ವ್ಯಾಪಾರಸ್ಥರು
8. ಕಾರ್ಮಿಕರು
9. ರೈತರು, ಹಳ್ಳಿಗರು
10. ಮಹಿಳೆಯರು

11. ವೃದ್ಧರು

12. ರೋಗಿಗಳು, ಕೈದಿಗಳು, ಅಂಗವಿಕಲರು, ನವಸಾಕ್ಷರ ವಯಸ್ಕರು ಇತ್ಯಾದಿ

ಇವರಲ್ಲಿ 3 ರಿಂದ 6ನೇ ವರ್ಗಕ್ಕೆ ಸೇರಿದ ಓದುಗರ ಗ್ರಂಥ ಪೂರೈಕೆಯ ಕೆಲಸವನ್ನು ಆಯಾ ಶಾಲೆ, ಕಾಲೇಜು, ವಿಶ್ವವಿದ್ಯಾಲಯ ಹಾಗೂ ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳ ಗ್ರಂಥಾಲಯಗಳು ಮಾಡಬೇಕಾಗುತ್ತದೆ. ಆದರೆ ಇನ್ನುಳಿದ ವರ್ಗಗಳವರ (ಅಂದರೆ 1, 2, 7–12) ಗ್ರಂಥ ಬೇಡಿಕೆಗಳನ್ನು ಹೆಚ್ಚಾಗಿ ಸಾರ್ವಜನಿಕ ಗ್ರಂಥಾಲಯಗಳೇ ಪೂರೈಸಬೇಕಾಗುತ್ತದೆ.

ವಿದ್ಯಾರ್ಥಿಗಳಿಗೆ ಜೀವನದುದ್ದಕ್ಕೂ ಒಳ್ಳೆಯ ಓದನ್ನು ಹಾಸುಹೊಕ್ಕಾಗಿ ಮಾಡಿಕೊಳ್ಳುವ ಮುಖ್ಯ ಧ್ಯೇಯವನ್ನು ಶಿಕ್ಷಣ ಸಂಸ್ಥೆಗಳು ಇಟ್ಟುಕೊಂಡಿವೆಯಾದರೂ ಅಲ್ಲಿ ನಡೆಯುವ ಓದಿನ ಮುಖ್ಯ ಪಾಲು ಪರೀಕ್ಷೆ ಪಾಸಾಗುವ ಗುರಿಯಿಂದ, ಜ್ಞಾನಾರ್ಜನೆಯ ಗುರಿಯಿಂದ ಕೂಡಿದ್ದಾಗಿರುತ್ತದೆ. ಈ ಮಾತು ವಿಶ್ವವಿದ್ಯಾಲಯದ ವಿದ್ಯಾರ್ಥಿ ವೃಂದಕ್ಕೆ ಹೆಚ್ಚಾಗಿ ಅನ್ವಯಿಸುತ್ತದೆ. ಹೈಸ್ಕೂಲು ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಗಣನೀಯವಾದ ಗ್ರಂಥಾಲಯಗಳಿಲ್ಲದ ಕಾರಣ ಇಲ್ಲಿನ ವಿದ್ಯಾರ್ಥಿಗಳು ತಮ್ಮ ಓದಿನ ಹವ್ಯಾಸಕ್ಕಾಗಿ ಸಾರ್ವಜನಿಕ ಗ್ರಂಥಾಲಯಗಳಿಗೆ, ಮೊರೆ ಹೋಗಬೇಕಾಗುತ್ತದೆ.

ಕಾಲೇಜು ವಿದ್ಯಾರ್ಥಿಗಳ ವಾಚನಾಭಿರುಚಿಯನ್ನು ಅಳೆಯುವ ಯೋಜನೆಯೊಂದನ್ನು ನನ್ನ ಸಹೋದ್ಯೋಗಿ ಪ್ರೊ. ಕರಿಸಿದ್ದಪ್ಪನವರು ಹಮ್ಮಿಕೊಂಡು ಪೂರೈಸಿದ್ದರಿಂದ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಕೆಲವೊಂದು ಅಂಕಿ–ಸಂಖ್ಯೆಗಳು ಲಭ್ಯವಾಗಿವೆ. ಅವುಗಳ ಬಲದಿಂದ ಅವರ ಅಭಿರುಚಿಯನ್ನು ಸ್ಥೂಲವಾಗಿ ಅಳೆಯಲು ಸಾಧ್ಯವಾಗಿದೆ.

ಇನ್ನುಳಿದವರ ಅಭಿರುಚಿ ಅಳೆಯಲು ಬೇಕಾದ ಅಂಕಿ–ಸಂಖ್ಯೆಗಳು ಕಳೆದ 2 ತಿಂಗಳ. ಗಳಿಂದ ಸಾರ್ವಜನಿಕ ಗ್ರಂಥಾಲಯಗಳಲ್ಲಿನ ಸಿಬ್ಬಂದಿ ಸಂಪಿನ ಮೇಲಿದ್ದರಿಂದ ಅಲಭ್ಯವಾಗಿವೆ. ನಾರ್ವೆ, ಸ್ವೀಡನ್ ಮುಂತಾದ ಪ್ರಗತಿಪರ ರಾಷ್ಟ್ರಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳಿಂದ ಎರವಲು ಕೊಟ್ಟ ಪ್ರತಿಯೊಂದು ಗ್ರಂಥದ ವಿತರಣೆಯ ಅಂಕಿ–ಸಂಖ್ಯೆಗಳನ್ನು ಕಡ್ಡಾಯವಾಗಿ ಕಾಯದೆಯ ಮೇಲೆ ಇಡಲಾಗುತ್ತದೆ. ಯಾಕಂದರೆ ಪಬ್ಲಿಕ್ ಲೆಂಡಿಂಗ್ ರೈಟ ಕಾಯಿದೆಯ ಪ್ರಕಾರ ಲೇಖಕರಿಗೆ ಅವರ ಗ್ರಂಥಗಳ ವಿತರಣೆಯ ಗಾತ್ರದ ಮೇಲೆ ಅವರಿಗೆ ಗೌರವಧನ ನೀಡಲಾಗುತ್ತಿದೆ. ಅಂಥ ಸುದಿನ ನಮ್ಮಲ್ಲಿ ಎಂದು ಬಂದೀತು ?

ವಾಚನಾಭಿರುಚಿ

ಅ. ಜನಸಾಮಾನ್ಯರು :

ಮರಾಠಿ ಭಾಷೆಯಲ್ಲಿ "ಜಿತೆಕ್ಯಾ ವ್ಯಕ್ತಿ ತಿತಕ್ಯಾ ಪ್ರಕೃತಿ" ಎಂಬ ಗಾದೆಯೊಂದಿದೆ. ಅದರನ್ವಯ ಪ್ರಪಂಚದಲ್ಲಿ ಎಷ್ಟು ವ್ಯಕ್ತಿಗಳಿದ್ದಾರೆಯೋ ಅಷ್ಟು ಅಭಿರುಚಿಗಳಿವೆ. ಓದು

ಬರಪ ಬಲ್ಲ ಕೆಲವೇ ಕನ್ನಡಿಗರ ಅಭಿರುಚಿಗಳನ್ನು ಪೂರೈಸವಷ್ಟು ಕನ್ನಡದಲ್ಲಿ ವಿವಿಧ ವಿಷಯಗಳಲ್ಲಿ ಗ್ರಂಥಗಳ ಕೊರತೆ ಇದ್ದದ್ದನ್ನು ನಾವು ಇಲ್ಲಿ ಗಮನಿಸಲೇಬೇಕು. ಪ್ರಸ್ತುತ ಪ್ರಸಂಗದಲ್ಲಿ ಸಾಮಾನ್ಯ ಜನರ ವಾಚನಾಭಿರುಚಿಯನ್ನು ಸ್ಥೂಲವಾಗಿ ಗುರುತಿಸಲು ನಾನು ಇಬ್ಬರು ಪ್ರಕಾಶಕ-ಪುಸ್ತಕ ವ್ಯಾಪಾರಿ ಮಿತ್ರರ ನೆರವು ಕೇಳಿ ಪಡೆದಿದ್ದೇನೆ. ಮೈಸೂರಿನ ಗೀತಾಬುಕ್ ಹೌಸಿನ ಪ್ರೊ. ಸತ್ಯನಾರಾಯಣರಾಯರು ಹಾಗೂ ಧಾರವಾಡದ ಸಮಾಜ ಪುಸ್ತಕಾಲಯ ಶ್ರೀಮನೋಹರ ಘಾಣೇಕರ ಅವರೇ ಈ ಮಿತ್ರದ್ವಯರು. ಅವರು ಕೊಟ್ಟ ಅಂಕಿ-ಸಂಖ್ಯೆಗಳನ್ನೇ ಇಲ್ಲಿ ಬಳಸಿಕೊಂಡಿದ್ದೇನೆ. ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು ತಮ್ಮ ಬೆರಳುಗಳನ್ನು ಓದುಗರ, ಗ್ರಾಹಕರ, ನಾಡಿಯ ಮೇಲೆ ಇಟ್ಟುಕೊಂಡೇ ತಮ್ಮ ಉದ್ಯಮ ಸಾಗಿಸಬೇಕಾಗುತ್ತದೆ. ಅದಲ್ಲದೇ ಗ್ರಂಥಪಾಲರ ಹಾಗೆಯೇ ತಮ್ಮಲ್ಲಿ ಪ್ರಕಟವಾದ, ಮಾರಾಟಕ್ಕಿದ್ದ ಗ್ರಂಥಗಳ ಬಗ್ಗೆ ಉತ್ಸಾಹದಿಂದ ಅರಿವಿನಿಂದ ಗ್ರಾಹಕರಿಗೆ ಪರಿಚಯ ಮಾಡಿಕೊಡಬೇಕಾಗುತ್ತದೆ. ಇಲ್ಲವಾದರೆ ಪುಸ್ತಕ ವ್ಯಾಪಾರ ತಗ್ಗುವ ಭಯ ಇದ್ದೇ ಇದೆ. ಈ ಕಾರಣದಿಂದಾಗಿ ಅವರ ಅಭಿಪ್ರಾಯ ಸತ್ಯಕ್ಕೆ ಸಮೀಪವಾಗಿರಲು ಸಾಧ್ಯವಾಗಿದೆ. ಲಭ್ಯವಾದ, ಪ್ರಕಟವಾದ ಪುಸ್ತಕಗಳ ಬಗ್ಗೆ ಇದ್ದ ಬೇಡಿಕೆಗಳನ್ನು ಅನುಲಕ್ಷಿಸಿ ಇಳಿಕೆಯ ರೂಪದಲ್ಲಿ ಸಾಮಾನ್ಯ ಜನರ ಒಲವನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ:

ಕಾದಂಬರಿ : ಕಥೆ

1. ಪ್ರಮುಖ ಕಾದಂಬರಿಕಾರರ ಕೃತಿಗಳು :

ಅ ಶ್ರೀ ಭೈರಪ್ಪನವರ ಕೃತಿಗಳಿಗೆ ಅತಿ ಹೆಚ್ಚಿನ ಬೇಡಿಕೆ ಇದೆ. ಅವರ ಕೃತಿಗಳು ಬೆಲೆ ಹೆಚ್ಚಿಗಿದ್ದರೂ, 2-3 ವರುಷಗಳಲ್ಲಿ 5 : 6 ಸಾವಿರ ಪ್ರತಿಗಳು ಖರ್ಚಾಗುತ್ತವೆ.

ಆ ಬೀಚಿ, ಅ. ನ. ಕೃಷ್ಣರಾಯ, ತರಾಸು, ಕೃಷ್ಣಮೂರ್ತಿ ಪುರಾಣಿಕ, ಇವರ ಕೃತಿಗಳು ಹಾಗೂ ಧಾರಾವಾಹಿ ಆಗಿ ವಾರಪತ್ರಿಕೆಗಳಲ್ಲಿ ಪ್ರಕಟಗೊಂಡ, ಸಿನೇಮಾದಲ್ಲಿ ರೂಪಾಂತರಗೊಂಡ ಕಾದಂಬರಿಗಳು: 2–5 ವರುಷಗಳಲ್ಲಿ 1000–2000 ಪ್ರತಿಗಳಿಗೆ ಬೇಡಿಕೆ ಬರುತ್ತದೆ.

ಇ ನಂತರ ಪತ್ತೇದಾರಿ ಕಾದಂಬರಿಗಳು ಹಾಗೂ ಇನ್ನುಳಿದವರ ಕತೆ ಕಾದಂಬರಿಗಳು.

2. ಸಾಮಾನ್ಯ ಜ್ಞಾನವೀಯುವ ಉಪಯುಕ್ತ ಗ್ರಂಥಗಳು :

ಇದರಲ್ಲಿ ಜ್ಯೋತಿಷ, ಹಸ್ತ ಸಾಮುದ್ರಿಕ, ಕಾಮವಿಜ್ಞಾನ, ಕಸೂತಿ ಕಲೆ, ಗೃಹ ವಿಜ್ಞಾನ ಇತ್ಯಾದಿ ಗ್ರಂಥಗಳನ್ನು ಸೇರಿಸಬಹುದು. ಇವುಗಳಿಗೆ ಬೇಡಿಕೆ 2–3 ವರುಷಗಳಲ್ಲಿ 1000-2000 ಪ್ರತಿಗಳು.

3. ನಾಟಕಗಳು: ಏಕಾಂಕ ಇತ್ಯಾದಿ.3-5 ವರುಷಗಳ ಅವಧಿಯಲ್ಲಿ ಕೇವಲ 1000 ಪ್ರತಿಗಳ ಬೇಡಿಕೆ.

4. ಕವಿತಾ ಸಂಕಲನಗಳು, ಪ್ರಬಂಧ, ಹರಟೆ ಇತ್ಯಾದಿ :

5. ಧರ್ಮ, ತತ್ವಜ್ಞಾನ, ರಾಮಾಯಣ, ಮಹಾಭಾರತ, ವಚನ ಸಾಹಿತ್ಯ : 3-5 ವರ್ಷಗಳಲ್ಲಿ 1000 ಪ್ರತಿಗಳಿಗೆ ಬೇಡಿಕೆ.

6. ಪಠ್ಯಪುಸ್ತಕಗಳ ಮಹತಿ ಉಳ್ಳವು : 3 – 5 ವರುಷಗಳಲ್ಲಿ 1000 ಪ್ರತಿಗಳು.

7. ಜೀವನ ಚರಿತ್ರೆ ರಾಜಕೀಯ ಇತ್ಯಾದಿ

8. ವಿಮರ್ಶೆ, ಸಂಭಾವನಾ ಗ್ರಂಥಗಳು

5-8 ವರ್ಷಗಳಲ್ಲಿ 1000 ಪ್ರತಿಗಳು

ಮೇಲಿನ ಪಟ್ಟಿಯಿಂದ ಸಾಮಾನ್ಯವಾಗಿ ವಿಜ್ಞಾನ ಗ್ರಂಥಗಳಿಗೆ, ಆಟದ ಗ್ರಂಥಗಳಿಗೆ, ಮಕ್ಕಳ ಹಾಗೂ ಮಹಿಳೆಯರ ಗ್ರಂಥಗಳಿಗೆ ಬೇಡಿಕೆ ಇನ್ನೂ ಕಡಿಮೆ ಏನೋ ಎಂಬ ಭೀತಿ ಉಂಟಾಗುವುದು. ಹಳ್ಳಿಗರಿಗೆ, ಕಸಬುದಾರರಿಗೆ ಬೇಕಾಗುವ ಗ್ರಂಥಗಳು ವಿರಳ ಎಂದು ಹೇಳಬಹುದು.

ಪ್ರಕಾಶಕರು ಬೇರೆ ಬೇರೆ ವಿಷಯಗಳಲ್ಲಿ ಪ್ರಕಟಿಸಿದ ಗ್ರಂಥಗಳ ಸಂಖ್ಯೆಗಳೂ ಕೂಡ ಸಾಮಾನ್ಯ ಜನರ ವಾಚನಾಭಿರುಚಿಗಳಿಗೆ ಕನ್ನಡಿ ಹಿಡಿಯುತ್ತವೆಂಬ ಮಾತನ್ನೇ ಪುನಃ ಸಮರ್ಥಿಸಿಕೊಳ್ಳಲು ಭಾರತದ ರಾಷ್ಟ್ರೀಯ ಗ್ರಂಥಾಲಯಕ್ಕೆ (National Library of India) Delivery of Books Actದ ಕಲಮುಗಳನ್ವಯ 1976–77ನೇ ಸಾಲಿನಲ್ಲಿ ಭಾರತದ ಎಲ್ಲ ಭಾಷೆಗಳಲ್ಲಿನ ಪ್ರಕಾಶಕರು ಪ್ರಕಟಿಸಿ ಕಳಿಸಿದ ಗ್ರಂಥಗಳ ವಿಷಯವಾರು ಪಟ್ಟಿಯನ್ನೇ ಇದಕ್ಕೆ ಅನುಬಂಧವಾಗಿ ಕೊಟ್ಟಿದ್ದೇನೆ.

ಈ ಪಟ್ಟಿಯ ಪ್ರಕಾರ ಕನ್ನಡ ಪ್ರಕಟನೆಗಳು, ಸಂಖ್ಯೆಯ ವಿಷಯದಲ್ಲಿ ಭಾರತೀಯ ಭಾಷೆಗಳಲ್ಲಿ, 5ನೇ ಸ್ಥಾನ ಗಳಿಸಿವೆ. ವಿಷಯಾನುಕ್ರಮವಾಗಿ ಕನ್ನಡದಲ್ಲಿ 1976–77ರಲ್ಲಿ ಪ್ರಕಟವಾದ ಗ್ರಂಥಗಳ ಸಂಖ್ಯೆ ಇಂತಿದೆ:

ವಿಷಯ	ಸಂಖ್ಯೆ	ಇಳಿಕೆಯ ಕ್ರಮಾಂಕ
ಸಾಮಾನ್ಯ	26	7
ತತ್ವಜ್ಞಾನ	12	11
ಧರ್ಮ	240	2
ಸಮಾಜ ಶಾಸ್ತ್ರಗಳು	135	3
ಭಾಷಾ ಶಾಸ್ತ್ರ	20	9
ವಿಜ್ಞಾನಗಳು	157	5

ಉಪಯುಕ್ತ ಕಲೆಗಳು	30	6
ಲಲಿತ ಕಲೆಗಳು	21	8
ಸಾಹಿತ್ಯ	508	1
ಇತಿಹಾಸ ಭೂಗೋಲ	108	4
ಮಕ್ಕಳ ಪುಸ್ತಕಗಳು	18	10
ಒಟ್ಟು	1176	

ಡಾ. ಸದಾನಂದ ನಾಯಕ ಅವರು 1963ರಲ್ಲಿ "ಯುವಕರಿಂದ ವೃದ್ಧರವರೆಗೆ, ಸಾಮಾನ್ಯ ಜನರ ವಾಚನಾಭಿರುಚಿ" ಕುರಿತು ಆಳವಾಗಿ ಅಭ್ಯಾಸ ಮಾಡಿ ಕರ್ನಾಟಕವಿಶ್ವ ವಿದ್ಯಾಲಯಕ್ಕೆ ಪಿ. ಎಚ್. ಡಿ. ಪ್ರಬಂಧವೊಂದನ್ನು ಸಾದರಪಡಿಸಿದರು. ಇದರಲ್ಲಿ ಅವರು ಕೊಟ್ಟ ವಾಚನಾಭಿರುಚಿಯ ಪಟ್ಟಿಯನ್ನು ಅನುಬಂಧವಾಗಿ ಈ ಬರಹಕ್ಕೆ ಕೊಟ್ಟಿದ್ದೇನೆ. (ನೋಡಿ ಅನುಬಂಧ 'ಅ') ಈ ಪಟ್ಟಿ 15 ವರುಷ ಹಳೆಯದಾದರೂ ಜನರ ವಾಚನಾಭಿರುಚಿಯಲ್ಲಿ ವಿಶೇಷ ವ್ಯತ್ಯಾಸವಿಲ್ಲ ಎಂಬುದು ಇದರ ನಿರೀಕ್ಷಣೆಯಿಂದ ವ್ಯಕ್ತವಾಗುವದು.

ಬ. ಹಳ್ಳಿಗರು :

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗದ ವತಿಯಿಂದ ಸನ್ಮಿತ್ರ ಶ್ರೀ ಚೆನ್ನವೀರ ಕಣವಿಯವರು ಸಂಚಾರೀ ಗ್ರಂಥಾಲಯವೊಂದನ್ನು ಹಲವಾರು ವರುಷಗಳಿಂದ ನಡೆಸಿಕೊಂಡು ಬರುತ್ತಿದ್ದುದು ನಿಜವಾಗಿ ಶ್ಲಾಘನೀಯ. ವಿಶ್ವವಿದ್ಯಾಲಯದ ಪ್ರಯೋಜನ ಇದರಿಂದ ಹಳ್ಳಿಗರಿಗೂ ಮುಟ್ಟುವಂತಾಗಿದೆ. ಇಲ್ಲಿ ಯವರೆಗೆ ಈ ವ್ಯವಸ್ಥೆಯ ಮೂಲಕ 220 ಗ್ರಾಮಗಳಿಗೆ ಗ್ರಂಥಗಳನ್ನೊದಗಿಸಲಾಗಿದೆ, ಈ ಯೋಜನೆಯನ್ವಯ 115 ರಿಂದ 125 ವಿವಿಧ ವಿಷಯದ ಬೇರೆ ಬೇರೆ ಗ್ರಂಥಗ ಳಿದ್ದ 20 ಪೆಟ್ಟಿಗೆಗಳನ್ನು ಒಂದು : ಎರಡು ತಾಲ್ಲೂಕಿನಲ್ಲಿ 20 ಹಳ್ಳಿಗಳಿಗೆ ಕಳಿಸಿ ಅವು ಗಳನ್ನು ತಿಂಗಳಿಗೊಮ್ಮೆ ಅದಲು ಬದಲು ಮಾಡಿ. ಆ ಪೆಟ್ಟಿಗೆಗಳು 20 ಹಳ್ಳಿಯ ಜನರಿಗೆ ಲಭ್ಯವಾಗುವಂತೆ ಮಾಡುತ್ತಾರೆ.

ಈ ಪೆಟ್ಟಿಗೆಗಳಲ್ಲಿದ್ದ ಪುಸ್ತಕ ವಿಷಯಗಳ ವ್ಯಾಪ್ತಿ ಇಂತಿದೆ :
ಸಣ್ಣ ಕತೆ, ಕಾದಂಬರಿ—ಪತ್ತೇದಾರಿ ಸಾಮಾಜಿಕ, ಐತಿಹಾಸಿಕ. ಮನೋವಿಶ್ಲೇಷಣಾತ್ಮಕ ಇತ್ಯಾದಿ—ನಗೆಹನಿಗಳು, ಸಾಹಿತ್ಯ, ಕಲೆ, ಸುಲಭ ಶೈಲಿಯಲ್ಲಿ ಬರೆದ ವಿಜ್ಞಾನ ಗ್ರಂಥ ಗಳು, ಧಾರ್ಮಿಕ ಮೂಢ ನಂಬಿಕೆ ನಗೆಹನಿಗಳು ಹಾಗೂ ಕಂದಾಚಾರ ನಿರ್ಮೂಲನೆಯ ಪುಸ್ತಕಗಳು, ಹಳ್ಳಿವೈದ್ಯ, ಆಯುರ್ವೇದ, ನಿಸರ್ಗ ಚಿಕಿತ್ಸೆ, ಖಗೋಲ, ಭೂಗೋಲ, ಇತಿ ಹಾಸ,ವಚನ,ದಾಸ ಹಾಗೂ ಜೈನ ಸಾಹಿತ್ಯ, ಆಧುನಿಕ ಬೇಸಾಯ, ಗೊಬ್ಬರ, ನೀರಾವರಿ ತಳಿ ಬೀಜ, ಶರೀರವಿಜ್ಞಾನ, ಇತ್ಯಾದಿ ; ಪುರಾಣ ಪುಣ್ಯಕಥೆಗಳು, ಲಾವಣಿ, ಕುಟ್ಟುವ

ಹಾಗೂ ಬೀಸುವ ಇತ್ಯಾದಿ, ಜಾನಪದ, ಜೀವನ ಚರಿತ್ರೆ, ಹಬ್ಬಹರಿದಿನಗಳು, ಬಯಲಾಟ ಗಳು—ಇವೆಲ್ಲವುಗಳನ್ನು ಕುರಿತ ಗ್ರಂಥಗಳು.

ಇವುಗಳಲ್ಲಿ ಕಾದಂಬರಿಗಳಿಗೆ ಹೆಚ್ಚಾಗಿ ಬೇಡಿಕೆ. ಈ ಪ್ರಬಂಧದ ಕೊನೆಗೆ ಆಯಾ ಹಳ್ಳಿಗಳಿಂದ ಇತ್ತೀಚೆಗೆ ಬಂದ ಬೇಡಿಕೆಗಳ ಪಟ್ಟಿಯನ್ನು ಉದಾಹರಣೆಗಾಗಿ ಕೊಡಲಾ ಗಿದೆ (ನೋಡಿ ಅನುಬಂಧ "ಇ") ಒಟ್ಟಾರೆ ಈ ಯೋಜನೆ ಹಳ್ಳಿಗಳಲ್ಲಿ ಇದ್ದ ಕೆಲವೇ ಅಕ್ಷರಸ್ಥರ ಜ್ಞಾನ ಪಿಪಾಸೆಯನ್ನು ತಣಿಸುವಲ್ಲಿ ಯಶಸ್ವಿಯಾಗಿದೆಯೆಂದು ಧಾರಾಳವಾಗಿ ಹೇಳಬಹುದು.

೫. ಕಾಲೇಜು ವಿದ್ಯಾರ್ಥಿಗಳು

ಧಾರವಾಡ—ಹುಬ್ಬಳ್ಳಿ ಮಹಾನಗರದಲ್ಲಿರುವ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಪಠ್ಯೇತರ ವಾಚನಾಭಿರುಚಿಯನ್ನು ಗುರುತಿಸುವ ಸರ್ವೇಕ್ಷಣೆಯೊಂದನ್ನು ನನ್ನ ಸಹೋ ದ್ಯೋಗಿ ಮಿತ್ರ ಶ್ರೀ ಕರಿಸಿದ್ದಪ್ಪ ಅವರು ನಮ್ಮೆಲ್ಲರ ಸಲಹೆ ಪಡೆದು ಇದೀಗ ಪೂರೈಸಿ) ದ್ದಾರೆ. ಈ ಸರ್ವೇಕ್ಷಣೆ ಒಂದು ದೃಷ್ಟಿಯಿಂದ ಗುಣಾತ್ಮಕವಾದುದಲ್ಲ (qualitative ಪರಿಮಾಣಾತ್ಮಕವಾದುದೆಂದು ಒಪ್ಪಿಕೊಂಡರೂ ಅಲ್ಲಿನ ಸಂಗತಿಗಳು ನಿಜವಾಗಿಯೂ ಆಹ್ಲಾದಕರವಾಗಿವೆ. ಪದವಿ ತರಗತಿಗಳಲ್ಲಿ ಓದುತ್ತಿದ್ದ 1200 ವಿದ್ಯಾರ್ಥಿಗಳಿಗೂ ಪ್ರಶ್ನಾವಳಿಯೊಂದನ್ನು ಕೊಡಲಾಯಿತು. ಇವರಲ್ಲಿ 683 ವಿದ್ಯಾರ್ಥಿಗಳು [ಶೇಕಡಾ 56. 9ರಷ್ಟು] ಪ್ರಶ್ನಾವಳಿಗೆ ಉತ್ತರ ಕೊಟ್ಟರು. ಇವರೆಲ್ಲ 17ರಿಂದ 23ವರ್ಷಗಳ ವಯಸ್ಸಿನವರು.

ಸಾಮಾನ್ಯವಾಗಿ ಹೆಚ್ಚು ಆಸ್ಥೆವಹಿಸಿ ಓದುವ ವರ್ಗವೆಂದರೆ ವಿದ್ಯಾರ್ಥಿ ವರ್ಗವೇ. ಆದರೆ ಒಮ್ಮೆ ತಮ್ಮ ಕಾಲೇಜು ಶಿಕ್ಷಣ ಮುಗಿಸಿ ಜೀವನ ಪ್ರಾರಂಭಿಸಿದರೆಂದರೆ ಅವರ ಓದಿನ ಕತೆಯು ಅಂತ್ಯಗೊಂಡಂತೆಯೆ. ಕಾಲೇಜಿನಲ್ಲಿದ್ದಾಗ ಪುಸ್ತಕಗಳ ಬಗ್ಗೆ ಹಾಗೂ ಓದಿನ ಬಗ್ಗೆ ಗಾಢವಾದ ಶ್ರದ್ಧೆ ಉತ್ಪನ್ನವಾಗದಿದ್ದಲ್ಲಿ ಈ ಭಯ ಜಾಸ್ತಿ. ಶಿಕ್ಷಕರು ತಮ್ಮ ಪ್ರತಿಭೆಯಿಂದ ವಿದ್ಯಾರ್ಥಿಗಳ ಮನಸ್ಸನ್ನು ಪಠ್ಯಪುಸ್ತಕ ಮೀರಿ ಇತರ ಪ್ರೌಢ ಗ್ರಂಥ ಗಳೆಡೆ ಓಡುವಂತೆ ಮಾಡಿದ್ದಾದರೆ, ಅಥವಾ ಪಠ್ಯಪುಸ್ತಕಗಳೇ ಸ್ವತಃ ಸತ್ವಯುತವಾಗಿದ್ದು ವಿದ್ಯಾರ್ಥಿಗಳ ಮನಸ್ಸನ್ನು ಅರಳಿಸಿ ಅವರ ಕುತೂಹಲವನ್ನು ಕೆರಳಿಸಿ, ಅವರನ್ನು ಇನ್ನೂ ಹೆಚ್ಚಿನ ಅಭ್ಯಾಸಕ್ಕೆ ಪ್ರಚೋದಿಸಿದ್ದಾದರೆ, ಓದಿನ ಹವ್ಯಾಸ ವಿದ್ಯಾರ್ಥಿಗಳ ಮುಂದಿನ ಜೀವನದುದ್ದಕ್ಕೂ ಜೀವಂತವಾಗಿರಬಲ್ಲದು.

ಶ್ರೀ ಕರಿಸಿದ್ದಪ್ಪನವರ ವರದಿಯ ಮೇರೆಗೆ ವಿದ್ಯಾರ್ಥಿಗಳ ಪಠ್ಯೇತರ ವಾಚನಾಭಿ ರುಚಿಗಳ ಬಗ್ಗೆ ಈ ಕೆಳಗಿನ ಸಂಗತಿಗಳು ಸ್ಪಷ್ಟವಾಗಿ ಮೂಡಿ ಬಂದಿವೆ.

ಅ. ಒಟ್ಟಾರೆ ಹುಬ್ಬಳ್ಳಿ-ಧಾರವಾಡ ಮಹಾನಗರದ ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ಶೇಕಡಾ 88 ವಿದ್ಯಾರ್ಥಿಗಳು ಪಠ್ಯೇತರ ಗ್ರಂಥಗಳನ್ನು ಓದುತ್ತಾರೆ.

ಆ. ಇದರಲ್ಲಿ ಶೇಕಡಾ 73.35-ವಿದ್ಯಾರ್ಥಿಗಳು ಮನೆಯಲ್ಲಿ ತಾವು ಓದಿದ

ಗ್ರಂಥಗಳನ್ನು ಕುರಿತು ಚರ್ಚೆ ಮಾಡುತ್ತಾರೆ. ಶೇಕಡಾ 21.38–ವಿದ್ಯಾರ್ಥಿಗಳು ಇಂಥ ಚರ್ಚೆ ಮಾಡುವುದಿಲ್ಲ. ಕಾರಣ ಬಹುಶಃ ಈ ವಿದ್ಯಾರ್ಥಿಗಳ ತಂದೆ ತಾಯಿಗಳು ಅನಕ್ಷರಿಗಳಿರಲು ಸಾಕು; ಅಥವಾ ಮನೆಯಲ್ಲಿ ಅಂಥ ವಾತಾವರಣವಿರಲಿಕ್ಕಿಲ್ಲ.

ಇ. ಬರೀ ಪಠ್ಯಪುಸ್ತಕಕ್ಕೇ ತಮ್ಮ ಓದನ್ನು ಸೀಮಿತ ಮಾಡಿದ ವಿದ್ಯಾರ್ಥಿಗಳ ಸಂಖ್ಯೆ ಶೇಕಡಾ 9.8.

ಈ. ಇಳಿಕೆಯ ರೂಪದಲ್ಲಿ ವಿದ್ಯಾರ್ಥಿಗಳ ವಾಚನಾಭಿರುಚಿ ಹೀಗಿದೆ:

1.	ಕಾದಂಬರಿ	(ಎಲ್ಲ ವಿದ್ಯಾರ್ಥಿಗಳು)		ಶೇಕಡಾ.	74.8
	,,	ವಾಣಿಜ್ಯ	,,	,,	79.11
2.	ನಾಟಕ	ಎಲ್ಲ	,,	,,	34.41
	,,	ಕಲಾ	,,	,,	42.04
3.	ಹಾಸ್ಯ	ಎಲ್ಲ	,,	,,	33.23
	,,	ವಿಜ್ಞಾನ	,,	,,	40.37
	,,	ವಾಣಿಜ್ಯ	,,	,,	33.75
	,,	ಕಲಾ	,,	,,	26.53
4.	ಜೀವನ ಚರಿತ್ರೆ	ಎಲ್ಲ	,,	,,	20.2
	,,	ವಿಜ್ಞಾನ	,,	,,	23.94
	,,	ವಾಣಿಜ್ಯ	,,	,,	17.33
	,,	ಕಲಾ	,,	,,	19.59

ಉ. ಓದಿನಲ್ಲಿ ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರ ಆಸಕ್ತಿ ಹೆಚ್ಚು.

ಊ, ಇವರಲ್ಲಿ ಕೆಲವರಿಗೆ [ಶೇಕಡಾ 27.52] ತಾವು ಓದಿದ ಪುಸ್ತಕಗಳ ಪರಿಚಯವಾದದ್ದು ಗೆಳೆಯರಿಂದ ಶೇಕಡಾ 21.67ರಷ್ಟು ಸಾರ್ವಜನಿಕ ಗ್ರಂಥಾಲಯಗಳ ಹಾಗೂ ಶೇಕಡಾ 18.89 ರಷ್ಟು ವಿದ್ಯಾರ್ಥಿಗಳಿಗೆ ಕಾಲೇಜು ಗ್ರಂಥಾಲಯಗಳ ಮೂಲಕ ಇಂಥ ಪರಿಚಯವಾದದ್ದು.

ಎ. ವಿದ್ಯಾರ್ಥಿಗಳು ಏನಾದರೂ ಓದುತ್ತಲೇ ಇರುತ್ತಾರೆ. ಗ್ರಂಥ ಪ್ರದರ್ಶನಗಳಿಗೆ ಹಾಗೂ ಹೊಸ ಪುಸ್ತಕಗಳ ಪ್ರದರ್ಶನಗಳಿಗೆ ಸದಾ ಭೇಟಿ ಕೊಡುತ್ತಾರೆ.

ಏ. ಕಾದಂಬರಿಕಾರರಲ್ಲಿ ಡಾ. ಭೈರಪ್ಪನವರ ಕೃತಿಗಳು ಇವರ ಮನಸ್ಸನ್ನು ವಿಶೇಷವಾಗಿ ಆಕರ್ಷಿಸಿವೆ. ಭೈರಪ್ಪನವರ ತರುವಾಯ ಇವರ ಮನಸ್ಸು ಸೂರೆಗೊಂಡವರು 'ತ್ರಿವೇಣಿ' ಅವರು.

ಐ. ಶೇಕಡಾ 73.64 ವಿದ್ಯಾರ್ಥಿಗಳು ಗ್ರಂಥಗಳನ್ನು ಕಾಲೇಜು ಗ್ರಂಥಾಲಯಗಳಿಂದ ಎರವಲು ಒಯ್ಯುತ್ತಾರೆ. ವಿಷಯ ವಿಭಾಗದಂತೆ ವಾಣಿಜ್ಯ ವಿದ್ಯಾರ್ಥಿಗಳು ಎರವಲು

ಒಯ್ಯುವುದು ಜಾಸ್ತಿ, ಅಂದರೆ ಶೇಕಡಾ 80.44. ಕಲಾ ವಿದ್ಯಾರ್ಥಿಗಳು ಅವರ ತರುವಾಯಿ ಶೇಕಡಾ 80 : ಕೊನೆಯದಾಗಿ ವಿಜ್ಞಾನ ವಿದ್ಯಾರ್ಥಿಗಳು ಶೇಕಡಾ 59.16.

ನಮ್ಮ ಗ್ರಂಥಾಲಯಗಳು ಎರವಲು ಕೊಡುವಲ್ಲಿ ಅಂಥದೊಂದು ಉದಾರ ಧೋರಣೆ ಇಟ್ಟುಕೊಂಡಿಲ್ಲ. ವೇಳೆಯ ಮಿತಿ ಇದೆ, ದಂಡ ಇದೆ ; ಗ್ರಂಥಾಲಯಗಳಲ್ಲಿ ಇಲ್ಲದ ಪುಸ್ತಕಗಳನ್ನು ಇತರೇ ಗ್ರಂಥಾಲಯಗಳಿಂದ ತರಿಸಿ ಕೊಡುವಲ್ಲಿ ಜಾಡ್ಯತೆ ಅನಾಸ್ಥೆ ಅಸಡ್ಡೆ ಇದೆ. ಇದ್ದ ಗ್ರಂಥಗಳಲ್ಲಿಯೇ ಆಯ್ಕೆ ಮಾಡಿಕೊಳ್ಳಲು ಅನೇಕ ಅಡ್ಡಿಗಳಿವೆ. ಮುಕ್ತದ್ವಾರ ಪದ್ಧತಿ ಇಲ್ಲ. ಗ್ರಂಥ ಸಂಗ್ರಹ ಹೇರಳವಿಲ್ಲ ; ಅವರವರ ಅಭಿರುಚಿಗೆ ತಕ್ಕ ಗ್ರಂಥಗಳಿಲ್ಲ. ಇದನ್ನೆಲ್ಲಾ ಗಮನಿಸಿದಾಗ ನಮ್ಮ ಗ್ರಂಥಾಲಯಗಳ ಧೋರಣೆ, ನಿಯಮಗಳು ರೂಪಿತವಾಗಿದ್ದು "He is a fool who lends books ; and he is a greater one who returns them" ಎಂಬ ಇಂಗ್ಲಿಷ್ ಗಾದೆಯೊಂದರ ಪ್ರಭಾವದ ಮೇಲಿರಬಹುದೇನೋ ಎನ್ನಿಸುತ್ತದೆ. ಅಥವಾ "ಪುಸ್ತಕಂ ವನಿತಾ ವಿತ್ತಂ ಪರಹಸ್ತ ಗತಂ ಗತಂ" ಎಂಬ ಸಂಸ್ಕೃತ ಗಾದೆಯ ಪ್ರಭಾವವೂ ಅವುಗಳ ಮೇಲೆ ಆಗಿರಬಹುದೇನೋ.

ಒ. ಕೆಲವೊಂದು ಪ್ರಕಾರದ ಗ್ರಂಥಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಉದಾಸೀನ ಭಾವವಿದ್ದುದು ಅವರ ಅಭಿರುಚಿಗೆ ದಿಕ್ಸೂಚಿಯಾಗಿದೆ. ಶೇಕಡ 30.13 ವಿದ್ಯಾರ್ಥಿಗಳಿಗೆ ಪತ್ತೇದಾರಿ ಕಾದಂಬರಿಗಳು, ಲೈಂಗಿಕ ವಿಷಯದ ಗ್ರಂಥಗಳು, ಜಾತೀಯತೆಯನ್ನು ಕುರಿತಾದವು, ಬೀಭತ್ಸ ಗ್ರಂಥಗಳು, ಹಿಡಿಸುವದೇ ಇಲ್ಲ.

ಓ. ನಮ್ಮ ಕಾಲೇಜು ವಿದ್ಯಾರ್ಥಿಗಳಿಗೆ ಆಮಿಷ ಆಕರ್ಷಣೆಗಳು ಜಾಸ್ತಿ. ಕೆಲವರಿಗಂತೂ ಹಣದ ಕೊರತೆ. ಇದ್ದ ಅಲ್ಪಸ್ವಲ್ಪ ಹಣದಲ್ಲಿ ಒಂದೆರಡು ಸಿನೇಮಾನೋ, ಒಂದು ಶರ್ಟೋ ಅಥವಾ ಒಂದು ಒಳ್ಳೆಯ ಪುಸ್ತಕವೋ ಎಂಬ ಸಂದಿಗ್ಧ ಪರಿಸ್ಥಿತಿ. ಇಂಥದರಲ್ಲಿಯೇ ಅವರು ಗ್ರಂಥಗಳನ್ನು ಕೊಂಡುಕೊಳ್ಳುತ್ತಾರೆ ಎಂಬ ಮಾತು ಎಲ್ಲರಿಗೂ ಹಿಗ್ಗಸ್ಸುಂಟು ಮಾಡುವಂಥದು. 1975 ರಲ್ಲಿ ಗ್ರಂಥ ಕೊಂಡ ವಿದ್ಯಾರ್ಥಿಗಳ ಸಂಖ್ಯೆ ಹೀಗಿದೆ :

1—5 ಗ್ರಂಥಗಳನ್ನು ಕೊಂಡವರು	ಶೇಕಡಾ	43.7
6—10 ,, ,,	,,	16.8
ಪುಸ್ತಕ ಕೊಂಡ ವಿದ್ಯಾರ್ಥಿಗಳು	,,	42.4
,, ,, ವಿದ್ಯಾರ್ಥಿನಿಯರು	,,	45.8

ನಾಲ್ಕೈದು ವರುಷಗಳ ಹಿಂದೆ ಕರ್ನಾಟಕ ವಿಶ್ವವಿದ್ಯಾಲಯದ ಕ್ಯಾಂಪಸ ಮೇಲೆಯೇ ಪೆಂಗ್ವಿನ್ ಪುಸ್ತಕಗಳ ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು. ಅದರ ಜೊತೆಗೆ ಪುಸ್ತಕ ಮಾರಾಟದ ಸೌಲಭ್ಯವನ್ನೂ ಕಲ್ಪಿಸಿ ಕೊಡಲಾಗಿತ್ತು. ಮೂರು ದಿವಸಗಳಲ್ಲಿ ವಿದ್ಯಾರ್ಥಿಗಳೇ ಮೂರು ಸಾವಿರ ರೂಪಾಯಿ ಬೆಲೆಬಾಳುವ ಗ್ರಂಥಗಳನ್ನು ಕೊಂಡು

ಕೊಂಡರು. ಇನ್ನುಳಿದವರು ಕೊಂಡ ಪುಸ್ತಕಗಳ ಬೆಲೆ ಸುಮಾರು ಒಂದು ಸಾವಿರ ರೂಪಾಯಿ.

೫. ಗ್ರಂಥಾಲಯಗಳೇ ಅಭ್ಯಾಸಕ್ಕೆ ಓದಲಿಕ್ಕೆ ಅನುಕೂಲ ಸ್ಥಳಗಳೆಂದು ವಿದ್ಯಾರ್ಥಿಗಳ ಒಟ್ಟಭಿಪ್ರಾಯ. ಇದಕ್ಕೆ ಬಲವಾದ ಕಾರಣಗಳಿವೆ. ಅನೇಕ ವಿದ್ಯಾರ್ಥಿಗಳು ಬಡಕುಟುಂಬದಲ್ಲಿ ಜನಿಸಿದವರಿದ್ದು ಮನೆಯಲ್ಲಿ ಸ್ವತಂತ್ರ ಕೊಠಡಿ ಇರುವುದಿಲ್ಲ. ಅಭ್ಯಾಸ ಮಾಡಲಿಕ್ಕೆ ಬೇಕಾದ ಪರಿಸರ ಇರುವುದಿಲ್ಲ.

೬. ಗ್ರಂಥಗಳ ಆಯ್ಕೆಯಲ್ಲಿ ಶೇಕಡಾ 49.63 ವಿದ್ಯಾರ್ಥಿಗಳಿಗೆ ಅವರ ಶಿಕ್ಷಕರಿಂದ ಹಾಗೂ ಗ್ರಂಥಪಾಲರಿಂದ ಮಾರ್ಗದರ್ಶನ ದೊರೆತಿದೆ.

೭. ಈ ವರದಿಯಲ್ಲಿ ಗ್ರಂಥಾಲಯಗಳಲ್ಲಿನ ಕಳುವಿನ ಬಗ್ಗೆ ಪ್ರಸ್ತಾಪವಿಲ್ಲ. ದೇಶದ ಇನ್ನುಳಿದ ಗ್ರಂಥಾಲಯಗಳಲ್ಲಿ ಹಾಗೂ ಪರದೇಶದಲ್ಲಿನ ಗ್ರಂಥಾಲಯಗಳಲ್ಲಿ ನಡೆಯುವ ಗ್ರಂಥಚೌರ್ಯದ ಪ್ರಮಾಣ ಗಮನಿಸಿದರೆ, ನಮ್ಮ ವಿದ್ಯಾರ್ಥಿಗಳು ಹೆಚ್ಚು ಜವಾಬ್ದಾರಿಯಿಂದ, ಶಿಸ್ತಿನಿಂದ ಗ್ರಂಥಾಲಯಗಳ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಧಾರಾಳವಾಗಿ ಹೇಳಬಹುದು.

ಮಕ್ಕಳ ಗ್ರಂಥಗಳು

ನಮ್ಮ ನಾಡಿನಲ್ಲಿ ಸಾರ್ವಜನಿಕ ಗ್ರಂಥಾಲಯ ಚಳುವಳಿ ಇನ್ನೂ ಶೈಶವಾವಸ್ಥೆಯಲ್ಲಿರುವುದರಿಂದ ಇದ್ದ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಗ್ರಂಥಾಲಯಗಳೇ—ಡಾ ರಾಧಾಕೃಷ್ಣನ್, ಡಾ. ಸಿ. ಡಿ. ದೇಶಮುಖರಂಥ ದೂರದೃಷ್ಟಿಯುಳ್ಳ ನೇತಾರರ ಉದಾರ ಧೋರಣೆಯ ಫಲವಾಗಿ–ಊರ್ಜಿತ ಪರಿಸ್ಥಿತಿಯಲ್ಲಿದ್ದುದರಿಂದ ಅನೇಕ ಸಲ ಜನಸಾಮಾನ್ಯರ ಬೇಡಿಕೆಗಳನ್ನು ಅವು ಪೂರೈಸಬೇಕಾಗಿ ಬರುತ್ತದೆ. ಹಲವಾರು ವಿಶ್ವವಿದ್ಯಾಲಯಗಳು ಒಳ್ಳೆಮಕ್ಕಳ ಗ್ರಂಥಾಲಯಗಳನ್ನು ಸ್ಥಾಪನೆ ಮಾಡಿ ಇನ್ನುಳಿದವರಿಗೆ ದಾರಿತೋರಿಸಿ ಕೊಟ್ಟಿವೆ. ಕರ್ನಾಟಕ ವಿಶ್ವವಿದ್ಯಾಲಯದ ಕ್ಯಾಂಪಸ್ ಮೇಲೆ ಇಂಥ ಗ್ರಂಥಾಲಯದ ಸ್ಥಾಪನೆಗಾಗಿ ಬೇಡಿಕೆ ಮೊದಲಿನಿಂದಲೂ ಇದೆ. ಇನ್ನೇನು ಒಂದು ವರುಷದಲ್ಲಿ ಅಲ್ಲಿ ಮಕ್ಕಳ ಗ್ರಂಥಾಲಯ ಸ್ಥಾಪಿಸುವ ಯೋಜನೆ ಕಾರ್ಯಗತವಾಗಬಹುದೆಂದು ಆಶಿಸಲಾಗಿದೆ.

ನಾವೆಲ್ಲ ಚಿಕ್ಕವರಿದ್ದಾಗ ಮಂಗಳೂರಿನ ಕೊಡಿಯಾಲ್ ಬೈಲಿನಿಂದ ಬಾಲಸಾಹಿತ್ಯ ಮಂಡಲಿಯವರು ಪ್ರಕಟಿಸುತ್ತಿದ್ದ ಪುಟ್ಟ ಪುಟ್ಟ ಪುಸ್ತಕಗಳನ್ನೋದಿ ಕಣ್ಮನಗಳನ್ನು ಅರಳಿಸಿಕೊಂಡು ತೃಪ್ತಿ ಹೊಂದುತ್ತಿದ್ದೆವು. ಪಂಜೆ ಮಂಗೇಶರಾಯರು, ಸಾಲಿ ರಾಮಚಂದ್ರರಾಯರು, ಜಿ. ಪಿ. ರಾಜರತ್ನಂ ಮುಂತಾದ ಮಹನೀಯರು ಮಕ್ಕಳ ಅಭೀಪ್ಸೆಯನ್ನು ಸಂತುಷ್ಟಿಗೊಳಿಸುತ್ತಿದ್ದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಕ್ಕಳ ಬೇಡಿಕೆಗಳನ್ನು ಮುಖ್ಯವಾಗಿ ಇಂಡಿಯಾ ಬುಕ್ ಹೌಸ್ ಹಾಗೂ ರಾಷ್ಟ್ರೋತ್ಥಾನದವರ ಪುಸ್ತಕಗಳ ಮೂಲಕ "ಜ್ಞಾನಗಂಗೋತ್ರಿಯ" ಹಾಗೂ "ವಿಜ್ಞಾನ ಪ್ರಪಂಚ"ದ ಸಂಪುಟ

ಗಳ ಮೂಲಕ ಪೂರೈಸುತ್ತಿದ್ದೇವೆ. ಮಕ್ಕಳಿಗಾಗಿ ಪುಸ್ತಕಗಳನ್ನು ಸಂಗ್ರಹಿಸಲು ನಾವು ಯಾವುದೇ ವಿಶೇಷ ಪ್ರಯತ್ನ ಇನ್ನೂವರೆಗೆ ಮಾಡಿಲ್ಲ.

ಪರದೇಶಗಳಲ್ಲಿ ಮಕ್ಕಳಿಗೆ ಎಂತೆಂಥ ಪುಸ್ತಕಗಳು ಲಭ್ಯವಿರುತ್ತವೆಂಬುದನ್ನು ಪ್ರತ್ಯಕ್ಷ ನೋಡಿ ಅನುಭವಿಸಿ ಬಂದ ನನಗೆ ನಮ್ಮಲ್ಲಿ ಒಟ್ಟಾರೆ ಈಗ ಮಕ್ಕಳ ಪುಸ್ತಕಗಳ ಅಭಾವವಿದೆ ಎಂದೆನಿಸುತ್ತದೆ. Childerns worldದ ಮಟ್ಟದ ಒಂದು ನಿಯತ ಕಾಲಿಕೆಯೂ ಕನ್ನಡದಲ್ಲಿ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಮಕ್ಕಳಿಗಾಗಿ ವಿಜ್ಞಾನ ಗ್ರಂಥಗಳು ಹೇರಳವಾಗಿ ಬೇಕಾಗಿವೆ. ಇಂಡಿಯಾ ಬುಕ್ ಹೌಸದವರ ಸಾಹಸದ ಫಲವಾಗಿ ಕನ್ನಡದಲ್ಲಿ "ವಿಜ್ಞಾನ ಪರಿಚಯು" ಎಲ್ಲರಿಗೂ ವಿಜ್ಞಾನ (Understanding Science) ದ ರೂಪಾಂತರ 144 ಸಂಚಿಕೆಗಳಲ್ಲಿ ಆಕರ್ಷಕವಾದ ರೀತಿಯಲ್ಲಿ ಬರುವುದರಲ್ಲಿತ್ತು. ಈ ಉತ್ಕೃಷ್ಟ ಹೊತ್ತಿಗೆಯ ಎರಡೇ ಎರಡು ಸಂಚಿಕೆಗಳು ಹೊರಬರುವಷ್ಟರಲ್ಲಿ ಆ ಯೋಜನೆ ರಾಜ್ಯದ ರಾಜಕೀಯಕ್ಕೆ ಆಹುತಿಯಾದುದು ನಮ್ಮ ಮಕ್ಕಳ ದುರದೃಷ್ಟ. ಈ ಹಿಂದೆ ರಾಷ್ಟ್ರೋತ್ಥಾನದವರ ಸಾಹಸವೂ ಇದೇ ರೀತಿ ಮಣ್ಣುಗೂಡಿತ್ತೆಂಬುದನ್ನು ಇಲ್ಲಿ ವಿಷಾದದಿಂದ ನೆನೆಯಬೇಕಾಗುತ್ತದೆ.

"ಮೂರು ವರುಷದ ಬುದ್ಧಿ ನೂರು ವರುಷದವರೆಗೆ" ಎಂಬ ಗಾದೆಯ ಮಾತಿನಲ್ಲಿ ಅಡಕವಾದ ನಿರ್ದೇಶನದಂತೆ ಮಕ್ಕಳು ಎಳೆಯವರಿದ್ದಾಗಲೇ ಒಳ್ಳೇ ಗ್ರಂಥ ಪಠನದ ಅಭಿರುಚಿಯನ್ನು ಅವರು ಕರಗತ ಮಾಡಿಕೊಂಡರೆ ಒಳ್ಳೆಯದು. ಮಕ್ಕಳು ಪಠ್ಯೇತರ ಪುಸ್ತಕಗಳನ್ನೋದಿ ತಮ್ಮ ಅಭ್ಯಾಸಕ್ಕೆ ತೊಂದರೆ ತಂದುಕೊಳ್ಳುವರೆಂಬ ತಪ್ಪು ಕಲ್ಪನೆಯನ್ನು ಈ ಪ್ರಬಂಧದ ಪ್ರಾರಂಭದಲ್ಲಿ ಉಲ್ಲೇಖಿಸಿದ ದಿಲ್ಲಿಯಲ್ಲಿ ನಡೆದ ಗೋಷ್ಠಿಯ ಶಿಫಾರಸುಗಳು ತಳ್ಳಿ ಹಾಕುತ್ತವೆ. ಈ ಗೋಷ್ಠಿಗೆ ಪೂರ್ವ ಪೀಠಿಕೆಯಾಗಿ ಭಾರತ ಸರಕಾರದವರು ದಿಲ್ಲಿಯಲ್ಲಿನ ಬೇರೆ ಬೇರೆ ವರ್ಗಗಳ ಜನರಿರುವ ಪ್ರದೇಶಗಳಲ್ಲಿನ ಹೈಸ್ಕೂಲುಗಳನ್ನೇ ಆರಿಸಿಕೊಂಡರು. ಅಲ್ಲಿನ ವಿದ್ಯಾರ್ಥಿಗಳಿಗೆ ಪಠ್ಯೇತರ ಪುಸ್ತಕಗಳನ್ನು ಆರಿಸಿ ತಂದು ಅವರಿಗೆ ಓದಲು ಉದಾರವಾಗಿ ಎರವಲು ನೀಡಿ ಪ್ರೋತ್ಸಾಹ ಕೊಟ್ಟರು. ನಂತರ ಹೀಗೆ ಪಠ್ಯ ಪುಸ್ತಕಗಳ ಜೊತೆಗೆ ಪಠ್ಯೇತರ ಪುಸ್ತಕಗಳನ್ನು ಓದಿದ ವಿದ್ಯಾರ್ಥಿಗಳು ವಾರ್ಷಿಕಪರೀಕ್ಷೆಯಲ್ಲಿ ಸಲ್ಲಿಸಿದ ಉತ್ತರ ಪತ್ರಿಕೆಗಳನ್ನು ವಿಶೇಷವಾಗಿ ಅಭ್ಯಸಿಸಲಾಯಿತು. ಈ ಅಭ್ಯಾಸದ ಫಲವಾಗಿ ಕೆಳಗಿನ ಅಂಶಗಳನ್ನು ಗುರುತಿಸಲಾಯಿತು.

ಅ ಈ ಲಾಭ ಪಡೆದ ಮಕ್ಕಳ ಶಬ್ದ ಸಂಪತ್ತು, ಇದರ ಪ್ರಯೋಜನ ಪಡೆಯದ ಇತರ ವಿದ್ಯಾರ್ಥಿಗಳಿಗಿಂತ, ಹೆಚ್ಚು ಶ್ರೀಮಂತವಾಗಿತ್ತು.

ಆ ಅವರ ವಾಕ್ಯ ಸಂಯೋಜನೆ ಹಾಗೂ ಅಭಿವ್ಯಕ್ತಿಯ ಸಾಮರ್ಥ್ಯ ಹೆಚ್ಚು ವೈವಿಧ್ಯಮಯ ಹಾಗೂ ಶಕ್ತಿಯುತವಾಗಿದ್ದವು.

ಇ ಅವರ ಸಾಮಾನ್ಯ ಜ್ಞಾನ ಹೆಚ್ಚು ವಿಶಾಲ, ವಿಪುಲವಾಗಿತ್ತು.

ಹೀಗಾಗಿ ಕೇವಲ ಪಠ್ಯಪುಸ್ತಕಗಳನ್ನೇ ಅವಲಂಬಿಸಿ ತರಗತಿಗಳಲ್ಲಿ ರ್‍ಯಾಂಕುಗಿಟ್ಟಿಸಿದ

ವಿದ್ಯಾರ್ಥಿಗಳು ಈಗ ಹಿಂದಾಗಿದ್ದಾರೆ. ಇದೇ ಸಂದರ್ಭದಲ್ಲಿ ನಮ್ಮ ರಾಜ್ಯ ಸರಕಾರದವರು ಹೊರಡಿಸಿದ ಶಾಲಾ ಪಠ್ಯ ಪುಸ್ತಕಗಳನ್ನು ಕುರಿತು ಒಂದೆರಡು ಮಾತು ಹೇಳಲೇಬೇಕು. ಅವುಗಳಲ್ಲಿನ ವಿಷಯ ವ್ಯಾಪ್ತಿ ಹಾಗೂ ನಿರೂಪಣೆ ಅಸಮರ್ಪಕ ಹಾಗೂ ಅಸಂಬದ್ಧ ಇವೆ. ಅಂದ ಚಂದ ಅವುಗಳಿಂದ ದೂರವಿರಬೇಕೆಂಬ ಭಾವನೆಯನ್ನು ನಮ್ಮಲ್ಲಿ ಮೂಡಿಸುತ್ತವೆ. 4–5 ವರುಷಗಳ ಹಿಂದೆ ಮುಂಬೈಗೆ ಹೋದಾಗ ಮಹಾರಾಷ್ಟ್ರ ಸರಕಾರದವರು ತಮ್ಮ ರಾಜ್ಯದಲ್ಲಿನ ಕನ್ನಡ ವಿದ್ಯಾರ್ಥಿಗಳಿಗಾಗಿ ಪ್ರಕಟಿಸಿದ ಕೆಲವೊಂದು ಕನ್ನಡ ಪಠ್ಯ ಪುಸ್ತಕಗಳನ್ನು ಅವಲೋಕಿಸುವ ಸುಪ್ರಸಂಗ ನನಗೆ ದೊರೆತಿತ್ತು. ಅವುಗಳನ್ನು ಒಳ್ಳೇ ಆಸ್ಥೆಯಿಂದ ಕಕ್ಕುಲತೆಯಿಂದ ಅಲ್ಲಿಯ ಸಂಪಾದಕರು ಮುದ್ರಕರು ತಯಾರಿಸಿದ್ದನ್ನು ನೋಡಿ ಮನಸ್ಸಿಗೆ ಆನಂದವಾಯಿತು. ಕರ್ನಾಟಕ ರಾಜ್ಯ ಸರಕಾರ ತನ್ನ ಮಕ್ಕಳ ಬಗ್ಗೆ ಇಷ್ಟೇಕೆ ಅನಾಸ್ಥೆ ಪ್ರದರ್ಶಿಸುತ್ತಿದೆಯೋ ಇದೊಂದು ಅರ್ಥವಾಗದ ವಿಷಯ. ಅವರು ಪ್ರಚಾರದಲ್ಲಿ ತಂದ ಪಠ್ಯ ಪುಸ್ತಕಗಳನ್ನೋದಿ ಮಕ್ಕಳಿಗೆ ಜ್ಞಾನ ಸಂಪಾದನೆಯೇ ಕಷ್ಟವಾದಾಗ ಅವುಗಳಿಂದ ಮಕ್ಕಳು ಸ್ಫೂರ್ತಿಪಡೆದು ಪಠ್ಯೇತರ ಪುಸ್ತಕಗಳಿಗಾಗಿ ತಡಕಾಡುವ ಮಾತು ದೂರ ಉಳಿದ ಹಾಗೇ ಸರಿ.

ಮುಂದಿನ ವರ್ಷ, ಅಂದರ 1979ನ್ನು ಸಂಯುಕ್ತ ರಾಷ್ಟ್ರ ಸಂಘ ಈ ಮೊದಲು ನಿಯೋಜಿಸಿದಂತೆ ಪ್ರಪಂಚದಾದ್ಯಂತ "ಮಕ್ಕಳ ವರುಷ" ಎಂದು ಆಚರಿಸಲಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ಸರಕಾರ, ಕನ್ನಡ ನಾಡಿನ ಲೇಖಕರು, ಪ್ರಕಾಶಕರು, ಜನತೆ, ಮಕ್ಕಳಿಗೆ ತಮ್ಮ ಕಾಣಿಕೆಯನ್ನು ಸುಂದರವಾದ ಪಠ್ಯ ಹಾಗೂ ಪಠ್ಯೇತರ ಪುಸ್ತಕಗಳ ಸಮೃದ್ಧಿಯ ಮೂಲಕ, ಇಂಥ ಗ್ರಂಥಗಳನ್ನು ಅವರವರ ಮನೆಬಾಗಿಲಿಗೆ ಒಯ್ದು ಮುಟ್ಟಿಸುವಂಥ ಗ್ರಂಥಾಲಯ ಸೇವೆಯ ಮೂಲಕ ಸಲ್ಲಿಸುವಂತಾಗುವಲ್ಲಿ ಶ್ರಮಿಸಲೇಬೇಕು.

ಈ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಸಾಮಾನ್ಯ ವಾಚಕರ ಬೇಡಿಕೆಗಳು:

ನಮ್ಮ ಗ್ರಂಥಾಲಯದಲ್ಲಿ ಇತ್ತೀಚೆಗೆ ಸಾಮಾನ್ಯ ಗ್ರಾಹಕರಿಂದ ಬಂದ ಕೆಲವೇ ಕೆಲವು ಪ್ರಮುಖ ಬೇಡಿಕೆಗಳಲ್ಲಿ ಅಡಕವಾದ ವಿಷಯಗಳು ಹೀಗಿವೆ:

ಅ. ಕುಟುಂಬ ಜೀವನ ಅದರಲ್ಲೂ ಏಕತ್ರ ಕುಟುಂಬ

ಆ ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀಮತಿ ಆಶಾಪೂರ್ಣದೇವಿ ಅವರ ಕಾದಂಬರಿಗಳು : (ಕನ್ನಡ ರೂಪಾಂತರ)

ಇ ಆಮ್ನೆಸ್ಟಿ ಇಂಟರನ್ಯಾಶನಲ್

ಈ ಸೌರ ಶಕ್ತಿ

ಉ ಪ್ಯಾಲೆಸ್ಟೈನಿನ ಸಮಸ್ಯೆ

ಊ ಮದುವೆಯಲ್ಲಿ ಉಡುಗೊರೆ ಕೊಡಬಹುದಾದಂಥ ಸುಲಭ ಬೆಲೆಯ, ಅಂದವಾಗಿ ಹೊರಡಿಸಲ್ಪಟ್ಟ ಕನ್ನಡ ಗ್ರಂಥಗಳು. (ಇಲ್ಲಿ ನಾವು ಗ್ರಾಹಕರಿಗೆ ಸೂಚಿ

ಸಿದ್ದು "ಒಲವೇ ನಮ್ಮ ಬದುಕು" "ಗದುಗಿನ ಭಾರತ" ಭೂಸನೂರಮಠರ "ವಚನ ಸಂಗ್ರಹ" ಶ್ರೀಮತಿ ಮಾಳವಾಡರ "ಗೃಹಾಲಂಕಾರ" ಇತ್ಯಾದಿ-ಇತ್ಯಾದಿ)

ಎ ಸೈಬರನೇಟಿಕ್ಸ್

ಏ ಶಿಕ್ಷಕೇತರ ಸಿಬ್ಬಂದಿಯವರು ಸಾಮಾನ್ಯವಾಗಿ ಅವರವರ ವಯೋಮಾನ ಗಳಿಗನುಸಾರವಾಗಿ ಬೇಡುವದು : ಕಾದಂಬರಿ (ಭೈರಪ್ಪ, ತ್ರಿವೇಣಿ, ಬೀಚಿ, ಅನಕೃ) ನಾಟಕ-ಕತೆ, ಧರ್ಮ, ತತ್ವಜ್ಞಾನ, ಪ್ರವಾಸ ಸಾಹಿತ್ಯ, ಕಸೂತಿ ಕಲೆ, ಇತ್ಯಾದಿಗಳನ್ನು.

ಈ ಸಂದರ್ಭದಲ್ಲಿಯೇ ನಾನು ಮೈಸೂರು ವಿಶ್ವವಿದ್ಯಾಲಯದಲ್ಲಿ ಗ್ರಂಥಪಾಲನಾಗಿ ಕೆಲಸಮಾಡುತ್ತಿರುವಾಗ ಬಂದ ಅನುಭವವನ್ನು ಸಾದರಪಡಿಸುವದು ಸಂದರ್ಭೋಚಿತ ವೆನಿಸುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಹೊಸ ಗ್ರಂಥಾಲಯಕಟ್ಟಡ ನಿರ್ಮಾಣ ಮಾನಸ ಗಂಗೋತ್ರಿಯಲ್ಲಿ ಕೊನೆಯ ಘಟ್ಟ ಮುಟ್ಟಿತ್ತು. ಅಲ್ಲಿಯವರೆಗೆ ಮಹಾರಾಜಾ ಕಾಲೇಜಿನ ಆವರಣದಲ್ಲಿದ್ದ ಆ ಗ್ರಂಥಾಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸ ಬೇಕಿತ್ತು. ಈ ಸ್ಥಳಾಂತರದಿಂದ ತಮಗೆ ಬಹಳೇ ತೊಂದರೆ, ಅನಾನುಕೂಲತೆ ಆಗುವದೆಂದು ಕೆಲವೊಂದು ಊರಿನ ಹಿರಿಯರು, ಸೆನೇಟ ಸದಸ್ಯರು ನನಗೆ ದೂರಿತ್ತರು. ವಿಶ್ವವಿದ್ಯಾನಿಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳು ಮಾನಸ ಗಂಗೋತ್ರಿಯಲ್ಲಿಯೇ ಕಾರ್ಯಗೈಯುತ್ತಿದ್ದುದರಿಂದ ಹಾಗೂ ಆ ಗ್ರಂಥಾಲಯ ಅಲ್ಲಿನಶಿಕ್ಷಕ ಹಾಗೂ ವಿದ್ಯಾರ್ಥಿ ವೃಂದಕ್ಕೆ ಅತಿ ಅವಶ್ಯವಿದ್ದುದರಿಂದ, ಅದಕ್ಕಾಗಿಯೇ ಹೊಸಕಟ್ಟಡ ತಯಾರಾದುದರಿಂದ ಸ್ಥಳಾಂತರ ಅನಿವಾರ್ಯವೆಂದು ಸಮಾಧಾನ ಹೇಳಿದೆ. ನಂತರ ಅವರಿಗೆ ಬೇಕಾಗುವ ಗ್ರಂಥಗಳ ವಿಷಯ ವ್ಯಾಪ್ತಿಯನ್ನು ನಿವೇದಿಸಲು ಕೇಳಿಕೊಂಡೆ. ಮರುದಿನ ಅವರು ತಂದು ಕೊಟ್ಟ ಪಟ್ಟಿಯಲ್ಲಿ ಈ ವಿಷಯಗಳು ಅಡಕವಾಗಿದ್ದವು.

ಅ ಪಠ್ಯ ಪುಸ್ತಕಗಳು (ತಮ್ಮ ಮಕ್ಕಳಿಗಾಗಿ)
ಆ ಕಾದಂಬರಿ, ಕತೆ, ನಾಟಕ, ಇತ್ಯಾದಿ
ಇ ಧಾರ್ಮಿಕ ಗ್ರಂಥಗಳು
ಈ ತತ್ವ ಬೋಧಕ ಗ್ರಂಥಗಳು
ಉ ಜೀವನ ಚರಿತ್ರೆ, ಇತಿಹಾಸ
ಊ ಪ್ರವಾಸ ಸಾಹಿತ್ಯ, ಇತ್ಯಾದಿ
ಎ ದಿನಪತ್ರಿಕೆಗಳು
ಏ ಜನಪ್ರಿಯ ಮ್ಯಾಗಝಿನಗಳು.

ಈ ವಿಷಯಗಳನ್ನೊಳಗೊಂಡ 10 ಸಾವಿರ ಗ್ರಂಥಗಳನ್ನು ಅಲ್ಲಿಯೇ ಬಿಟ್ಟು ಅವರಿಗೆ ಓದಲು, ಎರವಲು ಒಯ್ಯಲು ಅನುಕೂಲ ಕಲ್ಪಿಸಿಕೊಟ್ಟು ವಿಶ್ವವಿದ್ಯಾನಿಲಯ ಗ್ರಂಥಾಲಯವನ್ನು ಸದ್ದು ಗದ್ದಲವಿಲ್ಲದೆ ಸ್ಥಳಾಂತರಿಸಿದೆವು.

ವಾಚನಾಭಿರುಚಿಯನ್ನು ಹೆಚ್ಚಿಸುವ ಬಗೆಗಳು

ಇಲ್ಲಿಯವರೆಗೆ ಸಾದರ ಪಡಿಸಿದ ಸಂಗತಿಗಳಿಂದ ನಮ್ಮ ಜನ ಗ್ರಂಥಗಳ ಕಡೆಗೆ, ಅವುಗಳ ಪಠನದ ಕಡೆಗೆ ಗಮನಕೊಟ್ಟಿದ್ದಾರೆಂದು ತಿಳಿದುಬರುತ್ತದೆ. ವಿವಿಧ ವಿಷಯ ಗಳಲ್ಲಿನ ಪುಸ್ತಕಗಳ ಅಭಾವ, ಸಾಕಷ್ಟು ಗ್ರಂಥಾಲಯಗಳಿಲ್ಲದುದು, ಪುಸ್ತಕದ ಅಂಗಡಿ ಯಲ್ಲಿ ಗಗನಕ್ಕೇರುತ್ತಿರುವ ಗ್ರಂಥಗಳ ಬೆಲೆ–ಇವೆಲ್ಲ ಅಡೆತಡೆಗಳಿದ್ದರೂ ಜನ ಪುಸ್ತಕ ಓದಲು ಹವಣಿಸುತ್ತಿರುವದು ಸಂತೋಷಪ್ರದ. ಕನ್ನಡಿಗರ ಒಟ್ಟು ಸಂಖ್ಯೆ ಸುಮಾರು 3 ಕೋಟಿ ಎಂದು ಪರಿಗಣಿಸುವಾ.

ಇವರಲ್ಲಿ ಒಟ್ಟು ಸಾಕ್ಷರಿಗಳ ಸಂಖ್ಯೆ	ಶೇಕಡಾ	31.54
ಪುರುಷರು	,,	41.87
ಮಹಿಳೆಯರು	,,	20.76
ಪಟ್ಟಣವಾಸಿಗಳು	,,	51.49
ಹಳ್ಳಿಗರು	,,	25.12

ಈ ಮೂರು ಕೋಟಿ ಕನ್ನಡ ಪ್ರಜೆಗಳಲ್ಲಿ 2.25 ಕೋಟಿಯಷ್ಟು ಜನ ಹಳ್ಳಿಗರಾಗಿ ದ್ದಾರೆ. ಕಳೆದ ತಿಂಗಳು ನಮ್ಮ ಜಿಲ್ಲೆಯ ಬ್ಯಾಡಗಿ ಪಟ್ಟಣಕ್ಕೆ, ಅಲ್ಲಿನ "ಗೆಳೆಯರ ಬಳಗ" ದವರು ಅದೇ ಸ್ಥಾಪಿಸಿದ ವಾಚನಾಲಯ ಮಂದಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಲು ಹೋಗಿದ್ದೆ. ಬ್ಯಾಡಗಿ ತಾಲೂಕು ಕೇಂದ್ರ, ಜನಸಂಖ್ಯೆ 14 ಸಾವಿರ ಮಿಕ್ಕಿದೆ. ಶ್ರೀಮಂತ, ವ್ಯಾಪಾರಸ್ಥರ ಊರು. ಆದರೆ ಇಲ್ಲಿಯವರೆಗೆ ಅಲ್ಲಿ ಒಂದೂ ಸಾರ್ವಜನಿಕ ಗ್ರಂಥಾಲಯ ಇರಲಿಲ್ಲ. ತಾಲೂಕಾ ಪಟ್ಟಣದ ಗತಿಯೇ ಹೀಗಿರು ವಾಗ ಹಳ್ಳಿಗಳ ಪಾಡೇನು ? ಅಲ್ಲಿನ ಶೇಕಡಾ 25.12 ಸಾಕ್ಷರಿಗಳ ವಾಚನಾಭಿರುಚಿ ಬೆಳೆಸುವ ಪ್ರಮೇಯವೆಲ್ಲಿ ಬಂತು ?

ಹೀಗಾಗಿ ವಾಚನಾಭಿರುಚಿ ಬೆಳೆಸುವ ಸಾಧನಗಳಲ್ಲಿ ಮೊಟ್ಟ ಮೊದಲನೆಯ ಸಾಧನ ವೆಂದರೆ :

ಅ ನಮ್ಮ ರಾಜ್ಯ ಸರಕಾರ ಗ್ರಂಥಾಲಯಗಳ ತಳಿರು ತೋರಣವನ್ನೇ ರಾಜ್ಯ ದಾದ್ಯಂತ ತೂಗುವ ಏರ್ಪಾಡು ತಕ್ಷಣ ಮಾಡಬೇಕು. ಇದಕ್ಕೆ ಬೇಕಾಗುವ ಹಣಕ್ಕೆ, ಜನಕ್ಕೆ, ಗ್ರಂಥಗಳಿಗೆ, ಕೊರತೆಯೇ ಇಲ್ಲ. ನಮ್ಮ ಸರಕಾರ ಜನರಿಂದ ಗ್ರಂಥಾಲಯ ತೆರಿಗೆ ಯನ್ನು 1965 ರಿಂದ ತೆಗೆದುಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿನ ಮೂರು ವಿಶ್ವವಿದ್ಯಾ ನಿಲಯಗಳು, ಹಾಗೂ ಸರಕಾರದ ಎರಡು ಶಾಖೆಗಳು ಸಾಕಷ್ಟು ಯುವಕರಿಗೆ ಗ್ರಂಥಾಲಯ ಶಾಸ್ತ್ರದಲ್ಲಿ ತರಬೇತಿ ನೀಡಿವೆ. ಮೈಸೂರು, ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಕಟನಾ ವಿಭಾಗದಲ್ಲಿ, ಪುಸ್ತಕ ವ್ಯಾಪಾರಿಗಳ ಗುದಾಮಿನಲ್ಲಿ ಲಕ್ಷಗಟ್ಟಲೆ ಬೆಲೆ ಬಾಳುವ ಕನ್ನಡ ಗ್ರಂಥಗಳಿವೆ. ಅದರಂತೆಯೇ ರಾಜ್ಯದಾದ್ಯಂತ ಹೆಚ್ಚಿನ ಪುಸ್ತಕದಂಗಡಿಗಳ ತೋರಣ ತೂಗಬೇಕು. ರಶಿಯಾದಲ್ಲಿ ಸಿನೇಮಾ ಥಿಯೇಟರಿನಲ್ಲಿ ಕೂಡ ಪುಸ್ತಕಗಳ ಅಂಗಡಿಗಳು ಕಂಗೊಳಿಸುತ್ತವೆ.

ನಮ್ಮ ರಾಜ್ಯದಲ್ಲಿ ಸುಮಾರು 30 ಸಾವಿರ ಹಳ್ಳಿಗಳಿವೆ, ಕರ್ನಾಟಕ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಪ್ರಚಾರೋಪನ್ಯಾಸ ಮಾಲೆಯ ಎಲ್ಲ ಪ್ರಕಟನೆಗಳು ಈ ಎಲ್ಲ ಹಳ್ಳಿಗಳಿಗೆ ಹೋಗಬೇಕಾದಂಥವು. ಈ ಹಳ್ಳಿಗಳಿಗೆ, ಕರ್ನಾಟಕ ವಿಶ್ವವಿದ್ಯಾಲಯ ನಡೆಸಿಕೊಂಡು ಬರುತ್ತಿರುವಂಥ ಸಂಚಾರಿ ವಾಚನಾಲಯದ ಮಾದರಿ ಯೋಜನೆಯೊಂದನ್ನು ರಾಜ್ಯ ಸರಕಾರ ಹಾಕಿಕೊಂಡರೆ ಎರಡೂ ವಿಶ್ವವಿದ್ಯಾಲಯಗಳು ತಮ್ಮ ಪ್ರಚಾರೋಪನ್ಯಾಸ ಮಾಲೆಯ ಪ್ರಕಟನೆಗಳನ್ನು ಕನಿಷ್ಟ 30 ಸಾವಿರ ಪ್ರತಿಗಳಲ್ಲಿ ಹೊರಡಿಸಬೇಕಾಗಿ ಬರಬಹುದು. ಇದರಿಂದ ಹೆಚ್ಚಿನ ಜ್ಞಾನ ಪ್ರಸಾರವಾಗುವದಲ್ಲದೇ, ವಿಶ್ವವಿದ್ಯಾಲಯಗಳಿಗೆ ಇನ್ನೂ ಅಧಿಕ ಸಂಖ್ಯೆಯಲ್ಲಿ ಜನೋಪಯೋಗಿ ಪುಸ್ತಕಗಳನ್ನು ಹೊರ ತರಲು ಪ್ರೋತ್ಸಾಹ ದೊರಕಿದಂತಾಗುವದು.

೮ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಕನ್ನಡ ಗ್ರಂಥಗಳಿಗೆ ಅಗ್ರತೆ ಕೊಡಬೇಕು. ಇಂಗ್ಲೀಷ ಗ್ರಂಥಗಳನ್ನು ಅದರಲ್ಲೂ ಬೆಲೆಯುಳ್ಳ, ಕೇವಲ ಕ್ವಚಿತ್ತಾಗಿ ಉಪಯೋಗಿಸಲ್ಪಡುವ ಸಂದರ್ಭ ಗ್ರಂಥಗಳನ್ನು ಅವು ಅತ್ಯವಶ್ಯವೆಂದು, ಅನಿವಾರ್ಯವೆಂದು ಕಂಡಾಗ ಮಾತ್ರ ಕೊಂಡುಕೊಳ್ಳಬೇಕು.

೯ ಮಕ್ಕಳಿಗಾಗಿ, ಹೆಣ್ಣು ಮಕ್ಕಳಿಗಾಗಿ, ನವಸಾಕ್ಷರರಿಗಾಗಿ, ಹಳ್ಳಿಗರಿಗಾಗಿ, ಕಾರ್ಮಿಕರಿಗಾಗಿ ಅಸ್ಪತ್ರೆಯಲ್ಲಿ ಶುಶ್ರೂಷೆ ಹೊಂದುತ್ತಿರುವ ರೋಗಿಗಳಿಗಾಗಿ, ಸೆರೆಮನೆಯಲ್ಲಿನ ಕೈದಿಗಳಿಗಾಗಿ, ವ್ಯಾಪಾರಸ್ಥರಿಗಾಗಿ ವಿಶೇಷ ಗ್ರಂಥಾಲಯ ಸೇವೆಗಳನ್ನು ಆದ್ಯತೆಯಿಂದ ಪ್ರಾರಂಭಿಸುವದರಿಂದ ಈ ಎಲ್ಲ ವರ್ಗಗಳ ಸಾಕ್ಷರಿಗಳ ಬಹಳ ದಿವಸಗಳ ಕೊರತೆಯೊಂದನ್ನು ನಿವಾರಿಸಿದಂತಾಗುವದು. ಅನೇಕರಿಗೆ ಹೊಸ ಜೀವನ ದೃಷ್ಟಿಯನ್ನು ದೊರಕಿಸಿಕೊಟ್ಟಂತಾಗಬಹುದು. ಮಕ್ಕಳ ಗ್ರಂಥಾಲಯಗಳಲ್ಲಿ ಕಥೆ ಹೇಳುವ, ಫಿಲ್ಮ ತೋರಿಸುವ, ಪುಸ್ತಕಗಳನ್ನು ಓದಿಸುವ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಅವರನ್ನು ಆಕರ್ಷಿಸಬೇಕು. ಇನ್ನುಳಿದ ವರ್ಗಗಳವರಿಗೆ ಸಹ ಅವರವರ ಅಭಿರುಚಿಗಳಿಗೆ ತಕ್ಕಂತೆ ಗ್ರಂಥಗಳನ್ನು ಆಯ್ಕೆ ಮಾಡಿ **ಬುಕ್ ಮೊಬಾಯಿಲ್** ಮೂಲಕ ಅವರಿದ್ದಲ್ಲಿಗೇ ಕಳ್ಳಿಸುವ ವ್ಯವಸ್ಥೆ ಮಾಡಿದರೆ ಅವರು **ತಮ್ಮ ಬ್ಯಾಂಕ ಪಾಸಬುಕ್ ಜೊತೆಗೆ ಇತರೇ ಬುಕಗಳನ್ನೂ** ಓದಬಹುದು. ಜನತೆ ಜ್ಞಾನಾಮೃತಪಾನಕ್ಕೆ ಗ್ರಂಥಾಲಯ ಜ್ಞಾನಗಂಗೆಗೆ ಹೋಗದಿದ್ದಾಗ ಕರುಣಾಮಯಿ ತಾಯಿ ಗ್ರಂಥಾಲಯ ಗಂಗಾವಾಹಿನಿಯೋ ಜನತೆಯೆಡೆಗೆ ಹರಿಯುವಂತಾಗಲಿ. (ಕೇವಲ 12 ಮಕ್ಕಳಿದ್ದ ಹಳ್ಳಿಗೆ ಒಂದು ಮೋಟಾರು ತುಂಬ ಪುಸ್ತಕ ಒಯ್ದು ಮುಟ್ಟಿಸಿದ ಅನುಭವವನ್ನು ನಾನು ಅಮೇರಿಕೆಗೆ ಹೋದ ಅವಸರದಲ್ಲಿ ಪಡೆದು ಸಂತೋಷಪಟ್ಟಿದ್ದೇನೆ) ನನ್ನ ತಾಯ್ನಾಡಿನ ತಬ್ಬಲಿ ಮಕ್ಕಳಿಗೆ ಇಂಥ ಭಾಗ್ಯ ಬಂದೀತೇ ಎಂದು ಇನ್ನೂ ಕಾಯುತ್ತಿದ್ದೇನೆ.

ಈ ಗ್ರಂಥಾಲಯಗಳಲ್ಲಿ ಮುಕ್ತದ್ವಾರ ಪದ್ಧತಿಯನ್ನು (open access) ಪ್ರಾರಂಭಿಸುವುದರಿಂದ ಓದುಗ ಹಾಗೂ ಅವನಿಗೆ ಬೇಕಾದ ಪುಸ್ತಕಗಳ ನಡುವಿನ ಎಲ್ಲ ಅಡೆತಡೆಗಳನ್ನೂ ತೊಡೆದುಹಾಕಿದಂತಾಗಿ ತನ್ನ ಮನೆಯಲ್ಲಿನಂತೆ ಗ್ರಂಥಗಳನ್ನು ಸ್ವಚ್ಛಂದದಿಂದ

ಅವಲೋಕಿಸುವ ಸ್ವಾತಂತ್ರ್ಯ ಸಂತೋಷ ಓದುಗನಿಗೆ ಕೊಟ್ಟಂತಾಗುತ್ತದೆ. ಇದರಿಂದ ವಾಚನಾಭಿರುಚಿಗೆ, ಪುಸ್ತಕ ಪ್ರೇಮಕ್ಕೆ ಹೆಚ್ಚಿನ ಪ್ರಚೋದನೆ ದೊರೆಯುತ್ತದೆ.

ಉ ಗ್ರಂಥಾಲಯಗಳಲ್ಲಿ ವಿರಾಮ ಕೊಠಡಿಗಳನ್ನು (Browsnig Rooms) ನಿಯೋಜಿಸುವುದರಿಂದಲೂ ಈ ಉದ್ದೇಶ ಕೈಗೂಡಲು ಸಾಧ್ಯ. ಈ ವಿರಾಮ ಕೊಠಡಿಗಳಲ್ಲಿ ಚಿತ್ರದ ಪತ್ರಿಕೆಗಳು, ಮನರಂಜನ ಸಾಹಿತ್ಯ, ಲಘು ಕಲೆಗಳಿಗೆ ಸಂಬಂಧಿಸಿದ ಸಾಹಿತ್ಯ ಇಡಲಾಗಿರುತ್ತದೆ. ಈ ಕೊಠಡಿಯ ವಿನ್ಯಾಸ, ಅಲಂಕಾರ ಹಾಗೂ ಪೀಠೋಪಕರಣಗಳು ಎಲ್ಲವೂ ಸುಂದರವಾಗಿ ಆಕರ್ಷಕವಾಗಿ ಇರುತ್ತವೆ. ಇಲ್ಲಿ ಮೆಲು ದನಿಯಲ್ಲಿ ಮಾತಾಡುವ ಸ್ವಾತಂತ್ರ್ಯದ ಮೂಲಕ ಲಘು ಸಾಹಿತ್ಯದ ರಸಾಸ್ವಾದನೆಯ ಮೆಲಕು ಹಾಕುವ ಅವಕಾಶ ಕಲ್ಪಿಸಿಕೊಡಲಾಗಿರುತ್ತದೆ.

ಊ ವಾಚನಾಭಿರುಚಿಗೆ ತೊಡಕಾಗುವ ಕೆಲವೊಂದು ಓದುಗರ ಸಮಸ್ಯೆ ಎಂದರೆ ಆಡುಭಾಷೆ ಹಾಗೂ ಗ್ರಂಥಭಾಷೆಗಳ ನಡುವಿನ ಅಂತರ. ಈ ಅಂತರವನ್ನು ಆದಷ್ಟು ಕಡಿಮೆ ಮಾಡಲು ನುರಿತ ಲೇಖಕರಿಗೆ ಸಾಹಿತ್ಯ ಆಕಾಡೆಮಿಗಳು, ವಿಶ್ವವಿದ್ಯಾಲಯಗಳು, ಸರಕಾರಗಳು ಪ್ರೋತ್ಸಾಹ, ಅವಕಾಶ ಕಲ್ಪಿಸಿಕೊಟ್ಟರೆ ಈ ಒಂದು ಮಾನಸಿಕ ತೊಡಕನ್ನು ತೊಡೆದು ಹಾಕಬಹುದು.

ಎ ಗ್ರಂಥಗಳ ಅಂದ ಚಂದ, ಮುದ್ರಣ, ವಿನ್ಯಾಸ, ಬೈಂಡಿಂಗ್, ಉಪಯೋಗಿಸುವ ಕಾಗದ ಇವೆಲ್ಲವೂ ಆಕರ್ಷಕವಾಗಿರಬೇಕಾಗುತ್ತದೆ. ಅದರಂತೆ ಅವುಗಳಲ್ಲಿನ ಬರಹ, ವಿಷಯ ನಿರೂಪಣೆ ಉನ್ನತಮಟ್ಟದವಿರಬೇಕು. ಅನೇಕ ಕನ್ನಡ ಪುಸ್ತಕಗಳಲ್ಲಿ ಇವುಗಳ ನ್ಯೂನತೆ ಇನ್ನೂ ಕಾಡುತ್ತಿದೆ.

ಏ ಆಧುನಿಕ ಗ್ರಂಥಾಲಯಗಳ ವ್ಯವಸ್ಥೆ, ಅವುಗಳ ಹರಹು, ವಿಸ್ತಾರ, ಗ್ರಂಥಾಲಯಗಳ ಕಟ್ಟಡಗಳ ಭವ್ಯತೆ, ಇವುಗಳು ಓದುಗನ ಮನದಲ್ಲಿ ದಿಗ್ಭ್ರಮೆಯನ್ನಲ್ಲದಿದ್ದರೂ ಒಂದು ತೆರನಾದ ಸಂಕೋಚ ಭಾವನೆಯನ್ನು ಮೂಡಿಸುತ್ತವೆ. ಇದನ್ನು ತೊಡೆದು ಹಾಕುವ ಹಾಗೆ ಹೊಸ ಓದುಗರಿಗಾಗಿ ಒಂದು ಪರಿಚಯಾತ್ಮಕ ಶಿಬಿರವನ್ನು (Orientati on course) ಅದರಂತೆ ಸುಂದರವಾಗಿ ಆಕರ್ಷಕವಾಗಿ ಹೊರಡಿಸಲ್ಪಟ್ಟ ಹಾಗೂ ಸರಳ ನೇರ ಭಾಷೆಯಲ್ಲಿ ಬರೆಯಲ್ಪಟ್ಟ ಕೈಪಿಡಿಯನ್ನೂ ವ್ಯವಸ್ಥೆಮಾಡಿದರೆ ಬಹಳ ಪ್ರಯೋಜನವಾಗುವುದು.

ಐ ಗ್ರಂಥಾಲಯಗಳು, ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು, ಲೇಖಕರು, ಆಗಾಗ್ಗೆ ಗ್ರಂಥಪ್ರದರ್ಶನಗಳನ್ನು ಏರ್ಪಡಿಸಿ ಅದರ ಜೊತೆಗೆ, ಪ್ರದರ್ಶಿಸಿದ ಗ್ರಂಥಗಳ ಮಾರಾಟದ ವ್ಯವಸ್ಥೆಯನ್ನೂ ಮಾಡಿದರೆ ಜನರು ಗ್ರಂಥಗಳೆಡೆಗೆ ಆಕರ್ಷಿತರಾಗುವುದು ಸುಲಭ ಸಾಧ್ಯ. ಒಂದು ಒಳ್ಳೆಯ ಗ್ರಂಥಪ್ರದರ್ಶನವನ್ನು ಏರ್ಪಡಿಸುವುದೆಂದರೆ ನಮ್ಮ ಆಧುನಿಕ ಪ್ರಪಂಚದ ಸಮಗ್ರ ಸಂಸ್ಕೃತಿಯ ಕುರುಹುಗಳನ್ನೆಲ್ಲಾ ರಂಗ ಮಂಟಪದ ಮೇಲೆ ತಂದು ನಿಲ್ಲಿಸಿದಂತೆ. ನನ್ನ ವಿದ್ಯಾರ್ಥಿ ಮಿತ್ರರಿಗೆ ನಾನು ಪದೇ ಪದೇ ಹೇಳುವ ಮಾತೆಂದರೆ : "ನಿಮ್ಮ ಇಡೀ ಗ್ರಂಥಾಲಯವೇ ಒಂದು ನಿತ್ಯ ಪ್ರದರ್ಶನ" ಎಂದು. ಹೀಗಾಗಿ

ಗ್ರಂಥಾಲಯವು ನಿರ್ಮಲವಾಗಿ, ಸುಂದರವಾಗಿ ನಿತ್ಯ ನೂತನವಾಗಿ ಅಚ್ಚುಕಟ್ಟಾಗಿ ಇಡಲ್ಪಡಬೇಕಾಗುತ್ತದೆ.

೨. ಅದರಂತೆಯೇ ಗ್ರಂಥಾಲಯ ಸಿಬ್ಬಂದಿಯವರು ಓದುಗರ ಜೊತೆ ಸೌಹಾರ್ದದಿಂದ ಸೇವಾಭಾವದಿಂದ, ಪ್ರೀತಿಯಿಂದ, ಸ್ನೇಹಹಸ್ತವನ್ನು ನೀಡಿ, ಅದರದಿಂದ ನಡೆದುಕೊಂಡು ಹೋದರೆ ಓದುಗರು ಪುನಃ ಪುನಃ ಗ್ರಂಥಾಲಯಗಳಿಗೆ ಓಡುತ್ತ ಬರುವಂತಾಗುತ್ತದೆ. ಅದೇ ಔಡಲೆಣ್ಣೆಯ ಗಂಟು ಮುಖವಾಡ ಹಾಕಿ ಕೊಂಡುದಾದರೆ........?

೩. ಇನ್ನು ಮುಂದೆ ಮದುವೆ ಮುಂಜಿ ಗೃಹಪ್ರವೇಶ ಹಾಗೂ ಇನ್ನು ಇತರ ಪರ್ವದ ಪ್ರಸಂಗಗಳಲ್ಲಿ ಪುಸ್ತಕ ಕಾಣಿಕೆಯ ಸಂಪ್ರದಾಯವನ್ನು ನಾವು ರೂಢಿಸಿಕೊಂಡುದಾದರೆ ಎಷ್ಟು ಚೆನ್ನ ? ಕನ್ನಡ ಸಾಹಿತ್ಯ ಪರಿಷತ್ತಿನ ಧೀಮಂತ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರು ಅಂತರ ರಾಷ್ಟ್ರೀಯ ಪುಸ್ತಕ ವರ್ಷದಾದಿಯಿಂದ ಸಭೆ ಸಮಾರಂಭಗಳಲ್ಲಿ ಅತಿಥಿಗಳಿಗೆ ಹಾರ ತುರಾಯಿ ಬದಲು ಗ್ರಂಥ ಸಮರ್ಪಣೆಯ ಸುಸಂಸ್ಕೃತ ಸಂಪ್ರದಾಯ ಹಾಕಿಕೊಂಡು ನಮಗೆಲ್ಲ ಮಾರ್ಗದರ್ಶನ ಮಾಡಿದ್ದಾರೆ. ಕೆಲವೇ ವರ್ಷಗಳ ಹಿಂದೆ ಜಪಾನ್ ದೇಶದಲ್ಲಿ ಜರುಗಿದ ಮದುವೆಯೊಂದರಲ್ಲಿ ವಧುವಿನ ತಂದೆ ವರದಕ್ಷಿಣೆಯ ಬದಲು 500 ಗ್ರಂಥಗಳನ್ನು ಸಲ್ಲಿಸಿದ ಸುವಾರ್ತೆ ನಮಗೆಲ್ಲ ವಿದಿತವಾದದ್ದೇ.

೪. ಶಾಲೆ ಕಾಲೇಜುಗಳಲ್ಲಿ ಪಠ್ಯೇತರ ಓದಿಗಾಗಿ ಆಕರ್ಷಕ ಪಾರಿತೋಷಕಗಳನ್ನು, ಸ್ಕಾಲರ್ ಶಿಪ್‌ನ್ನು ಪುಸ್ತಕ ರೂಪದಲ್ಲಿ ಕೊಡುವುದು ; ಆಕಾಶವಾಣಿಯಲ್ಲಿ ಪುಸ್ತಕ ಪರಿಚಯಕ್ಕೆ ಇನ್ನಿಷ್ಟು ಕಾಲಾವಧಿ ಕಲ್ಪಿಸಿ ಕೊಡುವುದು ಹಾಗೂ ಗ್ರಂಥಗಳ ಬಗ್ಗೆ, ಲೇಖಕರ ಬಗ್ಗೆ ಗ್ರಂಥಾಲಯ ಚಳುವಳಿಯ ಬಗ್ಗೆ ಭಾಷಣ ಚರ್ಚೆಗಳಿಗೆ ಇನ್ನಿಷ್ಟು ಅವಕಾಶ ಮಾಡಿಕೊಡುವುದು ; ಅದರಂತೆಯೇ ಗ್ರಂಥಗಳ ಬಗ್ಗೆ ಗ್ರಂಥಾಲಯಗಳ ಬಗ್ಗೆ ದಾಖಲೆ ಚಿತ್ರಗಳನ್ನು ತಯಾರಿಸಿ ಪ್ರದರ್ಶಿಸುವದು ; ವಿವರ ಸಹಿತವಾದ ಪುಸ್ತಕ ಪಟ್ಟಿಗಳನ್ನು ನಿಯಮಿತ ವೇಳೆಗೆ ಪ್ರಕಟಿಸುವದು; ಗ್ರಂಥಾಲಯಗಳಲ್ಲಿ ಬೇರೆ ಗ್ರಂಥಾಲಯಗಳಲ್ಲಿ ಇಲ್ಲದ ಗ್ರಂಥಗಳನ್ನು ಬೇರೆ ಗ್ರಂಥಾಲಯಗಳಿಂದ ತರಿಸಿಕೊಡುವ ಏರ್ಪಾಡು ಮಾಡುವದು. ಈ ದಿಶೆಯಲ್ಲಿ ಒಂದು ಊರಿನ ಗ್ರಂಥಾಲಯದಿಂದ ಮತ್ತೊಂದು ಊರಿನ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಪೋಸ್ಟ್ ಮೂಲಕ ಕಳಿಸಬೇಕಾಗಿರುವುದರಿಂದ ಇಂಥ ಪ್ರಸಂಗಗಳಲ್ಲಿ ರಿಯಾಯಿತಿ ಕೊಡಬೇಕೆಂದು ಭಾರತ ಸರ್ಕಾರವನ್ನು ಆಗ್ರಹ ಪಡಿಸುವದು. ಇದರಿಂದ ಗ್ರಂಥಗಳ ಸಾಗಾಟ ಹೆಚ್ಚು ಸುಗಮವಾಗುತ್ತದೆ. ಇವೇ ಮುಂತಾದ ಸೃಜನಾತ್ಮಕ ಕಾರ್ಯಕ್ರಮಗಳಿಂದ ಜನರಲ್ಲಿ ಗ್ರಂಥಗಳ ಬಗ್ಗೆ ಆಸಕ್ತಿಯನ್ನು ಕುದುರಿಸಬಹುದು. ಅವರ ವಾಚನಾಭಿರುಚಿಗೆ ರೆಕ್ಕೆ ಮೂಡಿಸಬಹುದು.

ಇವೆಲ್ಲವೂ ಜನತೆ ಮಾಡಬೇಕಾದ ಕಾರ್ಯಗಳೇ. ಅಲ್ಲದೆ ಮಗು ಒಂದು ವರುಷ ಉಂಡಷ್ಟು ಆಹಾರವನ್ನು ಬಾಣಂತಿ ಒಂದೇ ದಿನಕ್ಕೆ ಜೀರ್ಣಿಸಬಲ್ಲಳು ಎಂಬ ಉಕ್ತಿಯಂತೆ ಜನತೆಯ ವರುವರುಷದ ಆಶೋತ್ತರಗಳು ಸರಕಾರದಿಂದ ಅತ್ಯಂತ ಶೀಘ್ರವಾಗಿ ಪರಿಹರಿಸಲ್ಪಡಬಹುದು. ಗ್ರಂಥಕರ್ತರಿಗೆ ವಿಶೇಷ ರಿಯಾಯಿತಿ, (Public Lending

Right)ದ ವಿಶೇಷ ಸವಲತ್ತು, ಸಹಿತವಾಗಿ, ಗ್ರಂಥಾಲಯ ಸಿಬ್ಬಂದಿಗೆ ಆಕರ್ಷಕ ವೇತನ, ಗ್ರಂಥಗಳನ್ನು ಕೊಳ್ಳಲು ಗ್ರಂಥಾಲಯಗಳಿಗೆ ವಿಶೇಷ ಧನಸಹಾಯ, ಓದುಗರಿಗೆ ಮೊತ್ತದ ಪಾರಿತೋಷಕಗಳು, ಇವೆಲ್ಲ ಸರಕಾರದಿಂದ ಹೆಚ್ಚಿನ ಪ್ರಮಾಣದಿಂದಾದರೆ, ನಮ್ಮ ದೂರದ ಕನಸು ಶೀಘ್ರವೇ ಕೈಗೂಡಬಹುದು.

ಪ್ರಾರ್ಥನೆ

ಗ್ರಂಥಗಳು ಜೀವನದ ಪರಮೋದ್ದೇಶವಾದ ಆತ್ಮಸಾಕ್ಷಾತ್ಕಾರಕ್ಕೆ ಸುವರ್ಣ ಸೋಪಾನಗಳು ; ಅದರಂತೆಯೇ ನಾಡಿನ ಸರ್ವಾಂಗೀಣ ಪ್ರಗತಿ ಹಾಗೂ ಅಭಿವೃದ್ಧಿಯೂ ಗ್ರಂಥಸರಸ್ವತಿಯ ಕೃಪೆಯಿಂದಲೇ ಸಾಧ್ಯವೆಂಬ ಮಾತನ್ನು ನಾವು ಮರೆಯುವಂತಿಲ್ಲ. ಯಾಕೆಂದರೆ ಖಡ್ಗಕ್ಕಿಂತ ಲೇಖನಿಯು ಹೆಚ್ಚು ಶಕ್ತಿಯುತವಾದದ್ದು. ಸಧ್ಯ ಪ್ರಪಂಚದಲ್ಲಿ 5 ಲಕ್ಷ 50 ಸಾವಿರ ಗ್ರಂಥಗಳ 8 ಮಿಲಿಯ ಪ್ರತಿಗಳು ಸಿದ್ಧವಾಗಿ ಪ್ರಕಟವಾಗಿ ಪ್ರಸಾರ ವಾಗುತ್ತಿವೆ. ಆದರೆ ಇದೇ ಸಮಯಕ್ಕೆ ಪ್ರಪಂಚದ 800 ಮಿಲಿಯ ಬಂಧು ಭಗಿನಿಯರು ಅನಕ್ಷರಸ್ಥರಾಗಿ ಅಜ್ಞಾನದ ಅಂಧಕಾರದ ಕೂಪದಲ್ಲಿ ಕೊಳೆಯುತ್ತಿದ್ದಾರೆ, ನರಳುತ್ತಿದ್ದಾರೆ. ಈ ದುಸ್ಥಿತಿಯನ್ನು ತೊಡೆದು ಹಾಕುವ ಉದ್ದೇಶದಿಂದ ಹಾಗೂ ಪ್ರಪಂಚದ ಎಲ್ಲ ರಾಷ್ಟ್ರಗಳಿಗೆ ಈ ದಿಸೆಯಲ್ಲಿ ಸ್ಫೂರ್ತಿ ಹಾಗೂ ಪ್ರಚೋದನೆ ನೀಡುವ ಸದುದ್ದೇಶದಿಂದ ಯುನೆಸ್ಕೋ ಸಂಸ್ಥೆಯವರು ಪ್ರೇರಿತರಾಗಿ 1972ನೆಯ ವರ್ಷವನ್ನು ಅಂತರ ರಾಷ್ಟ್ರೀಯ ಪುಸ್ತಕ ವರ್ಷವೆಂದು ಘೋಷಿಸಿದರು. ಆ ವರುಷದ ದಿವ್ಯ ಘೋಷಣೆ "ಎಲ್ಲರಿಗೂ ಗ್ರಂಥಗಳು", ಎಂಬುದಾಗಿತ್ತು. "ಎಲ್ಲರೂ ಓದಬಲ್ಲವರಾಗಬೇಕಾದರೆ ಎಲ್ಲರಿಗೂ ಶಿಕ್ಷಣ" ಎಂಬ ಘೋಷಣೆ ತಾನೇ ಬೆಂಬತ್ತಿ ಬಂದಂತಾಯಿತು. ಈ ಎರಡೂ ಘೋಷಣೆಗಳನ್ನು ಸಂಪೂರ್ಣವಾಗಿ ಕಾರ್ಯಾಚರಣೆಯಲ್ಲಿ ತರಲು ನಮ್ಮ ದೇಶಕ್ಕೆ ಈಗಿನ ಪ್ರಗತಿಯ ಗತಿಯ ಮೇರೆಗೆ ಕನಿಷ್ಠ 15 ದಶಕಗಳೇ ಬೇಕಾದಾವು. ಕನ್ನಡ ನಾಡಿನಲ್ಲಿ ಈ ಸುದಿನ ಬೇಗ ಬರಬೇಕಾದರೆ ಪ್ರತಿಯೊಬ್ಬ ಸುಶಿಕ್ಷಿತ ಕನ್ನಡಿಗನೂ ಈ ಕೆಳಗಿನ ಅಂಶಗಳನ್ನು ತನ್ನ ಹೃದಯದ ವೇದ ವಾಕ್ಯಗಳನ್ನಾಗಿ ಮಾಡಿಕೊಂಡು ಸಂಪೂರ್ಣ ಆಚರಣೆಯಲ್ಲಿ ತರುವ ನಿರ್ಧಾರವನ್ನು ಈ ಅವಸರದಲ್ಲಿ ಮತ್ತೊಮ್ಮೆ ಕೈಗೊಳ್ಳಬೇಕು :

1 **Each one teach one** : ಪ್ರತಿಯೊಬ್ಬನೂ ಕನಿಷ್ಠ ಒಬ್ಬ ಅನಕ್ಷರ ಕುಕ್ಷಿಯನ್ನು ಸಾಕ್ಷರಿಯನ್ನಾಗಿ ಮಾಡುವದು.

2 **Each one read one** ಪ್ರತಿಯೊಬ್ಬನೂ ತಿಂಗಳಿಗೊಮ್ಮೆಯಾದರೂ ಒಂದು ಹೊಸ ಪುಸ್ತಕ ಕೊಂಡು ಓದುವದು ಹಾಗೂ ಕೊನೆಯದಾಗಿ,

3 **Each one write one**. ತನ್ನ ಜೀವಮಾನದಲ್ಲಿ ಕನಿಷ್ಠ ಪಕ್ಷ ಕೆಲವೊಂದು ಒಳ್ಳೆಯ ಲೇಖನಗಳನ್ನಾಗಲಿ ಸಾಧ್ಯವಾದರೆ ಕೆಲವೊಂದು ಗ್ರಂಥಗಳನ್ನಾಗಲೀ ಬರೆದು ಪ್ರಕಟಿಸುವುದು.

೧೦ / ಗ್ರಂಥಾಲಯದ ನೂರೊಂದು ಸೂತ್ರಗಳು

1 ಗ್ರಂಥಾಲಯದ ಆಡಳಿತ ವ್ಯವಸ್ಥೆ

ಗ್ರಂಥಾಲಯ ಒಂದು ಸ್ವತಂತ್ರ ಇಲಾಖೆ

1 ಗ್ರಂಥಾಲಯಕ್ಕೆ ಅಧ್ಯಾಪನ ವಿಭಾಗಕ್ಕಿರುವ ಸ್ಥಾನಮಾನವಿರಬೇಕು. ಗ್ರಂಥಪಾಲನಿಗೆ ವಿಭಾಗದ ಮುಖ್ಯಸ್ಥನಿಗಿರುವ ದರ್ಜೆ, ಅಧಿಕಾರಗಳಿರಬೇಕು.

2 ಅವನ ವೃತ್ತಿಬಾಂಧವರಿಗೆ ಅಧ್ಯಾಪನ ವಿಭಾಗಗಳಲ್ಲಿ ಅಧ್ಯಾಪಕರಿಗಿರುವ ಸ್ಥಾನಮಾನಗಳಿಗೆ ಸಂಪಾದಿಯಾದ ಸ್ಥಾನಮಾನಗಳಿರಬೇಕು.

3 ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ ಹುದ್ದೆಗಳನ್ನು ಭರ್ತಿಮಾಡುವಾಗ ಯಾವ ನಿಯಮಗಳನ್ನು ಅನುಸರಿಸುತ್ತಾರೋ ಅವುಗಳನ್ನೇ ಗ್ರಂಥಾಲಯ ವಿಭಾಗದ ಹುದ್ದೆಗಳನ್ನು ಭರ್ತಿಮಾಡುವಾಗಲೂ ಅನುಸರಿಸಬೇಕು.

4 ತಾಂತ್ರಿಕ ಪರಿಣತಿ ಹೊಂದಿದವರನ್ನು ನೇಮಿಸುವಾಗ ಸಾಧ್ಯವಾದ ಮಟ್ಟಿಗೆ ಬೇರೆ ಬೇರೆ ಶಾಖೆಗಳವರನ್ನು (ಮಾನವಿಕ ಮತ್ತು ವಿಜ್ಞಾನ ಹಾಗೂ ವಿವಿಧ ಭಾಷಾ ವರ್ಗದವರನ್ನು) ಆರಿಸುವಂತೆ ಎಚ್ಚರಿಕೆ ವಹಿಸಬೇಕು.

5 ಯಾರಾದರೂ ಒಬ್ಬ ಪ್ರಾಧ್ಯಾಪಕರನ್ನು ಕಾರ್ಯನಿರ್ವಾಹಕ ಗ್ರಂಥಪಾಲನನ್ನಾಗಿ ನೇಮಕ ಮಾಡುವ ಪದ್ಧತಿ ಈಗಲೂ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಜಾರಿಯಲ್ಲಿದೆ. ಇದನ್ನು ಈ ಕೂಡಲೇ ರದ್ದುಮಾಡಬೇಕು.

6 ಗ್ರಂಥಪಾಲನಿಗೆ ವಿಶ್ವವಿದ್ಯಾನಿಲಯದ ಅಕ್ಯಾಡೆಮಿಕ್ ಕೌನ್ಸಿಲ್, ಸೆನೆಟ್ ಹಾಗೂ ಅಂಗಸಮಿತಿಗಳಲ್ಲಿ ಪ್ರಾತಿನಿಧ್ಯವಿರಬೇಕು. ಇದರಿಂದ ಅವನಿಗೆ ಶೈಕ್ಷಣಿಕ ಪ್ರವೃತ್ತಿಗಳನ್ನು ತಿಳಿಯಲು ಹಾಗೂ ಸಂಸ್ಥೆಗಳ ನಡುವೆ ಸಾಮರಸ್ಯ ಹೆಚ್ಚಿಸಲು ಸಾಧ್ಯವಾಗುತ್ತದೆ.

7 ಗ್ರಂಥಾಲಯದ ಆಡಳಿತವರ್ಗದ ಹುದ್ದೆಗಳನ್ನು ಗ್ರಂಥಪಾಲನನ್ನೊಳಗೊಂಡ ಆಯ್ಕೆಸಮಿತಿ ತುಂಬುವಂತಿರಬೇಕು.

ಗ್ರಂಥಾಲಯ ಸಮಿತಿ

8 ಗ್ರಂಥಾಲಯ ಸಮಿತಿಯು 8ರಿಂದ 10ಜನ ಸದಸ್ಯರನ್ನೊಳಗೊಂಡ ಒಂದು ಸಣ್ಣ ಸಲಹಾ ಮಂಡಲಿಯಾಗಿರಬೇಕು. ಅದರಲ್ಲಿ ಅಧ್ಯಕ್ಷರಾಗಿ ಉಪಕುಲಪತಿಗಳೂ, ಸದಸ್ಯಕಾರ್ಯದರ್ಶಿಯಾಗಿ ಗ್ರಂಥಪಾಲರೂ, ಬೇರೆ ಬೇರೆ ಶಾಖೆಗಳನ್ನು ಪ್ರತಿನಿಧಿಸುವ 4-6ಮಂದಿ ಸ್ನಾತಕೋತ್ತರ ವಿಭಾಗಗಳ ಪ್ರಾಧ್ಯಾಪಕರೂ ಇರಬೇಕು; ಅಲ್ಲದೆ ವಿಶ್ವವಿದ್ಯಾನಿಲಯದ ಕಾಲೇಜುಗಳು ಹಾಗೂ ಅದಕ್ಕೆ ಸಂಬಂಧಪಟ್ಟ ಕಾಲೇಜುಗಳಿಂದ ಒಬ್ಬೊಬ್ಬ ಪ್ರತಿನಿಧಿ ಇರಬೇಕು.

9 ಈ ಸಮಿತಿಯ ಅಧಿಕಾರಾವಧಿ ಸಾಮಾನ್ಯವಾಗಿ ಮೂರುವರ್ಷಗಳಿರತಕ್ಕದ್ದು.

10 ಈ ಸಮಿತಿಯ ಆರ್ಥಿಕ ಹಾಗೂ ಇತರ ಅಧಿಕಾರಗಳನ್ನು ಸಾಧ್ಯವಾದ ಮಟ್ಟಿಗೆ ಗ್ರಂಥಪಾಲಕನಿಗೆ ವಹಿಸಿಕೊಡತಕ್ಕದ್ದು.

11 ಪೀಠೋಪಕರಣಗಳು, ಸಜ್ಜು ಸರಂಜಾಮು ಮೊದಲಾದವುಗಳಿಗಾಗಿ ವರ್ಷಕ್ಕೆ 5000ರೂ ಗಳವರೆಗೆ ಖರ್ಚುಮಾಡಲು ಗ್ರಂಥಪಾಲಕನಿಗೆ ಅಧಿಕಾರವಿರಬೇಕು.

ಗ್ರಂಥಾಲಯದ ಬೇರೆ ಬೇರೆ ವಿಭಾಗಗಳು

12 ಗ್ರಂಥಾಲಯುವಲ್ಲಿ ಈ ಕೆಳಕಂಡ ವಿಭಾಗಗಳಿರಬೇಕು :

(i)ಸೇರ್ಪಡೆ (acquisition) (ii)ತಾಂತ್ರಿಕ (technical) (iii)ನಿಯತಕಾಲಿಕ (Periodical) (iv) ದಸ್ತೈವಜುಗಳು ಮತ್ತು ಅಪರೂಪ ಗ್ರಂಥಗಳು (v) ಎರವಲು (Circulation) (vi) ಸ್ಟ್ಯಾಕುಗಳು (vii) ಪರಾಮರ್ಶನ ಮತ್ತು ಮಾಹಿತಿ ಸೇವೆ (Reference and Information service) (viii) ವಿಸ್ತರಣ ಹಾಗೂ ಶ್ರವಣ-ವೀಕ್ಷಣ (audio visual) (ix)ಪುನರ್ಮುದ್ರೀಕರಣ (ix) ಬೈಂಡಿಂಗ್ (xi) ಕಛೇರಿ.

13 ಶ್ರವಣ-ವೀಕ್ಷಣ, ಬೈಂಡಿಂಗ್ ಮತ್ತು ಕಛೇರಿ ವಿಭಾಗಗಳನ್ನು ಬಿಟ್ಟು ಉಳಿದ ಪ್ರತಿಯೊಂದು ವಿಭಾಗವನ್ನೂ ನೋಡಿಕೊಳ್ಳಲು ಒಬ್ಬೊಬ್ಬ ಸಹಾಯಕ ಗ್ರಂಥಪಾಲನಿರಬೇಕು. ಅವನ ದರ್ಜೆಯು ಕನಿಷ್ಠ ವಿಶ್ವವಿದ್ಯಾನಿಲಯದ ಅಧ್ಯಾಪಕನ ದರ್ಜೆಗೆ ಸಮನಾಗಿರಬೇಕು.

14 ಪ್ರತಿಯೊಂದು ವಿಭಾಗದಲ್ಲೂ ಸಹಾಯಕ ಗ್ರಂಥಪಾಲನ ಸಹಾಯಕ್ಕೆ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ಸಿಬ್ಬಂದಿ ಸೂತ್ರದ ಪ್ರಕಾರ (UGC staff armula) ಒಬ್ಬ ಅಥವ ಹೆಚ್ಚುಮಂದಿ ತಾಂತ್ರಿಕ ಸಹಾಯಕರಿರಬೇಕು.

15 ಶ್ರವಣ-ವೀಕ್ಷಣ ವಿಭಾಗದ ಮೇಲ್ವಿಚಾರಣೆಗೆ ಶ್ರವಣ-ವೀಕ್ಷಣ ಸಾಧನಗಳನ್ನು ಬಳಸುವುದರಲ್ಲಿ ವಿಶೇಷಪರಿಣತಿ ಪಡೆದವನನ್ನು ನೇಮಿಸಿಕೊಳ್ಳಬೇಕು; ಕಛೇರಿಯ ಮೇಲ್ವಿಚಾರಣೆಗೆ ಒಬ್ಬ ಸೂಪರಿಂಟೆಂಡೆಂಟ್ ಅಥವ ಅಕೌಂಟ್ಸ್ ಅಧಿಕಾರಿ ಇರಬೇಕು.

16 ಈ ವಿವಿಧ ವಿಭಾಗಗಳ ಕರ್ತವ್ಯಗಳೇನು, ಹೊಣೆಗಾರಿಕೆಗಳೇನು ಎಂಬವುಗಳು ಸ್ಪಷ್ಟವಾಗಿ ಉಕ್ತವಾಗಿರಬೇಕು.

17 ಪ್ರತಿಯೊಂದು ವಿಭಾಗದಲ್ಲಿಯೂ ನಾಲ್ಕನೆ ದರ್ಜೆ ನೌಕರರೂ ಸೇರಿಕೊಂಡಂತೆ ವೃತ್ತಿೀತರ ಸಿಬ್ಬಂದಿ (non-professional staff) ಇರಬೇಕು. ಇವರನ್ನು, ಒಬ್ಬ ತರಪೇತಿಪಡೆದವನಿಗೆ ಮೂವರು ತರಪೇತಿ ಪಡೆಯದಿರುವವರಂತೆ ತೆಗೆದುಕೊಳ್ಳಬಹುದು.

18 ಗ್ರಂಥಾಲಯ ತೆರೆದಿರುವ ವೇಳೆಯಲ್ಲಿ ಪ್ರತಿಯೊಂದು ಸೇವಾಕೇಂದ್ರದಲ್ಲೂ ಒಬ್ಬೊಬ್ಬ ತರಪೇತಿ ಪಡೆದವನಿರಬೇಕು.

19 ಪ್ರತಿಯೊಂದು ವಿಭಾಗದ ಕಾರ್ಯಾಚರಣೆಯ ವಿಧಾನವನ್ನೂ ವಿವರವಾಗಿ ಸಿದ್ಧಪಡಿಸಿ ಅದನ್ನು ಅಲ್ಲಿನ ಸಿಬ್ಬಂದಿಗಳಿಗೆಲ್ಲ ಕೊಡಬೇಕು.

20 ದಿನನಿತ್ಯದ ಕೆಲಸಕಾರ್ಯಗಳನ್ನು ನಿರ್ವಹಿಸಲು ಬೇಕಾದ ವಾಡಿಕೆ ರೆಕಾರ್ಡು

ಗಳನ್ನೂ ರಿಜಿಸ್ಟರುಗಳನ್ನೂ [routine records and registers] ರೂಪಿಸಿ ಪ್ರತಿಯೊಂದು ವಿಭಾಗಕ್ಕೂ ಕೊಡಬೇಕು.

21 ಎಲ್ಲ ವಿಭಾಗಗಳಿಗೂ ಕಾರ್ಯವರದಿ ಫಾರಮ್ಮುಗಳನ್ನು ರೂಪಿಸಿ ಆ ಫಾರಮ್ಮುಗಳಲ್ಲಿ ವರದಿಗಳನ್ನು ಸಲ್ಲಿಸುವಂತೆ ಮಾಡಬೇಕು.

22 ಸಿಬ್ಬಂದಿವರ್ಗದಲ್ಲಿ ಪ್ರತಿಯೊಬ್ಬ ವ್ಯಕ್ತಿ ಎಷ್ಟು ಕೆಲಸ ಮಾಡಿದ್ದಾನೆಂಬುದನ್ನು ಅಳೆಯಲು ಕಾರ್ಯಮಾನಕಗಳನ್ನು [job standards] ಸಿದ್ಧಪಡಿಸಬೇಕು. ಹೀಗೆ ಸಿದ್ಧಪಡಿಸುವಾಗ ಕೆಲಸದ ಗುಣಮಟ್ಟದ ಕಡೆ ಗಮನ ಕೊಡಬೇಕೇ ಹೊರತು ಕೇವಲ ಪ್ರಮಾಣದ ಕಡೆ ಅಲ್ಲ.

23 ಗ್ರಂಥಾಲಯದ ಬೇರೆ ಬೇರೆ ವಿಭಾಗಗಳ ಮುಖ್ಯಸ್ಥರನ್ನೊಳಗೊಂಡ ಒಂದು ಸಿಬ್ಬಂದಿ ಸಮಿತಿ [staff council] ಇರಬೇಕು. ಇದು ಸಿಬ್ಬಂದಿಗಳ ಸಮಸ್ಯೆಗಳನ್ನು ಚರ್ಚಿಸಲು ತಿಂಗಳಿಗೊಮ್ಮೆ ಸೇರಬೇಕು.

2 ಕಟ್ಟಡ ಮತ್ತು ಸಜ್ಜು ಸರಂಜಾಮು

ಗ್ರಂಥಾಲಯ ಕಟ್ಟಡ

24 ಗ್ರಂಥಾಲಯ ಕಟ್ಟಡವು ಕ್ಯಾಂಪಸ್ಸಿನ ಮಧ್ಯದಲ್ಲಿರಬೇಕು.

25 ಅದು ವಿಶ್ವವಿದ್ಯಾನಿಲಯದ ಎಲ್ಲ ಶೈಕ್ಷಣಿಕ ವಿಭಾಗಗಳಿಗೂ ಹಾಸ್ಟೆಲುಗಳಿಗೂ ನಿವಾಸಗಳಿಗೂ ಹತ್ತಿರವಾಗಿರಬೇಕು.

26 ವಿಶ್ವವಿದ್ಯಾನಿಲಯ ಗ್ರಂಥಪಾಲರು, ವಾಸ್ತುಶಿಲ್ಪಿ ಮತ್ತು ವಿಶ್ವವಿದ್ಯಾನಿಲಯದ ಇಂಜಿನಿಯರು–ಇವರೆಲ್ಲ ಸೇರಿ ಕಟ್ಟಡವನ್ನು ಯೋಜಿಸಬೇಕು.

27 ಗ್ರಂಥಾಲಯ ಕಟ್ಟಡದ ಸ್ಥಾನ ನಿರ್ದೇಶನ ಮಾಡುವಾಗ ಹವಾಗುಣ, ಬಿಸಿಲು ಮತ್ತು ಸನ್ನಿವೇಶ ಸೌಂದರ್ಯ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಳ್ಳಬೇಕು, ಹೀಗೆ ಮಾಡುವುದರಿಂದ ಕಟ್ಟಡದೊಳಕ್ಕೆ ಬೇಕಾದಷ್ಟು ಗಾಳಿ ಬೆಳಕು ಬರುತ್ತದೆ ; ಭಾರಿ ಮಳೆ, ಬಿಸಿಲು, ಗಾಳಿ ಬಂದರೂ ಓದುಗರಿಗೆ ತೊಂದರೆ ಆಗುವುದಿಲ್ಲ ; ವಾಚನಾಲಯಗಳ ಕಿಟಕಿಗಳು ಪ್ರಕೃತಿ ಸೌಂದರ್ಯವನ್ನು ಓದುಗರಿಗೆ ತೆರೆದಿಡುತ್ತವೆ.

28 ಕಟ್ಟಡವನ್ನು ಯೋಜಿಸುವಾಗ ಓದುಗರು, ಪುಸ್ತಕಗಳು ಮತ್ತು ಸಿಬ್ಬಂದಿಗಳ ಸಂಚಾರ ಹಾಗೂ ಸಂಮರ್ದಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

29 ನೆಲ ಅಂತಸ್ತಿನ, ಪ್ರವೇಶದಲ್ಲಿ ಒಂದು ವಿಶಾಲವಾದ ಹಜಾರ, ಕಾರ್ಡ್ ಕ್ಯಾಟಲಾಗು ವಿಭಾಗ, ಗ್ರಂಥ ವಿತರಣ ಕೇಂದ್ರ (charging desk) ಒಂದು ಪ್ರದರ್ಶನಾಲಯ, ಲಘುವಾಚನಾಲಯ, (browing rooms) ಗ್ರಂಥಪಾಲ ಮತ್ತು ಉಪಗ್ರಂಥಪಾಲರ ಕೊಠಡಿಗಳು, ತಾಂತ್ರಿಕ ವಿಭಾಗ, ಪುಸ್ತಕ ಕೊಳ್ಳಿಕೆ ವಿಭಾಗ, ಸಾಮಾನ್ಯ ವಾಚನಾಲಯ ಮತ್ತು ಪಠ್ಯಪುಸ್ತಕ ವಾಚನಾಲಯ ಮೊದಲಾದುವುಗಳೆಲ್ಲ ಇರಬೇಕು.

30 ಸಾಧ್ಯವಿದ್ದರೆ ನೆಲಮಾಳಿಗೆಯನ್ನು ಕಟ್ಟಿಸುವ ಯೋಚನೆ ಮಾಡಬಹುದು. ಅಲ್ಲಿ ಸಾರ್ವಜನಿಕ ಶೌಚಗೃಹಗಳು, ಸಾರ್ವಜನಿಕ ಟೆಲಿಫೋನುಗಳು, ಉಗ್ರಾಣ, ರಟ್ಟು

ಕಟ್ಟುವ ವಿಭಾಗ, ಛಾಯಾಚಿತ್ರದ ಕೋಣೆಗಳು, ಕ್ಯಾಂಟೀನು ಮೊದಲಾದುವುಗಳನ್ನೆಲ್ಲ ಧಾರಾಳವಾಗಿ ಕಟ್ಟಬಹುದು.

31 ಮೊದಲನೆ ಅಂತಸ್ತಿನಲ್ಲಿ ವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಾಚನಾಲಯಗಳು, ಗ್ರಂಥಾಲಯ ವಿಜ್ಞಾನದ ವಿಭಾಗ, ಗೋಷ್ಠಿ ಕೊಠಡಿ (seminar room) ವಿಶೇಷ ದಸ್ತೈವಜುಗಳ ವಿಭಾಗ, ಶ್ರವಣಗೃಹ, ಸೂಕ್ಷ್ಮಚಿತ್ರ ಹಾಗೂ ಸೂಕ್ಷ್ಮಪಟ್ಟಿಕೆ ವಾಚಿ ಕೊಠಡಿಗಳು (micro-film and micro-card reader rooms) ಸಂಶೋಧನ ಕೋಷ್ಠಗಳು (research-carrels) ಮೊದಲಾದವುಗಳು ಇರಬೇಕು.

32 ಸ್ಟ್ಯಾಕ್ ಹಾಗೂ ಓದುವ ಸ್ಥಳಗಳ ಮಧ್ಯೆ ಅಂಗಳಗಳಿರುವಂತೆ ಯೋಜಿಸಬೇಕು.

33 ಸ್ಟ್ಯಾಕುರೂಮಿನ ಕಿಟಕಿಗಳನ್ನು ಬಿಟ್ಟು ಕಟ್ಟಡದ ಉಳಿದೆಲ್ಲ ಕೋಣೆಗಳ ಕಿಟಕಿಗಳೂ ಆದಷ್ಟು ದೊಡ್ಡವಾಗಿರಬೇಕು.

33 ಸ್ಟ್ಯಾಕುರೂಮಿನ ಕಿಟಕಿಗಳ ಮೂಲಕ ಪುಸ್ತಕಗಳು ಹೊರಗೆ ಹೋಗದಂತೆ ಅವುಗಳಿಗೆ ಗ್ರಿಲ್ಲುಗಳನ್ನು ಹಾಕಿಸಬೇಕು.

35 ಪುಸ್ತಕ ಟ್ರ್ಯಾಲಿಗಳನ್ನು ಒಂದು ಕೊಠಡಿಯಿಂದ ಇನ್ನೊಂದಕ್ಕೆ ಸುಲಭವಾಗಿ ಒಯ್ಯಬಹುದಾದಂತೆ ಎಲ್ಲ ಅಂತಸ್ತುಗಳ ನೆಲವೂ ಒಂದೇ ಮಟ್ಟಸವಾಗಿರಬೇಕು.

36 ಗ್ರಂಥಾಲಯ ಕಟ್ಟಡದಲ್ಲಿ ಈ ಸೌಕರ್ಯಗಳಿರಬೇಕು : i ಕುಡಿಯುವ ನೀರಿನ ಜಲಶೀತಕಗಳು ii ಸ್ಟ್ಯಾಕುರೂಮುಗಳಲ್ಲಿ ಪುಸ್ತಕ ಎತ್ತುಗಗಳು iii ಅಂತಸ್ಸಂಪರ್ಕ ಟೆಲಿಫೋನ್ ವ್ಯವಸ್ಥೆ iv ಫ್ಯಾನುಗಳು v ನಡಮೆಗಳಲ್ಲಿ ಮತ್ತು ಕೈಸಾಲೆಗಳಲ್ಲಿ ಒಳ್ಳೆಯ ಬೆಳಕಿನ ವ್ಯವಸ್ಥೆ vi ಸಂಶೋಧಕರ ಓದುಮೇಜುಗಳಿಗೂ ವಿಶೇಷ ಮೇಜು ದೀಪಗಳು vii ಸ್ಟ್ಯಾಕುಗಳಿಗೆ ಫೋಕಸಿಂಗ್ ದೀಪಗಳು viii ಹವಾ ನಿಯಂತ್ರಿತ ವಿರಳ ಗ್ರಂಥಗಳ ಕೊಠಡಿ ix (ವಿದ್ಯುತ್ ಹೋದಾಗ ಬೇಕಾಗುವ) ತುರ್ತು ಬೆಳಕಿನ ವ್ಯವಸ್ಥೆ ಅಗ್ನಿಶಾಮಕಗಳು xi ಅಂಗಳ ಹೊಂದಿದ ಶೌಚಗೃಹಗಳು. x ಬೆಳಗಿನ ಹಾಗೂ ರಾತ್ರಿ ಪಾಳಿಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಅನುಕೂಲಕ್ಕಾಗಿ ಒಂದು ವಿಶ್ರಾಂತಿ ಕೊಠಡಿ xii ಸುಂದರವಾದ ಹೂದೋಟ.

37 ಗ್ರಂಥಾಲಯ ಕಟ್ಟಡ ಮೊದಲ ಹಂತದಲ್ಲಿ ಮೂರು ಲಕ್ಷ ಪುಸ್ತಕಗಳನ್ನು ಹಿಡಿಸುವಷ್ಟಿರಬೇಕು.

38 ಸಂಸ್ಥೆಯ ನಿರೀಕ್ಷಿತ ಬಳಕೆದಾರರಲ್ಲಿ ಕನಿಷ್ಠಪಕ್ಷ ಸೇಕಡ ಮೂವತ್ತು ಮಂದಿಗಾದರೂ ಆಸನ ವ್ಯವಸ್ಥೆ ಮಾಡಬೇಕು.

39 ಗ್ರಂಥಪಾಲರಿಗೂ ಉಪಗ್ರಂಥಪಾಲರಿಗೂ ಕ್ಯಾಂಪಸ್ಸಿನಲ್ಲೇ ವಸತಿಯನ್ನು ಒದಗಿಸಿಕೊಡಬೇಕು. ಉಳಿದ ಗ್ರಂಥಾಲಯ ಸಿಬ್ಬಂದಿಗಳಿಗೆ ಸಾಮಾನ್ಯ ವಸತಿ ಹಂಚಿಕೆಯ ವ್ಯವಸ್ಥೆಯಲ್ಲಿ ಮೊದಲ ಆದ್ಯತೆ ನೀಡಬೇಕು, ಏಕೆಂದರೆ ಅವರಲ್ಲಿ ಕೆಲವರು ಬೆಳಗಿನ ಹಾಗೂ ಕೆಲವರು ರಾತ್ರಿಯ ಪಾಳಿಯಲ್ಲಿ ಗ್ರಂಥಾಲಯಕ್ಕೆ ಹೋಗಬೇಕಾಗುವುದು.

40 ಕ್ಯಾಂಪಸ್ಸಿನ ಹೊರಗೆ ವಾಸಿಸುವ ವಿದ್ಯಾರ್ಥಿಗಳು, ಅಧ್ಯಾಪಕರು, ಸಿಬ್ಬಂದಿ ವರ್ಗದವರು, ಊರಿನ ಗಣ್ಯರು ಮೊದಲಾದವರು ಗ್ರಂಥಾಲಯದ ಪೂರ್ಣ ಪ್ರಯೋಜನ ಪಡೆದುಕೊಳ್ಳಲು ಅವರಿಗೆ ಸಾಕಷ್ಟು ಸಾರಿಗೆ ವ್ಯವಸ್ಥೆ ಮಾಡಬೇಕು.

41 ಕ್ಯಾಂಪಸ್ಸಿನ ಹೊರಗೆ ವಾಸಿಸುವ ವಿದ್ಯಾರ್ಥಿಗಳು ತಮ್ಮ ಬಿಡುವು ವೇಳೆಯ ಬಹುಭಾಗವನ್ನು ಗ್ರಂಥಾಲಯದಲ್ಲೇ ಕಳೆಯುವಂತೆ ಪ್ರೇರಿಸಲು ಅವರಿಗೆ ಕಡಿಮೆ ಬೆಲೆ ಯಲ್ಲಿ ಉತ್ತಮ ಗುಣಮಟ್ಟದ ಆಹಾರ, ಸೇವೆಗಳು ದೊರಕುವಂತಹ ಕ್ಯಾಂಟೀನ್ ಸೌಕರ್ಯವನ್ನು ಒದಗಿಸಿಕೊಡಬೇಕು.

ಪೀಠೋಪಕರಣಗಳು

42 ಗ್ರಂಥಾಲಯದಲ್ಲಿ ಏಕತಾನತೆಯನ್ನು ತೊಲಗಿಸಿ ಅನುಕೂಲಕರವೂ ಹಿತ ಕರವೂ ಆದ ವಾತಾವರಣವನ್ನು ಸೃಷ್ಟಿಸಲು ಗೋಡೆಗಳಿಗೆ ಆಹ್ಲಾದಕರವಾದ ವರ್ಣ ವಿನ್ಯಾಸವೂ ಬಗೆಬಗೆಯ ಪೀಠೋಪಕರಣಗಳೂ ಇರಬೇಕು. ಪುಸ್ತಕಗಳನ್ನು ಜೋಡಿಸಲು ಶೆಲ್ಫುಗಳುಳ್ಳ ಉಕ್ಕಿನ ಸ್ಟ್ಯಾಕುಗಳು ಸಾಕು. ವಾಚನಾಲಯಗಳಿಗೆ ಮರದ ಪೀಠೋಪ ಕರಣಗಳನ್ನು ಒದಗಿಸಬಹುದು.

43 ಕುರ್ಚಿ, ಮೇಜು ಮೊದಲಾದವುಗಳ ಕೆಳಭಾಗಗಳಿಗೆ ರಬ್ಬರ್ ತುಂಡುಗಳನ್ನು ಹಾಕಿಸಬೇಕು. ಆಗ, ಅವುಗಳನ್ನು ಎಳೆಯುವುದರಿಂದ ಉಂಟಾಗುವ ಸಪ್ಪಳ ಕಡಿಮೆ ಯಾಗಿ ಓದುಗರಿಗೆ ಅಷ್ಟಾಗಿ ತೊಂದರೆ ಆಗುವುದಿಲ್ಲ.

44 ಕುರ್ಚಿಗಳ ಕೂರುವ ಭಾಗಕ್ಕೆ ಬೆತ್ತ ಹೆಣೆಸಬಹುದು. ಬೆನ್ನಾಸರೆಗಳನ್ನು ದುಂಡಾಗಿ ರೂಪಿಸಬಹುದು, ಇದರಿಂದ ದೀರ್ಘಕಾಲ ಓದುಗರಿಗೆ ಅನುಕೂಲ ಒದಗಿಸಿ ಕೊಟ್ಟಂತಾಗುವದು.

45 ನಡವೆಗಳಿಗೆ ಲಿನೋಲಿಯಮ್ ಜಮಖಾನಗಳನ್ನು ಹಾಸಬೇಕು. ಗ್ರಂಥಾ ಲಯದಲ್ಲಿ ಉಚಿತ ಸ್ಥಾನಗಳಲ್ಲಿ ಹೂಕುಂಡಗಳನ್ನಿಟ್ಟಿರಬೇಕು.

46 ಸಜ್ಜು ಸರಂಜಾಮುಗಳ ಹಾಗೂ ಪೀಠೋಪಕರಣಗಳ ವಿವರ, ಚಿತ್ರ ಅಂದಾಜುಬೆಲೆ, ತಯಾರಕರ ಹೆಸರು ಮೊದಲಾದವುಗಳನ್ನೆಲ್ಲ ನಮೂದಿಸಿರುವ ಕೈಪಿಡಿ ಅತ್ಯಗತ್ಯ.

3 ಪುಸ್ತಕಗಳು

47 ವಿಶ್ವವಿದ್ಯಾನಿಲಯ ಗ್ರಂಥಾಲಯವು ಇಂತಿಷ್ಟೇ ಪುಸ್ತಕಗಳನ್ನು ಹೊಂದಿರ ಬೇಕೆಂಬ ನಿಯಮ ವಿಧಿಸಬಾರದು.

48 ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಬೇಕಾದ ಎಲ್ಲ ಗ್ರಂಥಗಳನ್ನೂ ಬೇಗನೆ ವ್ಯವಸ್ಥಿತವಾಗಿ ಕೊಳ್ಳುವ ಸಲುವಾಗಿ ಪುಸ್ತಕ ಆಯ್ಕೆ ಉಪ ಸಮಿತಿಗಳನ್ನು ರಚಿಸಬೇಕು. ಈ ಉಪಸಮಿತಿಗಳ ವಿಭಾಗಗಳ ಮುಖ್ಯಸ್ಥರು ಅಥವಾ ಅವರಿಂದ ನಾಮಕರಣರಾದವರು ಮತ್ತು ಗ್ರಂಥಪಾಲರು ಅಥವಾ ಅವರಿಂದ ನಾಮಕರ ಣರಾದವರು ಇರಬೇಕು.

49 ಈ ಉಪಸಮಿತಿಗಳು ಮೇಲಿಂದ ಮೇಲೆ ಸೇರಿ ಪುಸ್ತಕಗಳನ್ನು ಆಯ್ಕೆ ಮಾಡುವ ಸಾಮುಗ್ರಿಗಳನ್ನು ನೋಡಿ ಯಾವ ಯಾವ ಪುಸ್ತಕಗಳನ್ನು ತರಿಸಿಕೊಳ್ಳಬೇಕೆಂಬ ಪಟ್ಟಿಗಳನ್ನು ತಯಾರಿಸಬೇಕು.

50 ತಜ್ಞರು ಶಿಫಾರಸು ಮಾಡಿದ ಪುಸ್ತಕಗಳನ್ನು ಗ್ರಂಥಪಾಲರು ವಿವಿಧವಿಷಯಗಳಿಂದು ನಿಗದಿ ಮಾಡಿದ ಆಯುವ್ಯಯದ ಮಿತಿಯಲ್ಲಿ ಕೊಳ್ಳುವ ಅಧಿಕಾರ ಹೊಂದಿರಬೇಕು.

51 ಪುಸ್ತಕಗಳನ್ನು ಪುಸ್ತಕವ್ಯಾಪಾರಿಗಳ ಮೂಲಕ ತರಿಸಿಕೊಳ್ಳಬೇಕು. ಆಗ, ಪುಸ್ತಕವ್ಯಾಪಾರಿಯು ಪುಸ್ತಕಗಳನ್ನು ತಕ್ಷಣ ಮತ್ತು ಭಾರತ ಸರಕಾರದವರು ಮೇಲಿಂದ ಮೇಲೆ ನಿಗದಿಪಡಿಸುವ ರಿಯಾಯಿತಿಗಳಿಗನುಸಾರವಾಗಿ ಒದಗಿಸಬಲ್ಲನೆ ಎಂಬ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

52 ಪುಸ್ತಕಗಳನ್ನು ಒದಗಿಸಲು ಪುಸ್ತಕವ್ಯಾಪಾರಿಗಳಿಗೆ ಈ ಕೆಳಕಂಡಂತೆ ಕಾಲಾವಕಾಶ ಕೊಡಬಹುದು :

ಭಾರತೀಯ ಪುಸ್ತಕಗಳಿಗೆ 15 ದಿನಗಳು
ಬ್ರಿಟಿಷ್ ಪುಸ್ತಕಗಳಿಗೆ 2–3 ತಿಂಗಳು
ಅಮೇರಿಕೆ ಹಾಗೂ ಇತರ ಪುಸ್ತಕಗಳಿಗೆ 3–4 ತಿಂಗಳು

53 ಒಂದೇ ಸಮನಾಗಿ ಏರುತ್ತಿರುವ ಗ್ರಂಥಗಳ ಬೆಲೆಗಳಿಂದಾಗಿ ಬಜೆಟ್‌ನಲ್ಲಿ ಒದಗಿಸಿರುವ ಹಣ ಕುಗ್ಗುತ್ತಿರುವುದರಿಂದ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಆರಿಸುವಾಗ ಎಚ್ಚರಿಕೆ ವಹಿಸಬೇಕು. ವಿವೇಕವಾಗಿ ಪುಸ್ತಕಗಳನ್ನು ಆರಿಸುವುದರಿಂದ ಸೇರ್ಪಡೆ, ವರ್ಗೀಕರಣ ಮತ್ತು ಸಂಗ್ರಹಣ— ಈ ಎಲ್ಲ ವಿಭಾಗಗಳಲ್ಲೂ ಹಣದ ಉಳಿತಾಯವಾಗುತ್ತದೆ.

ಸಹಕಾರದ ಆಧಾರದ ಮೇಲೆ ಹೆಚ್ಚು ಬೆಲೆಯ ವಾಚನಸಾಮುಗ್ರಿಯನ್ನು ಸೇರ್ಪಡಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಬೇಕು. ಒಂದು ಸ್ಥಳದ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರೂ ಅವುಗಳ ಗ್ರಂಥಪಾಲರೂ ಒಟ್ಟಿಗೆ ಕಲೆತು ಸಹಕಾರದ ಮೇಲೆ ವಾಚನ ಸಾಮುಗ್ರಿಯನ್ನು ಗ್ರಂಥಾಲಯಗಳಿಗೆ ಸೇರ್ಪಡಿಸಿಕೊಳ್ಳುವ ತತ್ವಗಳನ್ನು ರೂಪಿಸಿಕೊಳ್ಳಬೇಕು.

55 ನಮ್ಮ ಅಲ್ಪಪ್ರಮಾಣದ ವಿದೇಶೀ ವಿನಿಮಯ ಸಂಗ್ರಹಗಳು, ನಾವು ಭಾರೀ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ವಿದೇಶೀ ಸಾಹಿತ್ಯ (ನಮ್ಮ ವಾರ್ಷಿಕ ಸಂಗ್ರಹದಲ್ಲಿ ಸೇಕಡಾ 60ರಷ್ಟು ವಿದೇಶೀ ಸಾಹಿತ್ಯವಾಗಿರುತ್ತದೆ) ಮತ್ತು ನಿರಂತರ ಏರುತ್ತಿರುವ ಬೆಲೆಗಳ ಬಿಕ್ಕಟ್ಟು—ಇವನ್ನೆಲ್ಲ ಗಮನಿಸಿದರೆ ನಮಗೆ ಅಂತಹ ಸಹಕಾರೀ ಯೋಜನೆಗಳು ಅತ್ಯಗತ್ಯ ಎನಿಸುತ್ತದೆ.

56 ವಿಶ್ವವಿದ್ಯಾನಿಲಯದ ಕ್ಯಾಂಪಸ್ಸಿನಲ್ಲಿರುವ ವಿಭಾಗೀಯ ಗ್ರಂಥಾಲಯಗಳ (departmental libraries)ಗ್ರಂಥಸಂಗ್ರಹ ಮೊದಲಾದವುಗಳನ್ನು ಕ್ಯಾಂಪಸ್ಸಿನ

ಕೇಂದ್ರ ಗ್ರಂಥಾಲಯವೇ ಮಾಡಬೇಕು; ಆಗ ಒಂದೇ ಪುಸ್ತಕವನ್ನು ಎರಡೆರಡು ಸಲ ಕೊಳ್ಳುವುದನ್ನು ತಪ್ಪಿಸಬಹುದು.

57 ಗ್ರಂಥಪಾಲ ಹಾಗೂ ಅವನ ಸಹೋದ್ಯೋಗಿಗಳು, ವಿಭಾಗಗಳ ಮುಖ್ಯಸ್ಥರ ನೆರವು ಸಹಕಾರಗಳಿಂದ ವ್ಯವಸ್ಥಿತವಾದ ರೀತಿಯಲ್ಲಿ ಗ್ರಂಥಸಂಗ್ರಹ ಮಾಡುವ ಹೊಣೆ ಹೊತ್ತುಕೊಳ್ಳಬೇಕು.

58 ಗ್ರಂಥಸಂಗ್ರಹದಲ್ಲಿ ಇರುವ ಅರೆಕೊರೆಗಳನ್ನು ತುಂಬಲು ಹಾಗೂ ಮುಂದೆ ಪರವು ಪ್ರಯೋಜನಕ್ಕೆ ಬರುವ ಇತರ ಶೀರ್ಷಿಕೆಗಳನ್ನು ಕೊಳ್ಳಲು ಗ್ರಂಥದ ಬಜೆಟ್ಟಿನಿಂದ ಸೇಕಡ 25ರಿಂದ 40ರಷ್ಟನ್ನು ಉಪಯೋಗಿಸುವ ಅಧಿಕಾರ ಗ್ರಂಥಪಾಲನಿಗಿರಬೇಕು.

59 ನಮ್ಮ ಬಡ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಗ್ರಂಥಾಲಯದಲ್ಲಿ ಪಠ್ಯಪುಸ್ತಕ ಸಂಗ್ರಹವನ್ನು ಸಾಕಷ್ಟು ಬಲಪಡಿಸಬೇಕು. ಕನಿಷ್ಠ ಪಕ್ಷ ಪ್ರತಿ ಹತ್ತು ಮಂದಿ ವಿದ್ಯಾರ್ಥಿಗಳಿಗೆ ಒಂದು ಪಠ್ಯಪುಸ್ತಕ ಇರಬೇಕು.

60 ತಮ್ಮ ತಮ್ಮ ವಿಷಯಗಳಲ್ಲಿ ಪಠ್ಯಪುಸ್ತಕಗಳನ್ನು ಬರೆಯುವಂತೆ ಸಮರ್ಥರಾದ ಅಧ್ಯಾಪಕ-ಲೇಖಕರನ್ನೂ ಕೇಳಿಕೊಂಡು, ಅವರಿಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಸಂಬಳ ಸಹಿತ ರಜೆ ಮೊದಲಾದುವುಗಳನ್ನು ಮಂಜೂರು ಮಾಡಬೇಕೆಂದು ಒತ್ತಾಯಪಡಿಸಬೇಕು. ಏಕೆಂದರೆ ವಿದೇಶಿ ವಿನಿಮಯವನ್ನು ಉಳಿಸಲು ಇರುವ ಮಾರ್ಗ ಇದೊಂದೇ. ತಾವು ಮಾಡಬೇಕಾದ ಸಂಶೋಧನಾಕಾರ್ಯದ ಜೊತೆಗೆ ಇಂತಹ ಶಿಷ್ಟ ಪಠ್ಯಪುಸ್ತಕಗಳನ್ನು ಬರೆಯುವ ಅಧ್ಯಾಪಕರಿಗೆ ಯೋಗ್ಯ ಪ್ರಾಮುಖ್ಯತೆ ಕೊಡಬೇಕು.

61 ಅಧ್ಯಾಪನಕ್ಕೂ ಅಧ್ಯಯನಕ್ಕೂ ಅಗತ್ಯವಾದ ಪುಸ್ತಕಗಳನ್ನು ಕೊಳ್ಳಲು ಅಧ್ಯಾಪಕರಿಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೂ ಸೂಕ್ತ ರೀತಿಯಲ್ಲಿ ಧನಸಹಾಯ ನೀಡುವ ಸಾಧ್ಯತೆಗಳನ್ನೆಲ್ಲಾ ವಿಶ್ವವಿದ್ಯಾನಿಲಯಗಳು ಪರಿಶೀಲಿಸಬೇಕು.

62 ಗ್ರಂಥಾಲಯಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ದಾಖಲೆಗಳನ್ನೆಲ್ಲಾ ಸಂಗ್ರಹಿಸಬೇಕು. ಇದಕ್ಕಾಗಿ, ವಿಶ್ವವಿದ್ಯಾನಿಲಯಗಳನ್ನು ಆಗಾರ ಕೇಂದ್ರಗಳನ್ನಾಗಿ [depository centres] ಪರಿಗಣಿಸಿ, ಗೋಪ್ಯವಲ್ಲದ ದಾಖಲೆಗಳ ಪ್ರತಿಗಳನ್ನು ಪ್ರಕಟವಾದ ಕೂಡಲೇ ಗೌರವ ಪ್ರತಿಯಾಗಿ ಕಳಿಸಿಕೊಡಬೇಕೆಂದು ಆಯಾ ಸರ್ಕಾರಗಳನ್ನು ಕೋರಬೇಕು.

63 ಪ್ರಾದೇಶಿಕ ಭಾಷೆಗಳಲ್ಲಿರುವ ಪುಸ್ತಕಗಳ ಎರಡೆರಡು ಪ್ರತಿಗಳನ್ನು ಕೊಳ್ಳಬಹುದು. ಇವುಗಳಲ್ಲಿ ಬಹುಮಟ್ಟಿನ ಪುಸ್ತಕಗಳು ಉದ್ದಿಷ್ಟ ಮಟ್ಟದಲ್ಲಿ ಇಲ್ಲದಿರುವುದರಿಂದ ಅವು ಬಲು ಬೇಗನೆ ಜೀರ್ಣವಾಗಿ ಬಿಡುತ್ತವೆ; ಮತ್ತು ಮುಂದೆ ಯಾವಾಗಲಾದರೂ ಬೇಡಿಕೆ ಬಂದಾಗ ಅವುಗಳು ಸಿಗುವುದು ಕಷ್ಟವಾಗುತ್ತದೆ. ಇವುಗಳನ್ನು ಕಡಿಮೆ ಸಂಖ್ಯೆಯಲ್ಲಿ ಅಚ್ಚಿಸುತ್ತಾರೆ; ಮತ್ತು ಈ ಪುಸ್ತಕಗಳು ಪುನರ್ಮುದ್ರಣಗೊಳ್ಳುವುದೂ ಅಪರೂಪ.

64 ಒಂದು ಸಂಸ್ಥೆಯ ಅಧ್ಯಾಪನ ಕಾರ್ಯದಲ್ಲಿ ಅದರಲ್ಲೂ ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ, ಭೂಗೋಲಶಾಸ್ತ್ರ, ವಿದೇಶೀ ಭಾಷೆಗಳು ಮೊದಲಾದುವುಗಳನ್ನು ಬೋಧಿಸುವಲ್ಲಿ ಶ್ರವಣ-ವೀಕ್ಷಣ ಸಾಧನಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಆದ್ದರಿಂದಲೇ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ಚಲನಚಿತ್ರಗಳು ಚಿತ್ರಪಟ್ಟಿಕೆಗಳು (film strips), ಭೂಪಟಗಳು, ಚಿತ್ರಗಳು, ಸ್ಲೈಡುಗಳು, ಧ್ವನಿಮುದ್ರಿತ ಟೇಪುಗಳು ಮತ್ತು ಲಾಂಗ್ ಪ್ಲೇಯಿಂಗ್ ರೆಕಾರ್ಡುಗಳು-ಇವನ್ನೆಲ್ಲ ಸಂಗ್ರಹಿಸಬೇಕು.

65 ಗ್ರಂಥಾಲಯಗಳು ಸ್ಥಳೀಯ ಇತಿಹಾಸಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ಸಂಗ್ರಹಿಸಬೇಕು. ಅಂತಹ ಸಂಗ್ರಹಗಳ ವಿವರಣಾತ್ಮಕ ಗ್ರಂಥಸೂಚಿಗಳನ್ನು ತಯಾರಿಸಬೇಕು.

66 ದಾನವಾಗಿ ಬರುವ ಪುಸ್ತಕಗಳು ಸ್ವೀಕಾರಯೋಗ್ಯವೆ ಅಲ್ಲವೆ ಎಂಬುದನ್ನು ಪರೀಕ್ಷಿಸಬೇಕು.

67 ಅತಿಯಾಗಿ ಉಪಯೋಗಿಸುವುದರಿಂದ ಜೀರ್ಣವಾಗಿಹೋಗಿ ದುರಸ್ತಿಗೂ ಸಾಧ್ಯವಿಲ್ಲದ ಪುಸ್ತಕಗಳನ್ನು ಕಾಲಕಾಲಕ್ಕೆ ತೆಗೆದುಹಾಕಬೇಕು.

68 ಬಜೆಟ್ ಹಣವನ್ನು ಏಕಪ್ರಕಾರವಾಗಿ ಉಪಯೋಗಿಸಿಕೊಳ್ಳಲು, ಮತ್ತು ವಿವಿಧ ವಿಷಯಗಳ ಸಂಗ್ರಹಗಳನ್ನು ಒಂದೇರೀತಿಯಲ್ಲಿ ಬೆಳೆಸಲು ಮೂರು ತಿಂಗಳಿಗೊಮ್ಮೆಯಾದರೂ ಪುಸ್ತಕಗಳ ಹಾಗೂ ನಿಯತಕಾಲಿಕಗಳ ವೆಚ್ಚದ ತಪಶೀಲನ್ನು ತಯಾರಿಸಬೇಕು.

69 ವ್ಯಾಪಾರಿ ಗ್ರಂಥಾಲಯ ಯೋಜನೆಯು (ಅಂದರೆ, ಒಂದು ಒಪ್ಪಂದದ ಮೇರೆಗೆ ಪ್ರಕಾಶಕನು ಪುಸ್ತಕಪ್ರಕಟವಾದಂತೆಲ್ಲ ಅವುಗಳನ್ನು ಗ್ರಂಥಾಲಯಕ್ಕೆ ಕಳುಹಿಸಿಕೊಡಬೇಕೆಂದು, ಗ್ರಂಥಾಲಯವು ಅವುಗಳಲ್ಲಿ ಬೇಕಾದನ್ನುಮಾತ್ರ ಇಟ್ಟುಕೊಂಡು ಬೇಡದವನ್ನು ಆ ಪ್ರಕಾಶಕನ ವೆಚ್ಚದಲ್ಲೇ ಹಿಂದಿರುಗಿಸುವ ಯೋಜನೆ) (**Dealer Library) Plan,** ಕಾರ್ಯತಃ ಯಶಸ್ವಿಯಾಗಿರುವುದರಿಂದ ಭಾರತೀಯ ಪ್ರಕಾಶಕರ ವಿಷಯದಲ್ಲೂ ಅದನ್ನು ವಿಸ್ತರಿಸುವುದು ಅಗತ್ಯ.

4. ಅನುಕ್ರಮಿಕಗಳು

70 ಇರುವ ಅಲ್ಪ ವಿದೇಶೀ ವಿನಿಮಯನಿಧಿಯನ್ನು ಉಳಿತಾಯ ಮಾಡಲು ವಿಶ್ವವಿದ್ಯಾನಿಲಯ ಪತ್ರಿಕೆಗಳನ್ನು ದೇಶ ವಿದೇಶಗಳಲ್ಲಿನ ವಿದ್ವತ್ಸಂಘಗಳೇ ಮೊದಲಾದುವುಗಳು ಹೊರಡಿಸುವ ಪತ್ರಿಕೆಗಳೊಡನೆ ವಿನಿಮಯ ಮಾಡುವುದನ್ನು ಹೆಚ್ಚಿಸುವ ಪ್ರಯತ್ನ ಮಾಡಬೇಕು.

71 ಭಾರೀ ಚಂದಾ ಮೊತ್ತದ ನಿಯತಕಾಲಿಕೆಗಳನ್ನು ಸ್ಥಳೀಯ ಸಂಸ್ಥೆಗಳಲ್ಲಿಯಾದರೂ ದ್ವಿಪ್ರತಿಯಾಗನಂತೆ ನೋಡಿಕೊಳ್ಳಬೇಕು.

72 ನಿಯತ ಕಾಲಿಕೆಗಳ ಸಂಚಿಕೆಗಳು ಕ್ರಮವಾಗಿ ಬರುವಂತೆ ಮಾಡಲು ಅವುಗಳಿಗೆ ಚಂದಾಹಣವನ್ನು ಮುಂಗಡವಾಗಿಯೇ, ಅಂದರೆ ಪ್ರತಿವರ್ಷ ಅಕ್ಟೋಬರ್ ತಿಂಗಳಿಗೆ

ಮುಂಚೆ, ಪಾವತಿ ಮಾಡುವ ಏರ್ಪಾಡು ಮಾಡಬೇಕು ; ಮತ್ತು ಮುಂಗಡವಾಗಿಯೇ ಎಲ್ಲ ಚಂದಾದಾರಿಕೆ ಬಿಲ್ಲುಗಳನ್ನು ಪಾಸು ಮಾಡಬೇಕೆಂದು ಅಕೌಂಟ್ಸ್ ಮತ್ತು ಆಡಿಟ್ ವಿಭಾಗಗಳನ್ನು ಕೋರಬೇಕು.

73 ಸಾಧ್ಯವಾದ ಮಟ್ಟಿಗೆ ನಿಯತ ಕಾಲಿಕೆಗಳ ಚಂದಾದಾರಿಕೆಯನ್ನು ಆ ಸ್ಥಳದ ಗಣ್ಯ ಏಜೆಂಟರಿಂದ ತೆಗೆದುಕೊಳ್ಳಬೇಕು. ಇದರಿಂದ ಪತ್ರವ್ಯವಹಾರದ ಕೆಲಸ ತಪ್ಪುತ್ತದೆ.

74. ಗ್ರಂಥಾಲಯಕ್ಕೆ ತರಿಸುವ ಎಲ್ಲ ನಿಯತಕಾಲಿಕಗಳಿಗೂ ಒಳ್ಳೆಯ (ಕ್ಯಾಲಿಕೊ) ಬೈಂಡಿನ ಅವಶ್ಯಕತೆ ಇಲ್ಲ. ಅಷ್ಟು ಮುಖ್ಯವಲ್ಲದ ನಿಯತಕಾಲಿಕಗಳಿಗೆ ಸುಮಾರಾದ ರಟ್ಟು ಕಟ್ಟಿಸುವುದರಿಂದ ಹಣ ಉಳಿಯುತ್ತದೆ.

75. (ನಿಯತಕಾಲಿಕಗಳ) ಹಿಂದಿನ ಸಂಚಿಕೆಗಳನ್ನು ಬೈಂಡಿಗೆ ಕೊಡುವಾಗ ಬೇರೆ ಬೇರೆ ವಿಷಯಗಳಿಗೆ ಬೇರೆ ಬೇರೆ ಬಣ್ಣಗಳ ಕ್ಯಾಲಿಕೊ ಅಥವಾ ರಟ್ಟನ್ನು ಉಪಯೋಗಿಸುವುದು ಒಳ್ಳೆಯದು.

76. ವಿದೇಶೀ ವಿನಿಮಯವನ್ನು ಉಳಿಸುವ ದೃಷ್ಟಿಯಿಂದ 'Who's Who' ಮೊದಲಾದ ದುಬಾರಿ ಬೆಲೆಯ ವಾರ್ಷಿಕಗಳನ್ನು ಐದು ವರ್ಷಗಳಿಗೊಮ್ಮೆ ಕೊಂಡುಕೊಳ್ಳಬಹುದು.

77. ನಿಯತಕಾಲಿಕೆ ಸಂಪುಟಗಳಲ್ಲಿ ಕೊರತೆ ಬಿದ್ದ ಸದ್ಯದ ಮತ್ತು ಹಿಂದಿನ ಸಂಚಿಕೆಗಳನ್ನು ಭರತಿ ಮಾಡುವ ಉದ್ದೇಶದಿಂದ ಪ್ರತಿಯೊಂದು ಗ್ರಂಥಾಲಯವೂ ಕಾಲಕಾಲಕ್ಕೆ 'ಬೇಕಾದ ಸಂಚಿಕೆಗಳ ಪಟ್ಟಿ' ಮತ್ತು 'ಹೆಚ್ಚು ಪ್ರತಿಗಳಿರುವ ಸಂಚಿಕೆಗಳ ಪಟ್ಟಿ'ಗಳನ್ನು ತಯಾರಿಸಿ ಅವನ್ನು ತನ್ನ ಸೋದರಿ ಸಂಸ್ಥೆಗಳೊಡನೆ ವಿನಿಮಯಿಸಿಕೊಳ್ಳಬೇಕು.

78. ನಿಯತಕಾಲಿಕೆಗಳ ಹಿಂದಿನ ಸಂಪುಟಗಳನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಮೈಕ್ರೋಫಿಲ್ಮ್ ಅಥವಾ ಕಾರ್ಡುಗಳ ರೂಪದಲ್ಲಿ ಕೊಳ್ಳುವುದರಿಂದ ಸ್ಥಳದಲ್ಲಿ ಹಾಗೂ ಹಣದಲ್ಲಿ ಹೆಚ್ಚಿನ ಮಿತವ್ಯಯ ಮಾಡಿಕೊಂಡತಾಗುತ್ತದೆ.

5. ಹಣಕಾಸು

79. ವಿಶ್ವವಿದ್ಯಾನಿಲಯದ ಒಟ್ಟು ಬಜೆಟ್‌ನಲ್ಲಿ ಕನಿಷ್ಠ ಪಕ್ಷ ಸೇಕಡ 8 ರಿಂದ 10 ರಷ್ಟನ್ನು ಗ್ರಂಥಾಲಯ ವಿಭಾಗಕ್ಕೆ ಮೀಸಲಿಡಬೇಕು. ಹೀಗೆ ನಿಗದಿ ಮಾಡಲ್ಪಟ್ಟ ಹಣದಲ್ಲಿ ಗ್ರಂಥಾಲಯದ ವಿವಿಧ ಅವಶ್ಯಕತೆಗಳಿಗೆ ಕೆಳಗೆ ನಮೂದಿಸಿದ ಪ್ರಮಾಣದಲ್ಲಿ ಹಣವನ್ನು ಒದಗಿಸಬೇಕು.

i) ಪೀಠೋಪಕರಣಗಳು ಮತ್ತು ಇತರ ಸಜ್ಜು ಸರಂಜಾಮು : ಪುಸ್ತಕದ ಬಜೆಟ್ಟಿನಲ್ಲಿ ಸೇಕಡ 10ರಷ್ಟು

ii) ರಟ್ಟು ಕಟ್ಟುವಿಕೆಗೆ : ಪುಸ್ತಕ ಬಜೆಟ್ಟಿನಲ್ಲಿ ಸೇಕಡ 5 ರಷ್ಟು

iii) ಇತರೆ:

ಸ್ಟೇಶನರಿ
ಟಪಾಲು ವೆಚ್ಚ
ಮುದ್ರಣ } ಪುಸ್ತಕ ಬಜೆಟ್ಟಿನಲ್ಲಿ ಸೇಕಡ 8ರಷ್ಟು
ಪ್ರಯಾಣ ಭತ್ಯ
ಸಾದಿಲ್ವಾರು ವೊತ್ತ

80. ಪುಸ್ತಕಗಳ ಹಾಗೂ ಸಿಬ್ಬಂದಿ ವರ್ಗದ ಮೇಲಿನ ವೆಚ್ಚದ ಪ್ರಮಾಣವು ಆರಂಭದಲ್ಲಿ 1 : 1 ಇರಬೇಕು; ಆಮೇಲೆ ಅದು 1 : 2 ಆಗಬೇಕು.

81. ಒಬ್ಬ ವಿದ್ಯಾರ್ಥಿಗೆ ಸಾಲಿಯಾನ ಪುಸ್ತಕಗಳಿಗೆ 300 ರೂಗಳನ್ನು ಖರ್ಚು ಮಾಡಬೇಕು.

82. ಅನುಕ್ರಮಿಕಗಳು ಮೊದಲಾದುವುಗಳ ಸ್ಥಾಯಿಾ ಆದೇಶಗಳು ಹಾಗೂ ಪುಸ್ತಕಗಳನ್ನು ಕೊಳ್ಳಲು ನಿಗದಿಮಾಡಿದ ಹಣ ಸೀದು ಹೋಗದಂತೆ ನೋಡಿಕೊಳ್ಳಬೇಕು.

83. ಗ್ರಂಥಾಲಯ ಸೇವೆಯನ್ನು ಅತ್ಯಾವಶ್ಯಕ ಸೇವೆಯೆಂದು ಪರಿಗಣಿಸಬೇಕು. ಹಾಗೂ ದೇಶದಲ್ಲಿನ ಇತರ ಅತ್ಯಾವಶ್ಯಕ ಸೇವೆಗಳಲ್ಲಿದ್ದ ಸಿಬ್ಬಂದಿಗೆ ಲಭ್ಯವಿರುವ ಸೌಲಭ್ಯಗಳನ್ನು ಗ್ರಂಥಾಲಯ ಸಿಬ್ಬಂದಿಗೆ ದೊರಕುವಂತೆ ಮಾಡಬೇಕು.

6. ಪುಸ್ತಕಗಳ ಬಳಕೆಯನ್ನು ಹೆಚ್ಚಿಸುವುದು.

84. ಪುಸ್ತಕಗಳ ಬಳಕೆಯನ್ನು ಹೆಚ್ಚಿಸುವ ಸಲುವಾಗಿ, ಪ್ರತಿಯೊಂದು ಗ್ರಂಥಾಲಯವೂ ಈ ಕೆಳಕಂಡ ಕಾರ್ಯಕ್ರಮಗಳನ್ನು ಆರಂಭಿಸಬೇಕು: ಹೊಸ ವಿದ್ಯಾರ್ಥಿಗಳಿಗೆ ಗ್ರಂಥಾಲಯ ತರಪೇತಿಯನ್ನು ಕೊಡಬೇಕು; ಆಗಾಗ ಅವರನ್ನು ಗ್ರಂಥಾಲಯದಲ್ಲಿ ಎಲ್ಲ ಕಡೆಗೂ ಕರೆದುಕೊಂಡು ಹೋಗಿ ತೋರಿಸಬೇಕು; ಕಾರ್ಡ್ ಕ್ಯಾಟಲಾಗು ಹಾಗೂ ಪರಾಮರ್ಶನ ಕೃತಿಗಳ ಬಗ್ಗೆ ಹಾಗೂ ಅನುಸರಿಸಲಾಗಿರುವ ವರ್ಗೀಕರಣದ ಯೋಜನೆಯ ಬಗ್ಗೆ ಅವರಿಗೆ ತಿಳುವಳಿಕೆ ಕೊಡಬೇಕು.

85. ಈ ರೀತಿ ತರಪೇತಿ ಶಿಬಿರವನ್ನು ಏರ್ಪಡಿಸಿದ ನಂತರ ಅವರಿಗೆ ಒಂದು ಪರೀಕ್ಷೆಯನ್ನು ಮಾಡಬಹುದು; ಆ ಪರೀಕ್ಷೆಯಲ್ಲಿ ಚೆನ್ನಾಗಿ ಮಾಡದಿರುವವರಿಗೆ ಮತ್ತೆ ವಿಶೇಷ ಗಮನ ಕೊಡಬಹುದು.

86. ಸರಳವಾದ ಭಾಷೆಯಲ್ಲಿ ಬರೆದು ಸುಂದರವಾಗಿ ಪ್ರಕಟಿಸಿದ ಗ್ರಂಥಾಲಯ ಕೈಪಿಡಿಯೊಂದನ್ನು, ಗ್ರಂಥಾಲಯಕ್ಕೆ ಬರುವವರಿಗೆಲ್ಲ ಅತ್ಯಂತ ಕಡಮೆ ಬೆಲೆಯಲ್ಲಿ ಒದಗಿಸಿಕೊಡಬೇಕು. ಇದರಲ್ಲಿ ಗ್ರಂಥಾಲಯದ ವಿನ್ಯಾಸವೇನು, ಅನುಸರಿಸಿರುವ ವರ್ಗೀಕರಣ ಯೋಜನೆ ಎಂಥದು, ಏರ್ಪಡಿಸಿರುವ ಕ್ಯಾಟಲಾಗಿನ ವಿಧಾನ ಯಾವುದು, ಯಾವ ಯಾವ ಅನುಕೂಲತೆಗಳು ಗ್ರಂಥಾಲಯದಲ್ಲಿ ದೊರಕುತ್ತವೆ ಎನ್ನುವುದನ್ನೆಲ್ಲ ವಿಸ್ತಾರವಾಗಿ ತಿಳಿಸಿರಬೇಕು ಆ ಕೈಪಿಡಿಯಲ್ಲಿ ಗ್ರಂಥಾಲಯದ ಬೇರೆ ಬೇರೆ ಅಂತಸ್ತುಗಳ ನಕ್ಷೆಗಳೂ ಇರಬೇಕು.

87. ಗ್ರಂಥಪಾಲನಾಗಲೀ ಅಥವಾ ಅವನ ಸಹೋದ್ಯೋಗಿಗಳಾಗಲೀ ವರ್ಷಾರಂಭದಲ್ಲಿ ಪ್ರತಿಯೊಂದು ವಿಭಾಗಕ್ಕೂ ಭೇಟಿ ಇತ್ತು, ಹೊಸದಾಗಿ ಸೇರಿದ ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಆಯಾ ವಿಭಾಗಕ್ಕೆ ಸಂಬಂಧಿಸಿದ ಗ್ರಂಥಗಳು, ನಿಯತಕಾಲಿಕೆಗಳು, ಸಂದರ್ಭಗ್ರಂಥಗಳು ಇತ್ಯಾದಿ ವಿಷಯ ಕುರಿತು ವಿವರವಾದ ಪ್ರವಚನಗಳನ್ನು ನೀಡಬೇಕು.

88. ಪ್ರತಿಯೊಂದು ಗ್ರಂಥಾಲಯವೂ ತನ್ನ ಬಳಕೆದಾರರಿಗಾಗಿ ಪರಾಮರ್ಶನ ಮತ್ತು ಗ್ರಂಥಗಳ ಮಾಹಿತಿ ಸೇವೆ (Reference and Information Service) ಗಳನ್ನು ಒದಗಿಸಬೇಕು. ಏಕೆಂದರೆ ಪುಸ್ತಕಗಳ ಬಳಕೆಯನ್ನು ಹೆಚ್ಚಿಸಲು ಇದೇ ಅತ್ಯುತ್ತಮವಾದ ಮಾರ್ಗ.

89. ಮಿತವ್ಯಯ ಮತ್ತು ದಕ್ಷತೆಯ ದೃಷ್ಟಿಯಿಂದ ಕೇಂದ್ರೀಕೃತ ಗ್ರಂಥಾಲಯ ಸೇವೆ ಒಳ್ಳೆಯದು. ಕೇಂದ್ರ ಗ್ರಂಥಾಲಯವು ವಾಚನ ಸಾಮಗ್ರಿಯ ಪುನರಾವರ್ತನೆಯನ್ನು ತಪ್ಪಿಸುವುದರ ಮೂಲಕ ಹಣವನ್ನು ಉಳಿಸುತ್ತದೆ. ಇದರಿಂದ ಕ್ಯಾಂಪಿನ ಎಲ್ಲ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ವರ್ಷಾದ್ಯಂತ ಒಂದೇ ಕಡೆಯಲ್ಲಿ ವಾಚನ ಸಾಮಗ್ರಿಗಳೆಲ್ಲ ಸುಲಭವಾಗಿ ದೊರಕುವಂತಾಗುತ್ತದೆ.

90 ಗ್ರಂಥಾಲಯದಲ್ಲೇ ಗ್ರಂಥಗಳನ್ನು ಓದುವ ಅಭ್ಯಾಸ ಬೆಳೆಸಿಕೊಳ್ಳಲು ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ಇದೇ ಅತ್ಯುತ್ತಮವಾದ ಮಾರ್ಗ.

91 ಮುಕ್ತಪ್ರವೇಶವುಳ್ಳ ಗ್ರಂಥಾಲಯಕ್ಕೆ ಈ ಕೆಳಕಂಡ ಮುಂಜಾಗರೂಕತೆಯ ಕ್ರಮಗಳನ್ನು ಸೂಚಿಸಲಾಗಿದೆ :

a) ಗ್ರಂಥಾಲಯಕ್ಕೆ ಹೋಗಲು ಬರಲು ಒಂದೇ ಒಂದು ದ್ವಾರವಿರಬೇಕು.

b) ಗ್ರಂಥಾಲಯದ ಬಳಕೆದಾರರು ತಮ್ಮ ಛತ್ರಿ, ಹ್ಯಾಟು, ಬ್ರೀಫ್ ಕೇಸ್, ಸ್ವಂತಪುಸ್ತಕಗಳು ಮೊದಲಾದ ವಸ್ತುಗಳನ್ನು ಕೌಂಟರಿನಲ್ಲಿರುವ ಸಹಾಯಕನ ಬಳಿ ಇಟ್ಟು ಒಂದು ಟೋಕನ್ನನ್ನು ಪಡೆಯಬೇಕು.

c) ಟಿಪ್ಪಣಿಗಳನ್ನು ಬರೆದುಕೊಳ್ಳಲು ಒಂದು ನೋಟ್ ಬುಕ್ಕನ್ನು ಒಯ್ಯಲು ಅವರಿಗೆ ಅನುಮತಿ ಇರಬೇಕು.

d) ಗ್ರಂಥಾಲಯವನ್ನು ಬಿಟ್ಟು ಹೋಗುವಾಗ ಅವರು ಕೌಂಟರಿನಲ್ಲಿರುವ ಸಿಬ್ಬಂದಿಗೆ ತಾವು ಒಯ್ಯುತ್ತಿರುವ ವಸ್ತುಗಳನ್ನು ತೋರಿಸಬೇಕು.

92 ಇಷ್ಟಾದರೂ, ಪುಸ್ತಕಗಳು ಕಳೆದುಹೋಗುವ ಸಂಭವ ಇದ್ದೇ ಇದೆ. ಎರವಲಾಗಿಕೊಟ್ಟ ಹಾಗೂ ಗ್ರಂಥಾಲಯದಲ್ಲೇ ಓದಲ್ಪಟ್ಟ ಪ್ರತಿ ಸಾವಿರ ಪುಸ್ತಕಗಳಿಗೆ ಮೂರು ಪುಸ್ತಕಗಳು ನಷ್ಟವಾಗುವುದು ಅನಿವಾರ್ಯವೆಂದು ಒಪ್ಪಿಕೊಳ್ಳಬೇಕು.

93 ಪುಸ್ತಕಗಳು ಕಳೆದುಹೋದರೆ ಅದಕ್ಕೆ ಗ್ರಂಥಾಲಯ ಸಿಬ್ಬಂದಿಗಳನ್ನು ಹೊಣೆಗಾರರನ್ನಾಗಿ ಮಾಡಕೂಡದು. ಅದರಂತೆಯೇ ಅವರಿಂದ ಶೇವಣಿ ತೆಗೆದುಕೊಳ್ಳುವ ದುಷ್ಟ ಪದ್ಧತಿಯನ್ನು ತೊಡೆದುಹಾಕಬೇಕು.

94 ಪುಸ್ತಕಗಳ ಗಣತಿ ತೆಗೆದುಕೊಳ್ಳುವುದು ಗ್ರಂಥಾಲಯಸೇವೆಗೆ ಅಡ್ಡಿ, ಆದ್ದರಿಂದ ಅದನ್ನು ಕಂತು ಕಂತಾಗಿ ಮಾಡಬಹುದು.

95 ಪುಸ್ತಕಗಳ ಗಣತಿ ಮಾಡಬೇಕಾದರೆ ವರ್ಗೀಕರಣಯೋಜನೆ, ಷೆಲ್ಫ್ ಲಿಸ್ಟನ್ನು ಉಪಯೋಗಿಸುವುದೇ ಮೊದಲಾದವುಗಳ ಜ್ಞಾನ ಅಗತ್ಯ, ಆದ್ದರಿಂದ ಅದನ್ನು ಗ್ರಂಥಾಲಯದ ತಾಂತ್ರಿಕ ಸಿಬ್ಬಂದಿ ಮಾಡಬೇಕೇ ಹೊರತು ಗ್ರಂಥಾಲಯದ ಜ್ಞಾನವಿಲ್ಲದ ಹೊರಗಿನವರು ಮಾಡಕೂಡದು.

96. ಲಘುವಾಚನ ಸಾಮಗ್ರಿಯುಳ್ಳ ಸುಸಜ್ಜಿತ ಲಘುವಾಚನಾಲಯಗಳು (browsing rooms) ಓದುವ ಹವ್ಯಾಸವುಳ್ಳವರನ್ನು ನಿಜವಾದ ಓದುಗರನ್ನಾಗಿ ಮಾಡುತ್ತವೆ, ಆದುದರಿಂದ ಪ್ರತಿಯೊಂದು ಗ್ರಂಥಾಲಯವೂ ಲಘುವಾಚನಾಲಯಗಳನ್ನು ಒದಗಿಸುವ ಉದ್ದೇಶ ಇಟ್ಟುಕೊಳ್ಳಬೇಕು.

97. ಓದುಗರಿಗೆ ಗ್ರಂಥಾಲಯಕ್ಕೆ ಹೊಸದಾಗಿ ಸೇರಿಸಿದ ಪುಸ್ತಕಗಳ ಪಟ್ಟಿಗಳನ್ನು ಕಾಲಕಾಲಕ್ಕೆ ಪ್ರಕಟಿಸುವುದು ದ್ವಿಪ್ರತಿ ಸೌಲಭ್ಯ ಒದಗಿಸಿಕೊಡುವುದು; ಪುಸ್ತಕ ಪ್ರದರ್ಶನ, ಉಪನ್ಯಾಸಗಳು, ಕಾವ್ಯವಾಚನ , ನಾಟಕಗಳು, ಚಿತ್ರಪ್ರದರ್ಶನ ಮೊದಲಾದವುಗಳನ್ನು ಏರ್ಪಡಿಸುವುದು. ಅದರಂತೆಯೇ ಯಾಂತ್ರೀಕರಣದಿಂದ ಓದುಗರಿಗೆ ದ್ರುತಗತಿಯಿಂದ ಸೇವೆ ಸಲ್ಲಿಸಬಹುದು.

98. ಯೋಗ್ಯರಾದ ಬಡ ವಿದ್ಯಾರ್ಥಿಗಳನ್ನು ಗ್ರಂಥಾಲಯದಲ್ಲಿ ಸಹಾಯಕರಾಗಿ ವಿಶಿಷ್ಟವಾದ ಸಂಭಾವನೆ ಮೇಲೆ ನೇಮಿಸಿಕೊಳ್ಳಬಹುದು. ಅವರಿಗೆ ವಾರಕ್ಕೆ ಸುಮಾರು 10 ಗಂಟೆಗಳ ಕಾಲ ಕೆಲಸ ಕೊಡಬಹುದು. ಇದರಿಂದ ಅವರಿಗೆ ಕಲಿಕೆ, ಗಳಿಕೆ ಎರಡೂ ಆದಂತೆ ಆಗುತ್ತದೆ; ಅಲ್ಲದೆ ವಿದ್ಯಾರ್ಥಿ ಬಳಗದಲ್ಲಿ ಗ್ರಂಥಾಲಯಕ್ಕೆ ಒಳ್ಳೆಯ ಪ್ರಚಾರವೂ ದೊರಕುತ್ತದೆ.

7. ಗ್ರಂಥಾಲಯ ಸಹಕಾರ

99. ದೇಶದ ಅತ್ಯಲ್ಪ ವಿದೇಶೀ ವಿನಿಮಯವನ್ನೂ, ಈಗಾಗಲೇ ನಮ್ಮಲ್ಲಿರುವ ಸಾಧನ ಸಂಪತ್ತನ್ನೂ ಪೂರ್ಣವಾಗಿ ಉಪಯೋಗಿಸಿಕೊಳ್ಳಲು ಗ್ರಂಥಾಲಯಗಳು ಪರಸ್ಪರ ಸಾಧ್ಯವಾದಷ್ಟು ಮಟ್ಟಿಗೂ ಸಹಕರಿಸಬೇಕು.

100. ಅಂದರೆ, ವಿಶ್ವವಿದ್ಯಾನಿಲಯ ಗ್ರಂಥಾಲಯಗಳು

i) ಪ್ರಾದೇಶಿಕವಾಗಿ, ಸಹಕಾರೀ ಪುಸ್ತಕ ಸೇರ್ಪಡೆ ಯೋಜನೆಗಳನ್ನು ಆರಂಭಿಸಬೇಕು.

ii) ಕೂಡಲೇ ದೇಶದ ಮಹತ್ವಪೂರ್ಣ ಸಂಗ್ರಹಗಳ ಹಾಗೂ ಮಹಾ ಪ್ರಬಂಧಗಳ ಪ್ರೌಢ ನಿಯತಕಾಲಿಕೆಗಳ ರಾಷ್ಟ್ರೀಯ ಸಂಯೋಜಿತ ಕ್ಯಾಟಲಾಗಿನ ಸಂಕಲನ ಕಾರ್ಯದಲ್ಲಿ ತೊಡಗಬೇಕು.

iii) ರಾಷ್ಟ್ರೀಯ ವೃತ್ತಪತ್ರಿಕೆಗಳು, ಅಪರೂಪ ಕೃತಿಗಳು ಹಾಗೂ ಜೀರ್ಣವಾದ ವಾಚನ ಸಾಮಗ್ರಿಗಳನ್ನು ಸೂಕ್ಷ್ಮ ಚಿತ್ರಣ ಮಾಡುವ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು.

iv) ಅಷ್ಟೊಂದು ಬೇಡಿಕೆ ಇಲ್ಲದ ವಾಚನ ಸಾಮಗ್ರಿಗಳನ್ನು ಇಡಲು ಉಗ್ರಾಣಗಳನ್ನು ಪಡೆಯಲು ಪ್ರಯತ್ನಿಸಬೇಕು.

v) ಅಂತರ ಗ್ರಂಥಾಲಯ ಎರವಲು (inter-library loan) ಕ್ಷೇತ್ರದಲ್ಲಿ ಧಾರಾಳವಾಗಿ ಸಹಕರಿಸಬೇಕು. ಇದಕ್ಕಾಗಿ ಟಪಾಲು ವೆಚ್ಚವನ್ನು ಗಣನೀಯವಾಗಿ ತಗ್ಗಿಸಬೇಕೆಂದು ಕೇಂದ್ರ ಸರಕಾರವನ್ನು ಕೇಳಿಕೊಳ್ಳಬೇಕು. ಹಾಗೂ ದೇಶದ ಮಹತ್ವದ ಗ್ರಂಥಾಲಯಗಳೆಲ್ಲ ಟೆಲೆಕ್ಸ್ ಯಂತ್ರಗಳಿಂದ ಸಂಯೋಜಿತವಾಗಿರುವಂತೆ ನೋಡಿಕೊಳ್ಳಬೇಕು.

101. ಗ್ರಂಥಾಲಯಗಳ ನಡುವೆ ಸಹಕಾರ ಸಾಧಿಸಲು, ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗಕ್ಕೂ (UGC) ವಿಶ್ವವಿದ್ಯಾನಿಲಯ ಅಧಿಕಾರಿಗಳಿಗೂ ಗ್ರಂಥಾಲಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತಜ್ಞ ಸಲಹೆಗಳನ್ನು ಕೊಡಲು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದಲ್ಲಿ ಮಾನವಿಕ, ವೈಜ್ಞಾನಿಕ ಶಾಖೆಗಳಿದ್ದಂತೆ ಒಂದು ಗ್ರಂಥಾಲಯ ಶಾಖೆ ಇರಬೇಕು; ಅದಕ್ಕೆ ಹಿರಿಯ ವಿಶ್ವವಿದ್ಯಾನಿಲಯದ ಗ್ರಂಥಪಾಲನು ಮುಖ್ಯಾಧಿಕಾರಿಯಾಗಿರಬೇಕು.

೧೧/ಗ್ರಂಥಾಲಯ ವಾಸ್ತುಶಿಲ್ಪ: ಕೆಲ ಸಮಸ್ಯೆಗಳು

ಪ್ರಾಥಮಿಕ ವಿಚಾರಗಳು

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಸ್ವತಂತ್ರ ಹಾಗೂ ಕಾರ್ಯವಾಹಿಯಾಗಿ ಯೋಜಿತವಾದ ಗ್ರಂಥಾಲಯ ಕಟ್ಟಡಗಳು ವಿಶ್ವವಿದ್ಯಾಲಯ ಆವರಣಗಳಲ್ಲಿ ವಿರಳವಾಗಿದ್ದವು. ಕ್ರಿ.ಶ. 1857 ರಲ್ಲಿ ಪ್ರಾರಂಭಗೊಂಡ ಮೂರು ಪ್ರಸಿದ್ಧ ವಿಶ್ವವಿದ್ಯಾಲಯಗಳಾದ ಮುಂಬಯಿ, ಮದ್ರಾಸ್, ಹಾಗೂ ಕಲಕತ್ತಾ–ಇವುಗಳಲ್ಲಿ ಮುಂಬಯಿ ವಿಶ್ವವಿದ್ಯಾಲಯವು ಮಾತ್ರ ಸಾಮಾನ್ಯವಾಗಿ ಒಳ್ಳೇಮಟ್ಟದ ಸ್ವತಂತ್ರ ಗ್ರಂಥಾಲಯ ಕಟ್ಟಡವನ್ನು ಹೊಂದಿತ್ತು. ರಾಜಾಬಾಯಿ ಗೋಪುರ ಹಾಗೂ ಅದರಡಿಯಲ್ಲಿದ್ದ ಈ ಗ್ರಂಥಾಲಯದ ನಿರ್ಮಾಣಕ್ಕಾಗಿ, ಮುಕ್ತಹಸ್ತದೇಣಿಗೆ ನೀಡಿದ ಶ್ರೀಯುತ ಪ್ರೇಮಚಂದ ರಾಯಚಂದ ಅವರನ್ನು ನಾವಿಲ್ಲಿ ಸ್ಮರಿಸಲೇಬೇಕು. ಅದೇ ವರ್ಷ ಪ್ರಾರಂಭಿಸಲ್ಪಟ್ಟ ಮದ್ರಾಸ್ ಹಾಗೂ ಕಲಕತ್ತಾ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳು ಮಾತ್ರ ಸ್ವತಂತ್ರ ಕಟ್ಟಡಗಳನ್ನು ಹೊಂದದೆ ಆ ವಿಶ್ವವಿದ್ಯಾಲಯಗಳ ಆಡಳಿತ ಕಟ್ಟಡಗಳ ಒಂದು ಭಾಗದಲ್ಲಿ ನೆಲೆಗೊಂಡಿದ್ದವು. ಹೀಗೆ ಸ್ವತಂತ್ರ ಕಟ್ಟಡವನ್ನು ಹೊಂದಿದ ವಿಶ್ವವಿದ್ಯಾಲಯಗಳಲ್ಲಿ ಮುಂಬಯಿ ಮೊದಲನೆಯದಾದರೆ ಬಹುಶಃ ಬನಾರಸ ವಿಶ್ವವಿದ್ಯಾಲಯ ಎರಡನೆಯದೆನ್ನಬಹುದಾಗಿದೆ. ಬಡೋದೆಯ ಮಹಾರಾಜರ ಉದಾರ ಕೊಡುಗೆಯೆ ಈ ಕಟ್ಟಡ ನಿರ್ಮಾಣಕ್ಕೆ ಕಾರಣ. ಸ್ವಾತಂತ್ರ್ಯಾನಂತರ, ಅದರಲ್ಲೂ ವಿಶ್ವವಿದ್ಯಾಲಯ ಧನಸಹಾಯ ಆಯೋಗ ರಚನೆಗೊಂಡನಂತರವೇ, ಭಾರತದಲ್ಲಿ ವಿಶ್ವವಿದ್ಯಾಲಯಗಳ ಆವರಣಗಳಲ್ಲಿ ಸ್ವತಂತ್ರ ಗ್ರಂಥಾಲಯ ಕಟ್ಟಡಗಳು ರೂಪುಗೊಂಡು ಕಂಗೊಳಿಸತೊಡಗಿದವು.

ಗ್ರಂಥಾಲಯ ಕಟ್ಟಡಗಳ ನಿರ್ಮಾಣ ಸುಲಭವಲ್ಲ. ಇದಕ್ಕೆ ಈ ಕೆಳಗಿನ ಕಾರಣಗಳು ಮುಖ್ಯ :

1. **ಹೆಚ್ಚಿನ ವೆಚ್ಚ :** ಮೊದಲನೆಯದಾಗಿ ಇವುಗಳಿಗೆ ವೆಚ್ಚ ಮಾಡಬೇಕಾದ ಹಣದ ಮೊತ್ತ ಅಧಿಕವಾದದ್ದು. ಉದಾ: ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಕಟ್ಟಬೇಕೆಂದು ಯೋಜನೆಗೊಂಡ ಗ್ರಂಥಾಲಯ ಕಟ್ಟಡವನ್ನೇ ನಾವು ತೆಗೆದುಕೊಳ್ಳಬಹುದು. ಸುಮಾರು 1,00,000 ಚದರ ಅಡಿ ಒಳ ಭಾಗವಾಗಬಹುದಾದ ಈ ಯೋಜಿತ ಕಟ್ಟಡದ ವೆಚ್ಚ ಸುಮಾರು ಅರ್ಧ ಕೋಟಿಗೂ ಮಿಕ್ಕಬಹುದು; ಅದೂ ಕಟ್ಟಡ ನಿರ್ಮಾಣಕಾರ್ಯ ಈಗಲೇ ಪ್ರಾರಂಭವಾಗಿ, ನಡುವೆ ಯಾವ ಅಡೆ ತಡೆಗಳೂ ಬಾರದೇ ಸಾಗಿದರೆ ಮಾತ್ರ ಸಾಧ್ಯ! ಇದಲ್ಲದೆ ಕಟ್ಟಡದಲ್ಲಿ ನೆಲೆಗೊಳಿಸಲು ಬೇಕಾಗುವ ಉಕ್ಕಿನ ರ್‍ಯಾಕುಗಳು, ಓದಲು ಕೂಡ್ರುವ ಖುರ್ಚಿ–ಮೇಜು ಮುಂತಾದ ಇತರ ಪೀಠೋಪಕರಣಗಳಿಗಾಗಿ ಮತ್ತೆ ಸುಮಾರು 20 ಲಕ್ಷ ರೂಪಾಯಿಗಳು ಬೇಕಾಗುವವು.

2. **ಆಡಳಿತಪ್ರಧಾನ ಶಿಕ್ಷಣವ್ಯವಸ್ಥೆ :** ಪ್ರಗತಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ

ಶಿಕ್ಷಣವು ಆಡಳಿತಾತ್ಮಕ ಮೂಲವನ್ನೇ ಹೊಂದಿರುವದು. ಇದರಿಂದ ಗ್ರಂಥಾಲಯ ಗಳ ಕಟ್ಟಡಗಳು ಸ್ವತಂತ್ರವಾಗಿ ನೆಲೆಗೊಳ್ಳುವಂಥ ನೆರವು ದೊರೆಯುವಲ್ಲಿ ಪ್ರಥಮ ಪ್ರಾಶಸ್ತ್ಯ ಪಡೆಯಲಾರವು. ಆಡಳಿತ ಕಟ್ಟಡ ಹಾಗೂ ವಿವಿಧ ವಿಭಾಗಗಳ ಕಟ್ಟಡ ಗಳಿಗೇ ಪ್ರಥಮ ಪ್ರಾಶಸ್ತ್ಯ ದೊರೆಯುವದು.

3. ಯೋಗ್ಯ ಸ್ಥಳದ ಅಭಾವ: ಗ್ರಂಥಾಲಯ ಕಟ್ಟಡಗಳಿಗಾಗಿ ಸುಯೋಗ್ಯ ಸ್ಥಳವನ್ನು ನೀಡುವಂಥ ಮಹತ್ವದ ವಿಷಯದಲ್ಲೂ ಕೂಡ, ಪ್ರಥಮ ಪ್ರಾಶಸ್ತ್ಯ ಆಡಳಿತ ಕಟ್ಟಡ ಹಾಗೂ ವಿವಿಧ ಶಿಕ್ಷಣ ವಿಭಾಗಗಳ ಕಟ್ಟಡಗಳಿಗೆ ಸಂದಾಯವಾಗುವದು. ಆಡಳಿತ ಕಟ್ಟಡ ಹಾಗೂ ಶಿಕ್ಷಣ ವಿಭಾಗಗಳ ಕಟ್ಟಡಗಳಿಂದ ಸಾಕಷ್ಟು ದೂರದ ಒಂದು ಮೂಲೆಯಲ್ಲಿ ನೆಲೆಗೊಂಡಿರುವ ಮರಾಠವಾಡಾ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಹೋಗಲು, ವಿದ್ಯಾರ್ಥಿಗಳು ಸುಮಾರು ಅರ್ಧ ಮೈಲಿಗೂ ಮಿಕ್ಕಿ ದಾರಿಯನ್ನು ನಡೆಯ ಬೇಕಾದಂಥ ಸ್ಥಿತಿಯನ್ನು ಗಮನಿಸಿದರೆ ಈ ವಿಷಯದ ಸತ್ಯ ಮನವರಿಕೆಯಾಗುವದು. ಶಿಲಾ ಮೈ ಭಾಗದಿಂದ ಮೆರೆಯುವ ಪರ್ವತದ ಅಡಿಯಲ್ಲೇ ಈ ಕಟ್ಟಡವಿರುವದು ಮತ್ತೊಂದು ತೊಂದರೆಯೆನಿಸಿದೆ. ಗುಡ್ಡಗಳಿಂದ ಪ್ರತಿಫಲನಗೊಂಡ ಬೇಸಿಗೆಯ ಬಿಸಿಲಿನ ಝಳ ಅದಕ್ಕೆ ಪ್ರತ್ಯಕ್ಷ ಆವರಿಸುತ್ತದೆ. ಹೈದರಾಬಾದಿನ ರಾಜಾ ಶ್ಯಾಮಬಹಾದ್ದೂರ ಅವರ ಕೃಪೆಯಿಂದಾಗಿ ಈ ಗ್ರಂಥಾಲಯವು, 18 ಹಾಗೂ 19ನೇ ಶತಮಾನಗಳ ಆಂಗ್ಲ ಸಾಹಿತ್ಯದ ಮಹೋನ್ನತ ಕೃತಿಗಳ ಪ್ರಥಮ ಮುದ್ರಣಗಳನ್ನೆಲ್ಲ ಅತೀ ಸುಲಭ ಬೆಲೆಗೆ ಪಡೆದುಕೊಂಡಿದೆ. ಅಂಥ ಮಹತ್ವದ ಕೃತಿಗಳೆಲ್ಲ, ಪ್ರತಿಫಲನಗೊಂಡು ಇಲ್ಲಿ ಬರುವ ತೀವ್ರ ಝಳದಿಂದಾಗಿ ನಾಶಹೊಂದುವ ಸ್ಥಿತಿಯತ್ತ ಸಾಗಿರುವವು. ಬೆಂಗಳೂರು ವಿಶ್ವ ವಿದ್ಯಾಲಯ ಕಟ್ಟಡ ಕಟ್ಟಿಸುವ ವಿಚಾರ ಬಂದಾಗ, ಇದಕ್ಕಾಗಿ ಮೂಲೆಯಲ್ಲಿಯ ಒಂದು ವರ್ತುಳ ನೀಡಲ್ಪಟ್ಟಿತು. ಒಟ್ಟು ಆವರಣದಲ್ಲಿಯೇ ಅತಿ ಮಹತ್ವದ್ದೆನಿಸುವ ಸ್ಥಳ ಆಡಳಿತ ಕಟ್ಟಡಕ್ಕಾಗಿ ಮೀಸಲಾಗಿರಿಸಲ್ಪಟ್ಟಿತ್ತು. ನಂತರ ಅಂದಿನ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಕಾರ್ಯಾಧ್ಯಕ್ಷರ ಪ್ರಯತ್ನದ ಫಲವಾಗಿ, ಗ್ರಂಥಾಲಯ ಕಟ್ಟಡದ ಸ್ಥಳ ಕೆಲಮಟ್ಟಿಗೆ ಕೇಂದ್ರೀಯವೆನಿಸಬಹುದಾದ ಮತ್ತೊಂದು ಯೋಗ್ಯ ಸ್ಥಳಕ್ಕೆ ವರ್ಗಾವಣೆ ಪಡೆಯಿತು.

4. ಆಡಳಿತ ವರ್ಗದ ಉದಾಸೀನತೆ: ಮಹತ್ವದ ಸ್ಥಾನಗಳಲ್ಲಿರುವ ಮಹನೀ ಯರುಗಳು ಗ್ರಂಥಾಲಯ ಕಟ್ಟಡಗಳ ವಿಷಯಗಳಲ್ಲಿ ಲಘುವಾಗಿ ವಿಚಾರಿಸುವದೂ ಒಂದು ಮಾರಕ ವಿಷಯವೇ ಆಗಿದೆ. ಒಂದೆರಡು ಸಂದರ್ಭಗಳಲ್ಲಂತೂ ಗ್ರಂಥಪಾಲ ರನ್ನು ಅಥವಾ ಆ ವಿಷಯದಲ್ಲಿನ ತಜ್ಞರನ್ನು ವಿಚಾರಿಸದೇ, ಒಮ್ಮೆಲೇ ವಾಸ್ತುಶಿಲ್ಪಿ ಗಳನ್ನೇ ನಿಯಮಿಸಿ ಅವರಿಗೆ ಗ್ರಂಥಾಲಯ ಕಟ್ಟಡಗಳ ನಕ್ಷೆ ತಯಾರಿಸಲು ಹೇಳ ಲಾಯಿತು. ಒಂದು ಸಂದರ್ಭದಲ್ಲಿ ಹೀಗಾದಾಗ ಹೊರಬಂದ ನೀಲ ನಕ್ಷೆಯು ಅತೀ ಸಾಮಾನ್ಯವಾದದ್ದಾಗಿತ್ತು. ಅಳತೆಗಳೆಲ್ಲ ಕೇವಲ ಒಂದು ಚಿಕ್ಕ ಕಾಲೇಜು ಗ್ರಂಥಾ ಲಯಕ್ಕೆ ಸರಿಹೋಗುವಂತಿದ್ದವು. ಮತ್ತೊಂದು ನಕ್ಷೆಯು ತಕ್ಕಮಟ್ಟಿಗೆ ಅಧುನಿಕ

ದೃಷ್ಟಿಕೋನದಿಂದ ಕೂಡಿದ್ದಾಗಿದ್ದರೂ ಗ್ರಂಥ ಸಂಗ್ರಹ ಹಾಗೂ ಓದುಗರಿಗಾಗಿ ನೀಡ ಬೇಕಿದ್ದ ಸ್ಥಳ ಬಹಳ ಸೀಮಿತಗೊಂಡಿದ್ದವು. ಅಂತೂ ವಿದ್ಯಾಲಯಗಳು, ಇಂಥ ಕಟ್ಟಡಗಳು ಹೀಗಿರಬೇಕೆಂದು ಯಾವದೇ ಲಿಖಿತ ಸೂಚನೆಗಳನ್ನು ವಾಸ್ತುಶಿಲ್ಪಿಗಳಿಗೆ ನೀಡದ್ದರಿಂದ, ವಾಸ್ತುಶಿಲ್ಪಿಗಳಿಗೂ ಕೂಡ ಇಂಥ ಸ್ವತಂತ್ರ ಕಟ್ಟಡಗಳನ್ನು ಹೆಚ್ಚಾಗಿ ರೂಪಿಸಿದ ಹಾಗೂ ನೋಡಿದ ಅನುಭವಗಳಿರದ್ದರಿಂದ ಈ ಯೋಜಿತ ನಕ್ಷೆಗಳು ಸಂಪೂರ್ಣ ಅತೃಪ್ತಿಕರವಾಗಿದ್ದವು.

5. ಗ್ರಂಥಾಲಯಗಳ ಬೆಳವಣಿಗೆಯ ಅಜ್ಞಾನ : ಅಧಿಕಾರ ವಲಯಗಳು, ಗ್ರಂಥಾ ಲಯವು ಸತತ ವರ್ಧಮಾನ ಶೀಲ ಪ್ರವೃತ್ತಿಯುಳ್ಳದ್ದಾದುದನ್ನು ಸಹಸಾ ಅರಿಯದಿರು ವದು ಒಂದು ದೊಡ್ಡ ಆತಂಕವಾಗಿದೆ. ಗ್ರಂಥಗಳು, ಓದುಗರು ಹಾಗೂ ಗ್ರಂಥಪಾಲಕ ಸಿಬ್ಬಂದಿ--ಈ ಮೂರೂ ಅಂಗಗಳು ಉದಿತೋದಿತವಾಗಿ ಬೆಳೆಯುವಂಥವಾಗಿವೆ. ಮಾನ ವನ ಜ್ಞಾನದಾಹದಿಂದಾಗಿ ದಿನೇ ದಿನೇ ಹೊಸ ಹೊಸ ಗ್ರಂಥಗಳು, ನಿಯತಕಾಲಿಕೆಗಳು, ಒಂದೇ ಸಮನೆ ಮುದ್ರಣಗೊಂಡು ಹೊರಬರುತ್ತಿರುವವು. ಈ ಕ್ರಿಯೆ ಜಗತ್ತಿನಾದ್ಯಂತ ಎಡೆಬಿಡದೇ ಸಾಗಿರುವದು. ವಿಶ್ವವಿದ್ಯಾಲಯಗಳಲ್ಲೂ ಅಭ್ಯಸಿಸಬೇಕಾದ ವಿಷಯಗಳ ವಿವಿಧತೆ ದಿನೇ ದಿನೇ ಹೆಚ್ಚುತ್ತಿರುವುದು; ಸಂಶೋಧನೆಗಳಿಗಾಗಿ ಆದ್ಯಗಮನ ನೀಡುತ್ತಿ ರುವದು ಈ ದಿನಗಳ ರೂಢಿ ಹಾಗೂ ಆವಶ್ಯಕತೆಯೇ ಆಗಿದೆ. ಅಂತೇ ಗ್ರಂಥಸಂಗ್ರಹ ಇಂತಿಷ್ಟೇ ಇರಬೇಕೆಂದು ವಿಶ್ವವಿದ್ಯಾಲಯ ಗ್ರಂಥಾಲಯಗಳ ಮೇಲೆ ನಿರ್ಬಂಧ ಹೇರು ವದು ಎಷ್ಟುಮಾತ್ರಕ್ಕೂ ಸಮಂಜಸವಾದ ವಿಚಾರವಾಗಿಲ್ಲ. ಸಾರ್ವಜನಿಕ ಗ್ರಂಥಾಲಯ ಗಳ ವಿಚಾರ ಬೇರೆ. ಅಲ್ಲಿ ಮೇಲಿಂದ ಮೇಲೆ ಬದಲಾವಣೆಗಳನ್ನು, ಹೆಚ್ಚು ಕಡಿಮೆ ಗಳನ್ನು ಮಾಡಿಕೊಳ್ಳಲು ಅವಕಾಶವಿರುವದು. ವಿಶ್ವವಿದ್ಯಾಲಯಗಳ ಗ್ರಂಥಾಲಯಗಳ ವಿಚಾರ ಹಾಗಿಲ್ಲ. ಇಲ್ಲಿಯ ಗ್ರಂಥ ಸಂಗ್ರಹದಲ್ಲಿ ಹೆಚ್ಚು ಕಡಿಮೆ ಮಾಡುವಾಗ ಸೂಕ್ಷ್ಮ ವಾಗಿ ಹಾಗೂ ಕೂಲಂಕಷವಾಗಿ ವಿಚಾರ ಮಾಡಬೇಕಾಗುವದು. ಗ್ರಂಥಾಲಯದ ಬಹು ಭಾಗವನ್ನು ಆಕ್ರಮಿಸುವ ನಿಯತಕಾಲಿಕೆಗಳ ಹಿಂದಿನ ಪ್ರತಿಗಳನ್ನು ಪರಿಶೀಲಿಸಬೇಕಾದ ಆವಶ್ಯಕತೆ ಸಂಶೋಧಕರಿಗೆ ಅನೇಕ ಸಲ ಬರುವದು. ಇವುಗಳನ್ನು ಮೈಕ್ರೋಫಿಲ್ಮ್ ಅಥವಾ ಕಾರ್ಡ್ ರೂಪದಲ್ಲಿ ಕೊಂಡ ಮೇಲೂ ಹಾಗೂ ಭವಿಷ್ಯದಲ್ಲಿ ಯೋಜಿಸಲ್ಪಡುವ ಗ್ರಂಥ ಸಂಗ್ರಹಣೆಯ ಯಾವದೇ ಸಹಕಾರೀ ಯೋಜನೆಯನ್ನು ಅಂಗೀಕರಿಸಿಕೊಂಡ ಮೇಲೂ ವಿಶ್ವವಿದ್ಯಾಲಯದ ಗ್ರಂಥಾಲಯಗಳು ಅಪಾರ ಸಂಖ್ಯೆಯಲ್ಲಿ ಗ್ರಂಥಗಳನ್ನು, ನಿಯತಕಾಲಿಕೆಗಳನ್ನು ಸತತವಾಗಿ ಸಂಗ್ರಹಿಸಿ, ಪರಿಷ್ಕರಿಸಿ ಇಡಲೇಬೇಕಾಗುವದು. ಗ್ರಂಥ ಗಳು ಬಹು ಕಾಲದವರೆಗೆ ತಮ್ಮ ಆವಶ್ಯಕತೆಯನ್ನು ತೋರುವದು ಸ್ವಾಭಾವಿಕವೇ ಆಗಿದೆ. ಮೈಕ್ರೋ-ಗ್ರಂಥಗಳು, ಇತರ ಸ್ವರೂಪದ ಗ್ರಂಥಗಳು ಹಾಗೂ ಕಾಂಪ್ಯೂಟರುಗಳು ಕೇವಲ ಪೂರಕಗಳಾಗಿರಬಹುದಷ್ಟೇ. ಗ್ರಂಥಗಳು ತಮ್ಮ ಪ್ರಾಮುಖ್ಯವನ್ನು ಕಳೆದು ಕೊಳ್ಳುವ ಪರಿಸ್ಥಿತಿ ಉದ್ಭವಿಸುವದೇ ಇಲ್ಲ ಎಂದು ಖಚಿತವಾಗಿ ಹೇಳಬಹುದು.

ವಿವಿಧ ಶಿಕ್ಷಣ ವಿಭಾಗಗಳ ಆವಶ್ಯಕತೆಗಳನ್ನು ಪೂರೈಸುವದು ಗ್ರಂಥಾಲಯವೇ.

ಒಂದೊಂದು ವಿಭಾಗದಲ್ಲೂ ಕೇವಲ ಪ್ರತಿಶತ ಒಂದು ಅಥವಾ ಎರಡರಂತೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದಲ್ಲೂ ಒಟ್ಟಿನಲ್ಲಿ ಗ್ರಂಥಾಲಯಕ್ಕೆ ಸಂಖ್ಯೆ ಪ್ರತಿಶತ 25 ರಿಂದ 50ರ ವರೆಗೂ ಹೆಚ್ಚುವದು. ಸಾಮಾನ್ಯವಾಗಿ ಗ್ರಂಥಾಲಯವನ್ನು ಮುಖ್ಯ ಕಟ್ಟಡದ ಒಂದು ಭಾಗದಲ್ಲಿ ನೆಲೆಗೊಳಿಸಿದರೆ ಸಾಕು. ಅಥವಾ ಗ್ರಂಥಾಲಯ ಕಟ್ಟಡಕ್ಕಾಗಿ ನಿಧಿ ಇದ್ದರೆ ಅದಕ್ಕೊಂದು ಚಿಕ್ಕ ಕಟ್ಟಡ ಕಟ್ಟಿಸಿದರೆ ಸಾಕು ಎಂಬುದು ಜನಜನಿತವಾದ ವಿಚಾರ.

ಈ ಎಲ್ಲ ಅದೂರದೃಷ್ಟಿಯ ಹಾಗೂ ಸುಯೋಗ್ಯವಲ್ಲದ ಯೋಜನೆಗಳ ಪರಿಣಾಮವನ್ನು ವಿದ್ಯಾರ್ಥಿವೃಂದ, ಶಿಕ್ಷಕರು ಹಾಗೂ ಗ್ರಂಥಪಾಲಕ ಸಿಬ್ಬಂದಿಯವರು ಅನುಭವಿಸಬೇಕಾಗುವದು. ಅವರು ಮೇಲಿಂದ ಮೇಲೆ ಗ್ರಂಥಾಲಯ ಬದಲಾವಣೆಗಳ ತೊಂದರೆಗಳನ್ನು ಅನುಭವಿಸಬೇಕಾಗುವದು. ಇಂಥ ಸ್ಥಳ ಹಾಗೂ ಇತರೇ ಬದಲಾವಣೆಗಳು ಸಮಯವನ್ನು, ನೆಮ್ಮದಿಯನ್ನು, ಏಕಾಗ್ರತೆಯನ್ನು ಹಾಳುಮಾಡುವಂಥವಾಗಿವೆ. ಇವುಗಳಿಂದ ಗ್ರಂಥಗಳ ಸೇವೆಯನ್ನು ಸರಿಯಾಗಿ ಪಡೆಯಲು ಆಗಲಾರದು. ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗದ ಸಹಾಯ ಪ್ರತ್ಯೇಕ ಗ್ರಂಥಾಲಯ ಕಟ್ಟಡಗಳಿಗಾಗಿ ಕಳೆದ 20 ವರ್ಷಗಳಿಂದಲೂ ದೊರೆಯುತ್ತಾ ಬಂದಿದ್ದರೂ ಮೇಲ್ಕಾಣಿಸಿದ ಕುಂದುಕೊರತೆಗಳಿಂದಾಗಿ, ಸುಯೋಗ್ಯ ಕಾರ್ಯತತ್ಪರವೆನ್ನಿಸಬಹುದಾದ ಪ್ರತ್ಯೇಕ ಗ್ರಂಥಾಲಯ ಕಟ್ಟಡಗಳ ಕೊರತೆ ಎಂದಿನಂತೇ ಉಳಿದುಬಿಟ್ಟಿದೆ. ಏನೆಂದರೂ ಸುಮಾರು 4 ಕೋಟಿಗೂ ಮಿಕ್ಕ ರೂಪಾಯಿಗಳ ಸಹಾಯ ಸಲ್ಲಿಸಿದ ಧನಸಹಾಯ ಆಯೋಗಕ್ಕೆ ನಾವು ಕೃತಜ್ಞರಾಗಿರಲೇಬೇಕು. ಅದರಿಂದಾಗಿಯೇ ಎಷ್ಟೋ ವಿಶ್ವವಿದ್ಯಾಲಯಗಳು ಸ್ವತಂತ್ರ ಗ್ರಂಥಾಲಯ ಕಟ್ಟಡಗಳನ್ನು ಹೊಂದಿದಂತಾಗಿದೆ. ಇವುಗಳ ಕಾರ್ಯಮಗ್ನ ಅನುಭವಗಳ ಮೇಲೆ ಮುಂದಿನ ಯೋಜನೆಗಳನ್ನು ಪೂರ್ತಿ ಚೆನ್ನಾಗಿ ಮಾಡಲು ನಮ್ಮ ವಿದ್ಯಾ ತಜ್ಞರಿಗೆ, ವಾಸ್ತುಶಿಲ್ಪಿಗಳಿಗೆ ಹಾಗೂ ಗ್ರಂಥಪಾಲರಿಗೆ ಸಾಧ್ಯವಾಗುವಂತಾಗಿರುವುದು.

ಗ್ರಂಥಾಲಯ ವಾಸ್ತುಶಿಲ್ಪ

'ಗ್ರಂಥಾಲಯವು ವಿಶ್ವವಿದ್ಯಾಲಯದ ಹೃದಯ'ವೆಂದು ಡಾ. ರಾಧಾಕೃಷ್ಣನ್ ವಿಶ್ವವಿದ್ಯಾಲಯ ಶಿಕ್ಷಣ ಸಮಿತಿಯು ಬಹುಯೋಗ್ಯವಾಗಿ ನುಡಿದಿದೆ. ಉಚ್ಚ ಶಿಕ್ಷಣರಂಗದಲ್ಲಿ ಗ್ರಂಥಾಲಯವು ಕೇಂದ್ರೀಯ ಸ್ಥಾನ ಪಡೆದಿದೆ ಎಂಬ ಅಂಶವನ್ನು ಈ ಮಾತು ಅತ್ಯಂತ ಭಾವಪೂರ್ಣವಾಗಿ ನಿವೇದಿಸಿದೆ. ಎಲ್ಲ ರೀತಿಯಿಂದ ಸುಯೋಗ್ಯವಾಗಿ ನಿರ್ಮಾಣಗೊಂಡ ಹಾಗೂ ನೆಲೆಗೊಂಡ ಗ್ರಂಥಾಲಯ ಒಂದು ಶಿಲಾರೂಪೀ ಮಹಾಕಾವ್ಯವೇ ಆಗಿದೆಯೆಂದರೆ ಅತಿಶಯೋಕ್ತಿಯಲ್ಲ. ಅದು ಪ್ರತಿಭಾವಂತರ ಕರ್ಮಭವನವಾಗಿದೆ. ಅದರ ಪ್ರಯೋಜನವನ್ನು ಎಲ್ಲ ಶಾಖೆಗಳ ಶಿಕ್ಷಕರು, ವಿದ್ಯಾರ್ಥಿಗಳು, ಆಡಳಿತಗಾರರು, ಸಮಾಜ ಎಲ್ಲರೂ ಪಡೆಯಬಹುದಾಗಿದೆ.

ಗ್ರಂಥಾಲಯವು ಸಾಮಾನ್ಯವಾಗಿ ವರ್ಷದಾದ್ಯಂತ ದಿನವಿಡೀ ತೆರೆದಿದ್ದು ಸೇವೆ

ಯಲ್ಲಿ ನಿರತವಾಗಿರುವಂಥದು. ಸಂದರ್ಶಕರಿಗೆ ಯಾವಾಗೆಂದರೆ ಆವಾಗ ತೆರೆದಿರುವ ಕಟ್ಟಡ ವೆಂದರೆ ಇದೊಂದೇ. ಅಂತೇ ಇದು ಒಳಗಡೆಯಲ್ಲಿ ಸುಯೋಜಿತವಾಗಿ, ಸುಸಜ್ಜಿತವಾಗಿ ಹಾಗೂ ಭದ್ರವಾಗಿ ನಿರ್ಮಿಸಲ್ಪಡಬೇಕಾಗುತ್ತದೆ. ಮತ್ತು ಸದಭಿರುಚಿ ಪೂರ್ಣವಾಗಿ ರೂಪ ಗೊಂಡಿರಬೇಕಾಗುತ್ತದ. ಯಾವುದೇ ವಿಶ್ವವಿದ್ಯಾಲಯದಲ್ಲಿ ಸತತವಾಗಿ ಉಪಯೋಗಿ ಸಲ್ಪಡುತ್ತಿರುವ ಹಾಗೂ ವೀಕ್ಷಿಸಲ್ಪಡುತ್ತಿರುವ ಭವನವೆಂದರೆ ಗ್ರಂಥಾಲಯ ಭವನ.

ಗ್ರಂಥಾಲಯ ಕಟ್ಟಡದ ಕಾರ್ಯಭಾರಗಳು

ಗ್ರಂಥಾಲಯವೆಂದ ತಕ್ಷಣ ಸ್ಥಳೀಯ ಗ್ರಂಥಾಲಯಗಳ ಕಟ್ಟಡಗಳು ಅಥವಾ ವಾಶಿಂಗ್ಟನ್ ನಗರದಲ್ಲಿಯ ಕಾಂಗ್ರೆಸ್ ಗ್ರಂಥಾಲಯ, ಲಂಡನ್‌ದಲ್ಲಿಯ ಬ್ರಿಟಿಷ್ ಮ್ಯುಜಿಯಮ್, ಕಲಕತ್ತಾದಲ್ಲಿಯ ರಾಷ್ಟ್ರೀಯ ಗ್ರಂಥಾಲಯಗಳನ್ನು ನೋಡುವ ಸುಯೋಗ ದೊರಕಿದವರಿಗೆ ಆ ಕಟ್ಟಡಗಳು ಮನಃಚಕ್ಷುಗಳೆದುರು ನರ್ತನಗೈಯಬಹುದು. ಅಂತೆಯೇ ಗ್ರಂಥಾಲಯ ಕಟ್ಟಡ ರಚಿಸುವ ಯೋಜನೆ ಮಾಡುವಾಗ ಸೌಂದರ್ಯ, ತಾಳಿಕೆ, ಸುವ್ಯವಸ್ಥೆಗಳನ್ನು ಕುರಿತು ಕೂಲಂಕಷ ಭದ್ರವಾದ ಯೋಜನೆಗಳನ್ನು ಮಾಡ ಬೇಕಾದ್ದು ಆವಶ್ಯಕ.

ಈ ಕಟ್ಟಡಗಳು ಇನ್ನಿತರ ಯಾವುದೇ ಕಟ್ಟಡಗಳಂತೆ ಕೆಲ ಆವಶ್ಯಕ ಕಾರ್ಯಗಳನ್ನು ನೆರವೇರಿಸಬೇಕಾಗುವುದು.

ಅ) ಒಳಗಡೆಯಲ್ಲಿರುವ ವಸ್ತುಗಳನ್ನು—ಮುಖ್ಯವಾಗಿ ಗ್ರಂಥಗಳನ್ನು–ಹವಾಮಾನದ ದಾಳಿ, ಮಳೆಗಾಳಿಗಳು, ಹಿಮಪಾತ, ಬಿಸಿಲಿನ ಝಳ ಮುಂತಾಗಿ ಅನೇಕ ಆಪತ್ತುಗಳಿಂದ ರಕ್ಷಿಸುವುದು.

ಆ) ಮಳೆಗಾಳಿಗಳಿಂದ ವಿರಹಿತವಾಗಿ ಸರಿಯಾಗಿ ಹಾಗೂ ಸರಿಯಾದ ಪ್ರಮಾಣದಲ್ಲಿ ಬೆಳಕು ಹಾಗೂ ಹವೆ ಬರುವಂತೆ ವ್ಯವಸ್ಥೆ ಮಾಡುವುದು.

ಇ) ಒಳಗಡೆಯಲ್ಲಿ ನಡೆಯುವ ಯಾವದೇ ಕಾರ್ಯಕ್ಕಾಗಿ ಸುಯೋಜಿತ ಹಾಗೂ ಸುಸಜ್ಜಿತವಾಗಿ ರುವದು. ದೇವಾಲಯ ಅಥವಾ ಯಾವದೇ ವಾಸಸ್ಥಾನಗಳ ಕಟ್ಟಡಗಳಂತೆ ಕೇವಲ ಆವಾಸ ಸ್ಥಾನವಾಗಿದ್ದರೆ ಮಾತ್ರ ಸಾಲದು. ಅಂತೇ ಗ್ರಂಥಾಲಯಗಳನ್ನು ಯಾವದೋ ಒಂದು ಭವನದಲ್ಲಿ ನೆಲೆಗೊಳಿಸಲುಬಾರದು.

ಈ) ಪ್ರಚಾರದ ಒಂದು ಸಾಧನವಾಗಿರುವದು.

ಉ) ಗ್ರಂಥಾಲಯವು ನೆಲೆಗೊಳಿಸಿದ ಸಮಾಜದ ಸೌಂದರ್ಯ, ಬುದ್ಧಿಮತ್ತೆಗಳ, ಆಶೋತ್ತರ ಗಳ ಸುವ್ಯಕ್ತ ಪ್ರತೀಕವಾಗಿರುವದು.

ಕಟ್ಟಡವನ್ನು ಯೋಜಿಸುವಲ್ಲಿಯ ಮೂಲಭೂತ ಅಂಶಗಳು : ಗ್ರಂಥಾಲಯ ವಿಜ್ಞಾನದ ಎಲ್ಲ ನಿಯಮಗಳನ್ನು ಅನುಸರಿಸಿಯೇ ಕಟ್ಟಡವನ್ನು ಯೋಜಿಸಬೇಕು ಅಂತೇ ಇದು ಸೇವೆಗೈಯಬೇಕಾದ ಸಮಾಜದ ಮಧ್ಯವರ್ತಿ ಸ್ಥಾನದಲ್ಲಿಯೇ ನೆಲೆಗೊಳ್ಳ

ಬೇಕು. ವಿಶ್ವವಿದ್ಯಾಲಯದ ಆವರಣದ ಮಧ್ಯವರ್ತಿ ಸ್ಥಾನದಲ್ಲಿಯೇ ಶೈಕ್ಷಣಿಕ ಮಹತ್ವದ ಗ್ರಂಥಾಲಯ ನೆಲೆಗೊಳ್ಳುವದು ಅತ್ಯಾವಶ್ಯಕ. ಇದರ ಪ್ರಯೋಜನ ಬಯಸುವ ಉಳಿದೆಲ್ಲ ಶಿಕ್ಷಣ ವಿಭಾಗಗಳ ಕಟ್ಟಡಗಳಿಗೂ ಇದು ದೂರದಲ್ಲಿದಲ್ಲಿರುವಂತಾಗಬಾರದು. ಅಂತೇ ಮುಂದುವರಿದ ಎಲ್ಲ ದೇಶಗಳಲ್ಲೂ ಗ್ರಂಥಾಲಯ ಕಟ್ಟಡಗಳು ವಿಶ್ವವಿದ್ಯಾಲಯದ ಆವರಣದಲ್ಲಿ ಕೇಂದ್ರೀಯ ಸ್ಥಾನವನ್ನಲಂಕರಿಸುವದನ್ನು ಕಾಣಬಹುದಾಗಿದೆ. ಇದು ಉಳಿದೆಲ್ಲ ಕಟ್ಟಡಗಳ ಮಧ್ಯಬಿಂದುವಿನಂತಿದ್ದು ಗಮನ ಸೆಳೆಯುವದು.

ಕಟ್ಟಡ ನೆಲೆಗೊಂಡ ಸ್ಥಾನ ವಿಶಾಲವಾಗಿರುವದು ಆವಶ್ಯಕವೇ. ಮುಂದೆ ಎಂಥದೇ ಪ್ರಸಂಗದಲ್ಲಿ ಕಟ್ಟಡವನ್ನು ಅಡ್ಡಗಲವಾಗಿ ಬೆಳೆಸಲು ಬೇಕಾದಷ್ಟು ಅನುವಿರುವಂತಿರಬೇಕು.

ಭವಿಷ್ಯವನ್ನು ಕಣ್ಣೆದುರು ಇಟ್ಟುಕೊಂಡೇ ಈ ಯೋಜನೆ ಮಾಡಬೇಕು. ಉಳಿದಾವ ಅಂಗಗಳಿಗಿಂತಲೂ ತೀವ್ರ ಬೆಳವಣಿಗೆಯನ್ನುಳ್ಳ ಅಂಗ ಇದೇ. ಗ್ರಂಥಗಳು, ಓದುಗರು ಹಾಗೂ ಗ್ರಂಥಪಾಲಕ ಸಿಬ್ಬಂದಿ–ಈ ಮೂರು ಅಂಶಗಳು ಸತತ ಬೆಳೆಯುವಂಥವೆಂದು ಈ ಮೊದಲೇ ಸೂಚಿಸಲಾಗಿದೆ. ಅದರಲ್ಲೂ ಜ್ಞಾನದಾಹ ಹಾಗೂ ಜನಸಂಖ್ಯೆ ಇವೆರಡೂ ಅತಿ ತೀವ್ರವಾಗಿ ಬೆಳೆಯುತ್ತಿರುವದರಿಂದ ಮೊದಲ ಎರಡು ಅಂಶಗಳ ಪ್ರಗತಿಯನ್ನು ಎಂಥ ಪ್ರಸಂಗದಲ್ಲೂ ಅಲಕ್ಷಿಸಲಾಗದು.

ಅಡ್ಡಗಲವಾಗಿ ಬೆಳೆಸಲು ಬರುವಂಥ ಕಟ್ಟಡಗಳ ರಚನೆಯ ಪ್ರಯೋಗಗಳು ಈಗಾಗಲೇ ಆಗಿವೆ. ಪುಣೆ ವಿಶ್ವವಿದ್ಯಾಲಯದ ಗ್ರಂಥಾಲಯ ಕಟ್ಟಡದ 'T' ಆಕೃತಿ, ದಿಲ್ಲಿಯ 'H' ಆಕೃತಿ, ಮೈಸೂರಿನ '[' ಆಕೃತಿ, ಬೆಂಗಳೂರಿನ ನಕ್ಷತ್ರಾ ★ ಕೃತಿಯ ಕಟ್ಟಡ, 'L' ಆಕೃತಿಯ ರಾಜಸ್ಥಾನದ ಕಟ್ಟಡ, 'ಸ್ವಾಸ್ತಿಕ್' 卐 ಆಕೃತಿಯ ಹೆಬ್ಬಾಳ ಕೃಷಿ ಮಹಾವಿದ್ಯಾಲಯದ ಯೋಜಿತ ಕಟ್ಟಡ ಮುಂತಾದವೆಲ್ಲ ಈ ಮಾದರಿಗಳಾಗಿದ್ದು, ಇವನ್ನು ಅಡ್ಡಗಲವಾಗಿ ಯಾವಾಗೆಂದರೆ ಆವಾಗ ಬೆಳೆಸಲು ಬರುವಂತಿವೆ. V, W ಹಾಗೂ U ಆಕೃತಿಗಳನ್ನೂ ಪ್ರಾಯೋಗಿಕವಾಗಿ ಬಳಸಲಾಗಿದೆ. ಇವೆಲ್ಲ ನೈಸರ್ಗಿಕವಾಗಿ ಸಾಕಷ್ಟು ಬೆಳಕು ಹಾಗೂ ಗಾಳಿ ಬರುವಂತಿರುವವು.

ಸ್ಥಳವು ಸುಯೋಗ್ಯ ಸ್ಥಾನದಲ್ಲಿರಬೇಕು. ಸುತ್ತಲೂ ನಿಸರ್ಗದ ಸೌಂದರ್ಯ ಒಡಮೂಡಿ ಬೆಳೆದಿರಬೇಕು. ಓದುಗರು, ಓದುತ್ತಾ ಓದುತ್ತಾ ಬೇಸರಪಟ್ಟು ಹೊರಗೆ ದೃಷ್ಟಿಬೀರಿದಾಗ, ಆ ದೃಷ್ಟಿಗಳಿಗೆ ಆನಂದ ನೀಡುವಂಥ ವನಶ್ರೀ ಕಿಟಕಿಗಳ ಹೊರಗಡೆ ಕಾಣುವಂತಿರಬೇಕು. ಮೈಸೂರು ವಿಶ್ವವಿದ್ಯಾಲಯ ಗ್ರಂಥಾಲಯ ಕಟ್ಟಡ ವಿದ್ಯುದ್ದೀಪಗಳಿಂದ ಅಲಂಕೃತವಾಗಿ ಝಗಝಗಿಸುವ ಅರಮನೆ ಹಾಗೂ ಇತರ ಕಟ್ಟಡಗಳು, ಚಾಮುಂಡಿ ಬೆಟ್ಟದ ರಮ್ಯದರ್ಶನ ದೊರೆಯುವಂಥ ಸ್ಥಳದಲ್ಲಿದೆ. ಆದರೆ ಅದರ ಒಳಗಡೆಯ ಓದುವ ಕೋಣೆಗಳಲ್ಲಿ ಕುಳಿತವರಿಗೆ ಇದಾವದೂ ನೋಡಲು ದೊರೆಯದು. ಮೈಸೂರಿನ ಇನ್ನೊಂದು ಕೊರತೆಯೆಂದರೆ ತಾಂತ್ರಿಕ ಹಾಗೂ ಗ್ರಂಥ ಸಂಗ್ರಹಣೆಯ ವಿಭಾಗಗಳಿಗಾಗಿ ಇರುವ ಭವನಗಳು ತೀರ ಸಂಕುಚಿತವಾದವುಗಳಾಗಿವೆ.

ಸ್ಥಳವು ಶಾಂತವಿರುವದೂ ಆವಶ್ಯಕವೇ. ಅದು ಬದಿಯ ಬೀದಿಯ ಸಾಗಾಣಿಕೆಯ, ವಾಹನಗಳ ಕಲ-ಮಲಗಳಿಂದ ದೂರವಿರಬೇಕು.

ಮಳೆಗಾಲದಲ್ಲಿ ಬೀಸಿ ಬರುವ ಮಳೆಗಾಳಿಗಳು, ಚಳಿಗಾಲದ ಚಳಿಗಾಳಿಗಳು, ಬೇಸಿಗೆಯ ಬಿರು ಬಿಸಿಲಿನ ಕೋನಗಳು ತೊಂದರೆ ಕೊಡುವಂತಿರಬಾರದು. ಇವುಗಳ ತೊಂದರೆಗಳನ್ನು ತಪ್ಪಿಸಲು ಕಟ್ಟಡವು ಉತ್ತರ ಮುಖಿಯಾಗಿ ರಚನೆಗೊಳ್ಳಬೇಕು.

ಕಟ್ಟಡದ ಯೋಜಕ ಸಿಬ್ಬಂದಿ : ಕುಲಪತಿ, ಗ್ರಂಥಪಾಲ, ಅಭಿಯಂತ, ವಾಸ್ತುಶಿಲ್ಪಿ ಹಾಗೂ ಮುಕ್ತಮನದ, ಎಲ್ಲೆಡೆ ಪ್ರವಾಸಗೈದು ವಿವಿಧ ಕಡೆಗಳಲ್ಲಿಯ ಗ್ರಂಥಾಲಯಗಳನ್ನು ಕಂಡ, ಸೌಂದರ್ಯಾಭಿರುಚಿಯುಳ್ಳ, ಪ್ರಗತಿಶೀಲನಾದ ಓರ್ವ ಶಿಕ್ಷಕ ವರ್ಗದ ಪ್ರತಿನಿಧಿ–ಹೀಗೆ ಐವರನ್ನೊಳಗೊಂಡ ಒಂದು ಸಮಿತಿಯು ಇರಬೇಕು. ವಿಶ್ವವಿದ್ಯಾಲಯದ ಗ್ರಂಥಪಾಲನಿಗೆ ಗ್ರಂಥಾಲಯ ಕಟ್ಟಡಗಳ ವಿಷಯದಲ್ಲಿ ಹೆಚ್ಚಿನ ಗತಿ ಇರದಿದ್ದಲ್ಲಿ, ಹಾಗೆ ಅಭಿರುಚಿ ಹಾಗೂ ಅನುಭವವಿರುವ ಓರ್ವ ಹಿರಿಯ ಗ್ರಂಥಪಾಲನನ್ನು ಈ ಸಮಿತಿಯಲ್ಲಿ ಸೇರಿಸಿಕೊಳ್ಳಬಹುದು.

ಆಂತರಿಕ ಯೋಜನೆ : ಗ್ರಂಥಾಲಯ ಆಂತರಿಕ ವ್ಯವಸ್ಥೆಯನ್ನು ಗ್ರಂಥಗಳು ಹಾಗೂ ಓದುಗರ ನಡುವೆ ಸಾಧ್ಯವಾದಷ್ಟುಮಟ್ಟಿಗೂ ಅಡೆತಡೆಗಳು ಬರದಂತೆ, ಈ ಕೆಳಗಿನ ಸೇವೆಗಳಿಗೆ ಆತಂಕವಾಗದಂತೆ ಯೋಜಿಸಬೇಕು.

ತ್ರಿಮುಖ ಸೇವೆ :

ಅ ವಾಚಕರ ಸೇವೆ

ಆ ತಾಂತ್ರಿಕ ಸೇವೆ

ಇ ಆಡಳಿತಾತ್ಮಕ ಸೇವೆ

ತಾಂತ್ರಿಕ ಸೇವೆ ಹಾಗೂ ಆಡಳಿತಾತ್ಮಕ ಸೇವೆಗಳು ಒಂದರೊಡನೊಂದು ಬೆರೆತು ಸಾಗುವದರಿಂದ ಇವೆರಡು ವಿಭಾಗಗಳು ಸಮೀಪದಲ್ಲೇ ಇರಬೇಕು. ಇವೆರಡರಲ್ಲಿ ಕಾರ್ಯವಾಹಿಯಾದ ವ್ಯಕ್ತ ವಿಚಾರಗಳು ನಡೆಯುವದರಿಂದ, ಕೆಲಮಟ್ಟಿಗೆ ಧ್ವನ್ಯಾಲೋಕ ನಿರ್ಮಾಣವಾಗುವದು. ಅಂತೇ ಇದರಿಂದ ವಾಚಕರಿಗೆ ತೊಂದರೆಯಾಗದಂತೆ ಇವು ವಾಚಕರ ವಿಭಾಗದಿಂದ ಕೊಂಚ ದೂರವಿರಬೇಕು. ಇಲ್ಲವಾದಲ್ಲಿ ಲಕ್ಷ್ಯಪೂರ್ವಕವಾದ ಅಭ್ಯಾಸ ನಡೆಯಲು ಸಾಧ್ಯವಾಗದು.

ತ್ರಿವಿಧ ಸಾಗಾಣಿಕೆ :

ಅ ಓದುಗರ ಆಗಮನ ನಿರ್ಗಮನ

ಆ ಗ್ರಂಥಗಳ ಸಾಗಾಣಿಕೆ

ಇ ಸಿಬ್ಬಂದಿಯ ಆಗಮನ ನಿರ್ಗಮನ

ಈ ಸಾಗಾಣಿಕೆಯಿಂದುಂಟಾಗುವ ತೊಂದರೆಗಳು ಓದುಗರಿಗೆ ಆಗದಂತೆ ವ್ಯವಸ್ಥೆ

ಮಾಡಬೇಕು. ಓದುಗರು, ಗ್ರಂಥಾಲಯದ ಸಿಬ್ಬಂದಿ ವರ್ಗದವರು ಗ್ರಂಥಗಳನ್ನು ಶೇಖರಿಸುವ, ವ್ಯವಸ್ಥೆಗೊಳಿಸುವ, ಇತ್ಯಾದಿ ಕಾರ್ಯದಲ್ಲಿ ತೊಡಗಿದಂಥ ಸ್ಥಳದಲ್ಲಿ ಹಾಯ್ದಾಡುವಂತಿರಬಾರದು. ಸಿಬ್ಬಂದಿಯ ಕಾರ್ಯಾಗಾರದ (Green Room) ತೊಂದರೆ ಓದುಗರಿಗೆ ಆಗಕೂಡದು. ಸಿಬ್ಬಂದಿ ವರ್ಗದವರ ಓಡಾಟಗಳು, ವಾಚನ ಭವನಗಳಲ್ಲಿ ಜಮಖಾನೆಯನ್ನು ಹಾಕಿದ್ದರೂ ಸಶಬ್ದವಾಗಿ ಸಾಗಬಹುದು; ಅಥವಾ ಅವು ಓದುಗರಿಗೆ ದೃಷ್ಟಿಮೂಲ ತೊಂದರೆಗಳನ್ನುಂಟುಮಾಡುವಲ್ಲಿ ಸಂಶಯವಿಲ್ಲ. ಇದನ್ನು ದೂರವಿರಿಸಲು ಹೊಸದಾಗಿ ಸೇರ್ಪಡೆಯಾಗುವ ಗ್ರಂಥಗಳನ್ನು ಕಟ್ಟಡದ ಒಂದು ತುದಿಯಲ್ಲಿರುವ ಮಂದಿರದಲ್ಲಿ ಸಂಗ್ರಹಿಸಿ, ಅಲ್ಲಿಯೇ ವಿಭಾಗೀಕರಿಸಿ ನಂತರ ಓದುವ ಮಂದಿರಕ್ಕೆ ಸಾಗಿಸಬೇಕು.

ಅಭ್ಯಾಸದ ತ್ರಿವಿಧ ಮಜಲುಗಳು :

ಅ ಲಘು ಸಾಹಿತ್ಯ ವಾಚನ (ಮನರಂಜನೆಯ ಓದು) :

ಆ ಲಕ್ಷ್ಯಪೂರ್ವಕ ಓದುವದು

ಇ ಸಂಶೋಧನಾತ್ಮಕ ಅಭ್ಯಾಸ ಮಾಡುವದು

ಈ ಮೂರು ವಿಭಾಗಗಳಲ್ಲಿಯೂ ತೊಡಕು ತೋರಬಾರದು. ಮೊದಲನೆ ವಿಭಾಗವೆಂದರೆ ಲಘುಸಾಹಿತ್ಯವಾಚನ ಮಂದಿರ. ಇದು ಗ್ರಂಥಾಲಯ ಪ್ರವೇಶ ವಿಭಾಗದಲ್ಲೇ, ಓದುವ ಭಾಗ ಹಾಗೂ ಆಡಳಿತ ಭಾಗಗಳ ನಡುವೆ ಇರಬೇಕು. ಅಷ್ಟೊಂದು ಓದುವದರಲ್ಲಿ ಆಸಕ್ತರಾಗಿರದ ಓದುಗರು ಈ ಭಾಗದಲ್ಲಿಷ್ಟು ನಿಂತು ಕಣ್ಣಾಡಿಸಿ, ಮುಂದೆ ಓದುವ ಕುತೂಹಲ ತಾಳಿದರೆ ಓದುವ ಭವನಕ್ಕೆ ಹೋಗಬಹುದು ಇಲ್ಲವೆ ಮನೆಗೆ ಮರಳಬಹುದು.

ಅತ್ಯಾಸಕ್ತ ಗಂಭೀರ ವಾಚಕರು ತಮ್ಮ ಸತತ ಓದಿನಿಂದ ದಣಿದಾಗ ಈ ವಿಭಾಗಕ್ಕೆ ಬಂದು, ಇಲ್ಲಿಯ ಲಘು ಸಾಹಿತ್ಯದಲ್ಲಿ ಕಣ್ಣಾಡಿಸಿಕೊಂಡು ಮಾನಸಿಕ ವಿಶ್ರಾಂತಿ ಪಡೆಯಬಹುದು.

ಕೇವಲ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವ ದೃಷ್ಟಿಯಿಂದ ಪಠ್ಯಪುಸ್ತಕಗಳನ್ನು ಮಾತ್ರ ಓದುವ ಓದುಗರು ಸಂಶೋಧನಾತ್ಮಕ ಅಭ್ಯಾಸಿಗಳಿಗೆ ತೊಡಕಾಗಬಾರದು. ಸಂಶೋಧನಾತ್ಮಕ ಓದುಗರ ಕಾರ್ಯಕ್ಷೇತ್ರ ಹೆಚ್ಚು ವಿಶಾಲವಾದದ್ದು ಹಾಗೂ ಕಾರ್ಯರೂಪ ಹೆಚ್ಚು ಜಟಿಲವಾದದ್ದಾಗಿರುವದು. ಅಂತೆಯೇ ಓದುಗರ ಕೋಣೆ ಕಣ್ಣಾಡಿಸುವ ಓದುಗರ ಹಾಗೂ ಪಠ್ಯಪುಸ್ತಕ ಅಭ್ಯಾಸಿಗಳ ಭವನಗಳಿಂದ ತುಸು ದೂರದಲ್ಲೇ ಇರಬೇಕು.

ವಿಭಾಗೀಯ ಪದ್ಧತಿಯನ್ನು ಕಟ್ಟಡನಿರ್ಮಾಣದ ಕಾಲಕ್ಕೆ ಗಮನಿಸಿ ಅಳವಡಿಸಿಕೊಂಡರೆ ಉತ್ತಮ. ಇದರನ್ವಯ ಗ್ರಂಥಾಲಯದ ಪ್ರವೇಶದ್ವಾರದ ಬಳಿಯಲ್ಲಿಯೇ ಇರುವ ಲಘುಸಾಹಿತ್ಯದ ಭವನ ಹಾಗೂ ಹೆಚ್ಚು ಸಂಖ್ಯೆಯ ಓದುಗರಿಂದ ತುಂಬುವ

ಪಠ್ಯಪುಸ್ತಕ ಅಥವಾ ಅದಕ್ಕೂ ಹೆಚ್ಚು ಸ್ವತಂತ್ರ ಭವನಗಳಿರುವವು. ಇವುಗಳಲ್ಲಿ ಸಮಾಜ ವಿಜ್ಞಾನದ, ಭೌತ ಹಾಗೂ ನಿಸರ್ಗ ವಿಜ್ಞಾನಗಳ, ಮಾನವೀಯ ವಿಜ್ಞಾನಗಳ ಗ್ರಂಥಗಳು ವಿಭಾಗೀಕರಣಗೊಂಡು ಅಭ್ಯಾಸಿಗಳಿಗೆ ದೊರೆಯುವಂತೆ ಅಳವಟ್ಟಿರುವವು. ವಿಭಾಗೀಕರಣದ ಈ ಪದ್ಧತಿಯಿಂದಾಗಿ ಮೇಲಿಂದ ಮೇಲೆ ತೋರಬಹುದಾದ ಗ್ರಂಥಗಳ ಹಾಗೂ ನಿಯತಕಾಲಿಕೆಗಳ ತಪ್ಪು ಸ್ಥಳೀಕರಣಗಳ ತೊಂದರೆ ಬಹುಮಟ್ಟಿಗೆ ದೂರವಾಗುವದು. ಎಂದರೆ ಮಾನವೀಯ ವಿಜ್ಞಾನಕ್ಕೆ ಸಂಬಂಧಪಟ್ಟ ಗ್ರಂಥ ಮುಂತಾದವು ಭೌತಶಾಸ್ತ್ರದಲ್ಲೊ ಅಥವಾ ನಿಸರ್ಗವಿಜ್ಞಾನದವು ಸಮಾಜ ವಿಜ್ಞಾನದಲ್ಲೊ ಸೇರಿಕೊಂಡುಬಿಡುವ ತೊಂದರೆ ತಪ್ಪುವದು.

ಅವಿಭಾಗೀಕರಣ ಪದ್ಧತಿಯಲ್ಲಿ, ಒಂದು ಬಗೆಯ ವರ್ಗೀಕರಣ ಪದ್ಧತಿಯಂತೆ ಗ್ರಂಥಗಳನ್ನು ಏಕಪ್ರಕಾರವಾಗಿ ಹೊಂದಿಕೆಗೊಳಿಸಲಾಗುವದು. ಇದರಿಂದಾಗಿ ಯಾವದೊಂದು ಜ್ಞಾನ ವಿಭಾಗಕ್ಕೆ ಸೇರಿದ ಎಲ್ಲ ಗ್ರಂಥಗಳೂ ಒಂದೇ ಭವನದಲ್ಲಿ ದೊರೆಯದೆ ಹೋಗುವವು. ವಿವಿಧ ವಿಭಾಗಗಳಿಗೆ ಸೇರಿದ ಗ್ರಂಥಗಳೆಲ್ಲ ಅಲ್ಲಲ್ಲಿ ಸೇರಿಕೊಂಡು ಕಿಚಡಿಯಾಗುವದು. ನಿಯತಕಾಲಿಕೆಗಳನ್ನು ಬೇರೆಯಾಗಿ, ಸರಕಾರೀ ಪ್ರಕಟನೆ ಮುಂತಾದವನ್ನು ಬೇರೆಯಾಗಿ ಹೀಗೆ ವ್ಯವಸ್ಥೆಗೊಳಿಸಿರುತ್ತದೆ. ಇತ್ತೀಚಿನ ಆಧುನಿಕ ಸಂಪ್ರದಾಯವು ಗ್ರಂಥ ಸಂಗ್ರಹವಿರುವ ಭವನ ಹಾಗೂ ಓದುವ ಭವನ ಪ್ರತ್ಯೇಕವಿರಬೇಕೆಂದು ಪುರಸ್ಕರಿಸುತ್ತಿಲ್ಲವಾದುದರಿಂದ ಗ್ರಂಥಗಳನ್ನು ಸಂಗ್ರಹಿಸಿಡಲು ಪ್ರತ್ಯೇಕ ಭವನಗಳೇನೂ ಬೇಕಿಲ್ಲ. ಆದರೂ ಗ್ರಂಥ ಸಂಗ್ರಹದ ಸ್ಥಳ ಕಣ್ಣರಿಕೆಯಲ್ಲಿ ಹಾಗೂ ಸುವ್ಯವಸ್ಥಿತವಾಗಿ ಇರಬೇಕಾದುದು ಆವಶ್ಯಕ. ಇದಕ್ಕಾಗಿ ಓದುವ ಭವನದಲ್ಲಿ ಒಂದೆಡೆ ಗ್ರಂಥ ಸಂಗ್ರಹವಿದ್ದರೆ ಇನ್ನೊಂದೆಡೆ ಓದಲು ಕೂಡ್ರುವ ಖುರ್ಚಿ ಹಾಗೂ ಮೇಜುಗಳು ಇರಬೇಕು. ಎರಡರ ನಡುವೆ ಸಾಕಷ್ಟು ಅಡ್ಡಾಡಲು ಪ್ರಶಸ್ತ ಸ್ಥಳವಿರಬೇಕು. ಓದುವ ವಿಭಾಗವನ್ನು ಸಂಗ್ರಹ ವಿಭಾಗದಿಂದ ಬೇರ್ಪಡಿಸುವಂತೆ ರೇಶಿಮೆ ಹಗ್ಗಗಳನ್ನು ಅಡ್ಡಕಟ್ಟಿದ ವಿಭಾಗೀಕರಣಸ್ಟ್ಯಾಂಡುಗಳು ಇರಬೇಕು. ಎರಡು ತುದಿಗಳಲ್ಲಿ ಎರಡು ದಾರಿಗಳಿದ್ದು, ಒಂದಾ ಬರಲು ಹಾಗೂ ಇನ್ನೊಂದು ಹೊರಹೊರಡಲು ಇರಬೇಕು.

ಸಾಮಾನ್ಯ ವಿಚಾರಗಳು

ಬೆಳಕು : ಸಾಮಾನ್ಯ ಓದುವ ಭವನದಲ್ಲಿ ಎಲ್ಲೆಡೆ ಪ್ರಕಾಶ ಬೀರುವಂಥ ಬೆಳಕಿನ ವ್ಯವಸ್ಥೆ ಇರಬೇಕು. ಇಂಥಲ್ಲಿ ಪ್ರತ್ಯೇಕ ಓದುಗರಿಗೆ ಪ್ರತ್ಯೇಕ ಬೆಳಕಿನ ವ್ಯವಸ್ಥೆ ಬೇಕಿಲ್ಲ. ಸಂಶೋಧನಾತ್ಮಕ ಓದುಗರಿಗಾಗಿ ಇರುವ ಪ್ರತ್ಯೇಕ ಮೇಜುಗಳಿಗೆ ಪ್ರತ್ಯೇಕ ದೀಪಗಳ ವ್ಯವಸ್ಥೆ ಇರಬೇಕು. ಅಂದರೆ ಅವರ ಏಕಾಂತ ಹಾಗೂ ಏಕಾಗ್ರತೆಗಳಿಗೆ ಭಂಗಬರುವದಿಲ್ಲ. ಗ್ರಂಥ ಸಂಗ್ರಹ ಕಪಾಟುಗಳ ಮೇಲಿನ ಸಾಲಿನಿಂದ ಹಿಡಿದು ತೀರ ಕೆಳಗಿನ ಸಾಲಿನವರೆಗೂ ಚೆನ್ನಾಗಿ ಪ್ರಕಾಶ ನೀಡುವಂಥ ಪ್ರತಿಫಲನ ದೀಪಗಳ ವ್ಯವಸ್ಥೆ ಇರಬೇಕು. ಇಂದಿನ ದಿನಗಳಲ್ಲಿ ಫ್ಲೋರಸೇಂಟ್ ದೀಪಗಳನ್ನು ಬಳಸುವ

ರೂಢಿ ಎಲ್ಲೆಡೆ ಇದೆ. ಅವು ಕಡಿಮೆ ವಿದ್ಯುತ್ ಶಕ್ತಿಯನ್ನು ಕರಗಿಸುವದರಿಂದ ಆರ್ಥಿಕವಾಗಿಯೂ ಹಾನಿಕರವಾಗಿಲ್ಲ. ಅವು ಒಂದು ಬಗೆಯ ಸಪ್ಪಳ ಮಾಡುವದು ಹಾಗೂ ವಿದ್ಯುತ್ ಶಕ್ತಿಯ ಹೆಚ್ಚು-ಕಡಿಮೆಯಾಗುತ್ತಿರುವಾಗ ಪ್ರಕಾಶದ ಹೆಚ್ಚು ಕಡಿಮೆಯಾಗುತ್ತಿರುವದು ಮಾತ್ರ ಅಷ್ಟೊಂದು ಸಹ್ಯವಾಗುವದಿಲ್ಲ. ಪ್ರವೇಶ ಭವನ, ಲಘು ಸಾಹಿತ್ಯ ವಿಭಾಗ, ಸಭಾಭವನ ಮುಂತಾದೆಡೆ ವಿವಿಧ ಸ್ವರೂಪಗಳ ದೀಪಗುಚ್ಛಗಳನ್ನು ಅಳವಡಿಸಬಹುದು. ಇದರಿಂದಾಗಿ ಅಲ್ಲಿ ಒಂದು ಬಗೆಯ ಇಚ್ಛಿತ ಉತ್ತಮ ವಾತಾವರಣ ನಿರ್ಮಾಣವಾಗುವದು.

ಪೀಠೋಪಕರಣಗಳು : ಗ್ರಂಥಾಲಯ ಪೀಠೋಪಕರಣಗಳು ಸತತ ಕಾರ್ಯಭಾರಕ್ಕೆ ಸಿಗುವ ವಿಶಿಷ್ಟ ಬಗೆಯವಾಗಿರುವಂಥವು. ಪ್ರಾರಂಭಕ್ಕೆ ಬೆಲೆ ಹೆಚ್ಚೆನಿಸಿದರೂ ಉತ್ತಮ ಮಟ್ಟದ ಪೀಠೋಪಕರಣಗಳನ್ನು ಸಜ್ಜುಗೊಳಿಸುವದು ಯೋಗ್ಯ. ಉತ್ತಮ ವಸ್ತುಗಳೇ ದೊರೆಯುವ ಭರವಸೆಯಿದ್ದಾಗ ಟೆಂಡರುಗಳನ್ನು ಕರೆದು ಕಡಿಮೆ ಬೆಲೆಯನ್ನು ಹೇಳಿದವರಿಂದ ಕೊಂಡುಕೊಳ್ಳುವ ಮುಂತಾದ ನಿಯಮ ಅನುಸರಿಸಬಹುದು. ಒಳ್ಳೇದರ್ಜೆಯ ಪೀಠೋಪಕರಣಗಳಿದ್ದರೆ, ಮುಂದೆ ಅವನ್ನು ಮೇಲಿಂದ ಮೇಲೆ ರಿಪೇರಿ ಮಾಡಿಸುವ ತೊಂದರೆಯ ಪರಿಸ್ಥಿತಿ ಹೆಚ್ಚಾಗಿ ತಲೆದೋರುವದಿಲ್ಲ. ಕ್ಯಾಟಲಾಗ ಕ್ಯಾಬಿನೆಟ್ಟುಗಳು, ಕ್ಯುಮುಲೇಟಿವ್ ಪುಸ್ತಕ ಸ್ಟ್ಯಾಂಡುಗಳು, ಸೂಚಿಗಳ, ನಿಘಂಟುಗಳ ಸ್ಟ್ಯಾಂಡುಗಳು-ಮುಂತಾದ ವಿಶಿಷ್ಟ ಬಗೆಯ ಉಪಕರಣಗಳು ಸಾಮಾನ್ಯವಾಗಿ ಮನೆಗೆಲಸ ಮಾಡುವ ಕಾರ್ಖಾನೆಗಳಲ್ಲಿ ಮಾಡಲ್ಪಡುವದಿಲ್ಲ. ಅವಕ್ಕಾಗಿ ವಿಶೇಷ ಸೂಚನೆಗಳನ್ನು ನೀಡಿ ಮಾಡಿಸಬೇಕಾಗುವದು. ಮುಂಬೈಯಲ್ಲಿಯ ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆಯ (Tata Institute of Fundamental Research) ಪೀಠೋಪಕರಣಗಳನ್ನು ಇಲ್ಲಿ, ಉದಾಹರಿಸಬಹುದು. ಇಲ್ಲಿಯ ಪೀಠೋಪಕರಣಗಳು, ವಿದ್ಯುತ್ ಜೋಡಣೆಗಳು, ಬಾಗಿಲುಗಳ ಹಿಡಿಕಿಗಳನ್ನು ಸಹಿತ ಆ ಸಂಸ್ಥೆಯ ನಿರ್ಮಾತೃಗಳಾದ ದಿವಂಗತ ಡಾ. ಹೋಮಿ ಭಾಭಾ ಅವರು ಸ್ವತಃ ಆಸ್ಥೆವಹಿಸಿ ಆರಿಸಿ, ಸೂಚನೆ ನೀಡಿ ಮಾಡಿಸಿ ಅಳವಡಿಸಿರುವಂಥವು. ಅವು ಅತ್ಯುತ್ತಮ ಮಟ್ಟದವಿರುವದರಿಂದ ಸಂಸ್ಥೆಗೆ ಮೇಲಿಂದ ಮೇಲೆ ರಿಪೇರಿ ಮಾಡಿಸುವ ಯೋಚನೆಯಿಲ್ಲ. ಇದರಿಂದಾಗಿ ಅನೇಕ ಸಹಸ್ರ ರೂಪಾಯಿಗಳ ಉಳಿತಾಯವೂ ಆಗುತ್ತಿರಲು ಸಾಕು.

ಇದಕ್ಕೆ ಪ್ರತಿಯಾಗಿ ಕಿರಿಕಿರಿಸುತ್ತಾಯಿರುವ ಪಂಖಾಗಳು, ಬಾಯಿ ಬಿಟ್ಟ ಹಲಗೆಗಳ ಮೇಜುಗಳು, ಕುಸಿಬಿದ್ದ ತಳದ ಪೀಠದ ಕುರ್ಚಿಗಳು, ಸತತ ಕಿರಗುಟ್ಟುವ ಬಾಗಿಲುಗಳು, ಧೂಳು ಮೆತ್ತಿದ ಗೋಡೆಗಳು, ಮುರಿದ ಇಲ್ಲವೆ ಮುರುಕಳಿಯ ಸ್ಥಿತಿಗೆ ಬಂದ ಇತರ ಪೀಠೋಪಕರಣಗಳು ಇಂದು ನಮ್ಮ ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ ಕಂಡುಬರುವ ಸಾಮಾನ್ಯ ದೃಶ್ಯಗಳಾಗಿವೆ. ಇದು ಬೇಡವಾದ ಅಂಶ.

ಆಂತರಿಕ ಅಲಂಕಾರ: ಗ್ರಂಥಾಲಯವು ವಿದ್ಯಾರ್ಥಿಗಳ, ಶಿಕ್ಷಕರ ಹಾಗೂ ಸಂಶೋಧಕರ ಕರ್ಮಾಗಾರವಾಗಿದೆ. ಉಚ್ಚ ಶಿಕ್ಷಣರಂಗದಲ್ಲಿಯಂತೂ ಇವರೆಲ್ಲ ತಮ್ಮ ಹೆಚ್ಚುವರಿ

ಶಿಕ್ಷಣಾಭ್ಯಾಸವನ್ನೆಲ್ಲ ಗ್ರಂಥಾಲಯದಲ್ಲೇ ನಡೆಸಬೇಕಾಗುವದು. ಇವರೆಲ್ಲ ತಮ್ಮ ಕಾರ್ಯಮಗ್ನ ಅವಧಿಯ ಹೆಚ್ಚು ಭಾಗವನ್ನು ಇಲ್ಲೆ ಕಳೆಯಬೇಕಿರುವದರಿಂದ ಗ್ರಂಥಾಲಯದ ಆಂತರಿಕಭಾಗವು, ಒಳ್ಳೇ ಅಭಿರುಚಿಯಿಂದ ಕೂಡಿದ ವಸ್ತುಗಳಿಂದ ಸುಂದರವಾಗಿ ಹಾಗೂ ಆಸ್ಥೆ ಹುಟ್ಟಿಸುವಂಥ ವಾತಾವರಣದಿಂದ ಆಳವಟ್ಟಿರಬೇಕಾದದ್ದು ಆವಶ್ಯಕ. ಪೀಠೋಪಕರಣಗಳಿಗೆ, ಗೋಡೆಗಳಿಗೆ ಮೃದು ನೋಟ ಬೀರುವ ಬಣ್ಣಗಳನ್ನು ಬಳಿಯುವದು, ಅಲ್ಲಲ್ಲಿ ಮೇಲ್ದರ್ಜೆಯ ವರ್ಣಚಿತ್ರಗಳನ್ನು ತೂಗಿಸಿರುವದು,* ಹೂದಾನಿಗಳನ್ನು ಇಟ್ಟಿರುವದು ಮೊದಲಾದವು ಇಚ್ಛಿತವಾದ ಅಂಶಗಳು. ಇದರಿಂದಾಗಿ ಸಾಲು ಸಾಲಾಗಿ ನಿಂತ ಗ್ರಂಥಗಳಿಂದ, ಪೀಠೋಪಕರಣಗಳಿಂದ ತಲೆದೋರುವ ಒಂದು ಬಗೆಯ ರೂಕ್ಷ ವಾತಾವರಣವನ್ನು ಮುರಿದಂತಾಗುವದು. ಓದುವ ಹಾಗೂ ಬಹುಕಾಲದವರೆಗೆ ಅಭ್ಯಾಸ ಮಾಡುವಂಥ ಅಭಿರುಚಿಯುನ್ನು ಪೋಷಿಸುವಂತಾಗುವುದು. ಕಣ್ಣು ಒಡೆದು ಹೋಗುವಂತೆ ಪ್ರಭಾವ ಬೀರುವ ಹಾಗೂ ಬೆಳಕನ್ನು ನುಂಗುವ ಕಡು ಬಣ್ಣಗಳನ್ನು ಗ್ರಂಥಾಲಯದೊಳಗಿನ ಗೋಡೆಗಳಿಗೆ ಬಳಿಯಕೂಡದು, ಮೃದು ವರ್ಣಗಳ ವಿವಿಧ ಬಗೆಗಳನ್ನು ಬಳಸಬಹುದು.

ಉಪಾಹಾರ ಮಂದಿರ : ಚಹಾ, ಕಾಫೀ, ಹಾಲು, ಸ್ಯಾಂಡವಿಚ್‌ಗಳು–ಮುಂತಾದ ಮೃದುಪಾನೀಯ ಹಾಗೂ ಅಲ್ಪೋಪಹಾರ ಒದಗಿಸುವಂಥ ಉಪಾಹಾರ ಮಂದಿರವು ಗ್ರಂಥಾಲಯದ ಭಾಗವಾಗಿ ಇರುವದು ಇಚ್ಛಿತವೇ. ತಾಸುಗಟ್ಟಲೆ ಸಾಗುವ ಅಭ್ಯಾಸದ ನಡುವೆ ಉತ್ತೇಜನ ಹಾಗೂ ವಿಶ್ರಾಂತಿ ನೀಡುವಂಥ ಈ ಸ್ಥಳ ಆವಶ್ಯಕವೇ ಹೊರತು ಅನವಶ್ಯಕ ಖರ್ಚಿನ ಬಾಬತ್ತು ಎಂದು ಭಾವಿಸಲಾಗದು. ಅಲ್ಲದೆ ಇದು ಅಭ್ಯಾಸಿಗಳು ಒಂದೆಡೆ ಸೇರಲು, ಚರ್ಚಿಸಲು ಸ್ಥಾನವಾಗಿಯೂ ನಿರ್ಮಾಣವಾಗುವಂಥದು. ಒಂದು ವೇಳೆ ಗ್ರಂಥಾಲಯದಲ್ಲೊಂದು ಇಂಥ ಪ್ರತ್ಯೇಕ ಉಪಾಹಾರ ಮಂದಿರ ಬೇಕಿಲ್ಲವೆಂದೂ ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಾಮೂಹಿಕ ಉಪಾಹಾರ ಮಂದಿರವೇ ಸಾಕೆಂದೂ ಭಾವಿಸಿದರೆ ಇಲ್ಲೊಂದು ಚಹಾ/ಕಾಫೀ ತಯಾರಿಸಿ ನೀಡುವ ಯಂತ್ರ ಹಾಗೂ ನಾಲ್ಕಾರು ಜನ ಕುಳಿತು ಚರ್ಚಿಸುವಂಥ ಸ್ಥಳವಾದರೂ ಏರ್ಪಡಬೇಕಾದದ್ದು ಅತ್ಯಾವಶ್ಯಕ.

ತೋಟಗಳು : ಹಸಿರು ಹುಲ್ಲುಗಾವಲುಗಳಿಂದ ಕೂಡಿದ ಸುಂದರ ತೋಟಗಳು ಗ್ರಂಥಾಲಯಗಳಿಗೆ ಆವಶ್ಯಕ. ಓದಿನಿಂದ ಬೇಸತ್ತಾಗ ಕಣ್ಣುಗಳಿಗೆ ಆನಂದ ನೀಡುವ ದೃಶ್ಯವೊದಗಿಸುವದಲ್ಲದೇ ಈ ತೋಟಗಳು ಸೂರ್ಯಕಿರಣಗಳ ಝಳವನ್ನು ಮೃದು

---

*ಮೈಸೂರು ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳ ಓದುವ ಭವನಗಳಲ್ಲಿ ಹಾಕಲಾದ ವಿಶ್ವವಿಖ್ಯಾತ ಕಲಾವಿದ ಶ್ರೀ ಕೃಷ್ಣ ಹೆಬ್ಬಾರ ಅವರು ಬರೆದ ಸುಂದರವಾದ ಹಾಗೂ ಅರ್ಥಗರ್ಭಿತವಾದ ಚಿತ್ರಗಳನ್ನು ಇಲ್ಲಿ ಉದಾಹರಿಸಬಹುದು. ಇಂಥ ಚಿತ್ರಗಳು ವಿಶಾಲವಾದ ಹರವಾದ ಗೋಡೆಗಳಿಗೆ ಸೌಂದರ್ಯವನ್ನೀಯುವವಲ್ಲದೇ ಗಂಟೆಗಟ್ಟಲೆ ಗಹನ ಅಭ್ಯಾಸವಲ್ಲಿ ತೊಡಗಿನ ಓದುಗರಿಗೆ ಸ್ಫೂರ್ತಿಯ ಸೆಲೆಯಾಗಿಯೂ ಕಂಗೊಳಿಸುವವು.

ಗೊಳಿಸುವವು; ಧೂಳಿಯ ಕಣಗಳನ್ನು ಕಡಿಮೆಗೊಳಿಸುವವು. ಗ್ರಂಥಾಲಯ ಕಟ್ಟಡದ ಯೋಜನೆಗಳಲ್ಲಿ ತೋಟಗಳು ಇಲ್ಲದಿದ್ದರೆ ಅವು ಅಪೂರ್ಣಯೋಜನೆಗಳೇ ಸರಿ.

ವಾಹನಗಳನ್ನು ನಿಲ್ಲಿಸುವದು : ಮೋಟಾರು ಕಾರುಗಳು, ಸೈಕಲ್ಲುಗಳು, ಸ್ಕೂಟರುಗಳು–ಮುಂತಾದ ವಾಹನಗಳನ್ನು ನಿಲ್ಲಿಸಲು ಯೋಗ್ಯ ಸ್ಥಳಗಳು ಇರಬೇಕು. ಇವನ್ನು ನಿಲ್ಲಿಸುವ ವ್ಯವಸ್ಥೆ ಕಟ್ಟಡದ ಹಿಂಭಾಗದಲ್ಲಿ ಇರಬೇಕೇ ಹೊರತು ಮುಂಭಾಗದಲ್ಲಿ ಸರ್ವಥಾ ಇರಕೂಡದು.

ಸಂಪರ್ಕ : ಗ್ರಂಥಾಲಯ ಕಟ್ಟಡಕ್ಕೆ ಟೆಲಿಫೋನು ಅವಶ್ಯ. ಆಂತರಿಕವಾಗಿಯೂ ಟೆಲಿಕಮ್ಯೂನಿಕೇಶನ್ ವ್ಯವಸ್ಥೆ ಇರುವದು ಇಚ್ಛಿತ. ಒಂದು ಮಜಲಿನಿಂದ ಇನ್ನೊಂದು ಮಜಲಿಗೆ ಹೋಗಲು ಲಿಫ್ಟುಗಳು ಇರಬೇಕು. ಇವೆಲ್ಲ ಮೂಲಭೂತ ಆವಶ್ಯಕತೆಗಳೇ ಸರಿ.

ಸ್ವಚ್ಛತಾ ವಿಭಾಗಗಳು (Sanitary Blocks) : ಸ್ವಚ್ಛತಾ ವಿಭಾಗವು ಓದುಗರಿಗೆ ಸ್ವಲ್ಪ ದೂರದಲ್ಲೇ ಲಭ್ಯವಾಗಿರಬೇಕಾಗಿರುವದು ಅವಶ್ಯವಾದರೂ ಅದಕ್ಕೆ ಹೋಗಿಬರುವ ಮುಂತಾದ ತೊಂದರೆಗಳು ಓದುಗರಿಗೆ ಆಗದಂತೆ ವ್ಯವಸ್ಥೆ ಇರಬೇಕು. ಓದುಗರ ಭವನಗಳಿಗೆ ತೀರ ಸಮೀಪದಲ್ಲಿ ಇರುವ ಈ ವಿಭಾಗಗಳಲ್ಲಿ ನೀರು ಸರಿಯಾಗಿ ಒದಗದಿದ್ದರೆ, ಒದಗಿದರೂ ಓದುಗರು ನೀರನ್ನು ಸರಿಯಾಗಿ ಉಪಯೋಗಿಸದಿದ್ದರೆ, ಹೆಚ್ಚಿನ ಒತ್ತಡ ಬಿದ್ದರೆ ಉಂಟಾಗುವ ಅಸಹ್ಯ ಪರಿಸ್ಥಿತಿ ಬೇಡವಾದದ್ದು. ಅಂತೇ ಈ ವಿಭಾಗ ಕಟ್ಟಡದಿಂದ ತುಸು ಅಂತರದ ಮೇಲೆ ಇದ್ದರೆ ಒಳ್ಳೆಯದು, ದೂಷಿತ ವಾಯುವನ್ನು ಹೊರಹಾಕುವಂಥ ಪಂಖಾಗಳ ವ್ಯವಸ್ಥೆ ಇರಬೇಕು. ಇದರ ಸುತ್ತ ವಿಶಾಲ ಜಾಲಂದ್ರಗಳಿರುವಂಥ ಆವಾರುಗಳು ಇರುವದು ಒಳ್ಳೆಯದು.

ಬಾಗಿಲು ಕಿಟಕಿಗಳು : ಗ್ರಂಥಾಲಯ ಕಟ್ಟಡದ ಒಳ ಏರಲು ಹಾಗೂ ಹೊರಹೋಗಲು ಒಂದೇ ದ್ವಾರದ ವ್ಯವಸ್ಥೆ ಇರಬೇಕು. ಬೇರೆ ಬಾಗಿಲುಗಳಿದ್ದರೆ ಅವೆಲ್ಲ ಕೇವಲ ತುರ್ತುಪರಿಸ್ಥಿತಿಯಲ್ಲಿ ಮಾತ್ರ ಉಪಯೋಗಿಸುವಂಥವಿರಬೇಕು. ಕಿಟಕಿಗಳಿಗೆ ಕೇವಲ ಸಳಿಗಳನ್ನು ಹಾಕುವ ಬದಲು ಚಿಕ್ಕ–ಚಿಕ್ಕ ಜಾಲಂದ್ರಗಳಿಂದ ಕೂಡಿದ ಕಬ್ಬಿಣದ ಅಥವಾ ಸಿಮೆಂಟಿನ ತೆರೆಗಳನ್ನು ಜೋಡಿಸಿರಬೇಕು. ಅವು ಸುಂದರವಾಗಿ ಕಂಡು, ಗಾಳಿ ಬರುವಂತಿರಬೇಕಲ್ಲದೆ ಪುಸ್ತಕಗಳನ್ನು ಹೊರಗೆ ಹಾಕಲು ಬರುವಂತಿರಬಾರದು.

ನೆಲಗಟ್ಟು : ನೆಲಗಟ್ಟು ಒಂದೇ ಸಮನಾಗಿ ತಗ್ಗು ದಿನ್ನೆಗಳಿಲ್ಲದೆ ಇರಬೇಕು. ಮೆಟ್ಟಲುಗಳು ಇರಕೂಡದು. ಮೆಟ್ಟಲುಗಳು ಪುಸ್ತಕಗಳನ್ನು ಇಟ್ಟುಕೊಂಡು ಸಾಗಿಸುವ ಕೈಗಾಡಿಗಳಿಗೆ ತೊಂದರೆಯಾಗುವವು. ಮೃದುವರ್ಣಗಳ, ಸಂಗಮವರಿ ಕಲ್ಲುಗಳ ನೆಲಗಟ್ಟು ಅಂತರಿಕವಾಗಿ ಎಲ್ಲೆಡೆ ಇರುವದು ಪುರಸ್ಕರಣೀಯ.

ಹವಾನಿಯಂತ್ರಣ : ಸದ್ಯದ ವಿದ್ಯುತ್ ಶಕ್ತಿಯ ಅಭಾವ ಪರಿಸ್ಥಿತಿ, ಅನಿಯಮಿತ ಸರಬರಾಜಿನಿಂದಾಗಿ ಸಂಪೂರ್ಣ ಕಟ್ಟಡವನ್ನು 'ಏರ್–ಕಂಡೀಶನ್' ಗೊಳಿಸುವದು ಸಾಧ್ಯವಿಲ್ಲ. ಕಲಬುರ್ಗಿಯಲ್ಲಿಯ ಸ್ನಾತಕೋತ್ತರ ವಿದ್ಯಾ ಕೇಂದ್ರದ ಗ್ರಂಥಾಲಯದ

ಯೋಜನೆ ಹಾಕುವಾಗ ಈ ವಿಷಯ ಕುರಿತು ಗಂಭೀರವಾಗಿ ವಿಚಾರಿಸಲಾಯಿತು. ಕಲಬುರ್ಗಿ ಬಹುವಾಗಿ ಉಷ್ಣದಿಂದ ಕೂಡಿದ ಸ್ಥಳ. ಬೇಸಗೆಯಲ್ಲಿ ಇಲ್ಲಿಯ ವಾತಾವರಣದ ಉಷ್ಣ 110° ಫ್ಯಾರನ್ ಹೀಟ ವರೆಗೂ ಏರುವದು. ಕಾಟಕೋನ ಚೌಕೋನಾಕಾರದಿಂದ ಕೂಡಿ, ತುದಿ ಮೊದಲುಗಳಲ್ಲಿ ಅಡ್ಡಗಲವಾಗಿ ಬೆಳೆಸಲು ಬರುವಂತಿರುವ ಈ ಕಟ್ಟಡದ ಹೃದಯಸ್ಥ ಸ್ಥಳದಲ್ಲೇ ಒಂದು ಚೌಕಾಕಾರದ ಹುಲ್ಲುಗಾವಲನ್ನು ಇಡಲಾಗಿದೆ. ಅದರಲ್ಲೊಂದು ಕೊಳವಿದೆ; ಕಾರಂಜಿಯೂ ಇದೆ. ಓದುವ ಕೋಣೆಗಳ ಹೊರಬದಿಯಲ್ಲಿಯೂ ನೀರಿನ ಕೊಳಗಳ ಹಾಗೂ ಕಾರಂಜಿಗಳ ವ್ಯವಸ್ಥೆ ಇದೆ. ಈ ಕಾರಂಜಿಗಳು ನೀರನ್ನು 25 ರಿಂದ 30 ಅಡಿ ಎತ್ತರದ ವರೆಗೂ ಚಿಮ್ಮಬಲ್ಲವು. ಈ ವ್ಯವಸ್ಥೆ ಬೇಸಗೆಯಲ್ಲಿ ಇಲ್ಲಿಯ ವಾತಾವರಣವನ್ನು ತಕ್ಕಷ್ಟು ತಂಪಾಗಿಡಲು ಸಾಕಾಗಬಲ್ಲದೆಂದು ಆಶಿಸಲಾಗಿದೆ.

ಧಾರವಾಡದಲ್ಲಿಯ ವಿಶ್ವವಿದ್ಯಾಲಯದ ಸ್ಥಳವನ್ನು ಚೋಟಾಮಹಾಬಳೇಶ್ವರವೆಂದೇ ಕರೆಯಲಾಗುತ್ತಿದೆ. ಸಾಮಾನ್ಯವಾಗಿ ಮಾರ್ಚ, ಏಪ್ರಿಲ್ ಹಾಗೂ ಸ್ವಲ್ಪಮಟ್ಟಿಗೆ ಅಕ್ಟೋಬರ ತಿಂಗಳನ್ನು ಬಿಟ್ಟರೆ ಉಳಿದ ವರ್ಷದಾದ್ಯಂತ ಇಲ್ಲಿಯ ಹವಾಮಾನ ಉತ್ತಮವಾಗಿಯೇ ಇರುವದು. ಅಂತೇ ಇಲ್ಲಿಯ ಗ್ರಂಥಾಲಯ ಕಟ್ಟಡವನ್ನು 'ಏರ್-ಕಂಡಿಶನ್' ಮಾಡಿಸಬೇಕಾದ ಆವಶ್ಯಕತೆಯೇನೂ ಇಲ್ಲ. ಕೇವಲ ದುರ್ಲಭ ಗ್ರಂಥಗಳ ಕೋಣೆ ಹಾಗೂ ಝೀರೋಕ್ಸ ಯಂತ್ರದ ಕೋಣೆಗಳನ್ನು ಮಾತ್ರ 'ಏರ್-ಕಂಡಿಶನ್' ಮಾಡಲು ಬರುವಂತೆ ಯೋಜಿಸಿದರೆ ಸಾಕು.

ಓದುವ ಭವನದ ಛಾವಣಿ ಸುಮಾರು 18 ಅಡಿಗಳಷ್ಟು ಎತ್ತರವಿರಬೇಕು.* ಸುತ್ತಲೂ ಹುಲ್ಲುಗಾವಲು ಹಾಗೂ ತೋಟಗಳಿರಬೇಕು. ಕೊಳ ಹಾಗೂ ಕಾರಂಜಿಗಳು ಇರಬೇಕು. ಇಷ್ಟರಿಂದಲೇ ಇಲ್ಲಿಯ ವಾತಾವರಣ ತಕ್ಕಷ್ಟು ತಂಪಾಗಿ ಉಳಿಯುವದು. ಪಂಖಾಗಳ ಆವಶ್ಯಕತೆ ಕಂಡು ಬಂದರೆ ಅಳವಡಿಸಬಹುದು.

ಗ್ರಂಥಾಲಯ ಕಟ್ಟಡಗಳನ್ನು ನಿರ್ಮಿಸುವದು ಕಷ್ಟದ ಕೆಲಸ. ಇಂಥವನ್ನು ಬೇಕಾದಾಗ ಕಟ್ಟಿಸಲು ಸಾಧ್ಯವಿಲ್ಲ. ಅಂತೇ ಒಮ್ಮೆ ಕಟ್ಟಿಸುವಾಗ, ಸಂಪೂರ್ಣ ಕೂಲಂಕಷವಾಗಿ ವಿಚಾರಿಸಿ, ಯೋಜಿಸಿ, ಯೋಚಿಸಿ ಕಟ್ಟಿಸುವದವಶ್ಯ.

---

*ಗ್ರಂಥಸಂಗ್ರಹ ಭವನಗಳ ಎತ್ತರ ೯ ಅಡಿ ಇದ್ದರೆ ಸಾಕು. ಅದರಂತೆಯೇ ಕಚೇರಿ ವಿಭಾಗದ ಭವನಗಳ ಎತ್ತರ ೧೨ ಇದ್ದರೆ ಅನುಕೂಲ:

೧೨ / ಅಂತರರಾಷ್ಟ್ರೀಯ ಮಕ್ಕಳ ವರ್ಷ : ೧೯೭೯ ಪುಸ್ತಕಗಳ ಮೂಲಕ ಆಚರಣೆ

ಪೀಠಿಕೆ

"ಮನುಜನಿಗೆ ಮಗು ತಂದೆ", "ಇಂದಿನ ಮಕ್ಕಳು ನಾಳೆಯ ನೇತಾರರು, ನಿರ್ಮಾಪಕರು"—ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡು ; ಜಗತ್ತಿನಾದ್ಯಂತ ಅನೇಕ ರಾಷ್ಟ್ರಗಳಲ್ಲಿ ಮಕ್ಕಳು ಅಲಕ್ಷ್ಯಕ್ಕೆ ತುತ್ತಾಗಿದ್ದಾರೆ ಎಂಬ ವಾಸ್ತವ ಅಂಶವನ್ನು ಅರಿತು ; ಮಕ್ಕಳ ಸರ್ವಾಂಗೀಣ ವಿಕಾಸಕ್ಕಾಗಿ ಪೂರ್ಣಪ್ರಮಾಣದ ಕಾರ್ಯಕ್ರಮಗಳನ್ನು ಅತ್ಯಂತ ತುರುತಾಗಿ ಹಾಕಿಕೊಳ್ಳಬೇಕಾದ ಅಗತ್ಯವನ್ನು ಮನಗಂಡು ; ನಮ್ಮ ಮಕ್ಕಳಲ್ಲಲ್ಲದೆ ಬೇರೆ ಭವಿಷ್ಯ ನಮಗಿಲ್ಲ ಎಂಬ ಸತ್ಯವನ್ನು ಒಪ್ಪಿಕೊಂಡು ವಿಶ್ವಸಂಸ್ಥೆಯು ೧೯೭೯ನೆಯ ಇಡೀ ವರ್ಷವನ್ನು "ಅಂತರರಾಷ್ಟ್ರೀಯ ಮಗುವಿನ ವರ್ಷ" ಎಂದು ಘೋಷಿಸಿತು. ಎಲ್ಲ ಕಡೆಯ ಮಕ್ಕಳನ್ನು, ಮಗುವಿನ ಬೆಳವಣಿಗೆಯ ಎಲ್ಲ ಅಂಶಗಳನ್ನು ಕೊನೆಯಪಕ್ಷ ೧೯೭೯ನೆಯ ವರ್ಷದಿಂದ ಮುಂದಕ್ಕೆ ಜಾಗರೂಕತೆಯಿಂದ ನೋಡಿಕೊಳ್ಳಲಾಗುತ್ತದೆ ಎಂದು ವಿಶ್ವಸಂಸ್ಥೆ ಆಶಿಸಿತು.

ಚೆನ್ನಾಗಿ ಬೆಳೆಸಿದ ಮಗು

"ಬೆಳೆದು ದ್ವಿಗುಣವಾಗು" ಎಂದು ಬೈಬಲ್ ಆಜ್ಞೆ ಮಾಡಿತು. ಆಡಂ ಮತ್ತು ಈವರ ಕಾಲದಿಂದಲೂ ನಾವು ಈ ಆಣತಿಯನ್ನು ಯಥಾರ್ಥವಾಗಿ, ಕಟ್ಟುನಿಟ್ಟಾಗಿ, ಸಂತೋಷದಿಂದ ಆಚರಣೆಗೆ ತಂದಿದ್ದೇವೆ. ಕುಟುಂಬದಲ್ಲಿ ಹೊಸ ಮಗುವೊಂದು ಬರುವುದೆಂದರೆ ಅದು ಸಂತೋಷ ಸಂಭ್ರಮಗಳ ಹಿತವಾದ ಬಿಸುಪು ಬರುವ ಕಾಲ. ಕಾಳಿದಾಸನಂತಹ ಶ್ರೇಷ್ಠ ಕವಿಗಳು ಕುಟುಂಬಕ್ಕೆ ಹೊಸದಾಗಿ ಬಂದ ಹಸುಳೆಯು ತರುವ ಆನಂದದ ಸೂರ್ಯೋದಯವನ್ನು ನಿರರ್ಗಳವಾಗಿ ಹಾಡಿದ್ದಾರೆ.

ಆಲಕ್ಷಿತ ಹಸುಳೆ

ಈ ವಿಷಯದಲ್ಲಿ ನಾವೆಲ್ಲ ಆಸಕ್ತರು. ಆದ್ದರಿಂದ ನಮ್ಮಲ್ಲಿರುವ ಅತ್ಯುತ್ಕೃಷ್ಟವಾದುದನ್ನು ಮಗುವಿಗೆ ಕೊಡಬೇಕು ಎಂದು ಎತ್ತರದ ಗಂಟಲಿನಿಂದ ಕಿರಿಚುತ್ತೇವೆ. ಆದರೇನು ? ನಮ್ಮ ಮಾತಿಗೂ ಕೃತಿಗೂ ನಡುವೆ ಅಪಾರವಾದ ಕಂದರವಿದೆ. ವಿಶ್ವಸಂಸ್ಥೆಯ ಪ್ರಧಾನ ಕಚೇರಿಗೆ ಈಚೆಗೆ ಭೇಟಿ ನೀಡಿದ್ದ ಅಮೇರಿಕದ ಅಧ್ಯಕ್ಷ ಜಿಮ್ಮಿ ಕಾರ್ಟರ್ ಹೀಗೆ ಹೇಳಿದರು: "ಜಗತ್ತಿನಾದ್ಯಂತ ಮಿಲಿಟರಿಗಾಗಿ ವರ್ಷಕ್ಕೆ ಸುಮಾರು ೩೦೦ ಮಿಲಿಯನ್ ಡಾಲರುಗಳಷ್ಟು ವೆಚ್ಚವಾಗುತ್ತಿವೆ. ೧೯೭೬ರಲ್ಲಿ ಪ್ರಪಂಚದ ರಾಷ್ಟ್ರಗಳು ಪ್ರತಿಯೊಂದು ಮಗುವಿಗೆ ಶಿಕ್ಷಣ ಕೊಡಲು ವೆಚ್ಚ ಮಾಡಿದುದಕ್ಕಿಂತ ಅರವತ್ತು ಪಟ್ಟು ಹೆಚ್ಚು ಮೊತ್ತವನ್ನು ಪ್ರತಿಯೊಬ್ಬ ಯೋಧನನ್ನು ಸಜ್ಜುಗೊಳಿಸಲು ವೆಚ್ಚ ಮಾಡಿದ್ದುವು."

ಪ್ಯಾರಿಸಿನಲ್ಲಿ ೧೯೭೮ರ ಜೂನ್‌ನಲ್ಲಿ ೧೩–೧೫ರಂದು ನಡೆದ "ನಮ್ಮ ಮಕ್ಕಳಿಗೆ ನಾವು ಎಂಥ ವಿಶ್ವವನ್ನು ಬಿಟ್ಟು ಹೋಗುತ್ತಿದ್ದೇವೆ" ಎಂಬ ವಿಚಾರವನ್ನು ಕುರಿತ ಯುನೆಸ್ಕೋ ದುಂಡುಮೇಜಿನ ಗೋಷ್ಠಿಯಲ್ಲಿ ಜಗತ್ತಿನಾದ್ಯಂತ ಸಾಮಾನ್ಯ ಮನುಷ್ಯನು ತನ್ನ ಎರಡು ವಾರಗಳ ವೇತನವನ್ನು ನೂತನ ಆಯುಧಗಳನ್ನು ನಿರ್ಮಿಸುವುದಕ್ಕಾಗಿ ನೇರ ತೆರಿಗೆಯ ರೂಪದಲ್ಲಿ ತೆರುತ್ತಿದ್ದಾನೆ ಎಂಬ ಅಂಶ ಬೆಳಕಿಗೆ ಬಂದಿತು. ವಿಜ್ಞಾನಿಗಳಲ್ಲಿ ಕಾಲುಭಾಗ ಜನ ಸಂಪೂರ್ಣವಾಗಿ ಆಯುಧಗಳ ನಿರ್ಮಿತಿಯಲ್ಲಿ ತೊಡಗಿದ್ದಾರೆ ಎಂಬ ಅಂಶವೂ ತಿಳಿದು ಬಂದಿತು. ನಮಗೆ ಮಕ್ಕಳು ಬೇಕೆಂಬ ಕಾತರವಿದೆ; ಆದರೆ ಉದ್ದಕ್ಕೂ ನಾವು ಅವರಿಗೆ ಉಸಿರುಕಟ್ಟಿಸುವ, ಭಯಂಕರ ರೂಪವನ್ನು ಖಚಿತಪಡಿಸುವ ವಾತಾವರಣ ವನ್ನೂ ಪರಿಸರವನ್ನೂ ಸೃಷ್ಟಿಸುವುದಕ್ಕೆ ಶ್ರಮಿಸುತ್ತಿದ್ದೇವೆ!

ಅದಿರಲಿ, ದಿನನಿತ್ಯದ ಜೀವನದಲ್ಲಿಯೂ ನಾವು ಮಗುವನ್ನು ಅಗೌರವದಿಂದ ಕಾಣುತ್ತೇವೆ. ಬಸ್ಸುಗಳಲ್ಲಿ ಅವರನ್ನು ನಾವು ಹೇಗೆ ನೋಡಿಕೊಳ್ಳುತ್ತೇವೆ, ಎಂಬ ನಿದರ್ಶನವನ್ನೇ ನೋಡಬಹುದು. ಜನ ತುಂಬಿರುವ ಬಸ್ಸಿನಲ್ಲಿ ಎಷ್ಟು ಜನ ದೊಡ್ಡವರು ಮಕ್ಕಳಿಗೆ ಒಳಕ್ಕೆ ಬರಲು ದಾರಿಮಾಡಿಕೊಡುತ್ತಾರೆ? ಪ್ರತಿ ನಿಲ್ದಾಣದಲ್ಲೂ ಇಪ್ಪತ್ತ ರಿಂದ ಮೂವತ್ತರ ತರುಣರು, ಸಾಮರ್ಥ್ಯದ ಚೈತನ್ಯದ ಉನ್ನತ ಸ್ಥಿತಿಯಲ್ಲಿರುವವರು, ಸಾಹಸ ಜೀವನದ ಹೊಸ್ತಿಲಲ್ಲಿರುವವರು ಮಕ್ಕಳನ್ನು ಅತ್ತ ನೂಕಿ ಬಸ್ಸಿನೊಳಕ್ಕೆ ಮೊದಲು ನುಗ್ಗುತ್ತಾರೆ, ಎಲ್ಲೋ ಒಂದೆರಡು ಖಾಲಿ ಉಳಿದಿರುವ ಸೀಟುಗಳನ್ನು ಆಕ್ರಮಿಸಿಕೊಳ್ಳುತ್ತಾರೆ. ಕೇವಲ ಕೆಲವು ನಿಮಿಷಗಳ ಕಾಲ ಬಸ್ಸಿನಲ್ಲಿ ನಿಂತು ಬರುವ ಆಯಾಸವನ್ನು ಇವರು ತಡೆದುಕೊಳ್ಳಲಾರರು.

ಇನ್ನೊಂದು ಉದಾಹರಣೆ ನೋಡೋಣ: ನಮ್ಮ ಪ್ರೈಮರಿ ಶಾಲೆಗಳನ್ನು ನೋಡಿ. ಅವುಗಳಲ್ಲಿ ಹೆಚ್ಚಿನವು ಎಂಥ ಜೀರ್ಣಾವಸ್ಥೆಯಲ್ಲಿವೆಯೆಂಬುದನ್ನು ಗಮನಿಸಿ. ಪ್ರೌಢಶಾಲೆ–ಕಾಲೇಜು–ವಿಶ್ವವಿದ್ಯಾನಿಲಯಗಳಿಗೆ ಹೋಗುವ ಬಾಲಕ ಬಾಲಿಕೆಯರಿಗೆ ತರುಣ ತರುಣಿಯರಿಗೆ ಯಾವ ಬಗೆಯ ಅನುಕೂಲತೆಗಳು ದೊರಕುತ್ತಲಿವೆಯೆಂಬುದನ್ನು ನೋಡಿ ಎರಡನ್ನೂ ಹೋಲಿಸಿದರೆ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಎಂಥ ಪರಿಸರದಲ್ಲಿ ಮಕ್ಕಳು ಶಿಕ್ಷಣ ಪಡೆಯಬೇಕಾಗಿದೆಯೆಂಬುದರ ಚಿತ್ರ ನಮ್ಮ ಕಣ್ಮುಂದೆ ಬರುತ್ತದೆ. ನಾವು ಕುದುರೆಯ ಮುಂದೆ ಗಾಡಿ ಕಟ್ಟಿದ್ದೇವೆ ಎನಿಸುತ್ತದೆ. ಎಲ್ಲೆಲ್ಲಿ ಅತ್ಯುತ್ತಮ ಅಂಶ ಗಳನ್ನು ನಾವು ಮಕ್ಕಳಿಗೆ ಒದಗಿಸಬೇಕೋ ಅಲ್ಲೆಲ್ಲ ಅವರ ಬಲಿಗೊಟ್ಟು ಅತ್ಯುತ್ತಮ ಅಂಶಗಳನ್ನು ನಮಗೆ ಒದಗಿಸಿಕೊಳ್ಳುತ್ತಿದ್ದೇವೆ.

ನೋಬೆಲ್ ಬಹುಮಾನ ವಿಜೇತ (೧೯೪೫) ಚಿಲಿಯ ಕವಯಿತ್ರಿ ಮೆಡೇಂ ಗೇಬ್ರಿಲಾ ಮಿಸ್ಟ್ರಲ್ ನಾವು ಮಕ್ಕಳ ಬಗೆಗೆ ತಳೆದಿರುವ ಧೋರಣೆಗಾಗಿ ವಿಷಾದಿಸುತ್ತಾ ಹೀಗೆ ಎಚ್ಚರಿಕೆ ಕೊಟ್ಟರು: ''ನಾವು ಎಷ್ಟೋ ತಪ್ಪುಗಳನ್ನು ಮಾಡಿದ್ದೇವೆ. ಆದರೆ ಎಲ್ಲಕ್ಕಿಂತ ದೊಡ್ಡ ತಪ್ಪು ಮಕ್ಕಳನ್ನು ಕಡೆಗಣಿಸಿರುವುದು. ಬದುಕಿನ ಮೂಲ ಸೆಲೆಯನ್ನೇ ಅಲಕ್ಷಿಸಿರುವುದು. ನಮಗೆ ಅಗತ್ಯವಾಗಿರುವ ಅನೇಕ ವಸ್ತುಗಳು ಕಾಯಬಲ್ಲುವು, ಮಗು

ಕಾದಿರಲಾರದು. ಅವನ ಮೂಳೆ ರೂಪುಗೊಳ್ಳುತ್ತಿರುವುದು ಈಗ, ರಕ್ತ ಪರಿಚಲನೆ ಸಮರ್ಪಕವಾಗುತ್ತಿರುವುದು ಈಗ, ಅವನ ಇಂದ್ರಿಯಗಳು ಪಟುಗೊಳ್ಳುತ್ತಿರುವುದು ಈಗ. ಆದ್ದರಿಂದ ನಾವು ಈಗಲೇ ಕಾರ್ಯೋನ್ಮುಖರಾಗಬೇಕು. ಅವನಿಗೆ 'ನಾಳೆ' ಎಂದು ಉತ್ತರ ಕೊಡಬಾರದು. ಅವನ ಹೆಸರು 'ಈ ದಿನ'ವೇ ಹೊರತು 'ನಾಳೆ'ಯಲ್ಲ."

ಮಕ್ಕಳು ಮತ್ತು ಅವರ ಶಾಲಾ ಆಗತ್ಯಗಳು

ಆರರಿಂದ ಹದಿನಾಲ್ಕು ವರ್ಷ ವಯೋಮಾನದ ಮಕ್ಕಳಿಗೆ ಶಿಕ್ಷಣ ಉಚಿತವಾಗಿಯೂ ಕಡ್ಡಾಯವಾಗಿಯೂ ಇರಬೇಕೆಂದು ನಮ್ಮ ಸಂವಿಧಾನವು ವಿಧಿಸಿದೆ. ಈ ವಿಧಿಯನ್ನು ಆಚರಣೆಗೆ ತರುವುದರಲ್ಲಿ ಮಾತ್ರ ನಮ್ಮ ವೇಗ ಬಸವನ ಹುಳುವಿನದು; ಅದಕ್ಕೆ ನೂರಾರು ಅಡ್ಡಿ ತಡೆಗಳು. ಶಾಲಾ ಮಕ್ಕಳಿಗೆ ಕನಿಷ್ಠ ಪ್ರಮಾಣದ ಭೌತಿಕ ಆಗತ್ಯ ಗಳನ್ನು ಒದಗಿಸುವುದೂ ನಮ್ಮ ದೇಶದ ಎಲ್ಲ ರಾಜ್ಯಗಳಲ್ಲೂ ಸಾಧ್ಯವಾಗಿಲ್ಲ.

(ಅ) ಹೆಚ್ಚು ಹೆಚ್ಚು ಮಕ್ಕಳು ಶಾಲೆಗೆ ಹೋಗತೊಡಗಿದಂತೆ ಅಲ್ಲಿ ಸ್ಥಳಾವಕಾಶ ಕಡಮೆಯಾಗುತ್ತಿದೆ. ಅನೇಕ ಶಾಲಾ ಕಟ್ಟಡಗಳೇ ತೀರಾ ಅನಾರೋಗ್ಯಕರ ಪರಿಸ್ಥಿತಿ ಗಳಲ್ಲಿವೆ.

(ಆ) ಉಪಾಧ್ಯಾಯ—ವಿದ್ಯಾರ್ಥಿ ಪರಿಮಾಣ ಹೇಗಿದೆಯೆಂದರೆ ಶಾಲೆಗಳಲ್ಲಿ ಆತ್ಮೀಯವೂ ಚೈತನ್ಯಪೂರ್ಣವೂ ಆದ ಒಂದು ಪರಿಸರ ನಿರ್ಮಾಣವೇ ಇಂದು ಸಾಧ್ಯ ವಾಗಿಲ್ಲ. ಪ್ರಾಥಮಿಕ ಹಂತದಲ್ಲಿ ತರಗತಿಗೊಬ್ಬ ಉಪಾಧ್ಯಾಯ ಎಂಬ ವ್ಯವಸ್ಥೆಯೇ ಇನ್ನೂ ಮುಂದುವರಿದಿದೆ, ೬೦ರಿಂದ ೧೦೦ ಮಕ್ಕಳು ಕಿಕ್ಕಿರಿದು ತುಂಬಿದ ತರಗತಿಯಲ್ಲಿ ಪ್ರತಿದಿನವೂ ಆರು ಗಂಟೆ ಕಳೆಯಬೇಕಾದ ಉಪಾಧ್ಯಾಯನ ದುಸ್ಥಿತಿ ಎಂಥದೆಂಬುದನ್ನು ಊಹಿಸಿಕೊಳ್ಳಬಹುದು. ಕೆಲವು ಗಂಟೆಗಳಾದೊಡನೆ ಉಪಾಧ್ಯಾಯನಿಗೂ ಮಕ್ಕಳಿಗೂ ತೀವ್ರ ಬೇಸರಿಕೆಯುಂಟಾಗುವುದು ಖಂಡಿತ.

(ಇ) ಶಿಕ್ಷಣದ ಮುಖ್ಯ ಸಲಕರಣೆಯಾದ ಪಠ್ಯಪುಸ್ತಕಗಳ ವಿಚಾರವಾದರೂ ಹೇಗೆ? ನಾವು ನಮ್ಮ ಚಿಕ್ಕಂದಿನಲ್ಲಿ ಓದುತ್ತಿದ್ದ ಪಠ್ಯಪುಸ್ತಕಗಳಿಗೆ ಹೋಲಿಸಿ ನೋಡಿದರೆ ಇಂದಿನವು ತೀರಾ ಕೆಟ್ಟದಾಗಿ ಬರೆದ ಪುಸ್ತಕಗಳು. ಕಲ್ಪನಾಶಕ್ತಿಯನ್ನು ಉಪಯೋಗಿಸದೆ ಚಿತ್ರ ಬರೆದಿರುವಂಥವು, ಅತ್ಯಂತ ಹೆಚ್ಚಿನ ಔದಾಸೀನ್ಯದಿಂದ ಅಚ್ಚುಮಾಡಿಸಿ ಪ್ರಕಟಿಸಿರು ವಂಥವು. ಪಠ್ಯಪುಸ್ತಕಗಳನ್ನು ವಿಟಮಿನ್ ಗುಳಿಗೆಗಳಿಗೆ ಹೋಲಿಸುತ್ತಾರೆ. ವಿದ್ಯಾ ರ್ಥಿಯ ಮನಸ್ಸುಗಳಿಗೆ ಸತ್ವ ತುಂಬಿ ಅವರ ಕುತೂಹಲವನ್ನು ಬಡಿದೆಬ್ಬಿಸಿ, ವಿಷಯಗಳ ಬಗೆಗೆ ಇನ್ನೂ ಹೆಚ್ಚು ತಿಳಿದುಕೊಳ್ಳಬೇಕೆಂಬ ತೃಷೆಯನ್ನು ಅವರಲ್ಲಿ ಪಠ್ಯಪುಸ್ತಕಗಳು ಮೂಡಿಸಬೇಕು, ನಮ್ಮ ಪಠ್ಯಪುಸ್ತಕಗಳಾದರೋ ಮಕ್ಕಳ ಕುತೂಹಲವನ್ನು ಕೆರಳಿಸು ವುದಕ್ಕೆ ಬದಲಾಗಿ ಒಂದೇ ಪೆಟ್ಟಿಗೆ ಅದನ್ನು ಕತ್ತರಿಸುವಂಥವು, ಕೊಲೆಗಡುಕನ ಕತ್ತಿಯೊಂದೇ ಅವಕ್ಕೆ ಹೋಲಿಕೆ.

(ಈ) ಮನಸ್ಸು ಮತ್ತು ಬುದ್ಧಿಶಕ್ತಿ ಬೆಳೆಯಲು ಮಕ್ಕಳಿಗೆ ಪಠ್ಯೇತರ ವಿಷಯ ಗಳನ್ನು ಕುರಿತ ಪುಸ್ತಕಗಳೂ ಬೇಕು ಎಂಬುದರಲ್ಲಿ ಸಂದೇಹವಿಲ್ಲ. ಶಾಲಾ ಗ್ರಂಥಾಲಯ

ಗಳಲ್ಲಿ ಅದರಲ್ಲೂ ಪ್ರಾಥಮಿಕ ಹಂತದಲ್ಲಿ ಅವು ಇಲ್ಲದಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ.

ಮಕ್ಕಳ ಬಗ್ಗೆ ಸಾರ್ವಜನಿಕರ ಗಮನ ಸೆಳೆಯಲು ಪ್ರಯತ್ನಗಳು

ರಾಷ್ಟ್ರೀಯಮಟ್ಟದಲ್ಲಿ ಜನತೆಯ ಗಮನವನ್ನು ಮಕ್ಕಳ ಕಡೆಗೆ, ಭಾರತದ ಭವಿಷ್ಯ ನಿರ್ಮಾಪಕರಾದ ಅವರ ಪಾತ್ರದ ಬಗ್ಗೆ ಸೆಳೆಯಲು ಜವಹರಲಾಲ್ ನೆಹರೂ ಪ್ರಯತ್ನಿಸಿದರು. ಬಹುಮಟ್ಟಿಗೆ ಅವರಿಂದಾಗಿ ಮತ್ತು ಮಕ್ಕಳ ಬಗ್ಗೆ ಅವರಿಗಿದ್ದ ಪ್ರೇಮದಿಂದಾಗಿ ಬಾಲಕ್ಷೇಮ ಯೋಜನೆಗಳು ಪ್ರಾರಂಭವಾದುವು. "ಬಾಲಭವನ"ಗಳು ಹುಟ್ಟಿದುವು, ಉಚಿತವಾಗಿ ಮಕ್ಕಳಿಗೆ ಹಾಲು ಒದಗಿಸಲಾಯಿತು. ಮಕ್ಕಳ ಉದ್ಯಾನಗಳನ್ನು ಬೆಳೆಸತೊಡಗಿದರು. ಪ್ರತಿವರ್ಷ ನವೆಂಬರ್ ೧೪ನೆಯ ತಾರೀಕನ್ನು ರಾಷ್ಟ್ರಾದ್ಯಂತ ಮಕ್ಕಳ ದಿನ ಎಂಬುದಾಗಿ ಆಚರಿಸಲು ಮೊದಲಿಟ್ಟಿತು. ಈ ಪ್ರಯತ್ನಗಳಿಗೆಲ್ಲ ಕಳಸವಿಟ್ಟ ಹಾಗೆ ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಸ್ಥಾಪನೆಗೊಂಡಿತು.

ಸುಪ್ರಸಿದ್ಧ ಶಂಕರ್ಸ್ ವೀಕ್ಲಿಯ ಶಂಕರ್ ಅವರು ಪ್ರತಿವರ್ಷ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆಗಳನ್ನು ನಡೆಸಿ ಬೇಕಾದಷ್ಟು ಕೆಲಸ ಮಾಡಿದರು. ಅವರ ಚಿಲ್ಡ್ರನ್ಸ್ ವರ್ಲ್ಡ್ ಪತ್ರಿಕೆಗೆ ಸಮನಾದ ಇನ್ನೊಂದು ಪತ್ರಿಕೆ ಭಾರತದ ಯಾವುದೇ ಭಾಷೆಯಲ್ಲಿ ಇಲ್ಲ. ಅಂತರರಾಷ್ಟ್ರೀಯ ಗೊಂಬೆ ಮ್ಯೂಸಿಯಂ ಕೂಡ ಅವರದೇ ಸೃಷ್ಟಿ. ಇವೆಲ್ಲ ಬಹು ಶ್ರಮಸಾಧ್ಯ ಸಾಧನೆಗಳೇ ಆಗಿದ್ದರೂ ಮಕ್ಕಳು ಭಾರತದ ಆರೋಗ್ಯವಂತರೂ ಬುದ್ಧಿವಂತರೂ ಆದ ಪೌರರಾಗಿ ಬೆಳೆಯಲು ನಾವಿನ್ನೂ ಅಪಾರವಾದ ಅವಕಾಶಗಳನ್ನು ಅವರಿಗೆ ಒದಗಿಸಿಕೊಡಬೇಕಾಗಿದೆ.

ಭಾರತದಲ್ಲಿ ಮಕ್ಕಳ ಪುಸ್ತಕಗಳು

ಭಾರತದಲ್ಲಿ ಶಾಲೆ ಮತ್ತು ಕಾಲೇಜುಗಳಿಗೆ ಹೋಗುವ ಮಕ್ಕಳು ಈಗ ಸುಮಾರು ೧೦ ಕೋಟಿ ಇದ್ದಾರೆ. ಇದರಲ್ಲಿ ಎಲ್ಲೋ ಅಲ್ಪ ಶೇಕಡಾವಾರು ಜನ ವಿಶ್ವವಿದ್ಯಾನಿಲಯಗಳಿಗೆ ಮತ್ತು ಕಾಲೇಜುಗಳಿಗೆ ಹೋಗುವವರು. ಹಾಗಾಗಿ ಹೆಚ್ಚು ಕಡಮೆ ೯.೩ಕೋಟಿ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ—ಸು. ೬ರಿಂದ ೧೮ವರ್ಷ ವಯೋಮಾನದ ಮಕ್ಕಳಿಗೆ—ಪುಸ್ತಕಗಳನ್ನು ಮಾಹಿತಿಯನ್ನು ರಾಷ್ಟ್ರದ ೧೬ ಭಾಷೆಗಳಲ್ಲಿ ಪುಸ್ತಕಗಳು ಮತ್ತು ಪತ್ರಿಕೆಗಳ ಮೂಲಕ ನಾವು ಒದಗಿಸಬೇಕಾಗಿದೆ.

ಮಕ್ಕಳು ಎಲ್ಲ ಕಡೆಯೂ ಮಕ್ಕಳೇ. ಭಾರತದ ಮಕ್ಕಳೂ ಬೇರೆ ಎಲ್ಲಿನಂತೆಯೇ ಪುಸ್ತಕಗಳನ್ನು ಓದಲು ಆಸೆಪಡುತ್ತಾರೆ, ಅವರಿಗೆ ಪುಸ್ತಕಗಳು ಸಿಕ್ಕಬೇಕು ಅಷ್ಟೆ. ಕೇಂದ್ರ ಶಿಕ್ಷಣ ಸಚಿವ ಖಾತೆಯು ೧೯೫೭ರಲ್ಲಿ ಮನರಂಜನೆಗಾಗಿ ಓದು" ಎಂಬ ವಿಷಯವಾಗಿ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿತು. ಅಲ್ಲಿ ವ್ಯಕ್ತವಾದ ಅಂಶಗಳು ಈ ಮಾತನ್ನು ಪುಷ್ಟೀಕರಿಸುತ್ತವೆ. ಪಠ್ಯೇತರ ಓದು ಯಾವುದೇ ರೀತಿಯಲ್ಲೂ ಮಕ್ಕಳ ಪಠ್ಯಭಾಗಗಳ ಅಭ್ಯಾಸದ ಮೇಲೆ ದುಷ್ಪರಿಣಾಮ ಬೀರುವುದಿಲ್ಲ ಎಂಬುದೂ ಅಲ್ಲಿ ವ್ಯಕ್ತವಾಯಿತು. ಅದಕ್ಕೆ ಬದಲು ಪಠ್ಯಪುಸ್ತಕಗಳಲ್ಲದೆ ಬೇರೆ ಪುಸ್ತಕಗಳನ್ನು ಓದುವವರು

ವಾರ್ಷಿಕ ಪರೀಕ್ಷೆಗಳಲ್ಲಿ ಉತ್ತಮತರವಾಗಿ ಅಂಕಗಳನ್ನು ಗಳಿಸಿದರು. (i) ಅವರ ಶಬ್ದಸಂಪತ್ತು ಹೆಚ್ಚಾಗಿತ್ತು (ii) ಅವರ ಅಭಿವ್ಯಕ್ತಿ ಉತ್ತಮತರವಾಗಿತ್ತು (iii) ಅವರ ಸಾಮಾನ್ಯ ಜ್ಞಾನವು ಹೆಚ್ಚು ವ್ಯಾಪಕವೂ ವೈವಿಧ್ಯಪೂರಿತವೂ ಆಗಿತ್ತು.

ಓದಲಾಗಲಿ ಬರೆಯಲಾಗಲಿ ಇನ್ನೂ ಬಂದಿರದ ಪುಟಾಣಿ ಹಸುಗೂಸುಗಳು ಕೂಡ ಪುಸ್ತಕಗಳನ್ನು ಆಸೆಪಡುತ್ತಾರೆ ಎಂಬುದನ್ನು ಇಲ್ಲಿ ಸೂಚಿಸುವುದು ಅಗತ್ಯ. ಕೇವಲ ಚಿತ್ರಗಳಿಂದ—ಪ್ರಾಣಿಗಳು (ಅದರಲ್ಲೂ ಮನುಷ್ಯರ ಹಾಗೆ ಉಡುಪು ಧರಿಸಿದವು) ರೈಲುಗಳು, ವಿಮಾನಗಳು, ಕಾರುಗಳು. ಹಡಗುಗಳು ಮುಂತಾದ ಚಿತ್ರಗಳಿಂದ ತುಂಬಿದ ಬಣ್ಣಬಣ್ಣದ ಪುಸ್ತಕಗಳನ್ನು ಅವರ ಕೈಯಲ್ಲಿ ಇರಿಸಿ ನೋಡಿ. ಅವುಗಳನ್ನು ಬಿಟ್ಟೇಳುವುದಕ್ಕೇ ಅವರಿಗೆ ಮನಸ್ಸಾಗುವುದಿಲ್ಲ. (ರಷ್ಯನರು ಮಕ್ಕಳಿಗಾಗಿ ಇಂಗ್ಲಿಷಿನಲ್ಲಿ ಪ್ರಕಟಿಸಿರುವ ಪುಸ್ತಕಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸದೆ ಇರಲಾರೆ). ಅಂಥ 'ಅನಕ್ಷರ' ಹಸುಳೆಗಳೂ ಕಥೆ ಕೇಳಲು ಹಾಡು ಕೇಳಲು ತುಂಬ ಇಷ್ಟಪಡುತ್ತಾರೆ ಎಂಬುದು ಎಲ್ಲರಿಗೂ ಅನುಭವಕ್ಕೆ ಬಂದಿರಬೇಕು. ಇಂಥ ಪ್ರಯತ್ನಗಳೆಲ್ಲ ಮಕ್ಕಳ ಮಾನಸಿಕ ಅಗತ್ಯಗಳನ್ನು ಪೂರೈಸುವ ಜೊತೆಗೆ ಕುಟುಂಬವನ್ನು ಪ್ರೇಮದ ಬಂಧನದಲ್ಲಿ ಒಂದಾಗಿ ಬೆಸೆಯುತ್ತವೆ.

ಭಾರತದಲ್ಲಿ ಮಕ್ಕಳ ಪುಸ್ತಕಗಳು ಬಹಳ ಹೆಚ್ಚು ಪ್ರಮಾಣದಲ್ಲಿ ಏನೂ ಪ್ರಕಟವಾಗುತ್ತಿಲ್ಲ. ಹೊರಬರುತ್ತಿರುವ ಅಲ್ಪ ಸ್ವಲ್ಪವೂ ೯.೫ಕೋಟಿ ಶಾಲಾ ಮಕ್ಕಳ ಅಗತ್ಯಗಳನ್ನು ಪೂರೈಸುವಷ್ಟಂತೂ ಅಲ್ಲವೇ ಅಲ್ಲ. ರಾಷ್ಟ್ರೀಯ ಗ್ರಂಥಾಲಯವು ಒದಗಿಸಿದ ಅಂಕಿಅಂಶಗಳು ಭಾರತೀಯ ಭಾಷೆಗಳಲ್ಲಿ ಪ್ರಕಟವಾಗುವ ಮಕ್ಕಳ ಸಾಹಿತ್ಯದ ನಿರಾಶಾದಾಯಕ ಚಿತ್ರವನ್ನು ಕೊಡುತ್ತವೆ. ಈ ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ 1976–77 ರಲ್ಲಿ ಪ್ರಕಟವಾದ ಪುಸ್ತಕಗಳ ಪ್ರಮಾಣವನ್ನು ನೋಡಬಹುದು :

ಭಾಷೆ	ಒಟ್ಟು ಪುಸ್ತಕಗಳ ಸಂಖ್ಯೆ	ಮಕ್ಕಳ ಪುಸ್ತಕಗಳು
ಅಸ್ಸಾಮೀ	302	4
ಬಂಗಾಳೀ	1339	—
ಇಂಗ್ಲೀಷು	10121	38
ಗುಜರಾತೀ	763	—
ಹಿಂದೀ	3215	207
ಕನ್ನಡ	1261	—
ಮಲಯಾಳಂ	601	37
ಮರಾಠೀ	1315	30
ಒರಿಯಾ	280	—
ಪಂಜಾಬೀ	320	25
ಸಂಸ್ಕೃತ	210	—

ತಮಿಳು	....	1294	....	—
ತೆಲುಗು	....	446	....	—
ಉರ್ದು	....	308	....	—
ಇತರ ಭಾಷೆಗಳು	....	147	....	—
ಒಟ್ಟು	....	21922		341

ಪ್ರಾದೇಶಿಕ ಪ್ರಯತ್ನಗಳು

ಮೇಲೆ ಕೊಟ್ಟಿರುವ ಮಾಹಿತಿಯಿಂದ ಇತರ ಭಾಷೆಗಳಲ್ಲಿನ ಮಕ್ಕಳ ಪುಸ್ತಕ ಪ್ರಕಟಣೆಯ ಬಗೆಗೆ ಸುಲಭವಾಗಿ ತಿಳಿಯುವುದಿಲ್ಲ ಎಂಬುದು ಗೊತ್ತಾಗುತ್ತದೆ. ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟವಾಗುತ್ತಿರುವ ಮಕ್ಕಳ ಪುಸ್ತಕಗಳ ಗ್ರಂಥಸೂಚಿಯೂ ಯಾವುದೂ ಇಲ್ಲವಾಗಿದೆ. ಆದರೆ ಎಲ್ಲ ಭಾಷೆಗಳಲ್ಲೂ ಅವು ಪ್ರಕಟವಾಗುತ್ತಿವೆ ಎಂದು ಧೈರ್ಯವಾಗಿಹೇಳಬಹುದು. ಹಿತೋಪದೇಶ, ಪಂಚತಂತ್ರ ಇತ್ಯಾದಿ ಪ್ರಾಚೀನ ಕೃತಿಗಳು, ಅರೇಬಿಯನ್ ನೈಟ್ಸ್, ರಾಬಿನ್‌ಸನ್ ಕ್ರೂಸೋ, ಟ್ರೆಷರ್ ಐಲೆಂಡ್, ಆ್ಯಲಿಸ್ ಇನ್ ವಂಡರ್ ಲ್ಯಾಂಡ್ ಇತ್ಯಾದಿ ಪ್ರಸಿದ್ಧ ಕೃತಿಗಳ ಅನುವಾದಗಳು ಹೆಚ್ಚು ಕಡಮೆ ಎಲ್ಲ ಭಾಷೆಗಳಲ್ಲೂ ಸಿಕ್ಕಿಯೇ ಸಿಕ್ಕುತ್ತವೆ. ಹಾಗೆಯೇ ಎಲ್ಲ ಪ್ರಾಂತಗಳಲ್ಲೂ ಮಕ್ಕಳ ಸಾಹಿತ್ಯವನ್ನು ಪ್ರಕಟಿಸುವ ಖಾಸಗೀ ಪ್ರಕಾಶಕರಿದ್ದಾರೆ.

ಕನ್ನಡದ ಮಟ್ಟಿಗೆ ಹೇಳುವುದಾದರೆ, ಬೆಂಗಳೂರಿನ ಇಂಡಿಯಾ ಬುಕ್ ಹೌಸ್ ಮತ್ತು ರಾಷ್ಟ್ರೋತ್ಥಾನ ಸಾಹಿತ್ಯ, ಮೈಸೂರಿನ ಕಾವ್ಯಾಲಯ, ಧಾರವಾಡದ ಸಮಾಜ ಪುಸ್ತಕಾಲಯ ಇವು ಈಗ ಪ್ರಶಂಸನೀಯವಾದ ಕೆಲಸ ಮಾಡುತ್ತಿವೆ. ಈ ಸಂದರ್ಭದಲ್ಲಿ ಮಂಗಳೂರಿನ ಬಾಲಸಾಹಿತ್ಯ ಮಂಡಲವು ಪ್ರಕಟಿಸುತ್ತಿದ್ದ ಸುಂದರವಾದ ಪುಟ್ಟ ಪುಸ್ತಕಗಳು, ಸಾಲಿ ರಾಮಚಂದ್ರರಾಯರು ಗುಜರಾತಿಯಿಂದ ಅನುವಾದಿಸಿದ 'ಸಿಪಾಯಪ್ಪ'ದಂತಹ ಕಥೆಗಳು, ಹೊಳೆನರಸೀಪುರದಿಂದ ಪ್ರಕಟವಾಗುತ್ತಿದ್ದ ನಗೆಪತ್ರಿಕೆ 'ವಿಕಟ ಮಾವ' —ಇವುಗಳ ಮಧುರ ನೆನಪು ನನ್ನ ಮನಸ್ಸನ್ನು ಮುತ್ತುತ್ತದೆ. ಈಗ ಮಕ್ಕಳ ಸಾಹಿತ್ಯವನ್ನು ಬರೆದಿರುವ ಲೇಖಕರಲ್ಲಿ ಪ್ರಸಿದ್ಧರಾದವರು ಕುವೆಂಪು, ರಾಜರತ್ನಂ, ಪಂಜೆ ಮಂಗೇಶರಾವ್, ಮೇವುಂಡಿ ಮಲ್ಲಾರಿ, ಅನುಪಮಾ ನಿರಂಜನ ಇತ್ಯಾದಿ.

ದೆಹಲಿಯ ಪ್ರಕಾಶಕರಾದ ಆತ್ಮಾರಾಂ ಅಂಡ್ ಸನ್ಸ್ ಹಾಗೂ ರಾಜ್‌ಪಾಲ್ ಎಂಡ್ ಸನ್ಸ್ ಇವರು ಹಿಂದಿಯಲ್ಲಿ ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿರುವ ಪ್ರಕಾಶಕರಲ್ಲಿ ಪ್ರಸಿದ್ಧರು. ಕುಳಿವೇಲಿ ಅವರು ಮಲಯಾಳದಲ್ಲಿ ತಾವೇ ಸು. 200ಪುಸ್ತಕಗಳನ್ನು ಬರೆದು ಬಾಲನ್ ಪಬ್ಲಿಕೇಷನ್ಸ್ ಎಂಬ ತಮ್ಮದೇ ಸಂಸ್ಥೆಯಿಂದ ಪ್ರಕಟಿಸಿ ಮಲಯಾಳದ ಮಕ್ಕಳಿಗೆ ನೀಡಿದ್ದಾರೆ. ಕೇರಳ ರೈಟರ್ಸ್ ಕೋ ಆಪರೇಟಿವ್ ಸೊಸೈಟಿಯು ನಡೆಸುತ್ತಿರುವ ದಿ ನ್ಯಾಷನಲ್ ಬುಕ್ ಸ್ಟಾಲ್ ಒಂದು ವಿಶಿಷ್ಟ ಸಾಹಸ. 1961ರಿಂದಲೂ ಮಕ್ಕಳಿಗಾಗಿ ಉಡುಗೊರೆ ಪೆಟ್ಟಿಗೆಗಳನ್ನು ಅದು ಸಿದ್ಧಪಡಿಸಿ ಮಾರುತ್ತಿದೆ. ಪ್ರತಿಯೊಂದು ಪೆಟ್ಟಿಗೆಯಲ್ಲೂ 10–12 ಮಕ್ಕಳ ಪುಸ್ತಕಗಳಿರುತ್ತವೆ. ಕೇರಳ ಸಾಹಿತ್ಯ ಅಕಾಡೆಮಿಯೂ

ಮಕ್ಕಳಿಗಾಗಿ ಪುಸ್ತಕಗಳನ್ನು ಪ್ರಕಟಿಸುತ್ತದೆ. ಮಕ್ಕಳ ಸಾಹಿತ್ಯ ರಚನೆಗೆ ಬಹುಮಾನ ನೀಡುತ್ತದೆ. ಭೋಜ್‌ರಾಜ್ ಮೋಟ್ವಾನಿ ಪ್ರಾರಂಭಿಸಿದ ಬಾಲಕನ್ ಜೀಬಾರಿ ಯು ಸಿಂಧಿ ಭಾಷೆಯಲ್ಲಿ ಮಕ್ಕಳಿಗಾಗಿ ಪುಸ್ತಕಗಳನ್ನೂ ಗುಲಿಸ್ತಾನ್‌ದಂತಹ ಪತ್ರಿಕೆಗಳನ್ನೂ ಪ್ರಕಟಿಸುತ್ತದೆ.

ಮಕ್ಕಳಿಗಾಗಿ ಹಲವು ನಿಯತಕಾಲಿಕಗಳು ದೇಶದ ವಿವಿಧ ಭಾಷೆಗಳಲ್ಲಿ ಪ್ರಕಟವಾಗುತ್ತಿವೆ. ಜೊತೆಗೆ ಪ್ರತಿ ಭಾಷೆಯ ಪ್ರಮುಖ ದಿನ, ವಾರ, ಮಾಸಪತ್ರಿಕೆಗಳು ಒಂದೋ ಎರಡೋ ಪುಟಗಳನ್ನು ಮಕ್ಕಳಿಗಾಗಿ ಮೀಸಲಿಡುವುದು ಇದ್ದೇ ಇದೆ. ಉತ್ಕಲ ವಿಶ್ವ ವಿದ್ಯಾನಿಲಯವು ಮಕ್ಕಳ ಪುಸ್ತಕಗಳ ಪ್ರಕಟಣೆಗೆಂದೇ ನಿರ್ದಿಷ್ಟ ಪ್ರಮಾಣದ ನಿಧಿಯನ್ನು ಪ್ರತ್ಯೇಕವಾಗಿ ಮೀಸಲಿಸಿರುವುದು ಇಲ್ಲಿ ಉಲ್ಲೇಖನೀಯವಾಗಿದೆ. ಒರಿಸ್ಸಾದಲ್ಲಿ ಕಂಡು ಬಂದಿರುವ ಬಾಲಸಾಹಿತ್ಯ ಕ್ಷಾಮವನ್ನು ತೊಡೆದುಹಾಕಲು ವಿಶ್ವವಿದ್ಯಾನಿಲಯದ ಅಧಿಕಾರಿಗಳು ತೋರುತ್ತಿರುವ ಕಾತರಕ್ಕೆ ಇದು ಕನ್ನಡಿಯಾಗಿದೆ.

ಆದರೇನು, ಈ ಎಲ್ಲ ಪ್ರಯತ್ನಗಳು ಕೂಡಿದರೂ ಮಕ್ಕಳ ಅಗತ್ಯಗಳೊಡನೆ ಹೋಲಿಸಿದರೆ ಸಾಗರದ ಒಂದು ಹನಿಯಿದ್ದ ಹಾಗೆ. ಸಾಲದ್ದಕ್ಕೆ ಪ್ರಕಟವಾಗುತ್ತಿರುವ ಬಹುಪಾಲು ಸಾಹಿತ್ಯ ನಗರ ಪ್ರದೇಶಗಳ ಮಕ್ಕಳನ್ನು ಉದ್ದೇಶಿಸಿದವಾಗಿವೆ. ಅಗಾಧ ಸಂಖ್ಯೆಯ ಗ್ರಾಮೀಣ ಮಕ್ಕಳನ್ನು ನಾವು ಗಣನೆಗೆ ತೆಗೆದುಕೊಂಡೇ ಇಲ್ಲ.

ರಾಷ್ಟ್ರೀಯ ಪ್ರಯತ್ನಗಳು

ಈ ಕ್ಷೇತ್ರದಲ್ಲಿ ಹೆಸರಿಸಬೇಕಾದ ಎರಡು ಪ್ರಯತ್ನಗಳೆಂದರೆ ನ್ಯಾಷನಲ್ ಬುಕ್ ಟ್ರಸ್ಟ್ ಹಾಗೂ ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಸಂಸ್ಥೆಗಳು ಮಾಡುತ್ತಿರುವ ಕೆಲಸ. 1957 ರಲ್ಲಿ ಸ್ಥಾಪಿತವಾದ ನ್ಯಾ.ಬು.ಟ್ರ. ತನ್ನ ನೆಹರೂ ಬಾಲ ಪುಸ್ತಕಾಲಯ ಮಾಲೆಯಲ್ಲಿ ಇದು ವರೆಗೆ ಇಂಗ್ಲಿಷಿನಲ್ಲಿ 40 ಪುಸ್ತಕಗಳನ್ನು ಪ್ರಕಟಿಸಿದೆ. ಇವುಗಳನ್ನು ಹನ್ನೆರಡು ಭಾರತೀಯ ಭಾಷೆಗಳಿಗೆ ಅನುವಾದ ಮಾಡಿಸಲಾಗುತ್ತದೆ. 1957ರಲ್ಲಿಯೇ ಸ್ಥಾಪಿತವಾದ ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಸಂಸ್ಥೆಯ ಸಾಧನೆ ತಕ್ಕಮಟ್ಟಿಗೆ ತೃಪ್ತಿಕರವಾಗಿದೆ. ಇದುವರೆಗೆ 263 ಪುಸ್ತಕಗಳನ್ನು ಈ ಸಂಸ್ಥೆ ಪ್ರಕಟಿಸಿದೆ. ಭಾಷಾವಾರು ವಿವರ ಹೀಗಿದೆ :

ಇಂಗ್ಲಿಷ್	118	ಮರಾಠೀ	3
ಹಿಂದಿ	95	ತಮಿಳು	8
ಬಂಗಾಳಿ	19	ಕನ್ನಡ	7
ಗುಜರಾತಿ	13		—
		ಒಟ್ಟು	263

ದಿ ಆಲ್ ಇಂಡಿಯಾ ಜುವೆನೈಲ್ ಲಿಟರೆರಿ ಕಾನ್ಫರೆನ್ಸ್ (ಎಐಜೆಎಲ್‌ಸಿ) ಮಕ್ಕಳಿಗಾಗಿ ಬರೆಯುವ ಕವಿಗಳು, ಪ್ರಬಂಧಕಾರರು, ನಾಟಕಕಾರರು, ಕಥೆಗಾರರು, ಕಾದಂಬರಿಕಾರರು ಹಾಗೂ ಮಕ್ಕಳ ಸಾಂಸ್ಕೃತಿಕ ಹಾಗೂ ಮನರಂಜನಾತ್ಮಕ ಚಟುವಟಿಕೆಗಳಲ್ಲಿ ಆಸ್ತಕಿ

ಯುಳ್ಳ ಇತರರು ಒಟ್ಟುಗೂಡಿರುವ ಒಂದು ಸಂಸ್ಥೆ. 1961ರಲ್ಲಿ ಇದು ಕಲ್ಕತ್ತಾದಲ್ಲಿ ಸ್ಥಾಪಿತವಾಯಿತು. 1962ರಲ್ಲಿ ಇದರ ಉದ್ಘಾಟನಾ ಸಮ್ಮೇಳನವು ಮಾರ್ಬಲ್ ಪ್ಯಾರಿಸ್‌ನಲ್ಲಿ ನಡೆಯಿತು. ಪ್ರತಿವರ್ಷ ಸಮ್ಮೇಳನವು ನಡೆದು ಬಾಲಸಾಹಿತ್ಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುತ್ತದೆ.

ಅರವತ್ತರ ದಶಕದ ಆದಿಯಲ್ಲಿ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ ಹುಟ್ಟಿದ್ದು ದಕ್ಷಿಣ ಭಾರತದ ಮಕ್ಕಳಿಗೆ ಒಂದು ಅದೃಷ್ಟ ತೆರೆದ ಹಾಗೆ ಎನಿಸಿತಾದರೂ, ಈಚೆಗೆ ಈ ಸಂಸ್ಥೆಯ ನಡೆ ಮಂದವಾಗಿರುವಂತೆ ತೋರುತ್ತದೆ.

ಅಕೆಡಮಿ ಫಾರ್ ಡಾಕ್ಯುಮೆಂಟೇಷನ್ ಎಂಡ್ ರಿಸರ್ಚ್ ಆನ್ ಚಿಲ್ಡ್ರನ್ಸ್ ಲಿಟರೇಚರ್ ಎಂಬುದು ಕಲ್ಕತ್ತದಲ್ಲಿ ಸ್ಥಾಪಿತವಾಗಿರುವ ಇನ್ನೊಂದು ಸಂಸ್ಥೆ. ನಿರಂತರವಾಗಿ ಬೆಳೆಯುತ್ತಿರುವ ಮಕ್ಕಳ ಪುಸ್ತಕ ಅಗತ್ಯಗಳನ್ನು ಪೂರೈಸುವ ವಿಧಾನಗಳನ್ನು ಕಂಡುಹಿಡಿಯಲು ಕಾಳಜಿ ವಹಿಸುತ್ತಿರುವ ಸಂಸ್ಥೆಯಿದು.

ಪ್ರಾದೇಶಿಕ ಭಾಷೆಗಳಲ್ಲಿನ ಮಕ್ಕಳ ಪುಸ್ತಕಗಳು ಉತ್ಪಾದನೆಯ ದೃಷ್ಟಿಯಿಂದ ಇನ್ನೂ ಬಹಳ ಉತ್ತಮಗೊಳ್ಳಬೇಕಾಗಿದೆ. ಅಭಿವೃದ್ಧ ರಾಷ್ಟ್ರಗಳಲ್ಲಿ ಪ್ರಕಟವಾಗುವ ಮಕ್ಕಳ ಪುಸ್ತಕಗಳಿಗೂ ನಮ್ಮವಕ್ಕೂ ಹೋಲಿಕೆಯೇ ಸಾಧ್ಯವಿಲ್ಲ. ಸ್ವಲ್ಪಮಟ್ಟಿಗೆ ಹೋಲಿಸಬಹುದಾದ, ಕೆಲವು ವೇಳೆ ಅವುಗಳನ್ನು ಮೀರಿಸಬಹುದಾದ ಪ್ರಕಟಣೆಗಳೆಂದರೆ ಚಿಲ್ಡ್ರನ್ಸ್ ಬುಕ್ ಟ್ರಸ್ಟ್‌ನವು.

ಇದಿಷ್ಟು ಸಾಮಾನ್ಯ ಮಕ್ಕಳ ಗ್ರಂಥಾಗತ್ಯಗಳನ್ನು ಕುರಿತದ್ದಾಯಿತು. ಆದರೆ ಅಂಗವಿಕಲತೆಗೊಳಗಾಗಿರುವ ಲಕ್ಷಾಂತರ ಮಕ್ಕಳ ಗತಿ ಏನು ? ಅವರಿಗೆ ಪುಸ್ತಕಗಳನ್ನು ಒದಗಿಸಿಕೊಡಬೇಡವೆ ? ಈ ಪ್ರಶ್ನೆಗೆ ತೃಪ್ತಿಕರವಾದ ಉತ್ತರ ಸಿಕ್ಕಿದಂತೆ ಕಾಣುತ್ತಿಲ್ಲ.

ನಮ್ಮ ದೇಶದಲ್ಲಿ ಮೂರು ಮಿಲಿಯಕ್ಕಿಂತಲೂ ಹೆಚ್ಚು ಮಂದಿ ಅಂಗವಿಕಲ ಮಕ್ಕಳು ಇದ್ದಾರೆಂದು ಅಂದಾಜುಮಾಡಲಾಗಿದೆ. ಎ ಅನ್ನಾಂಗದ ಕೊರತೆಯಿಂದಾಗಿಯೇ ಪ್ರತಿವರ್ಷವೂ ಸುಮಾರು 12,000 ಮಕ್ಕಳು ಕುರುಡಾಗುತ್ತಿದ್ದಾರೆ ಎಂದು ಹೇಳಲಾಗಿದೆ. ಶಾಲೆಗೆ ಹೋಗಬೇಕಾಗಿದ್ದ ಈ ನತದೃಷ್ಟ ಮಕ್ಕಳ ಯೋಗಕ್ಷೇಮವನ್ನು ಪುಸ್ತಕಗಳು ನೋಡಿಕೊಳ್ಳಬೇಕಾಗಿದೆ. ಬ್ರೇಲ್ ಲಿಪಿಯ ಪುಸ್ತಕಗಳು, ಮಾತಾಡುವ ಪುಸ್ತಕಗಳು ಚಿತ್ರಗಳು ಹಾಗೂ ಇತರ ದೃಕ್–ಶ್ರವಣ ಸಾಧನಗಳು ಈ ಮಕ್ಕಳಿಗೆ ಸಹಾಯ ಮಾಡಬಲ್ಲವಾದರೂ ಅವು ಏನೇನೂ ಸಾಲದು. ಡೆಹರಾಡೂನ್‌ನಲ್ಲಿ ಕುರುಡರಿಗಾಗಿರುವ ನ್ಯಾಷನಲ್ ಲೈಬ್ರರಿಯ ಸೀಮಿತ ಸೇವೆ ಈಗ ಈ ನತದೃಷ್ಟ ಮಕ್ಕಳಿಗೆ ಆಶಾಕಿರಣ.

ಗ್ರಂಥಾಲಯ ಸೇವೆಗಳ ಅವಕಾಶ

ಯುನೆಸ್ಕೋ 1972ರಲ್ಲಿ ಮಂಡಿಸಿದ 'ಚಾರ್ಟರ್ ಆಫ್ ದಿ ಬುಕ್' ಹೀಗೆ ಹೇಳುತ್ತದೆ : (i) ಪ್ರತಿಯೊಬ್ಬನಿಗೂ ಓದುವ ಹಕ್ಕಿದೆ (ಅಧಿನಿಯಮ 1) ; (ii) ಶಿಕ್ಷಣಕ್ಕೆ ಪುಸ್ತಕಗಳು ಮೂಲ ಅಗತ್ಯಗಳು (ಅಧಿನಿಯಮ 2) ; (iii) ಪುಸ್ತಕಗಳು ಅಂತರರಾಷ್ಟ್ರೀಯ ಅರಿವು ಮತ್ತು ಶಾಂತಿಯುತ ಸಹಕಾರಗಳನ್ನು ಘೋಷಿಸುತ್ತವೆ (ಅಧಿನಿ

ಯಮ 10). ಪೂರ್ಣ ಪ್ರಮಾಣ ಗ್ರಂಥಾಲಯ ಸೇವೆಯನ್ನು ರೂಪಿಸಿದಾಗ ಮಾತ್ರವೆ ಈ ನಿರ್ಣಯಗಳನ್ನು ಜಾರಿಗೆ ತರುವುದು ಸಾಧ್ಯ.

ಮಕ್ಕಳಿಗಾಗಿ ನಮ್ಮ ದೇಶದಲ್ಲಿ ಪ್ರತ್ಯೇಕ ಗ್ರಂಥಾಲಯ ವ್ಯವಸ್ಥೆ ಇಲ್ಲವೇ ಇಲ್ಲವೆಂಬಷ್ಟು ವಿರಳ. ಹೇಳಿಕೊಳ್ಳಬಹುದಾದ ಇಂಥ ಗ್ರಂಥಾಲಯಗಳೆಂದರೆ, ದೆಹಲಿ ಪಬ್ಲಿಕ್ ಲೈಬ್ರರಿ ಕಲ್ಕತ್ತೆಯ ರಾಮಕೃಷ್ಣ ಮಿಷನ್ ಚಿಲ್ಡ್ರನ್ಸ್ ಲೈಬ್ರರಿ, ನ್ಯಾಷನಲ್ ಲೈಬ್ರರಿಯ ಮಕ್ಕಳ ವಿಭಾಗ. ಕೆಲವು ಪ್ರಗತಿಗಾಮಿ ವಿಶ್ವವಿದ್ಯಾನಿಲಯಗಳು ಸ್ಥಾಪಿಸಿರುವ ಕೆಲವು ಗ್ರಂಥಾಲಯಗಳನ್ನೂ, ಅಲ್ಲಲ್ಲೇ ರೋಟರಿ ಕ್ಲಬ್ಬಿನವರು ವ್ಯವಸ್ಥೆಗೊಳಿಸಿರುವ ಗ್ರಂಥಾಲಯಗಳನ್ನೂ ಇಲ್ಲೇ ಹೇಳಿಬಿಡಬಹುದು. 22 ರಾಜ್ಯಗಳು ಮತ್ತು 9 ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೇವಲ 4 ರಾಜ್ಯಗಳು ಗ್ರಂಥಾಲಯ ಕಾಯದೆಯನ್ನು ಜಾರಿಗೆ ತಂದಿವೆ, ಈ ನಾಲ್ಕರಲ್ಲಿಯೂ ಗ್ರಂಥಾಲಯ ಚಳುವಳಿ ಪ್ರೋತ್ಸಾಹಕರವಾಗಿಲ್ಲ.

ಶಾಲಾ ಗ್ರಂಥಾಲಯಗಳು

ಖಾಸಗಿಯಾಗಿ ಸ್ಥಾಪಿತವಾಗಿರುವ ಕೆಲವು ಪ್ರೌಢಶಾಲೆಗಳನ್ನು ಹೊರತು ಪಡಿಸಿದರೆ ಬಹುತೇಕ ಶಾಲೆಗಳಲ್ಲಿ ಹೆಸರಿಸಬೇಕಾದಂತಹ ಗ್ರಂಥಾಲಯ ವ್ಯವಸ್ಥೆ ಇಲ್ಲವೇ ಇಲ್ಲ. ಇನ್ನು ಪಠ್ಯೇತರ ಪುಸ್ತಕಗಳಾಗಲಿ ಅಂಥ ಗ್ರಂಥಾಲಯಗಳಾಗಲಿ ಪ್ರಾಥಮಿಕ ಶಾಲೆಗಳಲ್ಲಿ ಇಲ್ಲವೇ ಇಲ್ಲ. ಒಟ್ಟಿನ ಮೇಲೆ ಚಿತ್ರ ತುಂಬ ಶೋಚನೀಯ. ಮಗುವಿನ ಕಲ್ಪನೆಯನ್ನು ಕೆದರುವ, ಅವನ ಹೃದಯಕ್ಕೆ ತಟ್ಟಿ, ಇನ್ನೂ ಹೆಚ್ಚು ತಿಳಿದುಕೊಳ್ಳಬೇಕು ಎಂಬ ಹಸಿವೆಯನ್ನು ಅವನಲ್ಲಿ ಚುರುಕುಗೊಳಿಸುವ ಪುಸ್ತಕಗಳು ಗ್ರಂಥಾಲಯಗಳು ಅಗತ್ಯವಾದ ಪ್ರಮಾಣದಲ್ಲಿ ಮತ್ತು ವೈವಿಧ್ಯದಲ್ಲಿ ಕಂಡುಬರುತ್ತಿಲ್ಲ.

ಹೀಗೆ ಸಾಹಸ ಪ್ರವೃತ್ತಿಯನ್ನು ಪ್ರಚೋದಿಸಿ ಉದಾತ್ತ ಚಿಂತನೆಗಳನ್ನು ಪ್ರೇರಿಸುವ ಪುಸ್ತಕಗಳು ಇಲ್ಲವೇ ಇಲ್ಲವೆನಿಸುವಂಥ ಪರಿಸರದಲ್ಲಿ ನಮ್ಮ ಮಕ್ಕಳು ಬೆಳೆಯುತ್ತಿದ್ದಾರೆ. ಪುಸ್ತಕವಿಲ್ಲದ ಬದುಕು ಬಂಜೆ ಬದುಕು.

ಅಭಿವೃದ್ಧ ರಾಷ್ಟ್ರಗಳ ಪರಿಸ್ಥಿತಿ

ಮೇಲೆ ಕೊಟ್ಟಿರುವ ಚಿತ್ರಕ್ಕೆ ತದ್ವಿರುದ್ಧವಾಗಿರುವ ಚಿತ್ರ ನಮಗೆ ಅಭಿವೃದ್ಧ ರಾಷ್ಟ್ರಗಳಲ್ಲಿನ ಪರಿಸ್ಥಿತಿಯಿಂದ ದೊರಕುತ್ತದೆ. ಯುನೈಟೆಡ್ ಕಿಂಗ್‌ಡಮ್, ಅಮೆರಿಕಾ ಮತ್ತು ಸೋವಿಯತ್ ರಷ್ಯಗಳಲ್ಲಿ ಮಕ್ಕಳ ಸಾಹಿತ್ಯ ಅಪಾರವಾಗಿದೆ. ಪ್ರತಿಯೊಂದು ಶಾಲೆಯಲ್ಲಿಯೂ ಪ್ರಾಥಮಿಕ ಹಂತದಿಂದಲೇ ಸಮೃದ್ಧವಾದ ವೈವಿಧ್ಯಪೂರ್ಣವಾದ ಒಳ್ಳೆಯ ಗ್ರಂಥಾಲಯವು ಲಭ್ಯವಿದೆ. ವಿವಿಧ ಅಭಿರುಚಿಗಳಿಗೆ, ಅಗತ್ಯಗಳಿಗೆ ತಕ್ಕಂತೆ ಅವು ರೂಪಿತವಾಗಿವೆ. ಸಾರ್ವಜನಿಕ ಗ್ರಂಥಾಲಯ ಸೇವೆಯ ಜಾಲ ಎಷ್ಟು ಸಮರ್ಪಕವಾಗಿದೆಯೆಂದರೆ ನಾಲ್ಕೋ ಐದೋ ಮನೆಗಳಿರುವ, ಒಂದು ಡಜನ್ ಮಕ್ಕಳಿರಬಹುದಾದ ಸಣ್ಣ ಹಳ್ಳಿಗೂ ವಾರಕ್ಕೊಮ್ಮೆ ಒಂದು ಸಂಚಾರಿ ಗ್ರಂಥಾಲಯ ಹೋಗುತ್ತದೆ.

ಅಮೆರಿಕದಲ್ಲಿ ಗ್ರೀಲಿಯ ವೆಲ್ಸ್‌ಕೌಂಟಿ ಲೈಬ್ರರಿಯ ಸಂಚಾರಿ ಗ್ರಂಥಾಲಯದಲ್ಲಿ ಕುಳಿತು ನಾಲ್ಕೇ ಮನೆಗಳಿದ್ದ ಒಂದು ಹಳ್ಳಿಗೆ ನಾನೇ ಸ್ವತಃ ಹೋಗಿ ಸಂತೋಷಪಟ್ಟಿದ್ದೇನೆ.

ಇಂಗ್ಲೆಂಡಿನಲ್ಲಿ ಶಾಲೆಗಳಲ್ಲಿ ಸುಸಜ್ಜಿತ ಗ್ರಂಥಭಂಡಾರಗಳಿರುವುದರ ಜೊತೆಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆ ಆವರಣದಲ್ಲಿ ಪುಸ್ತಕದಂಗಡಿಗಳನ್ನು ತೆರೆದಿದ್ದಾರೆ. ಈಗ ಬ್ರಿಟಿಷ್ ಶಾಲೆಗಳಲ್ಲಿ ಅಂತಹ ಸುಮಾರು ನಾಲ್ಕು ಸಾವಿರ ಪುಸ್ತಕದಂಗಡಿಗಳಿವೆ ಯೆಂದು ಅಂದಾಜು ಮಾಡಲಾಗಿದೆ. ಇವು ಶಾಲಾ ಮಕ್ಕಳ ಅಗತ್ಯಗಳು ಮತ್ತು ಅಭಿ ರುಚಿಗಳಿಗೆ ತಕ್ಕಂತೆ ಸಜ್ಜುಗೊಳಿಸಿರುವ ಅಂಗಡಿಗಳು. ಮಕ್ಕಳಲ್ಲಿ ವಾಚನ ಅಭಿರುಚಿ ಯನ್ನು ಬೆಳಸುವುದಲ್ಲದೆ ದುಬಾರಿ ಹವ್ಯಾಸವಾಗಿ ಪುಸ್ತಕ ಕೊಳ್ಳುವ ಆಸಕ್ತಿಯನ್ನು ಅವ ರಲ್ಲಿ ಮೂಡಿಸಿ ತಮ್ಮ ತಮ್ಮ ಸ್ವಂತದ ಗ್ರಂಥಸಂಗ್ರಹಗಳನ್ನು ಅವರು ಕಟ್ಟಿಕೊಳ್ಳುವು ದಕ್ಕೆ ಈ ಅಂಗಡಿಗಳು ಪ್ರೋತ್ಸಾಹ ನೀಡಿವೆ. ಹೀಗೆ ಮುದ್ರಿತ ಅಕ್ಷರಕ್ಕೂ ಮಗುವಿನ ಮನಸ್ಸಿಗೂ ನಡುವೆ ಇದ್ದ ತಡೆಗೋಡೆಯನ್ನು ಮುರಿದು ಹಾಕಲಾಗಿದೆ. ಫ್ರಾನ್ಸಿನಲ್ಲಿ 'ಪುಸ್ತಕಗಳ ಮೂಲಕ ಆನಂದ' (Joy Through Books) ಎಂಬ ಹೆಸರಿನ ಸಂಸ್ಥೆ ಯಿದೆ. ಮಕ್ಕಳಿಗೂ ಪುಸ್ತಕಗಳಿಗೂ ನಡುವೆ ಸಜೀವ ಸಂಬಂಧವನ್ನು ಉಂಟು ಮಾಡುವುದೇ ಈ ಸಂಸ್ಥೆಯ ಉದ್ದೇಶ.

ಪಾಶ್ಚಾತ್ಯದೇಶಗಳಷ್ಟು ಪ್ರಮಾಣದಲ್ಲಿ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ವಿಕಾಸಗೊಂಡಿಲ್ಲದ ಜಪಾನಿನಲ್ಲಿ ಕೂಡ ಮಕ್ಕಳಿಗೆ ಪುಸ್ತಕಗಳ ಅಗತ್ಯ ಏನಿದೆಯೆಂಬು ದನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಈ ಪರಿಗಣನೆಯ ಫಲವಾಗಿ "ಬಂಕೋ"ಗಳು (Bunko) ಎಂಬ ಸಂಸ್ಥೆಗಳ ಉದಯವಾಗಿದೆ. ಸರಕಾರವಲ್ಲದ ಇತರ ವರ್ಗಗಳು, ಗುಂಪುಗಳು, ವ್ಯಕ್ತಿಗಳು ಸ್ಥಾಪಿಸಿರುವ ಸಣ್ಣ ಪುಟ್ಟ ಗ್ರಂಥಾಲಯಗಳು ಈ 'ಬಂಕೋ' ಗಳು. ಖಾಸಗಿ ಮನೆಗಳಲ್ಲಿ ಇವು ಹುಟ್ಟಿದುವು. ಮಕ್ಕಳ ಪುಸ್ತಕಗಳಲ್ಲಿ, ಮತ್ತು ಮಕ್ಕ ಳಿಗೆ ಕತೆ ಹೇಳುವುದರಲ್ಲಿ ಆಸಕ್ತಿಯಿರುವ ಗೃಹಿಣಿಯರು ತಮ್ಮ ನೆರೆಹೊರೆಯ ಮಕ್ಕ ಳನ್ನು ಆಗಾಗ ತಮ್ಮ ಮನೆಗೆ ಕರೆದು ತಾವು ಓದಿದ ಪುಸ್ತಕಗಳ ವಿಚಾರವಾಗಿ ಅವರೊ ಡನೆ ಮಾತನಾಡುತ್ತಿದ್ದರು. ತಮ್ಮಲ್ಲಿರುವ ಪುಸ್ತಕಗಳನ್ನು ಆ ಮಕ್ಕಳಿಗೆ ಓದಿ ಹಿಂದಕ್ಕೆ ತರಲು ಎರವಲಾಗಿ ಕೂಡ ಕೊಡುತ್ತಿದ್ದರು. ಬಹುಬೇಗ ಈ ಗ್ರಂಥಾಲಯಗಳನ್ನು 'ಕೇಟೀ ಬಂಕೋಸ್' (Kati Bunkos) ಎಂದು ಕರೆಯಲಾಯಿತು.

ಇವೆಲ್ಲ ಬಹು ವಿರಳವಾದ ಪ್ರಯತ್ನಗಳು, ಆದರೆ ಸಾಂಕ್ರಾಮಿಕದಂತೆ ಹರಡಿ ತರುಣಿಯರಾದ ಗೃಹಿಣಿಯರು ಒಂದಾದರು, ಗುಂಪುಗಳನ್ನು ಮಾಡಿಕೊಂಡರು. ಅಂಥ ಸಹಕಾರದ ಮೂಲಕ 'ಸಮುದಾಯ ಮಕ್ಕಳ ಗ್ರಂಥಾಲಯ'—ಚೀಕೀ ಬಂಕೋಸ್ (Chiiki Bunkos) ಗಳನ್ನು ರೂಪಿಸಿದರು. ಇದರಿಂದ ಸ್ಫೂರ್ತಿ ಪಡೆದ ಕಿಂಡರ್ ಗಾರ್ಟನ್ ಮತ್ತು ನರ್ಸರಿ ಶಾಲೆಗಳು 'ಎನ್ ಬಂಕೋಸ್' ಎಂಬ ಹೆಸರಿನ ಶಿಶುವಿಹಾರ ಗ್ರಂಥಾಲಯಗಳನ್ನು ಸ್ಥಾಪಿಸಿದರು. ಜಪಾನಿನಲ್ಲಿ ಈಗ ಅಂಥ ಸುಮಾರು 400

ಬಂಕೋ'ಗಳಿವೆ. ಇದು ಮಕ್ಕಳ ವಿಭಾಗಗಳನ್ನು ಒಳಗೊಂಡಿರುವ ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆಯ ಏಳು ಪಟ್ಟು.

ವಿದೇಶಗಳಲ್ಲಿ ಬಾಲಸಾಹಿತ್ಯದ ಹೊಳೆ

ಮೇಲೆ ಹೇಳಿದ್ದರಿಂದ ಅಭಿವೃದ್ಧ ದೇಶಗಳು ಮಕ್ಕಳ ಓದಿಕೆಯ ಅಗತ್ಯಗಳನ್ನು ಒದಗಿಸಲು ಸಾಕಷ್ಟು ಅವಕಾಶ ಮಾಡಿಕೊಂಡಿವೆ ಎಂಬುದು ಸ್ಪಷ್ಟವಾಗುತ್ತದೆ. ಅಂದ ಮೇಲೆ ಅಲ್ಲಿ ಬಾಲಸಾಹಿತ್ಯವೂ ಹೇರಳವಾಗಿ ಇರಲೇಬೇಕಷ್ಟೆ. ಕೆಲವು ದೇಶಗಳು 1975ರಲ್ಲಿ ಪ್ರಕಟಿಸಿದ ಬಾಲಸಾಹಿತ್ಯ ಕೃತಿಗಳ ಸಂಖ್ಯೆ ಹೀಗಿದೆ :

ದೇಶ	ಕೃತಿಗಳ ಸಂಖ್ಯೆ	ಕರಪತ್ರಗಳು	ಒಟ್ಟು
ಅಮೆರಿಕಾ	2292	—	2292
ಭಾರತ	455	—	455
ಯು. ಕೆ.	2346	342	2688
ಸೋವಿಯತ್ ರಷ್ಯಾ .... (ಬೈಲೋ ರಷ್ಯಾ ಹಾಗೂ ಉಕ್ರೇನ್ ಹೊರತು)	1518	1413	3031
ಜಪಾನ್	1569	203	1772

ಈ ಪುಸ್ತಕಗಳ ಮುದ್ರಣ ಸೌಂದರ್ಯವೂ ಮೇಲುಮಟ್ಟದ್ದು. ದಪ್ಪ ಅಕ್ಷರಗಳಲ್ಲಿ ಅತ್ಯಂತ ಕಲಾತ್ಮವಾಗಿ ರಚಿಸಿದ ಚಿತ್ರಗಳಿಂದೊಡಗೂಡಿ ಅವು ಮುದ್ರಿತವಾಗುತ್ತವೆ. ಇವುಗಳಲ್ಲಿ ಅನೇಕ ಪುಸ್ತಕಗಳನ್ನು ಒಂದಕ್ಕಿಂತ ಹೆಚ್ಚು ಬಣ್ಣಗಳಲ್ಲಿ ಅಚ್ಚು ಮಾಡಲಾಗುತ್ತದೆ. ರಷ್ಯದ ಪುಸ್ತಕಗಳನ್ನು ತುಂಬ ಸುಂದರವಾಗಿ ಮುದ್ರಿಸಿ ಪ್ರಕಟಿಸುವುದಲ್ಲದೆ ತುಂಬ ಅಗ್ಗದ ಬೆಲೆಗೂ ಅವುಗಳನ್ನು ಒದಗಿಸಲಾಗುತ್ತದೆ. ಒಟ್ಟಿನಲ್ಲಿ ಈ ದೇಶಗಳಲ್ಲಿ ಪುಸ್ತಕಗಳು ಕ್ರಿಸ್‌ಮಸ್ ಮತ್ತು ಅಂತಹ ಹಬ್ಬದ ದಿನಗಳಲ್ಲಿ ಮಕ್ಕಳಿಗೆ ಕೊಡಲು ಸೊಗಸಾದ ಉಡುಗೊರೆಯಾಗಿರುತ್ತವೆ. ಮಕ್ಕಳ ಪುಸ್ತಕಗಳನ್ನು ಬರೆಯುವವರಿಗೆ ಮತ್ತು ಪ್ರಕಟಿಸುವವರಿಗೆ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾದ ಪ್ರಶಸ್ತಿಯೆಂದರೆ ಇಂಟರ್ ನ್ಯಾಷನಲ್ ಬೋರ್ಡ್ ಆನ್ ಬುಕ್ಸ್ ಫಾರ್ ಯಂಗ್ ಪೀಪಲ್ [IBоY] ಎಂಬ ಸಂಸ್ಥೆಯು ಸ್ಥಾಪಿಸಿರುವ ಹ್ಯಾನ್ಸ್ ಕ್ರಿಶ್ಚನ್ ಆ್ಯಂಡರ್‌ಸನ್ ಚಿನ್ನದ ಪದಕ. ಅತ್ಯಂತ ವಿಶಿಷ್ಟವಾಗಿ ಮಕ್ಕಳ ಪುಸ್ತಕ ಬರೆದಿರುವ ಲೇಖಕನಿಗೆ ಅಥವಾ ಮಕ್ಕಳ ಪುಸ್ತಕಗಳಿಗೆ ಚಿತ್ರ ಬರೆದ ಕಲಾವಿದನಿಗೆ ಈ ಪದಕವು ಸಲ್ಲುತ್ತದೆ. ಈ ಸುವರ್ಣ ಪದಕ ವಿಜೇತರನ್ನು 'ಕಿರಿಯ ನೊಬೆಲರು' (ಲಿಟ್ಲ್ ನೊಬೆಲ್ಸ್) ಎಂದು ಅಡ್ಡ ಹೆಸರಿನಿಂದ ಕರೆಯಲಾಗುತ್ತದೆ.

ಮಕ್ಕಳಿಗೆ ಅಗತ್ಯವಾಗಿರುವ ಪುಸ್ತಕಗಳು ಮತ್ತು ಭಾರತದಲ್ಲಿ ಅವು ದೊರಕುವ ಸ್ಥಿತಿಗತಿ

ಹೀಗೆ ವಿದೇಶದಲ್ಲಿ ಸಮೃದ್ಧವಾಗಿ ಬಾಲಸಾಹಿತ್ಯವು ದೊರಕುವ.ಹಿನ್ನೆಲೆಯಲ್ಲಿ

ಭಾರತದಲ್ಲಿ ಮಕ್ಕಳಿಗೆ ಅದು ದೊರಕುವಿಕೆ ಅಥವಾ ಇಲ್ಲದಿಕೆಯ ಒಂದು ವಿಹಂಗಮ ನೋಟವನ್ನು ಇಲ್ಲಿ ಕೊಡಲು ಪ್ರಯತ್ನಿಸಲಾಗಿದೆ.

1. ನಿರ್ದಿಷ್ಟವಾಗಿ ಶಾಲೆಗೆ ಹೋಗುವ ಮಕ್ಕಳನ್ನು ಉದ್ದೇಶಿಸಿ ರಚಿತವಾದ ವಿಶ್ವ ಕೋಶಗಳು, ನಿಘಂಟುಗಳು ಮೊದಲಾದ ಪರಾಮರ್ಶನ ಕೃತಿಗಳು ಅಗತ್ಯ. ಇಂಗ್ಲೀಷ್‌ನಲ್ಲಿ ಇಂಥವು ಹಲವಿವೆ. 'ಆಕ್ಸ್‌ಫರ್ಡ್ ಜೂನಿಯರ್ ಎನ್‌ಸೈಕ್ಲೋಪೀಡಿಯ' ಮತ್ತು 'ಚಿಲ್ಡ್ರನ್ಸ್ ಬ್ರಿಟಾನಿಕಾ' ಇಂಥವು.

ಸುದೈವಕ್ಕೆ ಕನ್ನಡ ಮಕ್ಕಳಿಗೆ ವಿಶ್ವಕೋಶ ಇಲ್ಲದ ಹಾಗಾಗಲಿಲ್ಲ. ಡಾ. ಶಿವರಾಮ ಕಾರಂತರಿಗೆ ಮಕ್ಕಳ ವಂದನೆಗಳು ಸಲ್ಲಬೇಕು. ಅವರ ಮೂರು ಸಂಪುಟಗಳ 'ಬಾಲಪ್ರಪಂಚ' (1934)ಭಾರತೀಯ ಭಾಷೆಯೊಂದರಲ್ಲಿ ರಚಿತವಾದ ಮೊದಲನೆಯ ವಿಶ್ವಕೋಶ. ಮಕ್ಕಳಿಗಾಗಿ ರಚಿತವಾದ ಇನ್ನೊಂದು ಸಾಮಾನ್ಯ ವಿಶ್ವಕೋಶ 'ಜ್ಞಾನ ಗಂಗೋತ್ರಿ' (1970) ಬೆಂಗಳೂರಿನ ಕರ್ನಾಟಕ ಸಹಕಾರೀ ಪ್ರಕಾಶನ ಸಂಸ್ಥೆಯ ಏಳು ಸಂಪುಟಗಳಾಗಿ ಪ್ರಕಟಿಸಿದ ಇದು ಮೇಲೆ ಹೇಳಿದ 'ಆಕ್ಸ್‌ಫರ್ಡ್ ಜೂನಿಯರ್ ಎನ್‌ಸೈಕ್ಲೋಪೀಡಿಯ ಮಾದರಿಯಲ್ಲಿ ರಚಿತವಾಗಿದೆ. 20,000 ಸೆಟ್‌ಗಳನ್ನು ಶಾಲೆಗಳಿಗೆ ಹಂಚುವುದಕ್ಕಾಗಿ ಕೊಂಡುಕೊಂಡ ಕರ್ನಾಟಕ ಸರಕಾರವು ಈ ಯೋಜನೆಗೆ ಅಪಾರವಾದ ಪ್ರೋತ್ಸಾಹ ಪೋಷಣೆ ನೀಡಿತು. ಶ್ರೀ ಕೆ ಎಸ್ ನಿರಂಜನ ಇದರ ಪ್ರಧಾನ ಸಂಪಾದಕರು. ಮಕ್ಕಳ ಮೇಲೆ ಅವರಿಗಿರುವ ಕಳಕಳಿ ಎಷ್ಟಿತ್ತೆಂದರೆ ಈ ಕೆಲಸ ಮಾಡುತ್ತಿದ್ದ ಸುಮಾರು ನಾಲ್ಕು ವರ್ಷಗಳ ಕಾಲ ಅವರು ತಮ್ಮ ಯಾವುದೇ ರಚನಶೀಲ ಬರವಣಿಗೆಯನ್ನು ಬದಿಗಿಟ್ಟು ಬಿಟ್ಟರು.

ಭಾರತದ ಮಿಕ್ಕ ಭಾಷೆಗಳಲ್ಲಿ ಮಕ್ಕಳಿಗೆ ವಿಶ್ವಕೋಶವನ್ನು ಒದಗಿಸಿದ ಎರಡನೆ ಭಾಷೆ ಬಂಗಾಲಿ. ಜೋಗೇಂದ್ರನಾಥ ಗುಪ್ತರು ಸಂಪಾದಿಸಿದ 'ಶಿಶುಭಾರತಿ' ವಿಶ್ವಕೋಶವು 1935ರಲ್ಲಿ ಪ್ರಕಟವಾಗಿದ್ದು 10 ಸಂಪುಟಗಳನ್ನೊಳಗೊಂಡಿದೆ. ಉಲ್ಲೇಖಗಳ ಜೋಡಣೆ ವಿಷಯಾನುಗುಣವಾಗಿದೆ. ಇನ್ನೂ ಈಚಿನ ಒಂದು ಪ್ರಯತ್ನ 'ಛೋಟೇದಾರ್ ವಿಶ್ವಕೋಶ' (ಐದು ಸಂಪುಟಗಳು). ಇದನ್ನು ಕೆ ಎನ್ ಭಟ್ಟಾಚಾರ್ಯರು ಸಂಪಾದಿಸಿ 1975 ರಲ್ಲಿ ಪ್ರಕಟಿಸಿದರು. ವಿಜ್ಞಾನ ವಿಶ್ವಕೋಶವೊಂದರ ರಚನೆಗೆ ಹಂಚಿಕೆ ಹಾಕಿದ ಜುಗ್ಗತ್ ಸುನಾಲ್, 'ಸಾರಿಗೆ'ಯನ್ನು ಕುರಿತ ಮೊದಲನೆ ಸಂಪುಟ ಪ್ರಕಟವಾದೊಡನೆ ಒಂದು ಮಕ್ಕಳ ವಸ್ತು ಸಂಗ್ರಹಾಲಯದ ಸ್ಥಾಪನೆಯ ವಿಚಾರದಲ್ಲಿ ತೊಡಗಿ ಬಿಟ್ಟರು.

ತಮಿಳು ಮಕ್ಕಳಿಗಾಗಿ ಮದರಾಸಿನ ತಮಿಳು ಅಕಾಡೆಮಿಯು ಹತ್ತು ಸಂಪುಟಗಳ ವಿಶ್ವಕೋಶವೊಂದನ್ನು 1976ರಲ್ಲಿ ಪ್ರಕಟಿಸಿ ಮುಗಿಸಿತು. ಮಲಯಾಳಂ, ಮರಾಠೀ ಮತ್ತು ಒರಿಯಾ ಭಾಷೆಗಳಲ್ಲೂ ಕಿರಿಯರ ವಿಶ್ವಕೋಶಗಳಿವೆ.

ಇಂಥದೇ ಕೆಲಸ ಬೇರೆ ಪ್ರಾಂತೀಯ ಭಾಷೆಗಳಲ್ಲಿ ನಡೆದಿರುವುದರ ಮಾಹಿತಿ ಇಲ್ಲಿ ದೊರೆತಿಲ್ಲ.

2. ಮಕ್ಕಳಿಗೆ ಅದ್ಭುತ ರಮ್ಯ ಕಥೆಗಳು ಮತ್ತು ಜಾನಪದ ಕಥೆಗಳು ಇಷ್ಟ. ಪಂಚತಂತ್ರ ಹಿತೋಪದೇಶಗಳ ಕತೆಗಳು, ಆರೇಬಿಯನ್ ನೈಟ್ಸ್, ಈಸೋಪ್ಸ್ ಫೇಬಲ್ಸ್ ಇವೆಲ್ಲ ಸುಪ್ರಸಿದ್ಧವಾದವೇ. ಅಂಥ ರಮ್ಯ ಹಾಗೂ ಜಾನಪದ ಕತೆಗಳಲ್ಲಿ ಮಕ್ಕಳಿಗೆ ಎಲ್ಲ ರಾಷ್ಟ್ರಗಳಲ್ಲೂ ಇರುವ ಸಮಾನತೆಯೊಂದು ಅರಿವಿಗೆ ಬರುತ್ತದೆ. ಮಾನವ ಜನಾಂಗದ ತಾಯಿ ಬೇರುಗಳು ಎಷ್ಟು ಹಿಂದಿನ ಕಾಲಕ್ಕೆ ಸೇರಿದುವೆಂದರೆ ಆಗ ಪ್ರದೇಶ, ಜಾತಿ, ಚರ್ಮದ ಬಣ್ಣ, ಭಾಷೆ ಇವುಗಳ ಆಧಾರದ ಭೇದ ಭಾವನೆ ಎಂಬುದೇ ಇರಲಿಲ್ಲ–ಎಂಬುದನ್ನು ತಿಳಿಸಿಕೊಡುತ್ತವೆ.

3. ಮಕ್ಕಳಿಗೆ ಹಾಸ್ಯ, ಕಲ್ಪನೆ, ಅತಿವಾಸ್ತವ ಘಟನೆಗಳು ತುಂಬಿದ ಪುಸ್ತಕಗಳು ಇಷ್ಟ. ಇವು ಮಕ್ಕಳನ್ನು ಸದಾ ಉತ್ಸಾಹ ಉಲ್ಲಾಸಗಳಿಂದ ತುಂಬಿರುವಂತೆ ಮಾಡುತ್ತವೆ.

4. ರಾಷ್ಟ್ರಪ್ರೇಮ, ತನ್ನ ನಾಡು ನುಡಿಗಳ ಬಗ್ಗೆ ಮಮತೆ, ಉದಾತ್ತ ಸಾಹಸ, ಅರ್ಪಣಮನೋಭಾವ, ಸೇವಾಬುದ್ಧಿಗಳ ನಿದರ್ಶನ ಇಂಥ ಅಂಶಗಳಿರುವ ಪುಸ್ತಕಗಳನ್ನು ಮಕ್ಕಳು ಆಸಕ್ತಿಯಿಂದ ಓದುತ್ತಾರೆ. ಮಹಾಪುರುಷರ ಜೀವನ ಚರಿತ್ರೆಗಳು ಈ ವರ್ಗಕ್ಕೆ ಸೇರಿದವು. ದುರದೃಷ್ಟಕ್ಕೆ ಇಂದು ಸುತ್ತ ಮುತ್ತ ಕಂಡುಬರುತ್ತಿರುವ ಚಿತ್ರವೇ ಬೇರೆ. ವೃತ್ತಪತ್ರಿಕೆಗಳ ತುಂಬಾ ಭ್ರಷ್ಟಾಚಾರ, ಅಪ್ರಾಮಾಣಿಕತೆ, ಅಶಿಸ್ತು, ಸಮಾಜ ಕಂಟಕ ಚಟುವಟಿಕೆಗಳು ತುಂಬಿದ ಕತೆಗಳಿರುತ್ತವೆ. ಈ ಪರಿಸ್ಥಿತಿಯನ್ನು ಸುಧಾರಿಸಬೇಕಾದರೆ ತಕ್ಷಣವೇ ಉದಾತ್ತವೂ ಮಧುರತರವೂ ಆದ ಮಾನವದೃಷ್ಟಿಯಿರುವ ಪುಸ್ತಕಗಳನ್ನು ರಚಿಸಿ ಪ್ರಕಟಿಸಬೇಕು.

ಕನ್ನಡ ಈ ಕ್ಷೇತ್ರದಲ್ಲೂ ಮುಂದಿರುವಂತೆ ತೋರುತ್ತದೆ. ಬೆಂಗಳೂರಿನ ಐ ಬಿ ಎಚ್ ಪ್ರಕಾಶನವು ಪ್ರಕಟಿಸುತ್ತಿರುವ 'ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ' 'ಇಕೋ' 'ಅಮರ ಚಿತ್ರ ಕಥೆ' 'ಇದು ನಮ್ಮ ಭಾರತ', 'ವಿಜ್ಞಾನ ನೋಡು ಕಲಿ' ಮುಂತಾದ ಮಾಲೆಗಳು, ರಾಷ್ಟ್ರೋತ್ಥಾನ ಪರಿಷತ್ತಿನ 'ಭಾರತ ಭಾರತಿ ಪುಸ್ತಕ ಸಂಪದ' ಮೊಲೆ ಇವುಗಳನ್ನು ಇಲ್ಲಿ ಉಲ್ಲೇಖಿಸಬೇಕು.

5. ಇತರ ದೇಶಗಳ ಸಂಸ್ಕೃತಿಯನ್ನು ಪರಿಚಯ ಮಾಡಿಕೊಟ್ಟು ಪರಸ್ಪರ ಅರಿವು ಮತ್ತು ಸಹಕಾರಗಳಿಗೆ ಸಹಾಯ ಮಾಡುವಂತಹ ಪುಸ್ತಕಗಳು ಇಂದು ಅಗತ್ಯ. ಜನರನ್ನೂ ಪ್ರದೇಶವನ್ನೂ ಪರಿಚಯ ಮಾಡುವ ಪುಸ್ತಕಗಳು ಬೇಕು. ಉದಾಹರಣೆಗೆ ಯುರೋಪು ಮತ್ತು ಆಫ್ರಿಕಾ ಖಂಡಗಳಲ್ಲಿನ ವಿವಿಧ ದೇಶಗಳ ಪರಿಚಯ ಪುಸ್ತಕಗಳು ಮಕ್ಕಳಿರಲಿ, ಬೆಳೆದವರಿಗೂ ಪ್ರದೇಶ ಭಾಷೆಯಲ್ಲಿ ಈಗ ದೊರಕುತ್ತಿಲ್ಲ.

ಮನುಷ್ಯರ ಮನಸ್ಸಿನಲ್ಲಿ ಯುದ್ಧಗಳು ಮೊದಲಿಟ್ಟರೆ, ಶಾಂತಿಯ ರಕ್ಷಣ ಸಾಧನಗಳೂ ಮನುಷ್ಯರ ಮನಸ್ಸಿನಲ್ಲೇ ನಿರ್ಮಾಣವಾಗಬೇಕು. ಎಂದು ಯುನೆಸ್ಕೋ ಸಂವಿಧಾನವು ಹೇಳುತ್ತದೆ. ಆದ್ದರಿಂದ ಪರಸ್ಪರ ಅರಿವು ಒದಗಿಸುವ ಪುಸ್ತಕಗಳನ್ನು ನಮ್ಮ ಮಕ್ಕಳ ಕೈಯಲ್ಲಿರಿಸಿದರೆ ಯುನೆಸ್ಕೋದ ಉದಾತ್ತ ಉದ್ದೇಶ ಈಡೇರುತ್ತದೆ.

6. ಮಕ್ಕಳು ಓದಲು ಹಾತೊರೆಯುವ ಇನ್ನೊಂದು ಬಗೆಯ ಪುಸ್ತಕಗಳೆಂದರೆ ಪ್ರಾಣಿಕಥೆಗಳು.

7. ಮಗುವಿಗೆ ತನ್ನ ಸುತ್ತ ಇರುವ ವಿಶ್ವವನ್ನು ಅರಿಯಬೇಕೆಂಬ ಕುತೂಹಲ ವುಂಟು. ಅದನ್ನು ತಣಿಸುವಂತಹ ಸರಳ ಜನಪ್ರಿಯ ವಿಜ್ಞಾನ ಕತೆ ಕಾದಂಬರಿಗಳು ಬೇಕು. ಅಷ್ಟೇ ಅಲ್ಲ, 'ಅಂಡರ್ ಸ್ಟ್ಯಾಂಡಿಂಗ್ ಸೈನ್ಸ್' 'ಹ್ಯಾಮ್ಲಿನ್ ಜೂನಿಯರ್ ಸೈನ್ಸ್ ಎನ್‌ಸೈಕ್ಲೊಪೀಡಿಯ' ದಂಥ ಕೃತಿಗಳೂ ಭಾರತದ ಮಕ್ಕಳಿಗೆ ಲಭ್ಯವಾಗಬೇಕು. ಕಾರಂತರ ಕೃಪೆಯಿಂದ ಅವರ ಅಮೋಘ ಕೃತಿ 'ವಿಜ್ಞಾನ ಪ್ರಪಂಚ' (1962) ಕನ್ನಡ ಮಕ್ಕಳಿಗೆ ದೊರೆತಿದೆ.

ಸಿ ಎಸ್ ಐ ಆರ್ ಸಂಸ್ಥೆಯು ಬಹಳಷ್ಟು ಮುಂಚೆಯೇ ಇದರ ಅಗತ್ಯವನ್ನು ಮನಗಂಡು ಭಾರತದ ವಿವಿಧ ಭಾಷೆಗಳಲ್ಲಿ ಮಕ್ಕಳಿಗಾಗಿ ವಿಜ್ಞಾನದ ಪುಸ್ತಿಕೆಗಳನ್ನು ಪ್ರಕಟಿಸಿತು. ಇದರ ಉದ್ದೇಶ ರಾಷ್ಟ್ರದಲ್ಲಿ ಒಂದು ವೈಜ್ಞಾನಿಕ ಮನೋಭಾವವನ್ನು ವಾತಾವರಣವನ್ನು ರೂಪಿಸುವುದು; ಇದರಿಂದ ನಿಶ್ಚಯವಾಗಿ ಜಾತೀಯತೆ, ಮೂಢ ನಂಬಿಕೆ, ಮಾಟ ಮಂತ್ರಗಳ ಹಾವಳಿ-ತೊಲಗುತ್ತವೆ ಎಂಬದು. ಈ ಆದರ್ಶ ರೂಪದ ನಿರ್ಧಾರ, ಮತ್ತು ಉತ್ಸಾಹ ಕಾಲಕಳೆದಂತೆ ಮಂಕಾಗಿದೆ. ಮಕ್ಕಳಲ್ಲಿ ವೈಜ್ಞಾನಿಕ ಮನೋ ಭಾವವನ್ನು ಮೂಡಿಸಬೇಕೆಂಬ ಉತ್ಸಾಹ ಈಗ ಆವಿಯಂತೆ ಗಾಳಿಯಲ್ಲಿ ಕರಗಿಹೋಗಿದೆ.

8. ಆಧುನಿಕ ಮಕ್ಕಳು ಬಯಸುವ ಇನ್ನೂ ಒಂದು ಬಗೆಯ ಪುಸ್ತಕಗಳು ಕಾಮಿಕ್‌ಗಳು. ಇಂಗ್ಲೆಂಡಿನಲ್ಲಿ ಮಕ್ಕಳು ತಮ್ಮ ಜೇಬುಹಣದಲ್ಲಿ ಮುಕ್ಕಾಲು ಭಾಗ ವನ್ನು ಬೇರೆ ಪುಸ್ತಕಗಳಿಗಿಂತ ಹೆಚ್ಚಾಗಿ ಕಾಮಿಕ್‌ಗಳನ್ನು ಕೊಳ್ಳಲು ವೆಚ್ಚಮಾಡುತ್ತಾರೆ ಎಂದು ತಿಳಿದು ಬಂದಿದೆ. (ನಮ್ಮಲ್ಲೂ ಸಮಾಜದ ಉನ್ನತ ವರ್ಗವೆಂದು ಹೇಳಿಕೊಳ್ಳುವ ಜನರಲ್ಲಿ ಎಲ್ಲೋ ಕೆಲವರ ಮಕ್ಕಳನ್ನು ಬಿಟ್ಟರೆ ಮಿಕ್ಕವರ ಬಳಿ ಜೇಬು ಹಣ ಎಂಬ ಹೆಸರಿಗೆ ಅರ್ಹವಾದ ಮೊತ್ತವೇ ಇರುವುದಿಲ್ಲವಲ್ಲ, ಅದಿರಲಿ !) ಕಾಮಿಕ್‌ಗಳು ಮಕ್ಕಳಲ್ಲಿ ಹುದುಗಿರುವ ವಾಚನ ಶಕ್ತಿಯನ್ನು ಹೊರಗೆಳೆಯುತ್ತವೆ. ಅವರು ನಿಜವಾಗಿ ಓದುಗ ರಾಗುವಂತೆ ಮಾಡುತ್ತವೆ. ನಮ್ಮ ಪ್ರಾಚೀನ ಮಹಾ ಕೃತಿಗಳನ್ನು ಅವುಗಳ ಮೂಲಕ ಅವರಲ್ಲಿ ಜನಪ್ರಿಯಗೊಳಿಸಬಹುದು. ಆದರೆ, ಅವುಗಳ ಪ್ರಕಟಣೆಯ ಮೇಲೆ ಒಂದು ಹತೋಟಿ ಇಟ್ಟುಕೊಳ್ಳುವುದೂ ಅಗತ್ಯವಾಗುತ್ತದೆ. ಇಂಗ್ಲೆಂಡಿನಲ್ಲಿ 'ಚಿಲ್ಡ್ರನ್ ಎಂಡ್ ಯಂಗ್ ಪರ್ಸನ್ಸ್ (ಹಾರಮ್‌ಫುಲ್ ಪಬ್ಲಿಕೇಷನ್ಸ್) ಆ್ಯಕ್ಟ್ 1955' ಎಂಬ ಶಾಸನ ದಲ್ಲಿ ಈ ಬಗ್ಗೆ ನಿರ್ದೇಶನವಿದೆ. ಅಮೆರಿಕದಿಂದ ಭಯಂಕರ ಚಿತ್ರ ವಸ್ತುಗಳನ್ನುಳ್ಳ ಕಾಮಿಕ್‌ಗಳು ಹೊಳೆಯಾಗಿ ಹರಿದು ಬರುತ್ತಿದ್ದುದನ್ನು ತಡೆಗಟ್ಟಲು ಈ ಶಾಸನ ಜಾರಿಗೆ ಬರಬೇಕಾಯಿತು. ನಮ್ಮ ದೇಶದ ಶ್ರೇಷ್ಠ ಕೃತಿಗಳಾದ ರಾಮಾಯಣ ಮಹಾಭಾರತ ಹಾಗೂ ಇತರ ಐತಿಹಾಸಿಕ ವಸ್ತುಗಳು ಈ ಕಾಮಿಕ್‌ಗಳ ರೂಪದಲ್ಲಿ ಬೇರೆ ಬೇರೆ ಭಾಷೆ ಗಳಲ್ಲಿ ಪ್ರಕಟವಾಗುತ್ತಿವೆ.

9. ಮಕ್ಕಳಿಗೆಂದೇ ರೂಪಿತವಾದ ಪತ್ರಿಕೆಗಳು ಅಗತ್ಯವಾಗಿವೆ. ಬಾಲಭಾರತಿ, ಬಾಲವನ, ಚಂದಮಾಮ, ನಂದನ, ಪರಾಗ ಮುಂತಾದ ಕೆಲವು ಪತ್ರಿಕೆಗಳು ಹಲವು ಭಾಷೆಗಳಲ್ಲಿ ಪ್ರಕಟವಾಗುತ್ತವೆ. ಆದರೆ ಚಿಲ್ಡ್ರನ್ಸ್ ವರ್ಲ್ಡ್ ಅಂತಹ ಪತ್ರಿಕೆಗಳು ನಮ್ಮ ಭಾಷೆಗಳಲ್ಲಿ ಇನ್ನೂ ಬರಬೇಕಾಗಿದೆ.

ಸಿ ಎಸ್ ಐ ಆರ್ ಸಂಸ್ಥೆಯು ತನ್ನ ಭಾರತೀಯ ಭಾಷೆಗಳ ವಿಭಾಗದ ಮೂಲಕ ಹಿಂದಿಯಲ್ಲಿ ವಿಜ್ಞಾನ ಪ್ರಗತಿ ಎಂಬ ಜನಪ್ರಿಯ ವಿಜ್ಞಾನ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಹಿಂದೀ ಭಾಷಾ ವಲಯದಲ್ಲಿ ಇದು ತುಂಬ ಪ್ರಿಯವಾಗಿದೆ. ಈ ಪತ್ರಿಕೆಯ ವಿವಿಧ ಭಾಷಾ ಆವೃತ್ತಿಗಳನ್ನು ಪ್ರಕಟಿಸಲು ಮೊದಲು ಸಿ ಎಸ್ ಐ ಆರ್ ನಿರ್ಧರಿಸಿದ್ದರೂ ಕೂಡ ಅದು ಇನ್ನೂ ಈಡೇರಿಲ್ಲದುದು ವಿಷಾದಕರ.

10. ಶಾಲಾ ಮಕ್ಕಳಿಗೆ ನಾವು ಈಗ ಒದಗಿಸುತ್ತಿರುವ ಪಠ್ಯಪುಸ್ತಕಗಳೂ ಹಲವು ತೆರನಾದ ದೋಷಗಳಿಂದ ತುಂಬಿವೆ. ಉತ್ತಮ ಮಟ್ಟದವಲ್ಲ, ಏಕರೂಪವಾಗಿಲ್ಲ, ಸರಿಯಾದ ಮಾಹಿತಿ ಅವುಗಳಲ್ಲಿ ದೊರಕುವುದಿಲ್ಲ, ನೋಡುವುದಕ್ಕೂ ಚೆನ್ನಾಗಿಲ್ಲ. ಬಹಳ ಕೆಟ್ಟದಾಗಿ ಬರೆದು, ಚಿತ್ರ ತುಂಬಿ ಮುದ್ರಿಸಲಾಗುತ್ತಿದೆ.

11. ಕೆಲವು ಮೂಲಭೂತವಾದ ನೈತಿಕ ಮತ್ತು ಮಾನವಿಕ ಮೌಲ್ಯಗಳನ್ನು ಸಾರುವಂತಹ ಸಾಹಿತ್ಯ ಮಕ್ಕಳಿಗೆ ಇಂದು ಅಗತ್ಯವಿದೆ.

ಎಷ್ಟು ಬಗೆಯ ಪುಸ್ತಕಗಳು ನಮ್ಮ ದೇಶದ ಮಕ್ಕಳಿಗೆ ಅಗತ್ಯವಾಗಿದೆ ಎಂಬುದರ ಒಂದು ಸ್ಥೂಲ ಚಿತ್ರ ಮೇಲೆ ಕೊಟ್ಟಿರುವ ವಿವರಣೆಯಿಂದ ಬರಬಹುದು.

ಮಕ್ಕಳ ಪುಸ್ತಕಗಳ ಉಪಯೋಗ

ಬೇರೆ ದೇಶಗಳಿಂದ ಆಮದಾಗಿ, ಇಲ್ಲೇ ಉತ್ಪಾದಿತವಾಗಿ ನಮ್ಮ ಮಾರುಕಟ್ಟೆಯಲ್ಲಿ ಹಾಗೂ ಗ್ರಂಥಾಲಯಗಳಲ್ಲಿ ದೊರಕುತ್ತಿರುವ ಪುಸ್ತಕಗಳನ್ನೇ ಆದರೂ ಮಕ್ಕಳಿಗೆ ಸಿಕ್ಕುವ ಹಾಗೆ ನಾವು ಮಾಡಿಲ್ಲ. ಇದಕ್ಕೆ ಕಾರಣಗಳು ಹೀಗಿವೆ :

1. ಮಕ್ಕಳ ಪುಸ್ತಕಗಳ ಗ್ರಂಥಸೂಚಿಗಳು ಸಿಕ್ಕುವುದಿಲ್ಲ, ಅಂಥ ಗ್ರಂಥ ಸೂಚಿಗಳು ಇಲ್ಲದಾಗ ಗ್ರಾಹಕರಿಗೂ ಗ್ರಂಥಗಳಿಗೂ ನಡುವೆ ಸಂಪರ್ಕ ಏರ್ಪಡುವುದು ಸಾಧ್ಯವಿಲ್ಲ.

2. ನಮ್ಮ ದೇಶದಲ್ಲಿ ಬಹುತೇಕ ಪುಸ್ತಕ ವ್ಯಾಪಾರಿಗಳು ಶಾಲಾ ಕಾಲೇಜು ಪಠ್ಯ ಪುಸ್ತಕಗಳನ್ನು ಮಾರಾಟ ಮಾಡುವಷ್ಟಕ್ಕೆ ತೃಪ್ತರಾಗಿದ್ದಾರೆ. ಅವುಗಳಿಗೆ ಅಪಾರ ಬೇಡಿಕೆಯಿದೆಯೆಂಬುದೇ ಇದಕ್ಕೆ ಕಾರಣ. ಮುಂಬಯಿ ಕಲ್ಕತ್ತ ಮತ್ತು ಇತರ ರಾಜಧಾನಿಗಳಲ್ಲಲ್ಲದೆ ಬೇರೆ ಕಡೆ ಮಕ್ಕಳ ಪುಸ್ತಕಗಳು, ವಿದ್ವತ್ ಕೃತಿಗಳು, ಎಷ್ಟೋ ವೇಳೆ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಪುಸ್ತಕಗಳು ಕೂಡ ದೊರಕುವುದಿಲ್ಲ.

3. ಗ್ರಂಥಾಲಯಗಳ ಸಂಖ್ಯೆಯೂ ಹೆಚ್ಚಿಲ್ಲ. ಒಂದಿಲ್ಲದಿದ್ದರೆ ಇನ್ನೊಂದು ಗ್ರಂಥಾಲಯಕ್ಕೆ ಹೋಗಿ ನೋಡಿಕೊಂಡು ಬರಲು ಅವಕಾಶವಿಲ್ಲ, ಇರುವ ಗ್ರಂಥಾ

ಲಯುಗಳಲ್ಲೂ ಸಹ ದೊಡ್ಡವರ ಬೇಡಿಕೆಗಳನ್ನೇ ಪೂರೈಸಲು ಸಾಧ್ಯವಾಗದಷ್ಟು ಒತ್ತಡ ಇರುವಾಗ ಕಿರಿಯರ ಅಗತ್ಯಗಳನ್ನು ಅಲಕ್ಷಿಸುವುದು ಸಹಜವೇ ಆಗಿದೆ.

ಈ ಪರಿಸ್ಥಿತಿಯನ್ನು ಸುಧಾರಿಸಲು ರಾಷ್ಟ್ರವ್ಯಾಪೀ ಪ್ರಮಾಣದ ಒಟ್ಟು ಪ್ರಯತ್ನ ಅತ್ಯಗತ್ಯ. ಈ ನಿಟ್ಟಿನಲ್ಲಿ ಒಂದು ಯೋಜನೆ ಹಾಕಿಕೊಳ್ಳಲು ಅಂತರ ರಾಷ್ಟ್ರೀಯ ಮಕ್ಕಳ ವರ್ಷದ ಈ ಸಂದರ್ಭ ಅತ್ಯಂತ ಸೂಕ್ತ.

ಆದ್ದರಿಂದ ಈ ವಿಷಯವಾಗಿ ಕೆಲವು ಸೂಚನೆಗಳು ಹೀಗಿವೆ :

ಈಗ ಇರುವ ಮಕ್ಕಳ ಪುಸ್ತಕಗಳ ಉಪಯೋಗವನ್ನು ಹೆಚ್ಚಿಸಬೇಕಾದರೆ ತಕ್ಷಣವೇ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.

1. ಭಾರತದ ಎಲ್ಲ ಭಾಷೆಗಳಲ್ಲೂ ದೊರಕುವ ಮಕ್ಕಳ ಪುಸ್ತಕಗಳ ಒಂದು ಪಟ್ಟಿಯನ್ನು ತಯಾರಿಸಿ ಎಲ್ಲ ಗ್ರಂಥಾಲಯುಗಳು ಮತ್ತು ಶಾಲೆಗಳಿಗೆ ವ್ಯಾಪಕವಾಗಿ ಹಂಚಬೇಕು.

2. ರಾಷ್ಟ್ರಾದ್ಯಂತ ಮುಖ್ಯ ನಗರಗಳಲ್ಲಿ ವಿವಿಧ ಭಾಷೆಗಳಲ್ಲಿನ ಮಕ್ಕಳ ಸಾಹಿತ್ಯವನ್ನು ಪ್ರದರ್ಶನ ಮಾಡಬೇಕು.

3. ಚಂದಾ ಗ್ರಂಥಾಲಯುಗಳು ಮತ್ತು ಸಾರ್ವಜನಿಕ ಗ್ರಂಥಾಲಯುಗಳು ಈಗಿಂದೀಗಲೇ ಮಕ್ಕಳ ವಿಭಾಗಗಳನ್ನು ತೆರೆಯಬೇಕು.

4. ತಮ್ಮ ಪುಸ್ತಕ ಬಜೆಟ್ಟಿನ ನಿರ್ದಿಷ್ಟ ಶೇಕಡಾವಾರು ಮೊತ್ತವನ್ನು ಪ್ರತಿ ವರ್ಷವೂ ಮಕ್ಕಳ ಪುಸ್ತಕಗಳನ್ನು ಕೊಳ್ಳುವುದಕ್ಕಾಗಿಯೇ ಮೀಸಲಿರಿಸಬೇಕು.

5.ಶಾಲಾಗ್ರಂಥಾಲಯುಗಳನ್ನು ತೆರೆದು ಅಲ್ಲಿ ಪಠ್ಯ ಪುಸ್ತಕಗಳಲ್ಲದೆ ಮಕ್ಕಳ ಪುಸಕಗಳನ್ನೂ ಸಂಗ್ರಹಿಸಿ ಮಕ್ಕಳಿಗೆ ತೆರೆದಿಡಬೇಕೆಂದು ಅಪ್ಪಣೆ ಮಾಡುವಂತೆ ವಿವಿಧ ರಾಜ್ಯಗಳ ಶಿಕ್ಷಣ ಇಲಾಖಾ ನಿರ್ದೇಶಕರನ್ನು ಕೋರಬೇಕು.

6. ಶಿಕ್ಷಣ ನಿರ್ದೇಶನಾಲಯುದಲ್ಲಿ ಬೇರೆ ಬೇರೆ ವಿಭಾಗಗಳನ್ನು ತೆರೆದು ಅವು ವಿಶಿಷ್ಟವಾಗಿ ಶಾಲಾ ಗ್ರಂಥಾಲಯುಗಳ ಸ್ಥಾಪನೆ ಹಾಗೂ ಅಭಿವೃದ್ಧಿಗಳನ್ನು ಗಮನಿಸುವಂತೆ ಮಾಡಬೇಕು.

7. ಮಕ್ಕಳ ವಾಚನ ಅಗತ್ಯಗಳನ್ನು ಅವರಿರುವ ಆವರಣದಲ್ಲಿಯೇ ಪೂರೈಸುವ ಸಲುವಾಗಿ, ನಗರ ಕೇಂದ್ರದಿಂದ ಎರಡು ಮೂರು ಕಿಲೋಮೀಟರು ದೂರದಲ್ಲಿ ನೆಲೆಗೊಂಡಿರುವ ವಿಶ್ವವಿದ್ಯಾನಿಲಯುಗಳು ಮಕ್ಕಳ ಗ್ರಂಥಾಲಯುಗಳನ್ನೇ ಪ್ರತ್ಯೇಕವಾಗಿ ಸ್ಥಾಪಿಸಿವೆ. ಈ ಮಾದರಿಯನ್ನು ಇತರ ಎಲ್ಲ ವಿಶ್ವವಿದ್ಯಾನಿಲಯುಗಳೂ ಅನುಸರಿಸುವುದು ಅಗತ್ಯ. ಬೇಕಾದರೆ ಇದಕ್ಕಾಗಿ ಶಿಕ್ಷಕ ವರ್ಗದಿಂದ, ಸಿಬ್ಬಂದಿ ವರ್ಗದಿಂದ ವಂತಿಗೆಗಳನ್ನು ಸಂಗ್ರಹಿಸಿ ಉಪಯೋಗಿಸಬಹುದು.

8. ಪುಸ್ತಕ ವ್ಯಾಪಾರಿಗಳು ಮಕ್ಕಳ ಪುಸ್ತಕಗಳನ್ನು ಕೂಡಿಸಿ ಮಾರಾಟಕ್ಕೆ ಇಡುವಂತೆ ಪ್ರದರ್ಶಿಸುವಂತೆ ಪ್ರೋತ್ಸಾಹಿಸಿ ಪ್ರಚೋದಿಸಬೇಕು. ರೈಲು ನಿಲ್ದಾಣಗಳಲ್ಲಿನ

ಮತ್ತು ಬಸ್ ನಿಲ್ದಾಣಗಳಲ್ಲಿನ ಪುಸ್ತಕದಂಗಡಿಗಳಲ್ಲಿ ಮಕ್ಕಳ ಪುಸ್ತಕಗಳನ್ನು ಪ್ರದರ್ಶಿಸುವಂತೆ ಮಾಡಬೇಕು.

ಈ ಕ್ರಮಗಳಿಂದ ಈಗ ಇರುವ ಪುಸ್ತಕಗಳ ದಾಸ್ತಾನು ಉಪಯೋಗಕ್ಕೆ ಬರುವಂತೆ ಮಾಡಬಹುದಾಗಿದೆ.

ಹೊಸ ಪುಸ್ತಕಗಳ ಉತ್ಪಾದನೆ

1. ಒಳ್ಳೆಯ ಗುಣಮಟ್ಟದ ಮಕ್ಕಳು ಪುಸ್ತಕಗಳನ್ನು ಹೊಸದಾಗಿ ರಚಿಸಲು ತುರುತು ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ. ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು, ನ್ಯಾಷನಲ್ ಬುಕ್ ಟ್ರಸ್ಟ್, ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಮೊದಲಾದ ರಾಷ್ಟ್ರೀಯ ಸಂಸ್ಥೆಗಳು ಈ ಬಗೆಯ ಕ್ರಮಗಳನ್ನು ಕೈಗೊಳ್ಳಬಹುದು. ಭಾರತದ ಎಲ್ಲ ಭಾಷೆಗಳಲ್ಲೂ ವ್ಯವಸ್ಥಿತವಾಗಿ ಮಕ್ಕಳ ಪುಸ್ತಕಗಳನ್ನು ಪ್ರಕಟಿಸುವ ಹೊಣೆಯನ್ನು ಯಾವುದಾದರೂ ಒಂದು ರಾಷ್ಟ್ರಮಟ್ಟದ ಸಂಸ್ಥೆ ಹೊರಬೇಕು. ಇಂಗ್ಲಿಷೋ ಹಿಂದಿಯೋ ಅಥವಾ ಬೇರೆ ಯಾವುದಾದರೂ ಒಂದೋ ಭಾಷೆಯ ಪುಸ್ತಕವಾಗಿ ತಯಾರಿಸಿದ ಚಿತ್ರ, ವಸ್ತು ಮುಂತಾದುವನ್ನೆಲ್ಲ ಬೇರೆ ಭಾಷಾ ಆವೃತ್ತಿಗಳಿಗೆ ಬಹು ಸುಲಭವಾಗಿ ಬಳಸಿಕೊಳ್ಳಬಹುದು. ಇದರಿಂದ ಉತ್ಪಾದನಾ ವೆಚ್ಚ ತಗ್ಗುವುದಲ್ಲದೆ ರಾಷ್ಟ್ರೀಯ ಭಾವೈಕ್ಯ ಸಾಧನೆಯಾಗುವುದು.

2. ಕೊಟ್ಟಾಯಂನಲ್ಲಿರುವ ಕೇರಳ ಬಾಲ ಸಾಹಿತ್ಯ ಪರಿಷತ್ (1973) ಅಂತಹ ಸಾಹಿತ್ಯ ಅಕಾಡೆಮಿಗಳು ಮಕ್ಕಳಿಗಾಗಿಯೇ ಎಲ್ಲ ರಾಜ್ಯಗಳಲ್ಲೂ ಸ್ಥಾಪಿತವಾಗಬೇಕು. ಕೇರಳದ ಈ ಸಂಸ್ಥೆಯ ಉದ್ದೇಶ ಆರೋಗ್ಯಕರವಾದ ಬಾಲಸಾಹಿತ್ಯವನ್ನು ಸೃಷ್ಟಿಸಿ ವ್ಯಾಪಕವಾಗಿ ಹರಡುವುದು.

3. ಪಂಚತಂತ್ರ, ಹಿತೋಪದೇಶ, ಈಸೋಪನ ಕಥೆಗಳು ಮುಂತಾದುವನ್ನಂತೂ ಒಂದೇ ಸಾರಿಗೆ ಎಲ್ಲ ಪ್ರದೇಶ ಭಾಷೆಗಳಲ್ಲಿ ಹೊರತರಬಹುದು. ಅದೇ ರೀತಿ ಯು.ಕೆ, ಅಮೆರಿಕಾ, ರಷ್ಯಾ, ಜಪಾನ್ ಮುಂತಾದ ದೇಶಗಳಲ್ಲಿನ ಸುಪ್ರಸಿದ್ಧ ಪುಸ್ತಕಗಳನ್ನು ಅನುವಾದ ಮಾಡಿಸಬಹುದು. ಭಾರತೀಯ ಭಾಷೆಗಳಲ್ಲೇ ಬಹಳ ಸೊಗಸಾದ ಮಕ್ಕಳ ಪುಸ್ತಕಗಳಿವೆ. ಇವುಗಳನ್ನು ಇತರ ಭಾಷೆಗಳಿಗೂ ಇಂಗ್ಲಿಷಿಗೂ ಭಾಷಾಂತರ ಮಾಡಿಸಬಹುದು.

4. ಜ್ಞಾನಗಂಗೋತ್ರಿ ಮುಂತಾದ ವಿಶ್ವಕೋಶಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ಸಿದ್ಧಪಡಿಸಲು ರಾಜ್ಯ ಸರಕಾರಗಳು ಯೋಜನೆ ಹಾಕಿಕೊಳ್ಳಬೇಕು. 'ಅಂಡರ್‌ಸ್ಟ್ಯಾಂಡಿಂಗ್ ಸೈನ್ಸ್' ಸಂಪುಟಗಳ ಪ್ರಾದೇಶಿಕ ಭಾಷಾ ಆವೃತ್ತಿಗಳನ್ನು ತರಲು ಕೂಡ ವ್ಯವಸ್ಥೆ ಮಾಡಬೇಕು.

5. ಹಾಗೆಯೇ ವಿಜ್ಞಾನ ಪ್ರಗತಿ ಮತ್ತು ಚಿಲ್ಡ್ರನ್ಸ್ ವರ್ಲ್ಡ್ ಅಂತಹ ಪತ್ರಿಕೆಗಳನ್ನು ಸಮಾನ ವಸ್ತು ಮತ್ತು ಚಿತ್ರಗಳನ್ನು ಬಳಸಿಕೊಂಡು ಎಲ್ಲ ಪ್ರದೇಶ ಭಾಷೆಗಳಲ್ಲೂ ತರಬೇಕು.

6. ಫಿಲ್ಮುಗಳು, ಮ್ಯಾಪುಗಳು, ಚಾರ್ಟುಗಳು, ಚಿತ್ರಗಳು ಮುಂತಾದ ದೃಶ್ಯ-ಶ್ರವ್ಯ ಸಲಕರಣೆಗಳನ್ನು (ಎಲ್ಲ ಶೈಕ್ಷಣಿಕ ಮಹತ್ವವುಳ್ಳಂಥವೇ ಆದವುಗಳನ್ನು) ಅಗಾಧ ಪ್ರಮಾಣದಲ್ಲಿ ತಯಾರಿಸಲು ಯೋಜನೆ ಹಾಕಿಕೊಳ್ಳಬೇಕು.

7. ವಿವಿಧ ಪ್ರದೇಶಭಾಷೆಗಳಲ್ಲಿನ ಗ್ರಂಥಗಳಿಗೆ ಕೇಂದ್ರ ಹಾಗೂ ಪ್ರಾಚ್ಯ ಸಾಹಿತ್ಯ ಅಕಾಡೆಮಿಗಳು ಪ್ರಶಸ್ತಿ ಕೊಡುತ್ತಿರುವ ಹಾಗೆಯೇ ಪ್ರತಿವರ್ಷವೂ ಅತ್ಯುತ್ತಮ ಮಕ್ಕಳ ಸಾಹಿತ್ಯಕ್ಕಾಗಿ ಬಹುಮಾನ, ಪ್ರಶಸ್ತಿಗಳನ್ನು ಸ್ಥಾಪಿಸಬೇಕು.

8. ಹಾಗೆಯೇ ಮಕ್ಕಳ ಪುಸ್ತಕಗಳ ಅತ್ಯುತ್ತಮ ಮುದ್ರಕ ಹಾಗೂ ಅತ್ಯುತ್ತಮ ಪ್ರಕಾಶಕ ಇವರಿಗೂ ಬಹುಮಾನಗಳನ್ನು ನೀಡಬೇಕು.

9. ಒಂದು ತಿಂಗಳ ಕಾಲ ನಡೆಯುವ ಲೇಖಕ ಶಿಬಿರವನ್ನು ಮಕ್ಕಳ ಸಾಹಿತ್ಯ ಲೇಖಕರಿಗಾಗಿ ನಡೆಸಬೇಕು. ಇದನ್ನು ನ್ಯಾಷನಲ್ ಬುಕ್ ಟ್ರಸ್ಟ್ ನಡೆಸಬಹುದು. ಅಥವಾ ಕೇಂದ್ರ ಅಥವಾ ರಾಜ್ಯ ಸಾಹಿತ್ಯ ಅಕಾಡೆಮಿ ನಡೆಸಬಹುದು.

10. ಮಕ್ಕಳ ಸಾಹಿತ್ಯವನ್ನು ಕುರಿತೇ ರಾಷ್ಟ್ರಮಟ್ಟದ ಒಂದು ವಿಚಾರ ಸಂಕಿರಣವನ್ನು ವ್ಯವಸ್ಥೆಗೊಳಿಸಬೇಕು. ಅದರಲ್ಲಿ ಬಾಲಸಾಹಿತ್ಯದ ವಿತರಕರು, ಪ್ರಕಾಶಕರು, ಕೊಳ್ಳುಗರು ಭಾಗವಹಿಸಬೇಕು. ಇದು ಆದಷ್ಟು ಬೇಗ ನಡೆಯಬೇಕು.

11. ಮಕ್ಕಳ ಪುಸ್ತಕಗಳ ಹಾಗೂ ಪತ್ರಿಕೆಗಳ ಪ್ರಕಾಶಕರಿಗೆ ರಾಜ್ಯ ಸರ್ಕಾರಗಳು ಸಹಾಯಧನ ಕೊಡುವ ಕಾರ್ಯಕ್ರಮವನ್ನು ರೂಪಿಸಬೇಕು.

12. ಅಂಗವಿಕಲರಾದ ಮಕ್ಕಳ ಜ್ಞಾನಾಗತ್ಯಗಳನ್ನು ಸಾಕಷ್ಟು ಜಾಗರೂಕತೆಯಿಂದ ಗಮನಿಸಿ ರಾಷ್ಟ್ರದ ಎಲ್ಲ ಭಾಷೆಗಳಲ್ಲೂ ಬ್ರೇಲ್ ಪುಸ್ತಕಗಳು ಮತ್ತು ಶೈಕ್ಷಣಿಕ ಚಿತ್ರಗಳು, ಫಿಲಂ ಸ್ಟ್ರಿಪ್‌ಗಳು ಮತ್ತಿತರ ದೃಕ್-ಶ್ರವಣ ಸಾಧನಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸಬೇಕು.

* * *

ಭಾರತದಲ್ಲಿ ಮಕ್ಕಳಿಗಾಗಿ ಮಾಡಬೇಕಾದದ್ದು ಬೇಕಾದಷ್ಟಿದೆ. ಅಂತರರಾಷ್ಟ್ರೀಯ ಮಕ್ಕಳ ವರ್ಷದ ಈ ಸಂದರ್ಭವು ಮಗುವಿನ ಸರ್ವತೋಮುಖ ವಿಕಾಸಕ್ಕಾಗಿ ವಿವಿಧ ಯೋಜನೆಗಳನ್ನು ರೂಪಿಸಲು ಒದಗಿರುವ ಅವಕಾಶವಾಗಬೇಕು. ಮಗು ಕುಟುಂಬದ ಕಣ್ಣು. ಎಲ್ಲ ಕಡೆಯೂ ಮಗುವಿಗೆ ಮಕ್ಕಳಿಗೆ ಆದ್ಯತೆ ಬರಬೇಕು. "ದೇಹದ ಪುಷ್ಟಿಯಿಂದ ಬುದ್ಧಿಯ ಪುಷ್ಟಿಯವರೆಗೆ" ಮಗುವಿನ ವಿಕಾಸದ ಎಲ್ಲ ಮುಖಗಳನ್ನೂ ಒಳಗೊಳ್ಳುವಂತೆ ಸರಕಾರವು ಈ ವರ್ಷ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ಇಂಟರ್‌ನ್ಯಾಷನಲ್ ಬೋರ್ಡ್ ಆನ್ ಬುಕ್ಸ್ ಫಾರ್ ಯಂಗ್ ಪೀಪಲ್ (IBBY) ಸಂಸ್ಥೆಯು ಈ ಅಂತರರಾಷ್ಟ್ರೀಯ ಮಕ್ಕಳ ವರ್ಷಕ್ಕಾಗಿ ನೀಡಿದ ಹೇಳಿಕೆಯಿಂದ ಒಂದು ಭಾಗವನ್ನು ಉದ್ಧರಿಸಿ ಈ ಲೇಖನವನ್ನು ಮುಗಿಸಬಹುದು :

"ಅಂತರರಾಷ್ಟ್ರೀಯ ಮಕ್ಕಳ ವರ್ಷದಲ್ಲಿ, ಮೊದಲನೆಯದಾಗಿ ಎಲ್ಲ ಕಡೆಯೂ ಇರುವ ಮಕ್ಕಳು ಓದುವ ಸಾಮರ್ಥ್ಯವುಳ್ಳವರಾಗುವಂತೆ ಮಾಡಲು, ಎರಡನೆಯದಾಗಿ

ವಿಸ್ತಾರವೂ ಸಮೃದ್ಧವೂ ಆದ ಗ್ರಂಥರಾಶಿಯು ಅವರ ಆಸಕ್ತಿ ಅಗತ್ಯಗಳಿಗನುಗುಣವಾಗಿ ಅವರಿಗೆ ದೊರಕುವಂತೆ ಮಾಡಲು ನಾವು ಪ್ರತಿಜ್ಞೆ ಕೈಗೊಳ್ಳಬೇಕು.

ಭವಿಷ್ಯತ್ತಿನ ಜಗತ್ತು ರೂಪುಗೊಳ್ಳುವುದು ನಮ್ಮ ಮಕ್ಕಳ ಕೈಗಳಿಂದ, ಮನಸ್ಸುಗಳಿಂದ ಎಂಬುದನ್ನು ಅರಿತುಕೊಳ್ಳಬೇಕು. ಆಗ ನಮ್ಮ ಮಕ್ಕಳಿಗೆ ವಿಚಾರಗಳು ಆದರ್ಶಗಳು, ಮಾಹಿತಿಗಳು, ಪ್ರೋತ್ಸಾಹಕರವಾದ ಸ್ಫೂರ್ತಿಯ ಸೆಲೆಗಳು ದೊರೆತು ಜಗತ್ತು ತಮ್ಮ ಪಾಲಿಗೆ ಉತ್ತಮತರ ನೆಲೆಯಾಗುವಂತೆ ರೂಪಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತದೆ. ಅವರ ದೈಹಿಕ ಹಾಗೂ ಲೌಕಿಕ ಯೋಗಕ್ಷೇಮವನ್ನು ಮಾತ್ರ ಒಳಗೊಳ್ಳುವಂತಿರದೆ ಅವರ ಬಗ್ಗೆ ನಮಗಿರುವ ಕಳಕಳಿಯು ಅವರ ಸಾಮಾಜಿಕ, ಮಾನಸಿಕ ಹಾಗೂ ಸಾಂಸ್ಕೃತಿಕ ವಿಕಾಸವನ್ನು ಒಳಗೊಳ್ಳುವಂತೆ ಆಗಬೇಕು. ಸಮಸ್ತ ಮಾನವ ಜನಾಂಗದ ಸುಪ್ತ ಸಾಮರ್ಥ್ಯ ಇರುವುದೇ ಮಕ್ಕಳಲ್ಲಿ. ಆದ್ದರಿಂದ ತಮ್ಮಲ್ಲಿ ಸುಪ್ತವಾಗಿರುವ ವ್ಯಕ್ತಿಗತವಾದ ಆಧ್ಯಾತ್ಮಿಕ, ಲೌಕಿಕ ಮತ್ತು ಬೌದ್ಧಿಕ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅವರಿಗೆ ಸಂಪೂರ್ಣ ಅವಕಾಶವನ್ನೂ ಸ್ವಾತಂತ್ರ್ಯವನ್ನೂ ನಾವು ಕೊಡಬೇಕು. ಅಜ್ಞಾನ ಅಥವಾ ಅನಕ್ಷರತೆಯಿಂದಾಗಿ ಜಗತ್ತಿನ ಯಾವುದೇ ಭಾಗದ ಯಾವುದೇ ಮಗುವಿಗೂ ಜ್ಞಾನದ ಬಾಗಿಲು ಮುಚ್ಚಬಾರದು.

ಮಾನವ ಜನಾಂಗದ ಸಾಧನೆ ಸಿದ್ಧಿಗಳ ದಾಖಲೆಗಳನ್ನು ಮಕ್ಕಳು ಪಡೆಯುವುದು ಪುಸ್ತಕಗಳ ಮೂಲಕ. ಹಾಗೆಯೇ ಜನಾಂಗದ ಭವಿಷ್ಯತ್ ಆಸೆ ಆಕಾಂಕ್ಷೆಗಳ ಪೂರೈಕೆಗಾಗಿ ಪುಸ್ತಕಗಳೇ ಅವರಿಗೆ ಉಪಕರಣಗಳು. ಆದ್ದರಿಂದ ನಾಳೆಯ ಉತ್ತಮತರ ಜಗತ್ತಿಗಾಗಿ ಇಂದು ಅಗತ್ಯವಾಗಿರುವ ಪುಸ್ತಕಗಳನ್ನು ನಾವು ಮಕ್ಕಳಿಗೆ ಕೊಡೋಣ."

ಇತರ ಪ್ರಕಟಣೆಗಳು

* ಆರ್ಥಿಕ ಚಿಂತನೆಯ ಇತಿಹಾಸ—ಸಿ ಕೆ ರೇಣುಕಾರ್ಯ
* ಪಂಪಭಾರತ ಕಥಾಲೋಕ—ಆರ್ ಎಲ್ ಅನಂತರಾಮಯ್ಯ 22.00 40-00
* ವಡ್ಡಾರಾಧನ ಕಥಾಲೋಕ—ಆರ್ ಎಲ್ ಅನಂತರಾಮಯ್ಯ 8-00 15-00
* ವಿಜ್ಞಾನಿಗಳೊಡನೆ ರಸನಿಮಿಷಗಳು—ಜಿ ಆರ್ ಲಕ್ಷ್ಮಣರಾವ್ 12-00
* ಬಾಡದ ಹೂವುಗಳು—ಎಂ ರಾಮಚಂದ್ರ 10-00 15-00
* ಅಮೆರಿಕದಲ್ಲಿ ನಾನು, ಶಾಂತಿ—ಪ್ರಭುಶಂಕರ 12-00 25-00
* ವಿವೇಚನ—ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟ 10-00 20-00
* ನಕ್ಕು ನಲಿಯೋಣ !—ಪ್ರಭುಶಂಕರ 1_00
* ಶಬ್ದಾರ್ಥ ವಿಹಾರ—ಡಾ ಟಿ ವಿ ವೆಂಕಟಾಚಲ ಶಾಸ್ತ್ರೀ 10-00 15-00
* ಗ್ರಂಥಾಲಯ : ಒಂದು ಅಧ್ಯಯನ
  —ಕೆ ಎಸ್ ದೇಶಪಾಂಡೆ 10-00 15-00
* ನೆಲದ ಕರೆ—ರಂಗ 6-00 10-00

ಅಚ್ಚಿನಲ್ಲಿ

ಕಾವ್ಯಾಂತರಂಗ—ಎಸ್ ಅನಂತನಾರಾಯಣ

ಇಸ್ಪೀಟ್ ರಾಜ್ಯ—ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟ

49, ಅಕ್ಷಯ, ತೊಣಚಿಕೊಪ್ಪಲು ಬಡಾವಣೆ,
ಸರಸ್ವತೀಪುರಂ, ಮೈಸೂರು—570 009

